ಹುಬ್ಬಳ್ಳಿ
ಸೋಮವಾರ, 22 ಜೂನ್ 2026
ಸಂಪುಟ 16, ಸಂಚಿಕೆ 89, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕಾರ್ಯಕರ್ತರಿಗೆ ಅಧಿಕಾರ: ಸಿಎಂ ಡಿಕೆಶಿ | ೦೫
ಆರು ಸಂಸದರು ಶಿಂಧೆ ಬಣಕ್ಕೆ ಶೀಘ್ರ | ೦೭
ಬ್ರಿಟನ್ ಪ್ರಧಾನಿ ರಾಜೀನಾಮೆ ಸಾಧ್ಯತೆ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಉತ್ತರೆ

ದಿನದ ಮಾತು

ಗೆಲುವು ಸೋಲುಗಳೆರಡನ್ನು ಸಮಾನವಾಗಿ ಸ್ವೀಕರಿಸುವವರೇ ಬಾಳಿನಲ್ಲಿ ಆನಂದವನ್ನು ಹೊಂದುತ್ತಾರೆ.

▲ ಗೌತಮ ಬುದ್ಧ

'ಬಾಲ್ಕನೀಕರಣ'ದ ಅಪಾಯಗಳು

ಗುರುಪ್ರಸಾದ ಭಟ್ ಉಡುಪಿ

◆ ಪುಟ ೬

ಕಿರುಸುದ್ದಿ

ಮೈಸೂರಲ್ಲಿ ಬಾಂಗ್ಲಾ 40 ಶಂಕಿತ ವಲಸಿಗರ ವಿಚಾರಣೆ

◆ **ಮೈಸೂರು:** ರೈಲು ನಿಲ್ದಾಣದಲ್ಲಿ 40ಕ್ಕೂ ಹೆಚ್ಚು ಶಂಕಿತ ಬಾಂಗ್ಲಾ ವಲಸಿಗರು ಪತ್ತೆಯಾಗಿದ್ದು, ಹಿಂದು ಜಾಗರಣ ವೇದಿಕೆ ಕಾರ್ಯಕರ್ತರು ಇವರನ್ನು ಗುರುತಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೊಲ್ಕತ್ತಾದಿಂದ ವಾರಕ್ಕೊಮ್ಮೆ ಸಂಚರಿಸುವ ಹೌರಾ ಎಕ್ಸ್‌ಪ್ರೆಸ್ ರೈಲಿನ ಮೂಲಕ ಇವರು ಮೈಸೂರಿಗೆ ಬಂದಿರುವುದಾಗಿ ತಿಳಿದುಬಂದಿದೆ. ರೈಲು ನಿಲ್ದಾಣದಲ್ಲಿ ಕಾರ್ಯಕರ್ತರು ಅವರ ಗುರುತಿನ ಚೀಟಿಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದಾರೆ.

◆ ಪುಟ ೪

ಇರಾನ್-ಅಮೆರಿಕ ಶಾಂತಿ ಮಾತುಕತೆ ಸ್ವಿಸ್‌ನಲ್ಲಿ ಶುರು

◆ **ಜ್ಯೂರಿಚ್:** ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ನಿಟ್ಟಿನಲ್ಲಿ, ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಭಾನುವಾರ ಸ್ವಿಜರ್ಲೆಂಡ್‌ನ ಬರ್ಗೆನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಶಾಂತಿ ಮಾತುಕತೆ ಆರಂಭಿಸಿದ್ದಾರೆ. ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ಖತಾರ್‌ನ ಹಿರಿಯ ನಾಯಕರು ಮಧ್ಯವರ್ತಿಗಳಾಗಿ ಪಾಲ್ಗೊಂಡಿದ್ದಾರೆ.

◆ ಪುಟ ೭


ಅನಿಲ ಸೋರಿಕೆ: 7 ಬಲಿ, 67 ಜನರ ಸ್ಥಿತಿ ಗಂಭೀರ

◆ **ತಿರುವಳ್ಳೂರು:** ತಮಿಳುನಾಡಿನ ತಿರುವಳ್ಳೂರಿನ ಸೀಫುಡ್ ರಫ್ತು ಕಾರ್ಖಾನೆಯಲ್ಲಿ ಸಂಭವಿಸಿದ ಅಮೋನಿಯಾ ಅನಿಲ ಸೋರಿಕೆಯಿಂದಾಗಿ 7 ಮಂದಿ ಸಾವನ್ನಪ್ಪಿದ್ದು, 40ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರ ವಾಗಿದೆ. ಶನಿವಾರ ಮಧ್ಯಾಹ್ನ 1 ಗಂಟೆಗೆ ಈ ದುರಂತ, ಸೇಂಟ್ ಪೀಟರ್ ಆಂಡ್ ಪಾಲ್ ಸೀಫುಡ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸಂಭವಿಸಿದೆ.

◆ ಪುಟ ೭

ಧರ್ಮಸ್ಥಳದ ಶ್ರೀಕ್ಷೇತ್ರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ

◆ ಪುಟ ೪



ವಯಸ್ಸಿಗೂ ಬಲ ಮನಸ್ಸಿಗೂ ಭಲ

◆ ಪುಟ ೭

ಸುದ್ದಿ ಸಮಗ್ರ

ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಮೋದಿ ಚಾಲನೆ

ವಿಶ್ವ ಶಾಂತಿಗೆ ಯೋಗ





◆ **ಕೋಲ್ಕತ್ತಾ:** ಯೋಗವು ವೈಯಕ್ತಿಕ ಆರೋಗ್ಯ ರಕ್ಷಕ ಮಾತ್ರವಲ್ಲ, ಜಾಗತಿಕ ಶಾಂತಿಗೆ ಹಾದಿ ತೆರೆಯಬಲ್ಲ ವೇಗವರ್ಧಕ ಶಕ್ತಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಯೋಗಾಭ್ಯಾಸದ ಅನನ್ಯ ಮಹತ್ವಗಳತ್ತ ಬೆಳಕು ಚೆಲ್ಲಿದ್ದಾರೆ. ಜಗತ್ತಿನ ಹಲವು ರಾಷ್ಟ್ರಗಳು ನಿರಂತರ ಸಂಘರ್ಷಗಳಿಂದ ತತ್ತರಿಸಿರುವ ಪ್ರಸಕ್ತ ಸನ್ನಿವೇಶದಲ್ಲಿ, ಶಾಂತಿಯ ಮರುಸ್ಥಾಪನೆ ಮತ್ತು ಸಮಾಜದಲ್ಲಿ ಸೌಹಾರ್ದ ಸೃಷ್ಟಿಸಲು ಯೋಗ ಅತ್ಯಂತ ಅಮೂಲ್ಯ ಮಾಧ್ಯಮವೆಂಬ ಪ್ರಧಾನಿ ಮೋದಿ ಅಭಿಮತ ಸಕಾಲಿಕ ಮತ್ತು ಹೆಚ್ಚು ಮಹತ್ವಪೂರ್ಣವೆನಿಸಿದೆ.

ಯೋಗವು ಕಲಿಸುವ ಸಮತೋಲಿತ ಜೀವನಶೈಲಿ ಪಾಲಿಸುವುದು ಅತ್ಯವಶ್ಯ. ಎಲ್ಲಾ ವಯೋಮಿತಿಯವರೂ ಯೋಗಾಭ್ಯಾಸ ರೂಢಿಸಿಕೊಳ್ಳುವುದು ಕೂಡ ಅಗತ್ಯವೆಂದ ಪ್ರಧಾನಿ ಮೋದಿ, ಸಮಸ್ಯೆಗಳಿಂದ ಹೊರಬರಲು ದುಡಿಮೆ, ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಮತ್ತು ನಿದ್ರೆ ತೀರಾ ಮುಖ್ಯ, ಈ ರೀತಿಯ ಸಮತೋಲಿತ ಜೀವನ ಶೈಲಿ ಪಾಲಿಸುವವರಿಗೆ ಸಮಸ್ಯೆಗಳೆದುರಾಗದು ಎಂದು ಭಗವದ್ಗೀತೆ ಸಾರಿದೆ.

➡ ಪುಟ ೪

ದೇಶವ್ಯಾಪಿ ಯೋಗ ಪ್ರದರ್ಶನ

◆ ಪುಟ ೭

ಬದುಕಿನ ಭಾಗವಾಗಲಿ

ಯೋಗವನ್ನು ನಿರ್ದಿಷ್ಟ ದಿನ ಅಥವಾ ಕಾರ್ಯಕ್ರಮಕ್ಕೆ ಸೀಮಿತಗೊಳಿಸುವ ಬದಲು ಇದನ್ನು ನಮ್ಮ ಮತ್ತು ನಮ್ಮ ಕುಟುಂಬಗಳು ಹಾಗೂ ಭಾವೀ ಪೀಳಿಗೆಗಳ ಬದುಕಿನ ಭಾಗವಾಗಿ ಮಾರ್ಪಡಿಸುವ ಸಂಕಲ್ಪವನ್ನು ತೊಡೋಣ. ವಿವಿಧ ದೇಶಗಳು, ವಿಭಿನ್ನ ಸಂಸ್ಕೃತಿಗಳ ಜನರನ್ನು ಒಗ್ಗೂಡಿಸುವ ಯೋಗವು ಜಗತ್ತಿನ ಬೃಹತ್ ಸಾಮುದಾಯಿಕ ಆಚರಣೆಯಾಗಿ ರೂಪುಗೊಂಡಿದೆ. ಭೂಮಿಯಲ್ಲಿ ಅತಿ ದೊಡ್ಡ ಹಗಲಿನ ದಿನವಾಗಿರುವ ಜೂ.21 ಇಂದೀಗ ಯೋಗದಿಂದಾಗಿ ಬೃಹತ್ ಸಾಮುದಾಯಿಕ ಆಚರಣಾ ದಿನವಾಗಿ ಪರಿವರ್ತಿತವಾಗಿದೆ. ಜನರನ್ನು ಒಗ್ಗೂಡಿಸುವ ಶಕ್ತಿಯಿದೆ ಯೋಗಕ್ಕೆ. ಯೋಗ ದಿನಾಚರಣೆಯ ಸದವಸರದಲ್ಲಿ ನಾನು ಜಗತ್ತಿನ ಜನರೆಲ್ಲರನ್ನು ಅಭಿನಂದಿಸುವುದಾಗಿ ಪ್ರಧಾನಿ ಮೋದಿ ಹೇಳಿದ್ದಾರೆ.

ರಾಜ್ಯದ ವಿವಿಧೆಡೆ ಯೋಗಕಾರ್ಯಕ್ರಮ

◆ **ಬೆಂಗಳೂರು:** ರಾಜ್ಯಾದ್ಯಂತ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಅತ್ಯಂತ ಸಡಗರ ಮತ್ತು ಉತ್ಸಾಹದಿಂದ ಆಚರಿಸಲಾಯಿತು. ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಧ್ಯೇಯವಾಕ್ಯದಲ್ಲಿ ನಡೆದ ಈ ಆಚರಣೆಗಳಲ್ಲಿ, ಮಕ್ಕಳು, ಯುವಕರು ಹಾಗೂ ಹಿರಿಯರು ಸೇರಿದಂತೆ ಲಕ್ಷಾಂತರ ಮಂದಿ ಸ್ವಯಂಪ್ರೇರಿತರಾಗಿ ಪಾಲ್ಗೊಂಡಿದ್ದರು. ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ನಡೆದ ಯೋಗ ದಿನಾಚರಣೆಯಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್. ಆರೋಗ್ಯ ಸಚಿವ ಯು.ಟಿ.ಖಾದರ್ ಭಾಗವಹಿಸಿದ್ದರು. ಸಾವಿರಾರು ಯೋಗಪಟುಗಳು ಯೋಗದ ವಿವಿಧ ಭಂಗಿಗಳನ್ನು ಪ್ರದರ್ಶಿಸಿದರು.

➡ ಪುಟ ೪

20 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳ ಹಾಜರಿ

ದೇಶದಾದ್ಯಂತ ನೀಟ್ ಮರುಪರೀಕ್ಷೆ ಸುಗಮ

◆ **ಹೊಸದಿಲ್ಲಿ:** ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಹಿನ್ನೆಲೆಯಲ್ಲಿ ರದ್ದುಗೊಂಡಿದ್ದ ನೀಟ್ (ಯುಜಿ)-2026 ಪರೀಕ್ಷೆಯ ಮರುಪರೀಕ್ಷೆ ಭಾನುವಾರ ದೇಶಾದ್ಯಂತ ಕಟ್ಟುನಿಟ್ಟಿನ ಭದ್ರತಾ ಕ್ರಮಗಳ ನಡುವೆ ಯಶಸ್ವಿಯಾಗಿ ನಡೆಯಿತು. 20 ಲಕ್ಷಕ್ಕೂ ಹೆಚ್ಚು ವೈದ್ಯಕೀಯ ಪ್ರವೇಶಾಕಾಂಕ್ಷಿಗಳು ಮರುಪರೀಕ್ಷೆಯಲ್ಲಿ ಭಾಗವಹಿಸಿದರು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಾಹಿತಿ ಪ್ರಕಾರ, ಭಾರತದಲ್ಲಿನ 5,440 ಪರೀಕ್ಷಾ ಕೇಂದ್ರಗಳು ಹಾಗೂ ವಿದೇಶಗಳ 14 ಕೇಂದ್ರಗಳಲ್ಲಿ 13 ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಯಿತು. ಸುಮಾರು 7 ಲಕ್ಷ ಅಧಿಕಾರಿಗಳು, ಸಿಬ್ಬಂದಿ, ವೀಕ್ಷಕರು ಮತ್ತು ಪೊಲೀಸ್ ಸಿಬ್ಬಂದಿಯನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿತ್ತು.



ಬಯೋಮೆಟ್ರಿಕ್, ಸಿಸಿಟಿವಿ, ಜಾಮರ್‌ಗಳ ಕಣ್ಗಾವಲು: ಆಧಾರ್ ಆಧಾರಿತ ಬಯೋಮೆಟ್ರಿಕ್ ಪರಿಶೀಲನೆ, ಮುಖ ಗುರುತಿಸುವಿಕೆ, ಸಿಸಿಟಿವಿ ನಿಗಾ ವ್ಯವಸ್ಥೆ, ಮೊಬೈಲ್ ಜಾಮರ್‌ಗಳು ಹಾಗೂ ಎರಡು ಹಂತದ ತಪಾಸಣೆ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ರಾಜ್ಯ ಪೊಲೀಸ್ ಇಲಾಖೆಗಳ ಸಹಯೋಗದಲ್ಲಿ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿ ಪರೀಕ್ಷೆಯ ಮೇಲೆ ನಿಗಾ ವಹಿಸಲಾಯಿತು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ದಿಲ್ಲಿಯ ಎನ್‌ಟಿಎ ಕೇಂದ್ರದಲ್ಲಿ ಪರೀಕ್ಷಾ ವ್ಯವಸ್ಥೆಗಳ ಪರಿಶೀಲನೆ ನಡೆಸಿದರು. ಪಾರದರ್ಶಕ ಹಾಗೂ ಸುಗಮ ಪರೀಕ್ಷೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

➡ ಪುಟ ೪

ರಾಜ್ಯದಲ್ಲಿ ಬಿಗಿಭದ್ರತೆ ನಡುವೆ ನೀಟ್ ಪರೀಕ್ಷೆ

◆ ಪುಟ ೫



ದಿಲ್ಲಿ ಏರ್‌ಪೋರ್ಟ್‌ನಲ್ಲಿ 45 ನಿಮಿಷ ಕಾದ ಮೋದಿ

ನೀಟ್ ಪರೀಕ್ಷಾರ್ಥಿಗಳಿಗೆ ತೊಂದರೆ ತಪ್ಪಿಸುವ ಉದ್ದೇಶ

◆ **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರು, ನೀಟ್ -ಯುಜಿ ಪರೀಕ್ಷಾರ್ಥಿಗಳ ಸಂಚಾರಕ್ಕೆ ತೊಂದರೆಯಾಗಬಾರದೆಂಬ ಕಾಳಜಿ ಹಿನ್ನೆಲೆ ದಿಲ್ಲಿ ವಿಮಾನ ನಿಲ್ದಾಣದಲ್ಲೇ 45 ನಿಮಿಷಗಳ ಕಾಲ ಕಾದು ಕುಳಿತ ಘಟನೆ ಭಾನುವಾರ ನಡೆದಿದೆ. ಪ್ರಧಾನಿಯವರು ಕೋಲ್ಕತ್ತಾದಿಂದ ಮಧ್ಯಾಹ್ನ 1:15ಕ್ಕೆ ದಿಲ್ಲಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಪ್ರಧಾನಿಯವರ ವಾಹನದ ಸುಗಮ ಸಂಚಾರಕ್ಕಾಗಿ ನಿರ್ದಿಷ್ಟ ಮಾರ್ಗಗಳಲ್ಲಿ ಸಂಚಾರ ನಿಯಂತ್ರಣ ಮತ್ತು ತಾತ್ಕಾಲಿಕ ನಿರ್ಬಂಧಗಳನ್ನು ಜಾರಿಗೊಳಿಸಲಾಗುತ್ತದೆ. ಆದರೆ, ಮೋದಿಯವರು ನೀಟ್ -ಯುಜಿ ಮರುಪರೀಕ್ಷೆ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ತೆರಳುವ ವೇಳೆ ಅವರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ವಿಮಾನ ನಿಲ್ದಾಣದಲ್ಲೇ 45 ನಿಮಿಷ ಕಾಯಲು ನಿರ್ಧರಿಸಿದರು.

➡ ಪುಟ ೪

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಹೇಳಿಕೆ

ಬೇನಾಮಿ ಆಸ್ತಿ ಸಾಬೀತಾದ್ರೆ ದಾನ

◆ **ರಾಮನಗರ:** ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಬೇನಾಮಿ ಆಸ್ತಿ ಹೊಂದಿರುವುದನ್ನು ಸಾಬೀತುಮಾಡಿದರೆ ಆ ಜಮೀನನ್ನು ನಾನು ಶಾಲೆಗೆ ಅಥವಾ ಆಸ್ಪತ್ರೆಗೆ ದಾನವಾಗಿ ಕೊಡುತ್ತೇನೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಬಿಡದಿ ಹೋಬಳಿಯ ಮೆರವೇಗೌಡನದೊಡ್ಡಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ಈ ಭಾಗದಲ್ಲಿ 100 ಎಕರೆ ಬೇನಾಮಿ ಆಸ್ತಿ ಹೊಂದಿದ್ದಾರೆ ಎಂದು ಸ್ಥಳೀಯ ಶಾಸಕ ಹೇಳಿದ್ದಾರೆ. ಕೇತಗಾನಹಳ್ಳಿ ಗ್ರಾಮದಲ್ಲಿ 1985ರಲ್ಲಿ ನಮ್ಮ ತಂದೆ ಜಾಗ ಖರೀದಿ ಮಾಡಿದ್ದಾರೆ. ಯಾರ ತಲೆ ಹೊಡೆದು ಅದನ್ನು ಖರೀದಿ ಮಾಡಿಲ್ಲ. ಈ ಜಮೀನನ್ನು ಸಿನಿಮಾ ಹಂಚಿಕೆ ಮಾಡಿದ ದುಡ್ಡಲ್ಲಿ ಖರೀದಿ ಮಾಡಿದ್ದೇವೆ ಎಂದು ತಿಳಿಸಿದರು.ನಮ್ಮ ತಾಯಿ ಹೆಸರಲ್ಲಿ 27 ಎಕರೆ, ನನ್ನ ಹೆಸರಲ್ಲಿ 5 ಎಕರೆ ಜಾಗವನ್ನು ಕೋವಿಡ್ ಟೈಂನಲ್ಲಿ ನಾವು ಖರೀದಿ ಮಾಡಿದ್ದೇವೆ. ನಮ್ಮ ಜಾಗದಲ್ಲಿ ಕಮರ್ಷಿಯಲ್ ಬಿಲ್ಡಿಂಗ್ ಕಟ್ಟಿಲ್ಲ.

➡ ಪುಟ ೪



ಪಾದಯಾತ್ರೆ ವೇಳೆ ವಾಗ್ವಾದ

ತಾಲೂಕಿನ ಬಿಡದಿ ಹೋಬಳಿಯಲ್ಲಿ ತಲೆಯೆತ್ತಲಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ವಿರೋಧಿಸಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಪಕ್ಷದ ವತಿಯಿಂದ ಯೋಜನಾ ಪ್ರದೇಶದ ಗ್ರಾಮಗಳಲ್ಲಿ ನಡೆದ ಪಾದಯಾತ್ರೆ ಸಂದರ್ಭದಲ್ಲಿ ಪರ ಮತ್ತು ವಿರೋಧ ಇರುವವರ ನಡುವೆ ವಾಗ್ವಾದ ನಡೆಯಿತು.

➡ ಪುಟ ೪

ಕಾಂಗ್ರೆಸ್ ಮತ್ತಷ್ಟು ಬಲಪಡಿಸಲು ಮಹತ್ವದ ನಿರ್ಣಯ

ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್

◆ **ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಾಗಿ ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಭಾನುವಾರ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು. ನಗರದ ಅರಮನೆ ಮೈದಾನದಲ್ಲಿ ನಡೆದ ಬೃಹತ್ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹರಿಪ್ರಸಾದ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಸಮಾರಂಭದಲ್ಲಿ ಕಾಂಗ್ರೆಸ್ ನಾಯಕರು ಬಿಜೆಪಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, 2028ರ ಕರ್ನಾಟಕ ವಿಧಾನಸಭೆ ಚುನಾವಣೆ ಹಾಗೂ 2029ರ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಕುರಿತು ಮಹತ್ವದ ನಿರ್ಣಯಗಳನ್ನು ಕೈಗೊಂಡರು. ಅಧಿಕಾರ ಹಸ್ತಾಂತರಿಸಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್. ಈ ವೇಳೆ ತಾವು ಅಧಿಕಾರ ವಹಿಸಿಕೊಂಡ ದಿನವನ್ನು ನೆನಪಿಸಿಕೊಂಡರು.

➡ ಪುಟ ೪



> ಕಾಂಗ್ರೆಸ್ ಮಾದರಿ ದೇಶಕ್ಕೆ ಮಾದರಿ. ಕಾಂಗ್ರೆಸ್ ನಾಯಕತ್ವ ದೇಶಕ್ಕೆ ಮಾದರಿ. ಕರ್ನಾಟಕ ಮಾದರಿ ಇಡೀ ದೇಶಕ್ಕೆ ಮಾದರಿ. ಸಮಾಜದ ಕಟ್ಟಕಡೆಯ ಪ್ರಜೆಗೆ ನ್ಯಾಯ ಒದಗಿಸುವುದೇ ಕಾಂಗ್ರೆಸ್ ತತ್ತ್ವ
>
> ■ ರಣದೀಪ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ನೌಕಾಪಡೆಗೆ 3 ಹಡಗು ಸೇರ್ಪಡೆ

◆ **ಕೋಲ್ಕತ್ತಾ:** ಬಲಿಷ್ಠ ಸಮುದ್ರ ಸಾಮರ್ಥ್ಯ, ದೇಶದ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವವನ್ನು ನಿರ್ಧರಿಸುವ ಪ್ರಮುಖ ಅಂಶ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು. ಶ್ಯಾಮ ಪ್ರಸಾದ್ ಮುಖರ್ಜಿ ಬಂದರಿನಲ್ಲಿ ನೌಕಾಪಡೆಗೆ ಸ್ವದೇಶಿ ನಿರ್ಮಿತ ಮೂರು ಹಡಗುಗಳನ್ನು ಸೇರ್ಪಡೆಗೊಳಿಸಿದ ಬಳಿಕ ಮಾತನಾಡಿದ ಅವರು, ಭಾರತ ಈ ವಾಸ್ತವವನ್ನು ಅರಿತು ಅದಕ್ಕೆ ತಕ್ಕ ಸಿದ್ಧತೆ ನಡೆಸುತ್ತಿದೆ ಎಂದರು.

ಮೋದಿ ಸ್ವದೇಶಿ ನಿರ್ಮಿತ ಸ್ಟೆಲ್ತ್ ಫ್ರಿಗೇಟ್ ದುನಗಿರಿ, ಸರ್ವೇ ಹಡಗು ಸಂಶೋಧಕ್ ಹಾಗೂ ಜಲಾಂತರ್ಗಾಮಿ ವಿರೋಧಿ ಯುದ್ಧನೌಕೆ ಅಗ್ರಯ್ ಅನ್ನು ನೌಕಾಪಡೆಗೆ ಸೇರ್ಪಡೆಗೊಳಿಸಿದರು. ಈ ವೇದಿಕೆಗಳು ಸಮುದ್ರ ಯುದ್ಧ, ಹೈಡ್ರೋಗ್ರಾಫಿಕ್ ಸರ್ವೇ ಮತ್ತು ಜಲಾಂತರ್ಗಾಮಿ ವಿರೋಧಿ ಕಾರ್ಯಾಚರಣೆಗಳಲ್ಲಿ ಪ್ರಮುಖ ಸಾಮರ್ಥ್ಯ ಹೊಂದಿವೆ ಎಂದು ಹೇಳಿದರು.

◆ ವಿವರ ಪುಟ ೭

ಪ್ರಕಾಶ್ ರಾಜ್‌ಗೆ ಕಾನೂನು ಸಂಕಷ್ಟ

◆ **ಬೆಂಗಳೂರು:** 4 ರಾಜ್ಯಗಳಲ್ಲಿ ಕಾನೂನು ಬಾಹಿರವಾಗಿ ಮತದಾರರ ಗುರುತಿನ ಚೀಟಿ ಹೊಂದಿರುವ ಆರೋಪದ ಮೇಲೆ ನಟ ಪ್ರಕಾಶ್ ರಾಜ್ ಅವರಿಗೆ ಕಾನೂನು ಸಂಕಷ್ಟ ಎದುರಾಗಿದೆ. ನ್ಯಾಯಾಲಯ ನೀಡಿದ್ದ ಸಮನ್ಸ್‌ಗೆ ಸತತ ಗೈರು ಹಾಜರಾಗಿ, ಯಾವುದೇ ಪ್ರತಿಕ್ರಿಯೆ ನೀಡದ ಹಿನ್ನೆಲೆಯಲ್ಲಿ ಬೆಂಗಳೂರಿನ 48ನೇ ಎಸಿಜೆಎಂ ನ್ಯಾಯಾಲಯವು ಬಂಧನ ವಾರೆಂಟ್ ಜಾರಿಗೊಳಿಸಿ ಆದೇಶಿಸಿದೆ. 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಪ್ರಕಾಶ್ ರಾಜ್ ಅವರು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

➡ ಪುಟ ೪





ಕಿರುಸುದ್ದಿ

ಅಪರಾಧ ಕೃತ್ಯಕ್ಕೆ ಕಡಿವಾಣ ಹಾಕಿ: ದಾಡಿಬಾವಿ



• **ನವಲಗುಂದ:** ನವಲಗುಂದ ತಾಲೂಕು ಹಾಗೂ ಅಣ್ಣಿಗೇರಿ ತಾಲೂಕು ನಗರ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಅಪರಾಧ ಕೃತ್ಯಕ್ಕೆ ಕಡಿವಾಣ ಹಾಕಬೇಕು ಎಂದು ದೇವರಾಜ ಬ.ದಾಡಿಬಾವಿ ಆಗ್ರಹಿಸಿದ್ದಾರೆ.

ನವಲಗುಂದ ನಗರದಲ್ಲಿ ಹಾಡುಹಗಲೇ ಚಾಕು ಇರಿತ ಪ್ರಕರಣಗಳು ಭಯದ ವಾತಾವರಣ ಸೃಷ್ಟಿಯಾಗಿದ್ದು ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು ಹಾಗೂ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿದ್ದು, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಯುವಕರು ದುಶ್ಚಟಕ್ಕೆ ಬಲಿಯಾಗಿ ಕುಟುಂಬಗಳು ಬೀದಿಪಾಲಾಗಿವೆ. ಇಷ್ಟಾದರೂ ಶಾಸಕರು, ತಾಲೂಕು ಆಡಳಿತ, ಪೊಲೀಸ್ ಇಲಾಖೆ, ಅಬಕಾರಿ ಇಲಾಖೆಯವರು ಕಣ್ಮುಚ್ಚಿ ಕುಳಿತಿರುವುದು ವಿಪರ್ಯಾಸ ಎಂದು ಆರೋಪಿಸಿರುವ ಅವರು, ತಾಲೂಕು ಆಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಎನ್.ಎಚ್. ಕೋನರಡ್ಡಿ ಕೃಷಿ ಸಚಿವರಾಗಲಿ: ದೇಶಮುಖ್



• **ಅಣ್ಣಿಗೇರಿ:** ರಾಜ್ಯದ ಸಚಿವ ಸಂಪುಟದಲ್ಲಿ ಚಕ್ಕಡಿ ದಾರಿ ಹರಿಕಾರರು ಎಂದೇ ಪ್ರಸಿದ್ಧಿ ಹೊಂದುತ್ತಿರುವ ನವಲಗುಂದ ವಿಧಾನಸಭಾ ಕ್ಷೇತ್ರದ ಶಾಸಕ ಎನ್. ಎಚ್. ಕೋನರಡ್ಡಿ ಅವರನ್ನು ಕೃಷಿ ಸಚಿವರನ್ನಾಗಿ ಸೂಕ್ತ ಪ್ರಾತಿನಿಧ್ಯ ದೊರಕಬೇಕಾಗಿದೆ ಎಂದು ಶರಣಬಸಪ್ಪ ದೇಶಮುಖ್ ಹೇಳಿದರು.

ನಗರದ ಶರಣಬಸಪ್ಪ ದೇಶಮುಖ್ ಅವರ ವಾಡೆಯ ಆವರಣದಲ್ಲಿ ಪತ್ರಿಕಾಗೋಷ್ಠಿ ಆಯೋಜಿಸಿ ಮಾತನಾಡಿದ ಅವರು, ಅಣ್ಣಿಗೇರಿ ಕೊರವ್ವನ ಮಾನೆಗೆ ಹೋಗುವ ರಸ್ತೆ ಸುಧಾರಿಸಲು ಸುಮಾರು 30 ವರ್ಷಗಳಿಂದ ಹಲವಾರು ಶಾಸಕರು, ಸಚಿವರಿಗೆ ವಿನಂತಿಸಿದರೂ ಆಗಿರಲಿಲ್ಲ, ಆದರೆ ಎನ್. ಎಚ್. ಕೋನರಡ್ಡಿ ಅವರು ಶಾಸಕರಾದ ನಂತರ 3 ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ್ದು, ರೈತರ ಸಾಕಷ್ಟು ಕೃಷಿ ಚಟುವಟಿಕೆಗಳು ಚುರುಕುಗೊಂಡಿದೆ. ತಾಲೂಕಿನ ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಚಕ್ಕಡಿ ರಸ್ತೆಗಳನ್ನು ಸುಧಾರಿಸಿದ್ದಾರೆ. ಇನ್ನೂ ಹೆಚ್ಚಿನ ರೈತರ ಪರವಾಗಿ ಸೇವೆ ಸಲ್ಲಿಸಲು ಎನ್. ಎಚ್. ಕೋನರಡ್ಡಿ ಅವರಿಗೆ ಸಚಿವ ಸ್ಥಾನ ನೀಡಿ ಅನುಕೂಲ ಮಾಡಿಕೊಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪಕ್ಷದ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರಿಗೆ ಒತ್ತಾಯಿಸುತ್ತೇನೆ ಎಂದರು.

ಪುರಸಭೆ ಸದಸ್ಯ ಈಶ್ವರ ಕಾಳಪ್ಪನವರ ಮಾತನಾಡಿ, ಚಕ್ಕಡಿ ಹರಿಕಾರ ಎಂಬುದು ನವಲಗುಂದ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಎನ್. ಎಚ್. ಕೋನರಡ್ಡಿ ಅವರನ್ನು ಕರೆಯುವ ಜನಪ್ರಿಯ ಬಿರುದು ಅಥವಾ ಅಭಿಮಾನದ ಹೆಸರು ಗ್ರಾಮೀಣ ಪ್ರದೇಶದಲ್ಲಿ ರೈತರು ಬಳಸುವ ಎತ್ತಿನಗಾಡಿ (ಚಕ್ಕಡಿ) ಸಂಚರಿಸುವ ದಾರಿಯನ್ನು ಸುಗಮಗೊಳಿಸುವುದು ಮತ್ತು ಗ್ರಾಮೀಣಾಭಿವೃದ್ಧಿಯ ಸಂಕೇತವಾಗಿ ಈ ಹೆಸರನ್ನು ಅಭಿಮಾನಿಗಳು ಬಳಸುತ್ತಾರೆ ಎಂದರು. ಕಲ್ಲಪ್ಪ ಗಮನಗಟ್ಟಿ ಮತ್ತು ರೈತರು ಇದ್ದರು.

ಯೋಗ ದಿನಾಚರಣೆ



• **ಧಾರವಾಡ:** ನಗರದ ನಿವೇದಿತಾ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಆದರ್ಶ ಬಾಲಿಕಾ ಪ್ರೌಢ ಶಾಲೆಯಲ್ಲಿ 12ನೇ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ಭಾನುವಾರ ನಡೆಯಿತು. ಪತಂಜಲಿ ಯೋಗ ಸಮಿತಿ ಸುಲಾಖೆ ಗುರೂಜಿ, ಬಸವರಾಜ ಗುರೂಜಿ ಹಾಗೂ ಶಾಲಾ ಸುಧಾರಣಾ ಸಮಿತಿ ಸದಸ್ಯ ಹಾಲೇಶ ವಿದ್ಯಾರ್ಥಿಗಳಿಗೆ ಯೋಗಭ್ಯಾಸ ಮಾಡಿಸಿದರು. ಉದಯ ಯಂಡಿಗೇರಿ ಅಧ್ಯಕ್ಷತೆ ವಹಿಸಿದ್ದರು.

ಪಾರಮ್ಮ ಮುಸುಂಡಿ ನಿಧನ



• **ಅಣ್ಣಿಗೇರಿ:** ಪಟ್ಟಣದ ಬಸವೇಶ್ವರ ನಗರದ ನಿವಾಸಿ ಪಾರಮ್ಮ (ಕಾಶವ್ವ) ಕುಮಾರಪ್ಪ ಮುಸುಂಡಿ (70)ನಿಧನ ಹೊಂದಿದ್ದಾರೆ. ಮೃತರು ಪತಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಹುಬ್ಬಳ್ಳಿ: ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗಸ್ಪರ್ಶ ಪ್ರತಿಷ್ಠಾನ ಹುಬ್ಬಳ್ಳಿ ಹಾಗೂ ಎಸ್‌ಪಿವೈಎಸ್‌ಎಸ್ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಕರ್ನಾಟಕ ಹುಬ್ಬಳ್ಳಿ ಇವರ ವತಿಯಿಂದ ಇಲ್ಲಿನ ಗ್ಲಾಸ್ ಹೌಸ್‌ನಲ್ಲಿ ಯೋಗ ಮಾಡುವ ಮೂಲಕ ಯೋಗ ದಿನಾಚರಣೆ ಆಚರಿಸಲಾಯಿತು.

ಮನಸ್ಸು ನಿಯಂತ್ರಣದಲ್ಲಿದ್ದಾಗ ಜೀವನದಲ್ಲಿ ನೆಮ್ಮದಿ

• **ಅಣ್ಣಿಗೇರಿ:** ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಶ್ರೀಮತಿ ನಿಂಗಮ್ಮ ಎಸ್. ಹೂಗಾರ ಸಮೂಹ ವಿದ್ಯಾಲಯಗಳ ಆಶ್ರಯದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗದಿನವನ್ನು ಶ್ರೀ ಅಮೃತೇಶ್ವರ ಅರಳಿಕಟ್ಟಿ ಗುರೂಜಿ ಸಿದ್ಧಿ ಸಮಾಧಿ ಯೋಗ ತರಬೇತಿದಾರರು ಸೂರಶೆಟ್ಟಿಕೊಪ್ಪ ಇವರ ನೇತೃತ್ವದಲ್ಲಿ ವಿಶಿಷ್ಟವಾಗಿ ಆಚರಿಸಲಾಯಿತು. ಗೋಮುಖಾಸನ, ಭುಜಂಗಾಸನ ವೀರಭದ್ರಾಸನ, ನಟರಾಜಾಸನ ಹಾಗೂ ಸೂರ್ಯನಮಸ್ಕಾರದ ವಿವಿಧ ಆಸನಗಳನ್ನು ಮಾಡಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಎಸ್. ಎಸ್. ಹರ್ಲಾಪೂರ ಮಾತನಾಡಿ, ಸಿದ್ಧಿ ಸಮಾಧಿ ಯೋಗ ತರಬೇತಿಯನ್ನು ನಮ್ಮ ಶಾಲೆಯಲ್ಲಿ ನಿರಂತರವಾಗಿ 17 ಬ್ಯಾಚ್‌ಗಳನ್ನು ನಡೆಸಿಕೊಟ್ಟಿದ್ದಾರೆ. ಎಲ್ಲಿಯವರೆಗೆ ನಿಮ್ಮ ದೇಹದ ಭಾಗಗಳನ್ನು ಮತ್ತು ಮನಸ್ಸನ್ನು ನೀವು ನಿಯಂತ್ರಿಸುತ್ತಿರೋ ಅಲ್ಲಿಯವರೆಗೂ ನೀವು ನೆಮ್ಮದಿಯಿಂದ ಇರುತ್ತೀರಿ. ನೀವು ಆರೋಗ್ಯದಿಂದಿರಲು ಯೋಗಾಭ್ಯಾಸಗಳನ್ನು ರೂಢಿಸಿಕೊಳ್ಳಿರಿ ಎಂದರು. ಯೋಗ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಉಪಯುಕ್ತವಾಗುತ್ತದೆ. ಹಿಂದಿನ ನಮ್ಮ ಪೂರ್ವಜರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಇಂದು ನಾವು ಮಾಡುವ ಯೋಗಗಳನ್ನು ರೂಢಿಸಿಕೊಂಡಿದ್ದನ್ನು ಕಾಣಬಹುದಾಗಿತ್ತು. ನಿಮ್ಮ ಮನಸ್ಸು ಮತ್ತು ಆರೋಗ್ಯ ಚೆನ್ನಾಗಿರಬೇಕಾದರೆ ಯೋಗ ಒಂದೇ ಮಾರ್ಗ ಎಂದರು. ಕುಮಾರ ಗುರುಜಿಯವರನ್ನು ಸ್ಮರಿಸಿ, ಅಮೃತೇಶ್ವರ ಅರಳಿಕಟ್ಟಿ ಗುರೂಜಿ ಅವರನ್ನು ಅಭಿನಂದಿಸಿದರು. ಆಡಳಿತಮಂಡಳಿಯ ಸದಸ್ಯರು, ಶಾಲೆಯ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಹ ಶಿಕ್ಷಕಿ ಸುಮಿತ್ರಾ ಹುಣಸಿಮರದ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು.



ಅಣ್ಣಿಗೇರಿ: ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಶ್ರೀಮತಿ ನಿಂಗಮ್ಮ ಎಸ್. ಹೂಗಾರ ಸಮೂಹ ವಿದ್ಯಾಲಯಗಳ ಆಶ್ರಯದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗದಿನವನ್ನು ಶ್ರೀ ಅಮೃತೇಶ್ವರ ಅರಳಿಕಟ್ಟಿ ಗುರೂಜಿ ಸಿದ್ಧಿ ಸಮಾಧಿ ಯೋಗ ತರಬೇತಿದಾರರು ಸೂರಶೆಟ್ಟಿಕೊಪ್ಪ ಇವರ ನೇತೃತ್ವದಲ್ಲಿ ವಿಶಿಷ್ಟವಾಗಿ ಆಚರಿಸಲಾಯಿತು.

12ನೇ ವಿಶ್ವ ಯೋಗ ದಿನಾಚರಣೆ | ಡಿಸಿ ಸ್ನೇಹಲ್ ಆರ್. ಅಭಿಮತ

ನಿತ್ಯವೂ ಯೋಗಾಭ್ಯಾಸ ಅವಶ್ಯ



• **ಧಾರವಾಡ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ನಗರದ ಆರ್.ಎನ್.ಶೆಟ್ಟಿ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 12ನೇ ವಿಶ್ವ ಯೋಗ ದಿನಾಚರಣೆ ಜರುಗಿತು.

ನುರಿತ ಯೋಗ ತರಬೇತಿದಾರರ ಮಾರ್ಗದರ್ಶನದಲ್ಲಿ ಪ್ರಾಣಾಯಾಮ ಮತ್ತು ಸೂರ್ಯನಮಸ್ಕಾರ, ತಾಡಾಸನ, ವೃಕ್ಷಾಸನ, ತ್ರಿಕೋನಾಸನ, ಭುಜಂಗಾಸನ ಸೇರಿ ಆಯುಷ್ ಸಚಿವಾಲಯದ ಯೋಗ ಶಿಷ್ಟಾಚಾರದ ಪ್ರಕಾರದ ಆಸನಗಳು ಮಾಡಿಸಲಾಯಿತು.

ಉದ್ಘಾಟಿಸಿದ ಜಿಲ್ಲಾಧಿಕಾರಿ ಸ್ನೇಹಲ್ ಮಾತನಾಡಿ, ಯೋಗವು ಕೇವಲ ದೈಹಿಕ ಕಸರತ್ತಲ್ಲ, ಅದು ಮನಸ್ಸು ಮತ್ತು ದೇಹ ಬೆಸೆಯುವ ಒಂದು ಅದ್ಭುತ ಕಲೆ. ಈ ಯೋಗಾಭ್ಯಾಸ ನಿತ್ಯವೂ ಮಾಡಿ, ಆರೋಗ್ಯ ಕಾಪಾಡಿಕೊಳ್ಳುವಂತೆ ಹೇಳಿದರು.

ಜಿಲ್ಲೆಯ ಆಯುಷ್ ಅಧಿಕಾರಿ ಗಣೇಶ ಎಸ್. ಮಾತನಾಡಿ, ಯೋಗ ಜೀವನದ ಭಾಗವಾಗಬೇಕು. ಇಂದಿನ ಒತ್ತಡದ ಜೀವನ ಶೈಲಿಯಲ್ಲಿ ಯೋಗವು ಪ್ರತಿವ್ಯಕ್ತಿ ದಿನಚರಿಯ ಭಾಗವಾಗಬೇಕು. ಅಂದಾಗ ದೀರ್ಘಾಯುಷ್ಯರಾಗಿ ಬಾಳಲು ಸಾಧ್ಯ ಎಂದರು.

ಯೋಗತಜ್ಞ ಜಗದೀಶ ಮಳಗಿ ಹಾಗೂ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಜಯಂತಿ ಅಕ್ಕ ಯೋಗಭ್ಯಾಸ ಹೇಳಿಕೊಟ್ಟರು. ಎಡಿಸಿ ಗೀತಾ, ಜಿಪಂ ಸಿಇಒ ಭುವನೇಶ ಪಾಟೀಲ, ಜಿಲ್ಲಾಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಸ್ವಾಸ್ಥ್ಯ ಕಾಪಾಡುವ ಯೋಗ

ಸ್ವಸ್ಥ ಹಾಗೂ ಸದೃಢ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರಿಗೂ ಆರೋಗ್ಯ ಅಗತ್ಯ. ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಯೋಗಕ್ಕಿಂತ ಮಿಗಿಲಾದ ಮದ್ದು ಮತ್ತೊಂದಿಲ್ಲ. ಹೀಗಾಗಿ ಪ್ರತಿಯೊಬ್ಬರೂ ಯೋಗಭ್ಯಾಸ ಮಾಡವಂತೆ ಹೇಳಿದರು.

ಜಿಲ್ಲೆಯಲ್ಲಿ ಯೋಗಾ ಯೋಗಾ..



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರದ-74 ಮಹಿಳಾ ಮೋರ್ಚಾದ ವತಿಯಿಂದ ಧಾರವಾಡ ಯಾಲಕ್ಕಿಶೆಟ್ಟರ ಕಾಲೋನಿ ಶಂಕರ ಮಠದಲ್ಲಿ 1ನೇ ವಿಶ್ವ ಯೋಗ ದಿನಾಚರಣೆ ಆಚರಿಸಲಾಯಿತು.

ಮರಾಠಾ ಮಂಡಳದಲ್ಲಿ ಯೋಗ ದಿನ

• **ಧಾರವಾಡ:** ಇಲ್ಲಿನ ಮರಾಠಾ ವಿದ್ಯಾಪ್ರಸಾರಕ ಮಂಡಳದ ಐದು ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಭಾನುವಾರ ಭಾರತ ಪ್ರೌಢ ಶಾಲಾ ಮೈದಾನದಲ್ಲಿ 12ನೇ ವಿಶ್ವ ಯೋಗ ದಿನಾಚರಣೆ ಜರುಗಿತು. ನುರಿತ ಯೋಗ ತರಬೇತುದಾರರ ಮಾರ್ಗದರ್ಶನದಲ್ಲಿ ವಿವಿಧ ಯೋಗಾಸನಗಳು, ಪ್ರಾಣಾಯಾಮ ಹಾಗೂ ಧ್ಯಾನವನ್ನು ಮಾಡಲಾಯಿತು. ಸೂರ್ಯನಮಸ್ಕಾರ, ವೃಕ್ಷಾಸನ, ತ್ರಿಕೋನಾಸನ, ಪದ್ಮಾಸನ ಮತ್ತು ಭುಜಂಗಾಸನದಂತಹ ಪ್ರಮುಖ ಆಸನಗಳನ್ನು ಸರಳವಾಗಿ ಮಾಡುವ ವಿಧಾನಗಳನ್ನು ತರಬೇತುದಾರರು ತಿಳಿಸಿಕೊಟ್ಟರು. ಮುಖ್ಯಸ್ಥರಾದ ಅಶೋಕ ಬಾಟರ, ಮೀನಾಕ್ಷಿ ಘಾಟಗೆ, ಎಸ್.ಎಂ.ಸಂಕೋಜಿ, ಎಂ.ಎಸ್. ಗಾಣಿಗೇರ, ಆರತಿ ಕುಂಬಾರಕೊಪ್ಪ ಸೇರಿ ಯೋಗ ಶಿಕ್ಷಕ ಬಿ.ಎಸ್. ತೊರೋಜಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ



• **ಧಾರವಾಡ:** ಸ್ಥಳೀಯ ಮಂಜುನಾಥೇಶ್ವರ ಸೆಂಟ್ರಲ್ ಸ್ಕೂಲ್, ಮೃತ್ಯುಂಜಯ ನಗರದ ಮಂಜುನಾಥೇಶ್ವರ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ 12ನೇ ವಿಶ್ವ ಯೋಗ ದಿನಾಚರಣೆ ಜರುಗಿತು. ಪ್ರಾಚಾರ್ಯೆ ರಜನಿ ಪಾಟೀಲ ಮತ್ತು ಆರ್ಟ್ ಆಫ್ ಲಿವಿಂಗ್ ಯೋಗ ಗುರು ಉಮಾ ಜೋಶಿ ಅವರು, ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಯೋಗ ಹಾಗೂ ಧ್ಯಾನ ಅಭ್ಯಾಸ ಮಾಡಿಸಿದರು. ಓಂಕಾರ, ಸೂರ್ಯನಮಸ್ಕಾರ, ತಾಡಾಸನ, ವೃಕ್ಷಾಸನ, ಪ್ರಾಣಾಯಾಮ ವಿವಿಧ ಆಸನಗಳು ಮಾಡಿಸಿದರು. 300 ಮಕ್ಕಳು ಪಾಲ್ಗೊಂಡಿದ್ದರು. ಅಕ್ಷತಾ ಪುರಾಣಿಕ ನಿರೂಪಿಸಿ, ವಂದಿಸಿದರು.

ಮೃತ್ಯುಂಜಯ ನಗರದ ಶಾಲೆ: ಮೃತ್ಯುಂಜಯ ನಗರದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ದೈಹಿಕ ಆರೋಗ್ಯ, ಮಾನಸಿಕ ಶಾಂತಿ ಹಾಗೂ ಭಾವನಾತ್ಮಕ ಸಮತೋಲನ ಕಾಪಾಡಿಕೊಳ್ಳಲು ಜಾಗೃತಿ ಮೂಡಿಸಲಾಯಿತು. ವಿದ್ಯಾರ್ಥಿಗಳು ಶಾಲಾ ಮೈದಾನದಲ್ಲಿ ಸರಿಯಾದ ಸಾಲುಗಳಲ್ಲಿ ನಿಂತು ವಿವಿಧ ಯೋಗಾಸನಗಳು, ಪ್ರಾಣಾಯಾಮ, ಧ್ಯಾನ್ಯವನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡಿಸಲಾಯಿತು.



ಮಳೆ ಆಗಮನಕ್ಕೆ 1008 ನಮೋಕಾರ ಮಂತ್ರ ಜಪ



▸ **ರವಿ. ಸಿ. ಕಮಡೊಳ್ಳಿ**

• **ಕುಂದಗೋಳ:** ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಕುಂದಗೋಳ ತಾಲೂಕಿನ ಹಲವೆಡೆ ಕೃಷಿ ಚಟುವಟಿಕೆಗಳು ಸಂಕಷ್ಟಕ್ಕೆ ಸಿಲುಕಿದ್ದು ಬಿತ್ತನೆ ಮಾಡಿದ ಬೆಳೆಗಳು ನೀರಿನ ಕೊರತೆಯಿಂದ ಒಣಗಲಾರಂಭಿಸಿವೆ. ಭೂಮಿಯಲ್ಲಿ ಬಿರುಕುಗಳು ಕಾಣಿಸಿಕೊಳ್ಳುತ್ತಿದ್ದು, ರೈತ ಸಮುದಾಯ ಆತಂಕಕ್ಕೆ ಒಳಗಾಗಿದೆ.

ಅಲ್ಪ ಪ್ರಮಾಣದ ಮಳೆಯನ್ನು ನಂಬಿಕೊಂಡು ರೈತರು ಸಾಲ ಮಾಡಿ ಬೀಜ ಹಾಗೂ ಗೊಬ್ಬರ ಖರೀದಿಸಿ ಬಿತ್ತನೆ ಕಾರ್ಯ ಕೈಗೊಂಡಿದ್ದರು. ಆದರೆ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಸುರಿಯದ ಕಾರಣ ಬೆಳೆಗಳು ಕಮರುತ್ತಿದ್ದು ರೈತರು ಕಂಗಾಲಾಗಿದ್ದಾರೆ. ಇದೀಗ ಮಳೆಯ ನಿರೀಕ್ಷೆಯಲ್ಲಿ ರೈತರು ಆಕಾಶದತ್ತ ಚಿತ್ತ ಹರಿಸಿ ಕುಳಿತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ತಾಲೂಕಿನ ಗುಡೇನಕಟ್ಟಿ ಗ್ರಾಮದ ಶ್ರೀ 1008 ಶಾಂತಿನಾಥ ದಿಗಂಬರ ಜೈನ ಮಂದಿರದಲ್ಲಿ ಭಾನುವಾರ ಮಳೆಗಾಗಿ ವಿಶೇಷ ಪೂಜೆ ಹಾಗೂ ಪ್ರಾರ್ಥನೆಗಳು ನಡೆಯಿತು. ಬೆಳಗ್ಗೆ ಭಗವಾನ್ ಶಾಂತಿನಾಥ ತೀರ್ಥಂಕರರಿಗೆ ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು. ಬಳಿಕ ಜೈನ ಸಮಾಜದ ಶ್ರಾವಕ, ಶ್ರಾವಕಿಯರು ವರುಣ ಕೃಪೆಗಾಗಿ 1008 ನಮೋಕಾರ ಮಂತ್ರ ಜಪ ನಡೆಸಿದರು. ಈ ಸಂದರ್ಭದಲ್ಲಿ ಮಳೆಗಾಗಿ ವಿವಿಧ ಧಾರ್ಮಿಕ ವಿಧಿವಿಧಾನಗಳು, ಪೂಜೆ ಹಾಗೂ ಹವನಗಳು ನಡೆದವು. ಧನಪಾಲ್ ಮಲ್ಲಿಗವಾಡ, ವಿಶಾಲ ಯೋಗಪ್ಪನವರ, ದೇವಕ್ಕ ದೊಡ್ಡಮನಿ, ಸರಸ್ವತಿ ಮಲ್ಲಿಗವಾಡ, ಮಂಜುಳಾ ಯೋಗಪ್ಪನವರ, ಅನಸೂಯ ಯೋಗಪ್ಪನವರ, ಚೈತ್ರ ನಾಗರಹಳ್ಳಿ, ಕಮಲವ್ವ ಯೋಗಪ್ಪನವರ, ಸರಳ ದೊಡ್ಡಮನಿ ಸೇರಿದಂತೆ ಜೈನ ಸಮಾಜದ ಅನೇಕ ಭಕ್ತರು ಪಾಲ್ಗೊಂಡಿದ್ದರು.



ಸಾಲ ಮಾಡಿ ಬಿತ್ತನೆ ಮಾಡಿದ ಬೆಳೆಗಳು ಮಳೆಯ ಕೊರತೆಯಿಂದ ಒಣಗುತ್ತಿವೆ. ಇದರಿಂದ ರೈತರ ಆರ್ಥಿಕ ಸ್ಥಿತಿ ಹದಗೆಡುತ್ತಿದೆ. ಸರ್ಕಾರ ತಕ್ಷಣವೇ ಬೆಳೆ ಹಾನಿ ಕುರಿತು ಸಮೀಕ್ಷೆ ನಡೆಸಿ ನೆರವು ಘೋಷಿಸಬೇಕು. ಕಳೆದ ಸಾಲಿನ ಬೆಳೆ ವಿಮೆ ಮೊತ್ತವನ್ನು ಬಿಡುಗಡೆ ಮಾಡಬೇಕು ಹಾಗೂ ರೈತರ ಸಾಲ ಮನ್ನಾ ಕುರಿತು ಕ್ರಮ ಕೈಗೊಳ್ಳಬೇಕು.

■ **ಬಸವರಾಜ ಯೋಗಪ್ಪನವರ,** ರೈತ ಮುಖಂಡ

ಲಲಿತ ಕಲಾ ಕ್ಷೇತ್ರಕ್ಕೆ ಬಡಿಗೇರ ಕೊಡುಗೆ ಅಪಾರ: ಡಾ. ಸಂಗಮನಾಥ ಲೋಕಾಪೂರ

• **ಹುಬ್ಬಳ್ಳಿ:** ಇಲ್ಲಿಯ ವಿದ್ಯಾನಗರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಹಾಗೂ ವಿವಿಧ ಸಂಘಗಳ ಸಹಯೋಗದಲ್ಲಿ ರಥಶಿಲ್ಪಿ ದಿವಂಗತ ಮೈಲಾರಪ್ಪ ಬಡಿಗೇರ ಅವರ 26 ನೇ ಪುಣ್ಯ ಸ್ಮರಣೆ ಅಂಗವಾಗಿ ಏರ್ಪಡಿಸಿದ್ದ ರಂಗಶಿಲ್ಪಿ ಮೈಲಾರಪ್ಪ ಬಡಿಗೇರ ಸ್ಮಾರಕ ಪ್ರತಿಷ್ಠಾನದ ಉದ್ಘಾಟನೆ ಹಾಗೂ ವಚನ ಚಿಂತನೆ ಸಮಾರಂಭ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ಸಂಗಮನಾಥ ಲೋಕಾಪೂರ, ಕಲೆ, ಚಿತ್ರಕಲೆ ನಾಟಕ ಶಿಲ್ಪ ಕಲೆ ಸಂಗೀತ ಹಾಗೂ ವಿಶೇಷವಾಗಿ ಲಲಿತ ಕಲಾ ಕ್ಷೇತ್ರಕ್ಕೆ ಮೈಲಾರಪ್ಪ ಬಡಿಗೇರ ಅವರು ನೀಡಿರುವ ಕೊಡುಗೆ ಅಪಾರವಾಗಿದೆ ಎಂದರು.

ಲಿಂಗಾಯತ ಮಹಾಸಭೆಯ ಅಧ್ಯಕ್ಷ ಎಸ್.ಬಿ. ಜೋಡಳ್ಳಿ ಮಾತನಾಡಿ, ಶರಣರ ವಚನ ಸಾಹಿತ್ಯವು ಜನಸಾಮಾನ್ಯರ ಶೋಷಿತರ ಬದುಕಿನ ಧ್ವನಿಯಾಗಿದ್ದು, ಸಮಾನತೆ, ಮಾನವೀಯತೆ ಹಾಗೂ ಮೌಲ್ಯಾಧಾರಿತ ಸಮ ಸಮಾಜದ ಬದುಕಿನ ಸಂದೇಶವನ್ನು ಸಾರುತ್ತವೆ ಎಂದರು.

ಯುವ ಮುಖಂಡ ಕಿರಣ ಪಾಟೀಲ ಕುಲಕರ್ಣಿ ಮಾತನಾಡಿ, ರಂಗಶಿಲ್ಪಿ ಮೈಲಾರಪ್ಪ ಬಡಿಗೇರ ಸ್ಮಾರಕ ಪ್ರತಿಷ್ಠಾನದ ಎಲ್ಲ ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಗೆ ಸದಾ ಬೆಂಬಲವಾಗಿ ನಿಲ್ಲುವುದಾಗಿ ಭರವಸೆ ನೀಡಿದರು. ದಿ ಮೈಲಾರಪ್ಪ ಬಡಿಗೇರ ಅವರ ಪತ್ನಿ ಕಸ್ತೂರಿ ಬಡಿಗೇರ ಅವರು ಅಧ್ಯಕ್ಷತೆ ವಹಿಸಿದ್ದರು. ಯುವ ಮುಖಂಡ ಪ್ರಭು ರಾಮನಾಳ ಪ್ರಸ್ತಾವಿಸಿದರು. ಷಣ್ಮುಖಪ್ಪ ಬಡಿಗೇರ, ಷಣ್ಮುಖಪ್ಪ ತಾರೀಹಾಳ, ದ್ಯಾಮಣ್ಣ ಬಡಿಗೇರ, ಡಾ. ಮಲ್ಲಿಕಾರ್ಜುನ ಕುಂದಗೋಳ , ಎಸ್ ವ್ಹಿ ಬಿದರಳ್ಳಿ , ಪತ್ರಕರ್ತ ವೀರೇಶ್ ಹಂಡಿಗಿ , ಕವಯಿತ್ರಿ ಪಾರ್ವತಿ ಕಂಬಳಿ, ಹನುಮಂತ ಹಿರೇಮನಿ, ಮಂಜುನಾಥ ಹುಂಬಿ , ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷರಾದ ಗುರುಸಿದ್ದಪ್ಪ ಎಂ ಬಡಿಗೇರ ಸ್ವಾಗತಿಸಿದರು.



ರಾಷ್ಟ್ರೀಕೃತ, ಸಹಕಾರಿ ಬ್ಯಾಂಕುಗಳ ರೈತರ ಸಂಪೂರ್ಣ ಸಾಲಮನ್ನಾಕ್ಕೆ ಬಾಳನಗೌಡರ ಆಗ್ರಹ

• **ಧಾರವಾಡ:** ದೇಶದ ರೈತರ ಆತ್ಮಹತ್ಯೆ ಸರಣಿ ತಡೆಯಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದೇಶದ ಎಲ್ಲ ರಾಷ್ಟ್ರೀಕೃತ ಹಾಗೂ ಸಹಕಾರಿ ಬ್ಯಾಂಕುಗಳ ರೈತರ ಸಂಪೂರ್ಣ ಸಾಲಮನ್ನಾಕ್ಕೆ ರೈತ ಮುಖಂಡ ಮಲ್ಲಿಕಾರ್ಜುನ ಬಾಳನಗೌಡರ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕೃಷಿ ವಲಯ ಸಾಕಷ್ಟು ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ರೈತರ ವಿವಿಧ ಜ್ವಲಂತ ಬೇಡಿಕೆಗಳ ಈಡೇರಿಕೆಗೆ ಸರ್ಕಾರಗಳು ಸ್ಪಂದಿಸಬೇಕು. ಇಲ್ಲವಾದರೆ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು. ದೇಶಕ್ಕೆ ಅನ್ನ ನೀಡುವ ರೈತರ ಮಕ್ಕಳನ್ನು ಮದುವೆಯಾಗಲು ಹೆಣ್ಣು ಸಿಗದಿರುವುದು ಇಂದು ಗ್ರಾಮೀಣ ಭಾಗದ ದೊಡ್ಡ ದುರಂತವಾಗಿದೆ. ಸಮಾಜದಲ್ಲಿ ರೈತರ ಮಕ್ಕಳಿಗೂ ಗೌರವ ಸಿಗಬೇಕು ಹಾಗೂ ಪೋಷಕರು ತಮ್ಮ ಹೆಣ್ಣುಮಕ್ಕಳನ್ನು ರೈತರ ಮಕ್ಕಳಿಗೆ ಕೊಟ್ಟು ವಿವಾಹ ಮಾಡಲು ಮುಂದೆ ಬರಬೇಕು ಎಂದು ಬಾಳನಗೌಡರ ಮನವಿ ಮಾಡಿದರು.

ರೈತರ ಆರ್ಥಿಕ ನಷ್ಟದ ಕುರಿತು ಮಾತನಾಡಿದ ಬಾಳನಗೌಡರ, 2023-24 ಮತ್ತು 2024-25ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಈವರೆಗೂ ಜಮೆಯಾಗದ ಬೆಳೆವಿಮೆ ಹಣ ರೈತರ ಖಾತೆಗಳಿಗೆ ಜಮೆ ಮಾಡಲು ಒತ್ತಾಯಿಸಿದರು.



ಪ್ರಸ್ತುತ 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆ ಉಂಟಾಗಿದೆ. ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನೆಲೆಯಲ್ಲಿ ತಕ್ಷಣ ಪ್ರತಿ ರೈತರ ಖಾತೆಗೆ ರೂ.25 ಸಾವಿರ ಪರಿಹಾರ ಹಣ ಜಮೆ ಮಾಡಲು ಒತ್ತಾಯಿಸಿದರು. ಉತ್ತರ ಕರ್ನಾಟಕದ ಜೀವನಾಡಿಯಾದ ಕಳಸಾ-ಬಂಡೂರಿ ನಾಲಾ ಜೋಡಣೆ ಯೋಜನೆ ಕೇವಲ ರಾಜಕೀಯಕ್ಕೆ ಬಳಸಿಕೊಳ್ಳದೆ ಕೇಂದ್ರ-ರಾಜ್ಯ ಸರ್ಕಾರಗಳು ಪರಸ್ಪರ ಒಗ್ಗೂಡಿ ಅನುಷ್ಠಾನಿಸಿ, ನೀರಿನ ಶಾಶ್ವತ ಪರಿಹಾರ ಒದಗಿಸಲು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಶಿವನಗೌಡ ಪಾಟೀಲ, ಚಂದ್ರಗೌಡ ಗಸ್ತಿ, ಶಿವಮ್ಮ ಹಡಪದ, ಚಂದ್ರಪ್ಪ ದುರ್ಗಣ್ಣವರ, ಪ್ರವೀಣ ಕುರುಬರ, ವಿಠ್ಠಲ ಸೇರಿ ಅನೇಕರಿದ್ದರು.

ಹೃದಯದ ಆರೋಗ್ಯಕ್ಕೆ ಯೋಗ ಅಗತ್ಯ



• **ನವಲಗುಂದ:** ಯೋಗವು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸುಧಾರಿಸುವ ಅತ್ಯುತ್ತಮ ಅಭ್ಯಾಸವಾಗಿದೆ. ಇದು ಶಕ್ತಿ ಮತ್ತು ಸಮತೋಲನವನ್ನು ಹೆಚ್ಚಿಸುತ್ತದೆ. ಜೊತೆಗೆ ಒತ್ತಡವನ್ನು ಕಡಿಮೆ ಮಾಡಿ ರಕ್ತದೊತ್ತಡ ನಿಯಂತ್ರಿಸಿ ಹೃದಯದ ಆರೋಗ್ಯ ಸುಧಾರಿಸಲು ಸಹಾಯ ಮಾಡುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಮಂಜುನಾಥ ಪಾನಘಂಟಿ ಹೇಳಿದರು.

ಅವರು ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಹಿರಿಯ ಸಿವಿಲ್ ಹಾಗೂ ಸಿವಿಲ್ ನ್ಯಾಯಾಲಯ, ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ನ್ಯಾಯಾಲಯಗಳ ಪ್ರಾಂಗಣದಲ್ಲಿ ಆಯೋಜಿಸಿದ್ದ ಯೋಗ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮಾಡೆಲ್ ಹೈಸ್ಕೂಲಿನ ದೈಹಿಕ ಶಿಕ್ಷಣ ಶಿಕ್ಷಕ ಎಸ್.ಎನ್.ಲಮಾಣಿ ಅವರು ವೈವಿಧ್ಯಮಯ ಯೋಗಗಳನ್ನು ಹೇಳಿಕೊಟ್ಟರು. ವಕೀಲರ ಸಂಘದ ಅಧ್ಯಕ್ಷ ಪಿ.ಎಚ್. ಕೋನರಡ್ಡಿ, ಸಂಘದ ಇತರ ಪದಾಧಿಕಾರಿಗಳು, ಸಂಘದ ಸದಸ್ಯರು ಹಾಗೂ ನ್ಯಾಯಾಲಯದ ಸಿಬ್ಬಂದಿ ಭಾಗವಹಿಸಿದರು.

ಯೋಗ ನಮ್ಮ ನಿತ್ಯ ಜೀವನದ ಪದ್ಧತಿಯಾಗಲಿ



• **ಹುಬ್ಬಳ್ಳಿ:** ಇಲ್ಲಿಯ ಜೆ.ಸಿ.ನಗರದಲ್ಲಿರುವ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಹುಬ್ಬಳ್ಳಿಯ ಇಂಟರ್ ನ್ಯಾಷನಲ್ ಯೋಗ ಸ್ಪೆಷಲಿಸ್ಟ್ ಹಾಗೂ ಅಕ್ಯುಪ್ರೆಶರ್ ಥೆರಪಿಸ್ಟ್ ಡಾ. ಈಶ್ವರ್ ಎಂ . ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜೀವನದಲ್ಲಿ ಯಶಸ್ಸು ಪಡೆಯಲು ಹೇಗೆ ವಿವಿಧ ಕ್ಷೇತ್ರಗಳಿಗೆ ಮಹತ್ವ ನೀಡುತ್ತೇವೆಯೋ ಅದೇ ರೀತಿ ದೇಹದ ಆರೋಗ್ಯದ ಕಾಳಜಿಗೂ ಆದ್ಯತೆ ನೀಡಬೇಕು ಎಂದರು. ನಿತ್ಯವೂ ಯೋಗ ಮತ್ತು ಧ್ಯಾನಕ್ಕೆ ಸಮಯ ಮೀಸಲಿಟ್ಟು, ಯೋಗವನ್ನು ಜೀವನ ಪದ್ಧತಿಯನ್ನಾಗಿಸಿಕೊಳ್ಳಬೇಕು. ಯೋಗಾಸನ ಹಾಗೂ ರಾಜಯೋಗ ಧ್ಯಾನದ ಮೂಲಕ ಅನೇಕ ರೋಗಗಳಿಂದ ಮುಕ್ತಿ ಪಡೆಯಲು ಸಾಧ್ಯವೆಂದು ತಿಳಿಸಿದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ರಾಮನಗೌಡ, ಗೋಕುಲ್ ರೋಡ್ ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಜ್ಯೋತಿ ಸಿ. ಹೊನ್ನಕಟ್ಟಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವಲಯಕೇಂದ್ರ-7ರ ಸಹಾಯಕ ಕಮಿಷನರ್ ಆನಂದ ಕೆಸರಕೊಪ್ಪ, ಸೌತ್ ವೆಸ್ಟರ್ನ್ ರೈಲ್ವೆ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಮುರಗೇಶ್ ಟಿ.ಎಸ್., ಹುಬ್ಬಳ್ಳಿಯ ರಕ್ತದಾನ ಕೇಂದ್ರದ ವೆಲ್ಫೇರ್ ಸದಸ್ಯ ಕಿರಣ ವಸುದೇವ ಗದದರ ಹಾಗೂ ವರದಿಗಾರ ನಿತಿನ್ ಗೌಡ ಪಾಟೀಲ ಉಪಸ್ಥಿತರಿದ್ದರು. ಸಾಮೂಹಿಕ ಯೋಗ ಕಾರ್ಯಕ್ರಮವನ್ನು ಯೋಗ ಹಾಗೂ ಯೋಗಾಸನ ಶಿಕ್ಷಕರಾದ ಬ್ರಹ್ಮಕುಮಾರ ಅಶೋಕಣ್ಣ ಅವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ನೂರಾರು ಜನರು ಪಾಲ್ಗೊಂಡು ಯೋಗದ ಮಹತ್ವವನ್ನು ಅರಿತುಕೊಂಡರು.

ಒತ್ತಡ ದೂರ

ಇಂದಿನ ಒತ್ತಡದ ಬದುಕಿನಲ್ಲಿ ಮನ:ಶಾಂತಿ, ನೆಮ್ಮದಿ ಹಾಗೂ ಏಕಾಗ್ರತೆಯನ್ನು ಪಡೆಯಲು ಯೋಗ ಅತ್ಯಂತ ಸಹಕಾರಿಯಾಗಿದೆ ಎಂದು ಈಶ್ವರೀಯ ವಿಶ್ವ ವಿದ್ಯಾಲಯದ ಹುಬ್ಬಳ್ಳಿ ವಲಯದ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ನಿರ್ಮಲಾ ಹೇಳಿದರು.

▸▸ ಕಾರ್ಯಕ್ರಮದಲ್ಲಿ ವಿಶೇಷವಾಗಿ ಆಕರ್ಷಿಸಿದ ಮೂವರು ಚಿಕ್ಕ ಬಾಲಕರಿಂದ ನಡೆದ ವಿವಿಧ ಕಾಯಿಲೆಗಳಿಗೆ ಸಂಬಂಧಿಸಿದ ಯೋಗಾಸನಗಳು ಹಾಗೂ ಅಕ್ಯುಪ್ರೆಶರ್ ಪಾಯಿಂಟ್‌ಗಳ ಕುರಿತು ಪ್ರಾಯೋಗಿಕ ಪ್ರದರ್ಶನ

▸▸ ಯಾವ ಕಾಯಿಲೆಗೆ ಯಾವ ಯೋಗಾಸನ ಉಪಯುಕ್ತ, ಯಾವ ಅಕ್ಯುಪ್ರೆಶರ್ ಪಾಯಿಂಟ್ ಒತ್ತುವುದರಿಂದ ಆರೋಗ್ಯ ಲಾಭ ದೊರೆಯುತ್ತದೆ ಎನ್ನುವ ತಿಳುವಳಿಕೆ

ಆರೋಗ್ಯಕರ ಜೀವನಕ್ಕೆ ಯೋಗ ಅವಶ್ಯ



• **ಧಾರವಾಡ:** ನಗರದ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾಲಯದಲ್ಲಿ ಆರೋಗ್ಯಕರ ವೃದ್ಧಾಪ್ಯಕ್ಕೆ ಯೋಗ ಎಂಬ ಘೋಷವಾಕ್ಯದಡಿ 12ನೇ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ಭಾನುವಾರ ಜರುಗಿತು.

ಪ್ರಕೃತಿ ಮತ್ತು ಯೋಗ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಮಲ್ಲಿಕಾರ್ಜುನಗೌಡ ಅರಳಿಹಳ್ಳಿ ಮಾತನಾಡಿ, ಯೋಗವು ಆರೋಗ್ಯಕರ ಜೀವನಕ್ಕೆ ಸಮಗ್ರ ಜ್ಞಾನ ಒದಗಿಸುತ್ತದೆ. ನಿತ್ಯವೂ ಯೋಗಾಸನಗಳನ್ನು ಮಾಡುವ ಮೂಲಕ ನಮ್ಮ ದೇಹ ಮತ್ತು ಮನಸ್ಸು ಉಲ್ಲಾಸದಿಂದ ಇರುತ್ತದೆ. ದೇಹ ಮತ್ತು ಮನಸ್ಸಿನ ಸಮತೋಲನಕ್ಕೆ ಯೋಗವು ಸಹಕಾರಿಯಾಗಿದೆ. ಮನಸ್ಸಿನ ಶಾಂತತೆ ಮತ್ತು ಲವಲವಿಕೆ ಹೆಚ್ಚಿಸುವಲ್ಲಿ, ಮಾನಸಿಕ ಒತ್ತಡ ಕಡಿಮೆ ಮಾಡುವಲ್ಲಿ ಹಾಗೂ ದಕ್ಷತೆಯ ಕಾರ್ಯನಿರ್ವಹಣೆಗೆ ಯೋಗಾಭ್ಯಾಸಗಳನ್ನು ಮಾಡುವಂತೆ ಸಲಹೆ ನೀಡಿದರು.

ಎಸ್‌ಡಿಎಂ ಉಪಕುಲಪತಿ ಡಾ. ನಿರಂಜನಕುಮಾರ್, ಕಾರ್ಯನಿರ್ವಾಹಕ ನಿರ್ದೇಶಕಿ ಪದ್ಮಲತಾ ನಿರಂಜನ್, ಸಹ ಉಪಕುಲಪತಿ ವಿ.ಜೀವಂಧರಕುಮಾರ್, ಕುಲಸಚಿವ ಡಾ. ಚಿದೇಂದ್ರ ಶೆಟ್ಟರ್, ಡಾ.ಬಲರಾಮ ನಾಯ್ಕ, ಡಾ.ಆಶಿತಾ ಶೆಟ್ಟಿ ಇತರರಿದ್ದರು.

ಕಿರುಸುದ್ದಿ

ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸಲು ವ್ಯವಸ್ಥೆ

ನವಲಗುಂದ: ನಗರದ ವಿದ್ಯಾಜ್ಯೋತಿ ವಸತಿ ಶಾಲೆಯ ಕಟ್ಟಡದಿಂದ ಬಿದ್ದು ಮೃತಪಟ್ಟ ಆಕಾಶ ನೀಲಣ್ಣವರ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಿರುವುದಾಗಿ ಬಿಇಒ ಅರ್ಜುನ ಕಂಬೋಗಿ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಆದೇಶದ ಅನುಸಾರವಾಗಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮರಡಿನಾಗಲಾಪುರದ ಸರಸ್ವತಿ ಶಿಕ್ಷಣ ಸಂಸ್ಥೆಯ ಸದ್ಯ ನವಲಗುಂದದ ವಿದ್ಯಾಜ್ಯೋತಿ ಕಿರಿಯ ಪ್ರಾಥಮಿಕ ಶಾಲೆಯ ಮಾನ್ಯತೆ ರದ್ದು ಮಾಡಲಾಗಿದೆ. ಇಲ್ಲಿರುವ 150 ಮಕ್ಕಳನ್ನು ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ದಾಖಲಿಸಲು ವ್ಯವಸ್ಥೆ ಮಾಡಲಾಗಿದೆ. ಪಾಲಕರು ಸರ್ಕಾರಿ ಶಾಲೆಯಲ್ಲಿ ಕಲಿಸಲು ಇಚ್ಛೆ ಪಟ್ಟರೆ ಸರ್ಕಾರಿ ಶಾಲೆಯಲ್ಲಿ ದಾಖಲು ಮಾಡಬಹುದು. ಇಲ್ಲದಿದ್ದಲ್ಲಿ ವರ್ಗಾವಣೆ ಪತ್ರ ಪಡೆಯಬಹುದು. ಪಾಲಕರು ಹೆಚ್ಚಿನ ಮಾಹಿತಿಗೆ 8105756512 ಸಂಪರ್ಕಿಸಲು ಹೇಳಿದ್ದಾರೆ.

ಯುವಕನಿಗೆ ಚಾಕು ಇರಿತ: ಇಬ್ಬರ ಬಂಧನ

ನವಲಗುಂದ: ಹಳೇ ವೈಷಮ್ಯ ಹಿನ್ನೆಲೆಯಲ್ಲಿ ಯುವಕನಿಗೆ ಚಾಕು ಇರಿದ ಘಟನೆ ನಗರದ ಹೊರವಲಯದ ಹುಬ್ಬಳ್ಳಿ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ ಪಕ್ಕದ ಶೆಟ್ಟರ ಕೆರೆ ಹತ್ತಿರ ಶನಿವಾರ ನಡೆದಿದ್ದು, ಪೊಲೀಸರು ಆರೋಪಿಗಳಿಬ್ಬರನ್ನು ಬಂಧಿಸಿದ್ದಾರೆ. ನಗರದ ವಡ್ಡರ ಓಣಿಯ ಆಕಾಶ ಭೀಮಪ್ಪ ವಡ್ಡರ(23) ಇರಿತಕ್ಕೊಳಗಾಗಿದ್ದು,



ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಆರೋಪಿತರಾದ ಇಮ್ಮಿಯಾಜ ಅಮೀನಸಾಬ ಜಮಖಾನ (32) ಹಾಗೂ ಇಮಾಮಸಾಬ ರಾಜೇಸಾಬ ಕರ್ನಾಚಿ (23) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ. ನಗರದ ಶೆಟ್ಟರ ಕೆರೆಯ ಹತ್ತಿರ ಇರುವ ಹೋಟೆಲ್‌ನಲ್ಲಿ ಆಕಾಶ ಉಪಹಾರ ಮಾಡುತ್ತಿದ್ದಾಗ ಇಮ್ಮಿಯಾಜ್ ಹಾಗೂ ಇಮಾಮಸಾಬ ಸೇರಿಕೊಂಡು ಹಳೇ ದ್ವೇಷದ ಹಿನ್ನೆಲೆಯಲ್ಲಿ ತಗಾದೆ ತೆಗೆದು ಚಾಕುವಿನಿಂದ ಹೊಟ್ಟೆಗೆ, ಎದೆಗೆ, ಬೆನ್ನಿಗೆ, ತಲೆಗೆ, ಕೈಗೆ ಹಲವು ಬಾರಿ ಇರಿದು ಪರಾರಿಯಾಗಿದ್ದರು. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕ ಗುಂಜನ ಆರ್ಯ, ಡಿಎಸ್‌ಪಿ ವಿನೋದ ಮುಕ್ತೇದಾರ, ಸಿಪಿಐ ರವಿಕುಮಾರ ಕಪ್ಪತನವರ, ಪಿಎಸ್‌ಐ ಜನಾರ್ದನ ಬಿ. ಭೇಟಿ ನೀಡಿದ್ದರು. ಭಾನುವಾರ ಧಾರವಾಡ ಎಸ್‌ಡಿಎಮ್ ಆಸ್ಪತ್ರೆಗೆ ನವಲಗುಂದ ತಹಶೀಲ್ದಾರ್ ಸುಧೀರ್ ಸಾವುಕಾರ ಭೇಟಿ ನೀಡಿ ದೌರ್ಜನ್ಯಕ್ಕೆ ಒಳಗಾದ ಅವರ ಕುಟುಂಬವನ್ನು ಭೇಟಿ ಮಾಡಿ, ವೈದ್ಯರೊಂದಿಗೆ ಆಕಾಶ ವಡ್ಡರ ಅವರ ಆರೋಗ್ಯ ಸ್ಥಿತಿಯನ್ನು ವಿಚಾರಿಸಿ, ಅಟ್ರಾಸಿಟಿ ಕಾನೂನಿನ ಪ್ರಕಾರ ಪ್ರಾಥಮಿಕ ಪರಿಹಾರದ ಚೆಕ್ ವಿತರಿಸಿದರು.

ಕೃಷಿ ಹೊಂಡದಲ್ಲಿ ಮುಳುಗಿ ಚಿಕ್ಕಪ್ಪ-ಮಗ ದುರ್ಮರಣ

ಕಲಬುರಗಿ: ಜಿಲ್ಲೆಯ ಸೇಡಂ ತಾಲೂಕಿನ ಮುಗನೂರ ಗ್ರಾಮದಲ್ಲಿ ಕೃಷಿ ಹೊಂಡದಲ್ಲಿ ಮುಳುಗಿ ಚಿಕ್ಕಪ್ಪ ಹಾಗೂ ಮಗ ಮೃತಪಟ್ಟಿರುವ ದುರ್ಘಟನೆ ನಡೆದಿದೆ. ಮೃತರನ್ನು ಮುಗನೂರ ಗ್ರಾಮದ ಭದ್ರಸ್ವಾಮಿ (32) ಹಾಗೂ ಸದಾಶಿವ ಸ್ವಾಮಿ (10) ಎಂದು ಗುರುತಿಸಲಾಗಿದೆ.





ನಿನ್ನೆ ಎಮ್ಮೆ ಮೇಯಿಸಲು ತೆರಳಿದ್ದ ಭದ್ರಸ್ವಾಮಿ ಮತ್ತು ಸದಾಶಿವ ಸ್ವಾಮಿ ಸಂಜೆ ವೇಳೆಗೆ ಮನೆಗೆ ವಾಪಸ್ಸಾಗಿರಲಿಲ್ಲ, ಆದರೆ, ಅವರು ಮೇಯಿಸಲು ಕರೆದೊಯ್ದ ಎಮ್ಮೆಗಳು ಮಾತ್ರ ಗ್ರಾಮಕ್ಕೆ ಮರಳಿದ್ದರಿಂದ ಕುಟುಂಬಸ್ಥರಿಗೆ ಅನುಮಾನ ಉಂಟಾಗಿದೆ. ತಕ್ಷಣ ಗ್ರಾಮಸ್ಥರು ಮತ್ತು ಕುಟುಂಬ ಸದಸ್ಯರು ಹುಡುಕಾಟ ನಡೆಸಿದ ವೇಳೆ ಗ್ರಾಮದ ಹೊರವಲಯದಲ್ಲಿರುವ ಕೃಷಿ ಹೊಂಡದ ಬಳಿ ಅವರ ಬಟ್ಟೆ ಹಾಗೂ ಮೊಬೈಲ್ ಪತ್ತೆಯಾಗಿದೆ. ಬಳಿಕ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಲಾಗಿದ್ದು, ಸತತ ಕಾರ್ಯಾಚರಣೆ ನಡೆಸಿದ ಅವರು ಕೃಷಿ ಹೊಂಡದಿಂದ ಇಬ್ಬರ ಶವಗಳನ್ನು ಹೊರತೆಗೆದಿದ್ದಾರೆ. ಕೃಷಿ ಹೊಂಡದಲ್ಲಿ ಮುಳುಗಿ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದ್ದು, ಘಟನೆಗೆ ಸಂಬಂಧಿಸಿದಂತೆ ಸೇಡಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಬೆಳೆ ಹಾನಿಗೊಳಗಾದ ಅನ್ನದಾತರಿಗೆ ಆರ್ಥಿಕ ಸಂಕಷ್ಟ

ರೈತರಿಗೆ ದೊರೆಯದ ಬೆಳೆವಿಮೆ

▸ ಸಂಗಮೇಶ ಉತ್ನಾಳ

ದೇವರಹಿಪ್ಪರಗಿ: ಕಳೆದ ವರ್ಷ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಹಾನಿಗೊಳಗಾದ ತೊಗರಿ ಬೆಳೆಗೆ ರೈತರು ಕಟ್ಟಿದ ವಿಮೆ ಹಣ ಮಂಜೂರಾಗಿದ್ದು, ದೇವರಹಿಪ್ಪರಗಿ ತಾಲೂಕಿನಲ್ಲಿ ನಿಜವಾಗಿ ಬೆಳೆ ಹಾನಿಗೊಂಡ ರೈತರಿಗೆ ತಲುಪದೇ ಸಂಬಂಧಿಸಿದ ಸರ್ಕಾರದ ಅಧಿಕಾರಿಗಳ ಹಾಗೂ ವಿಮೆ ಕಂಪನಿಯವರ ನಿರ್ಲಕ್ಷ್ಯದಿಂದಾಗಿ ನೆಟೆ ರೋಗದಿಂದ ಬೆಳೆ ಹಾನಿಗೊಂಡ ರೈತರಿಗೆ ತಲುಪದೇ ಇದ್ದು ರೈತ ವರ್ಗ ಆರ್ಥಿಕ ಸಂಕಷ್ಟಕ್ಕೊಳಗಾಗಿದೆ.

ದಿಗಂತ ವಿಶೇಷ

ದೇವರ ಹಿಪ್ಪರಗಿ ಗ್ರಾಮದ ಹಾನಿಗೊಂಡ ತೊಗರಿ ಬೆಳೆಗೆ ವಿಮೆಹಣ ರೈತರಿಗೆ ಜಮೆ ಆಗಿರುತ್ತದೆ. ಆದರೆ, ಅದಕ್ಕೆ ಹತ್ತಿಕೊಂಡಿರುವ ಪಡಗಾನೂರ ಗ್ರಾಮದ ಸುಮಾರು 300ಕ್ಕೂ ಅಧಿಕ ಹಾನಿಗೊಂಡ ಒಣ ಬೇಸಾಯ ತೊಗರಿ ಬೆಳೆ ಜಮೀನುಗಳಿಗೆ ಒಂದು ನಯಾಪೈಸೆಯೂ ಬೆಳೆವಿಮೆ ಹಣ ಜಮೆಯಾಗಿಲ್ಲ. ಇದು ವಿಮೆ ಕಂಪನಿಯ ನಿರ್ಲಕ್ಷವೋ. ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷವೋ ಗೊತ್ತಿಲ್ಲ. ರೈತರಿಗೆ ಮಾತ್ರ ಸಂಕಷ್ಟ ಉಂಟಾಗಿದೆ.

ಇದರಂತೆ ಪಡಗಾನೂರ ಗ್ರಾಮದ ಜಮೀನುಗಳಿಗೆ ಹೊಂದಿಕೊಂಡಿರುವ ಪಕ್ಕದ ವಿಜಯಪುರ ತಾಲೂಕಿನ ಶಿವಣಗಿ ಗ್ರಾಮಕ್ಕೆ ಸಹ ಒಣ ಬೇಸಾಯ ತೊಗರಿ ಬೆಳೆ ರೈತರ ವಿಮೆ ಹಣ ಕನಿಷ್ಠ 10,000 ಸಾವಿರದಿಂದ ಲಕ್ಷಗಳ ಲೆಕ್ಕದಲ್ಲಿ ಜಮೆಯಾಗಿದ್ದು, ಪಡಗಾನೂರ ಗ್ರಾಮ ಒಳಗೊಂಡು ಮುಳಸಾವಳಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಿಗೆ ಮಾತ್ರ ಒಂದುನಯಾ ಪೈಸೆಯೂ ಜಮೆಯಾಗಿರುವುದಿಲ್ಲ. ಬೆರಳಣಿಕೆ



> ಒಣ ಬೇಸಾಯದ ತೊಗರಿ ಬೆಳೆ ತಾಲೂಕಿನ ಬಹುತೇಕ ಜಮೀನುಗಳಲ್ಲಿ ನೆಟೆ ರೋಗಕ್ಕೆ ತುತ್ತಾಗಿ ಬೆಳನಾಶವಾಗಿದ್ದು, ಕೆಲವು ಕಡೆ ನೀರಾವರಿ ತೊಗರಿ ಬೆಳೆಗೆ ಮಾತ್ರ ವಿಮೆಹಣ ಕೊಟ್ಟಿದ್ದು ಸರಿಯಲ್ಲ. ಕೂಡಲೇ ಹಾನಿಗೊಂಡ ಒಣ ಬೇಸಾಯದ ತೊಗರಿಗೂ ವಿಮೆ ಹಣ ಕೊಡಬೇಕು ಇಲ್ಲದಿದ್ದರೆ ರೈತರು ಹೋರಾಟ ಕೈಗೊಳ್ಳಬೇಕಾಗುತ್ತದೆ.
>
> ■ ಈರಪ್ಪ ಕುಳಿಕುಮಟಗಿ, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ತಾಲೂಕಾಧ್ಯಕ್ಷ

ನೀರಾವರಿ ತೊಗರಿ ನಾಲ್ಕಾರು ಜಮೀನುಗಳಿಗೆ ವಿಮೆ ಹಣ ಬಂದಿದ್ದು, ಬಹುತೇಕ ರೈತರು ಒಣ ಬೇಸಾಯ ಜಮೀನುಗಳಲ್ಲಿ ತೊಗರಿ ಬಿತ್ತನೆ ಮಾಡಿ ನೆಟೆ ರೋಗದಿಂದ ಬೆಳೆ ಹಾನಿಗೊಂಡಿದ್ದರು ಸಹ ಅಧಿಕಾರಿಗಳ ನಿರ್ಲಕ್ಷದಿಂದ ಕೇವಲ ನೀರಾವರಿ ತೊಗರಿ ಬೆಳೆ ವಿಮೆ ಹಣ ಮಾತ್ರ ಮಂಜೂರಾಗಿರುವುದು ಏಕೆಂಬುದು ರೈತರ ಪ್ರಶ್ನೆಯಾಗಿದೆ.

ಹಾಗೂ ನೀರಾವರಿ ಜಮೀನಿನಲ್ಲಿ ಬೆಳೆ ನಷ್ಟಗೊಂಡರೆ ರೈತ ಮತ್ತೊಂದು ಬೆಳೆ ಬೆಳೆಯುತ್ತಾರೆ.

> ಕ್ರಾಪ್ ಕಟಿಂಗ್‌ನಲ್ಲಿ ಸಂಬಂಧಿಸಿದ ಗ್ರಾಮ ಪಂಚಾಯತಿ ಅಧಿಕಾರಿಗಳು ಹಾಗೂ ವಿಮೆ ಕಂಪನಿ ಅಧಿಕಾರಿಗಳು ಪರಿಶೀಲನೆ ಮಾಡಿ ಸಲ್ಲಿಸಿದ ವರದಿ ಅನುಸಾರ ಸಂಬಂಧಪಟ್ಟ ವಿಮೆ ಕಂಪನಿಯು ಬೆಳೆ ವಿಮೆಯನ್ನು ರೈತರ ಖಾತೆಗಳಿಗೆ ಜಮೆ ಮಾಡುತ್ತದೆ. ಇದರಲ್ಲಿ ನಮ್ಮ ಕೃಷಿ ಇಲಾಖೆಯ ಅಧಿಕಾರಿಗಳ ಪಾತ್ರ ಇರುವುದಿಲ್ಲ.
>
> ■ ಶರಣಗೌಡ ಬಿರಾದಾರ, ಸಹಾಯಕ ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ, ದೇವರಹಿಪ್ಪರಗಿ

ಒಣ ಬೇಸಾಯದಲ್ಲಿ ಬೆಳೆ ನಷ್ಟಗೊಂಡ ರೈತರು ಮುಂದಿನ ಬೆಳೆಗೆ ಒಂದು ವರ್ಷ ಕಾಯಬೇಕಾಗುತ್ತದೆ. ಇದು ಕೇವಲ ಮುಳಸಾವಳಗಿ ಗ್ರಾಮ ಪಂಚಾಯತಿ ಹಾಗೂ ಪಡಗಾನೂರ ಗ್ರಾಮಕ್ಕೆ ಮಾತ್ರ ಸೀಮಿತವಾಗದೆ ತಾಲೂಕಿನ ಯಲಗೋಡ, ಕೆರುಟಗಿ, ಯಾಳವಾರ, ಮಣೂರ ಸೇರಿದಂತೆ ಹಲವಾರು ಗ್ರಾಮ ಪಂಚಾಯತಿಗಳ ಅನೇಕ ಗ್ರಾಮಗಳಲ್ಲಿ ನಿಜವಾಗಿ ಬೆಳೆಹಾನಿಗೊಂಡ ರೈತರಿಗೆ ಬೆಳೆವಿಮೆ ಜಮೆ ಆಗದಿರುವುದಾಗಿ ತಿಳಿದು ಬಂದಿದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಅವರ ಮೇಲೆ ಸೂಕ್ತ ಕ್ರಮಕೈಗೊಂಡು ಹಾಗೂ ವಿಮೆ ಕಂಪನಿ ಅವರನ್ನು ಸಹ ಹೊಣೆಗಾರರನ್ನಾಗಿ ಮಾಡಿ ಬೆಳೆ ನಷ್ಟಗೊಂಡಿರುವ ನಿಜವಾದ ರೈತರಿಗೆ ಸೂಕ್ತ ವಿಮೆ ಹಣ ದೊರಕಿಸಿ ನ್ಯಾಯದೊರಕಿಸಿ ಕೊಡಬೇಕೆಂಬುದು ತಾಲೂಕ ರೈತ ಸಂಘದ ಗೌರವಾಧ್ಯಕ್ಷ ಶಿವಾನಂದಯ್ಯ ಹಿರೇಮಠ ಸೇರಿದಂತೆ ರೈತ ಮುಖಂಡರು ಹಾಗೂ ರೈತಾಪಿ ವರ್ಗದ ಒಕ್ಕೊರಲ ಆಗ್ರಹವಾಗಿದೆ.

ರಮೇಶ ಜಾರಕಿಹೊಳಿ, ರಮೇಶ ಕತ್ತಿ ಮುಖಾಮುಖಿ

ಬೆಳಗಾವಿ: ಜಿಲ್ಲೆಯ ರಾಜಕೀಯದಲ್ಲಿ ಪರಸ್ಪರ ಪೈಪೋಟಿಯಿಂದ ಗುರುತಿಸಿಕೊಂಡಿರುವ ಮಾಜಿ ಸಚಿವ ರಮೇಶ ಜಾರಕಿಹೊಳಿ ಹಾಗೂ ಶಾಸಕ ರಮೇಶ ಕತ್ತಿ ಅವರು ಭಾನುವಾರ ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಮುಖಾಮುಖಿಯಾಗಿದ್ದು, ಇಬ್ಬರೂ ಪರಸ್ಪರ ಅಪ್ಪಿಕೊಂಡು ಆತ್ಮೀಯವಾಗಿ ಮಾತುಕತೆ ನಡೆಸಿದ ಘಟನೆ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಹುಕ್ಕೇರಿ ಕೆಇಬಿ ಹಾಗೂ ಡಿಸಿಸಿ ಬ್ಯಾಂಕ್ ಚುನಾವಣೆಗಳ ಸಂದರ್ಭದಲ್ಲಿ ಜಾರಕಿಹೊಳಿ ಮತ್ತು ಕತ್ತಿ ಬಣಗಳ ನಡುವೆ ತೀವ್ರ ರಾಜಕೀಯ ಹೋರಾಟ ನಡೆದಿತ್ತು. ಈ ಪೈಪೋಟಿ ಹಲವು ವರ್ಷಗಳಿಂದ ಮುಂದುವರಿದಿದ್ದು, ಹುಕ್ಕೇರಿ ಭಾಗದಲ್ಲಿ ಇಂದಿಗೂ ಎರಡು ಕುಟುಂಬಗಳ ನಡುವಿನ ರಾಜಕೀಯ ಸಂಘರ್ಷ ಸಂಪೂರ್ಣವಾಗಿ ಶಮನಗೊಂಡಿಲ್ಲ.

ಇಂತಹ ರಾಜಕೀಯ ಹಿನ್ನೆಲೆಯ ನಡುವೆಯೇ ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ರಮೇಶ ಜಾರಕಿಹೊಳಿ ಹಾಗೂ ರಮೇಶ ಕತ್ತಿ ಪರಸ್ಪರ ಅಪ್ಪಿಕೊಂಡು ಸ್ನೇಹಪೂರ್ವಕವಾಗಿ ಮಾತನಾಡಿರುವುದು ಹಲವು ರಾಜಕೀಯ ಊಹಾಪೋಹಗಳಿಗೆ ಕಾರಣವಾಗಿದೆ. ಕಾರ್ಯಕ್ರಮದಲ್ಲಿ ಇಬ್ಬರು ನಾಯಕರು ಪ್ರದರ್ಶಿಸಿದ ಆತ್ಮೀಯತೆ ರಾಜಕೀಯ ಕಾರ್ಯಕರ್ತರು ಹಾಗೂ ಸಾರ್ವಜನಿಕರ ಗಮನ ಸೆಳೆಯಿತು.

ಡಿಸಿಸಿ ಬ್ಯಾಂಕ್ ಚುನಾವಣೆಯ ಸಂದರ್ಭದಲ್ಲಿ ಸತೀಶ ಜಾರಕಿಹೊಳಿ ಹಾಗೂ ಬಾಲಚಂದ್ರ ಜಾರಕಿಹೊಳಿ ಹೋರಾಟದ ಮುಂಚೂಣಿಯಲ್ಲಿ ಕಾಣಿಸಿಕೊಂಡಿದ್ದರೆ, ರಮೇಶ ಜಾರಕಿಹೊಳಿ ಮೌನ ವಹಿಸಿದ್ದರು. ಆದರೆ ಇದೀಗ ರಮೇಶ ಜಾರಕಿಹೊಳಿ ಮತ್ತು ರಮೇಶ ಕತ್ತಿ ನಡುವಿನ ಈ ಆತ್ಮೀಯ ಭೇಟಿ ಬೆಳಗಾವಿ ಜಿಲ್ಲಾ ರಾಜಕೀಯದಲ್ಲಿ ಹೊಸ ಚರ್ಚೆಗೆ ನಾಂದಿ ಹಾಡಿದ್ದು, ಮುಂದಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಕುತೂಹಲ ಹೆಚ್ಚಿಸಿದೆ.



ಯೋಗ ಬಲ್ಲವನಿಗೆ ರೋಗ ದೂರ: ಟೆಂಗಿನಕಾಯಿ



ಹುಬ್ಬಳ್ಳಿ: ನೃಪತುಂಗ ಬೆಟ್ಟದಲ್ಲಿ ಬೆಳಗಿನ ಜಾವ ಭಾನುವಾರ ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ವತಿಯಿಂದ ಶಾಸಕರಾದ ಮಹೇಶ ಟೆಂಗಿನಕಾಯಿ ಹಾಗೂ ಯೋಗ ಗುರುಗಳಾದ ಶ್ರೀ ಚನ್ನಬಸವ ನೇತೃತ್ವದಲ್ಲಿ ನಡೆಯಿತು.

ಯೋಗ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಸೆಂಟ್ರಲ್ ಕ್ಷೇತ್ರದ ಶಾಸನ ಮಹೇಶ ಟೆಂಗಿನಕಾಯಿ, ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ನಮ್ಮ ಭಾರತ ದೇಶದ ಪರಂಪರೆಯನ್ನು ಜಗತ್ತಿನ ಎಲ್ಲ ರಾಷ್ಟಗಳಿಗೆ ಯೋಗದ ಮಹತ್ವವನ್ನು ತಿಳಿಸಿಕೊಟ್ಟರು. ಜೂನ್ 21ರಂದು ವಿಶ್ವ ಯೋಗ ದಿನಾಚರಣೆ ಆಚರಿಸಲು ಸಲಹೆ ನೀಡಿದ್ದರು. ಅಂದಿನಿಂದ ಇಂದಿನವರೆಗೆ ಪ್ರತಿವರ್ಷ ವಿಶ್ವ ಯೋಗ ದಿನಾಚರಣೆಯ ಜಗತ್ತಿನಾದ್ಯಂತ ವಿಜೃಂಭಣೆಯಿಂದ ಜರುಗುತ್ತಿದೆ ಎಂದರು.

ಭಾರತ ದೇಶದ ಪುರಾತನ ಸಂಸ್ಕೃತಿಯನ್ನು ಬಿಂಬಿಸುವ ಮನುಷ್ಯನ ಆರೋಗ್ಯಕರ ಬೆಳವಣಿಗೆಗೆ ಯೋಗ ಸಹಕಾರಿಯಾಗುವುದು ಎಂದು ತಿಳಿಸಿದ ಪರಿಣಾಮವಾಗಿ ಇಂದು ಜನರು ವೃತ್ತಿ ಜೀವನದಲ್ಲಿ ಯೋಗವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವುದು ಸೂಕ್ತ. ಆರೋಗ್ಯವಂತರಾಗಿರಲು ಯೋಗ ಸಹಕಾರಿಯಾಗುವುದು ಎಂದು ಹೇಳಿದರು.

ಯೋಗ ಗುರು ಚೆನ್ನಬಸವ ಸ್ವಾಮೀಜಿ ಯೋಗ ಪಾಠವನ್ನು ಮಾಡುತ್ತ ಯೋಗದ ಮಹತ್ವವನ್ನು ಪ್ರತಿಯೊಬ್ಬರಿಗೂ ತಿಳಿಸಿದ ಅವರು, ಪ್ರತಿ ದಿನ ಯೋಗಾಭ್ಯಾಸವನ್ನು ಮಾಡಬೇಕು ಅದರಿಂದ ಮನಸ್ಸಿಗೆ ಶಾಂತಿ ನೆಮ್ಮದಿ ಸಿಗುತ್ತದೆ ಎಂದರು.

ಸೆಂಟ್ರಲ್ ಕ್ಷೇತ್ರದ ಅಧ್ಯಕ್ಷ ರಾಜುಳೆ ಕಾಳೆ, ಮಹಾನಗರ ಪಾಲಿಕೆಯ ಉಪ ಮಹಾಪೌರರ ಸಂತೋಷ ಚೌವ್ಹಾನ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರುಗಳು, ಕ್ಷೇತ್ರದ ಪದಾಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಬೈಕ್‌ಗೆ ಆಟೋರಿಕ್ಷಾ ಡಿಕ್ಕಿ: ವೃದ್ಧ ಸಾವು

ಅಂಕೋಲಾ: ತಾಯಿ ಮತ್ತು ಮಗ ಬೈಕ್‌ನಲ್ಲಿ ಹೋಗುತ್ತಿದ್ದ ಸಂದರ್ಭದಲ್ಲಿ ಬೈಕ್‌ಗೆ ಆಟೋರಿಕ್ಷಾ ಡಿಕ್ಕಿ ಹೊಡೆದು ವಯೋವೃದ್ಧ ತಾಯಿ ಮೃತಪಟ್ಟು ಮಗ ಗಾಯಗೊಂಡ ಘಟನೆ ಪಟ್ಟಣದ ಲೈಬ್ರರಿ ಕ್ರಾಸಿನಲ್ಲಿ ಸಂಭವಿಸಿದೆ.

ತಾಲೂಕಿನ ಶಿರಕುಳಿ ನಿವಾಸಿ ಲಲಿತಾ ಬೀರಪ್ಪ ನಾಯ್ಕ(74)ಮೃತ ದುರ್ದೈವಿಯಾಗಿದ್ದು ರವಿ ಬೀರಪ್ಪ ನಾಯ್ಕ(45) ಗಾಯಗೊಂಡಿದ್ದಾರೆ.

ಅನಾರೋಗ್ಯದ ಹಿನ್ನೆಲೆಯಲ್ಲಿ ವೈದ್ಯರ ಸಲಹೆಯಂತೆ ರಕ್ತ ತಪಾಸಣೆಗೆಂದು ಮಗನ ಬೈಕ್‌ನ ಹಿಂಬದಿಯಲ್ಲಿ ಕುಳಿತು ಹೋಗುತ್ತಿದ್ದ ಸಂದರ್ಭದಲ್ಲಿ ಜೈಹಿಂದ್ ಸರ್ಕಲ್ ಕಡೆಯಿಂದ ಅತಿವೇಗವಾಗಿ ಬಂದ ಕೆ.ಎ31ಕ್ಯೂ1341 ನೋಂದಣಿ ಸಂಖ್ಯೆಯ ಆಟೋರಿಕ್ಷಾ ಚಾಲಕ ಲೈಬ್ರರಿ ಕ್ರಾಸಿನಲ್ಲಿ ಬೈಕಿಗೆ ಡಿಕ್ಕಿ ಹೊಡೆದಿದ್ದು ಬೈಕ್ ಸವಾರ ಮತ್ತು ಹಿಂಬದಿಯಲ್ಲಿ ಕುಳಿತಿದ್ದ ಮಹಿಳೆ ಲಲಿತಾ ನಾಯ್ಕ ಬೈಕ್ ಸಮೇತ ರಸ್ತೆಯಲ್ಲಿ ಬಿದ್ದಿರುವುದಾಗಿ ತಿಳಿದು ಬಂದಿದೆ.

ಲಲಿತಾ ನಾಯ್ಕರಿಗೆ ತಲೆಗೆ ಗಂಭೀರ ಸ್ವರೂಪದ ಗಾಯಗಳಾಗಿ ಪ್ರಜ್ಞೆ ತಪ್ಪಿದ್ದು ಅಂಕೋಲಾ ತಾಲೂಕು ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗೆ ಕಾರವಾರದ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದ್ದು ಅಲ್ಲಿ ಪರೀಕ್ಷೆ ನಡೆಸಿದ ವೈದ್ಯರು ಲಲಿತಾ ನಾಯ್ಕ ಮೃತಪಟ್ಟಿರುವುದಾಗಿ ಖಚಿತಪಡಿಸಿದ್ದಾರೆ.

ಈ ಕುರಿತು ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು

ಆಟೋ ರಿಕ್ಷಾ ಚಾಲಕ ಬೊಬ್ರವಾಡ ಶೇಡಿಕುಳಿ ನಿವಾಸಿ ಪರ್ವೇಜ್ ಹರೂನ್ ಶೇಖ್ ಎಂಬಾತನ ಮೇಲೆ ಅಂಕೋಲಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಡಾ.ಲಕ್ಷ್ಮೀಶ ಆಕ್ಷೇಪಕ್ಕೆ ಶ್ಯಾಮಸುಂದರ ಗೌಡ ಸ್ಪಷ್ಟನೆ

ಶಿರಸಿ: ಸೋಂದಾ ಸ್ವರ್ಣವಲ್ಲಿ ಮಠದಲ್ಲಿರುವ ಉಜ್ಜಯನಿ ಅರಸನ ಶಾಸನದ ಕುರಿತಂತೆ ಜೂ.20ರಂದು ಶ್ಯಾಮಸುಂದರ ಗೌಡ ಅವರು ಕೈಗೊಂಡ ಅಧ್ಯಯನದ ವಿಸ್ತ್ರತ ವರದಿ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಆ ವರದಿಗೆ ಸಂಬಂಧಿಸಿದಂತೆ ಡಾ.ಲಕ್ಷ್ಮೀಶ ಹೆಗಡೆ ಸೋಂದಾ ಅವರು ಆಕ್ಷೇಪಣೆ ವ್ಯಕ್ತಪಡಿಸಿ ಅದು ನಿರ್ಲಕ್ಷಿತ ಶಾಸನ ಅಲ್ಲ. ಡಾ ಎ.ಕೆ. ಶಾಸ್ತ್ರೀಯವರು ಈ ಶಾಸನವನ್ನು ಪ್ರಕಟಿಸಿದ್ದಾರೆ. ನಾನು ನನ್ನ ಪಿಎಚ್‌ಡಿ ಪ್ರಬಂಧದಲ್ಲಿ ಚರ್ಚಿಸಿದ್ದೇನೆ. ಈಗ ಬಂದಿದ್ದು ಕಾಲದ ವ್ಯತ್ಯಾಸ ಅಷ್ಟೇ ಎಂದು ಪತ್ರಿಕಾ ಹೇಳಿಕೆ ನೀಡಿದ್ದರು. ಈ ಬಗ್ಗೆ ಮಾತನಾಡಿದ ಸಂಶೋಧಕ ಶ್ಯಾಮಸುಂದರ ಗೌಡ ಅಂಕೋಲಾ ಅವರು ತಾವು ಕೈಗೊಂಡ ಅಧ್ಯಯನದ ಕುರಿತು ಪ್ರತಿಕೆಯಲ್ಲಿ ಪ್ರಕಟವಾದ ವರದಿ ಹಾಗೂ ಸೋಂದಾ ಅವರ ಆಕ್ಷೇಪಗಳಿಗೆ ಸ್ಪಷ್ಟನೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಪ್ರಕಟಿಸಿರುವ ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು ಸಂಪುಟ-1 ಕೃತಿಯಲ್ಲಿ ಖ್ಯಾತ ಇತಿಹಾಸಕಾರ ಡಾ. ಎ. ಕೆ. ಶಾಸ್ತ್ರಿಯವರು ಶಾಸನವನ್ನು ಪ್ರಕಟಿಸಿದ್ದಾರೆ ಎನ್ನುವ ಮಾಹಿತಿಯನ್ನು ತಾವು ನೀಡಿದ ಪ್ರತಿಕಾ ವರದಿಯ ಎರಡನೇ ಪ್ಯಾರಾದ ಆರಂಭದಲ್ಲಿಯೇ ಇದೆ. ಇನ್ನು ಈ ಶಾಸನ ಪ್ರಕಟವಾಗಿ 31 ವರ್ಷಗಳು ಕಳೆದರೂ ಇನ್ನೂ ಈ ಶಾಸನ ಪಾಠ ಓದಿನ ಹಂತದಲ್ಲಿಯೇ ಇದೆ. ಅದರ ಅಧ್ಯಯನವಾಗಿಲ್ಲ. ಸಂಶೋಧನಾ ವಲಯ ಆ ಶಾಸನ ಅಧ್ಯಯನದ ಕುರಿತು ಯಾವುದೇ ಆಸಕ್ತಿವಹಿಸದೇ ಸಂಪೂರ್ಣವಾಗಿ ನಿರ್ಲಕ್ಷಿಸಿದೆ ಎನ್ನುವ ಅರ್ಥದಲ್ಲಿ ನಾನು ಅದನ್ನು ನಿರ್ಲಕ್ಷಿತ ಶಾಸನ ಎಂದು ಹೇಳಿದ್ದೇನೇ ಹೊರತು ಡಾ. ಶಾಸ್ತ್ರಿಯವರೋ, ಹೆಗಡೆಯವರೋ, ಮಠದವರೂ ನಿರ್ಲಕ್ಷಿಸಿದ್ದಾರೆ ಎಂದು ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಇನ್ನು ಡಾ.ಲಕ್ಷ್ಮೀಶ ಅವರ ನಾನು ನನ್ನ ಪಿಎಚ್‌ಡಿ ಪ್ರಬಂಧದಲ್ಲಿ ಚರ್ಚಿಸಿದ್ದೇನೆ ಎನ್ನುವ ಮಾತಿನ ಕುರಿತು ಪ್ರತಿಕ್ರಿಯಿಸಿದ ಗೌಡರು, ಸೋದೆ ಅರಸರ ಶಾಸನಗಳು ಮತ್ತು ಸ್ಮಾರಕಗಳು; ಚಾರಿತ್ರಿಕ ಅಧ್ಯಯನ ಎನ್ನುವ ಅವರ ಪಿಎಚ್‌ಡಿ ಪ್ರಬಂಧದ ಪುಟ ಸಂಖ್ಯೆ 151 ರಿಂದ 161ರ ವರೆಗೆ ಸ್ವರ್ಣವಲ್ಲಿ ಮಠದ ಕುರಿತು ಬರೆದರೂ ಉಜ್ಜಯನಿ ಅರಸನ ಶಾಸನದ ಕುರಿತು ಏನನ್ನೂ ಚರ್ಚಿಸಿಲ್ಲ. ಪುಟ 153 ರಲ್ಲಿ ಮಠ ಉಜ್ಜಯಿನಿಯಲ್ಲಿದ್ದಾಗಲೂ ಅಲ್ಲಿನ ರಾಜ ವಿಕ್ರಮಾದಿತ್ಯ ಮಠಕ್ಕೆ ಉಂಬಳಿ ನೀಡಿದ ದಾನಪತ್ರದ ದಾಖಲೆಕೂಡ ಮಠದ ಚರಿತ್ರೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ ಎನ್ನುವ ಒಂದೇ ಒಂದು ಸಾಲನ್ನು ಮಾತ್ರ ಬರೆದಿದ್ದಾರೆ. ಈ ಒಂದು ಸಾಲಿನ ವಿಷಯ ಮತ್ತು ನನ್ನ ಅಧ್ಯಯನದ ವಿಷಯ ಎರಡೂ ಬೇರೆ ಬೇರೆ ಎಂದರು ಎಂದರು.

ಜಿಲ್ಲೆಯಲ್ಲಿ ನೀಟ್ ಪರೀಕ್ಷೆ ಸುಗಮ



ಧಾರವಾಡ: ವೈದ್ಯಕೀಯ ಕೋರ್ಸ್‌ಗಳ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ ಭಾನುವಾರ ಕಟ್ಟುನಿಟ್ಟಿನ ಭದ್ರತೆ ಮತ್ತು ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಜಿಲ್ಲೆಯಲ್ಲಿ ಅತ್ಯಂತ ಯಶಸ್ವಿಯಾಗಿ ಮತ್ತು ಸುಗಮವಾಗಿ ಜರುಗಿತು.

ಧಾರವಾಡ 11 ಕೇಂದ್ರಗಳಲ್ಲಿ 3,673 ಹಾಗೂ ಹುಬ್ಬಳ್ಳಿ 10 ಕೇಂದ್ರಗಳಲ್ಲಿ 3927 ಸೇರಿದಂತೆ ಒಟ್ಟು 21 ಪರೀಕ್ಷಾ ಕೇಂದ್ರಗಳಲ್ಲಿ ಸುಮಾರು 7,500ಕ್ಕೂ ಅಧಿಕ ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆದರು.

ಬಿಗಿ ಭದ್ರತೆ-ತಪಾಸಣೆ: ಪರೀಕ್ಷಾ ಕೇಂದ್ರಗಳ ಸುತ್ತಲೂ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಕೇಂದ್ರದೊಳಗೆ ಪ್ರವೇಶಿಸುವ ಮುನ್ನ ವಿದ್ಯಾರ್ಥಿಗಳನ್ನು ತೀವ್ರ ತಪಾಸಣೆಗೆ ಒಳಪಡಿಸಲಾಯಿತು.

ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಹಾಗೂ ನಿಷೇಧಿತ ವಸ್ತುಗಳ ಬಳಕೆಗೆ ಸಂಪೂರ್ಣ ಬ್ರೇಕ್ ಹಾಕಲಾಗಿತ್ತು. ಪರೀಕ್ಷಾ ಸಿಬ್ಬಂದಿ ಕೂಡ ನಿಯಮಗಳ ಪಾಲನೆಯಲ್ಲಿ ಕಟ್ಟುನಿಟ್ಟಾಗಿ ಕಾರ್ಯನಿರ್ವಹಿಸಿದರು.

ಸಮಯ ಪಾಲನೆ: ಪರೀಕ್ಷೆ ಮಧ್ಯಾಹ್ನ ಇದ್ದರೂ, ಬೆಳಗ್ಗೆಯಿಂದ ವಿದ್ಯಾರ್ಥಿಗಳು ಮತ್ತು ಪೋಷಕರು ಪರೀಕ್ಷಾ ಕೇಂದ್ರಗಳತ್ತ ಧಾವಿಸಿದ್ದರು. ನಿಗದಿಗಿಂತ ಮುಂಚಿತವಾಗಿ ಗೇಟ್‌ಗಳನ್ನು ಮುಚ್ಚಿದ ಹಿನ್ನೆಲೆ ಅಭ್ಯರ್ಥಿಗಳು ಸಮಯಕ್ಕೆ ಹಾಜರಾಗಿದ್ದರು.

ಅಭ್ಯರ್ಥಿಗಳ ನಿರಾಳತೆ: ಕೆಲವು ದಿನಗಳಿಂದ ನೀಟ್ ಪರೀಕ್ಷೆಯ ಸುತ್ತ ಎದ್ದಿದ್ದ ಗೊಂದಲದ ನಡುವೆಯೂ, ಭಾನುವಾರ ಪರೀಕ್ಷೆ ಯಾವುದೇ ಅಡೆತಡೆಯಿಲ್ಲದೆ ಶಾಂತಿಯುತವಾಗಿ ಮುಗಿದಿದ್ದು, ಅಭ್ಯರ್ಥಿಗಳು ಹಾಗೂ ಪೋಷಕರಲ್ಲಿ ನಿರಾಳತೆ ತಂದಿದೆ.

ಪರೀಕ್ಷೆ ಬರೆದು ಹೊರಬಂದ ವಿದ್ಯಾರ್ಥಿಗಳು, ಪ್ರಶ್ನೆ ಪತ್ರಿಕೆ ಮಧ್ಯಮ ಮಟ್ಟದಲ್ಲಿದ್ದು, ಪರೀಕ್ಷಾ ಕೇಂದ್ರದಲ್ಲಿ ಉತ್ತಮ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ಹರ್ಷ ವ್ಯಕ್ತಪಡಿಸಿದರು. ಒಟ್ಟಾರೆ ಜಿಲ್ಲಾಡಳಿತ ಮತ್ತು ಶಿಕ್ಷಣ ಇಲಾಖೆಯ ಮುನ್ನೆಚ್ಚರಿಕಾ ಕ್ರಮಗಳಿಂದಾಗಿ ಧಾರವಾಡ ಜಿಲ್ಲೆಯಲ್ಲಿ ನೀಟ್ ಪರೀಕ್ಷೆಯು ಅತ್ಯಂತ ವ್ಯವಸ್ಥಿತವಾಗಿ ಹಾಗೂ ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ಹಿಂದೂಗಳ ರಕ್ಷಣೆಗೆ ಆರ್‌ಎಸ್‌ಎಸ್ ಧ್ವನಿ ಎತ್ತುತ್ತದೆ: ಶ್ರೀನಿವಾಸ ಪೂಜಾರಿ

ಬೆಳಗಾವಿ: ಜಗತ್ತಿನ ಯಾವುದೇ ಮೂಲೆಯಲ್ಲಿ ಹಿಂದೂಗಳಿಗೆ ಅನ್ಯಾಯವಾದಾಗ ಅವರ ಪರವಾಗಿ ಧ್ವನಿ ಎತ್ತುವ ಸಂಘಟನೆ ಆರ್‌ಎಸ್‌ಎಸ್ ಎಂದು ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.

ಭಾನುವಾರ ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ಸಚಿವ ಪ್ರಿಯಾಂಕ್ ಖರ್ಗೆ ಅವರು ಹಿಂದೂ ಸಮಾಜವನ್ನು ದುರ್ಬಲಗೊಳಿಸುವ ಹಾಗೂ ವಿಭಜಿಸುವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಗಂಭೀರವಾಗಿ ಆರೋಪಿಸಿದರು.

ಹಿಂದೂಗಳ ರಕ್ಷಣೆಗೆ ನಿಂತಿರುವ ಆರ್‌ಎಸ್‌ಎಸ್ ಸಂಘಟನೆಯನ್ನು ಗುರಿಯಾಗಿಸಿಕೊಂಡು ಸಚಿವರು ನೀಡುತ್ತಿರುವ ಹೇಳಿಕೆಗಳ ಹಿಂದೆ ಹಿಂದೂ ವಿರೋಧಿ ಸಂಘಟನೆಗಳ ಪ್ರಭಾವವಿದೆ ಎಂದು ಅವರು ಟೀಕಿಸಿದರು.

ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದವರನ್ನು ರಕ್ಷಿಸುವ ಕೆಲಸ ರಾಜ್ಯದಲ್ಲಿ ನಡೆಯುತ್ತಿದ್ದು ಮತ್ತೊಂದೆಡೆ 'ಭಾರತ ಮಾತಾ ಕೀ ಜೈ' ಎಂದು ಘೋಷಿಸುವ ದೇಶಭಕ್ತರನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ಕಿಡಿಕಾರಿದರು.

ಹಿಂದುತ್ವವನ್ನು ವಿರೋಧಿಸುವ ಶಕ್ತಿಗಳು ಒಂದಾಗಿ ಆರ್‌ಎಸ್‌ಎಸ್ ವಿರುದ್ಧ ಮಾತನಾಡುತ್ತಿವೆ. ಆದರೆ, ಸಚಿವರ ಇಂತಹ ರಾಜಕೀಯ ತಂತ್ರಗಳಿಗೆ ಹಿಂದೂ ಸಮಾಜ ಬಲಿಯಾಗುವುದಿಲ್ಲ. ಹಿಂದೂಗಳ ಹಿತಾಸಕ್ತಿಗಳ ರಕ್ಷಣೆಗೆ ಆರ್‌ಎಸ್ ಎಸ್ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಪ್ರಿಯಂಕ್ ಖರ್ಗೆ ಅವರಿಗೆ ಎಚ್ಚರಿಕೆ ನೀಡಿದರು.



ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕಳಪೆ ಆಹಾರ ಪತ್ತೆ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಶಾಸಕ ಬೆಲ್ದಾಳೆ ಆಗ್ರಹ

ಬೀದರ್: ಬೀದರ್ ದಕ್ಷಿಣ ಕ್ಷೇತ್ರದ ಕಮಠಾಣಾ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಭೇಟಿ ನೀಡಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಆಹಾರ ವ್ಯವಸ್ಥೆ, ಅಡುಗೆ ಮನೆ ಹಾಗೂ ಆಹಾರ ಪದಾರ್ಥಗಳ ಗುಣಮಟ್ಟ ಪರಿಶೀಲಿಸಿದರು.

ಪರಿಶೀಲನೆ ವೇಳೆ ವಿದ್ಯಾರ್ಥಿಗಳಿಗಾಗಿ ಸಂಗ್ರಹಿಸಿಟ್ಟಿದ್ದ ತೊಗರಿಬೇಳೆ, ಅಕ್ಕಿ, ಅಡುಗೆ ಎಣ್ಣೆ, ಶೇಂಗಾ, ಹೆಸರು ಬೇಳೆ ಸೇರಿದಂತೆ ಇನ್ನಿತರ ಆಹಾರ ಪದಾರ್ಥಗಳು ಕಳಪೆ ಗುಣಮಟ್ಟದ್ದಾಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಶಾಸಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ಆರೋಗ್ಯದೊಂದಿಗೆ ಚೆಲ್ಲಾಟವಾಡುವಂತಹ ಘಟನೆಗಳನ್ನು ಯಾವುದೇ ಕಾರಣಕ್ಕೂ



ಸಹಿಸಲಾಗುವುದಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಘಟನೆಯ ಗಂಭೀರತೆಯನ್ನು ಮನಗಂಡ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅವರು ತಕ್ಷಣವೇ ಸಂಬಂಧಪಟ್ಟ ಮೇಲಧಿಕಾರಿಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ಕಳಪೆ ಆಹಾರ ಪದಾರ್ಥಗಳ ಕುರಿತು ಸಂಪೂರ್ಣ ಮಾಹಿತಿ ನೀಡಿ ಪ್ರಕರಣದ ಸಮಗ್ರ ತನಿಖೆ ನಡೆಸುವಂತೆ ಸೂಚಿಸಿದರು. ಜೊತೆಗೆ, ಈ ನಿರ್ಲಕ್ಷ್ಯಕ್ಕೆ ಕಾರಣರಾದ ಅಧಿಕಾರಿಗಳು, ಸಿಬ್ಬಂದಿ ಅಥವಾ ಗುತ್ತಿಗೆದಾರರು ಯಾರೇ ಆಗಿದ್ದರೂ ಅವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಠಿಣ ಶಿಸ್ತು ಹಾಗೂ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಹಾಗೂ ಪೌಷ್ಟಿಕ ಆಹಾರ ಒದಗಿಸುವುದು ಸರ್ಕಾರದ ಹಾಗೂ ಸಂಬಂಧಪಟ್ಟ ಇಲಾಖೆಯ ಜವಾಬ್ದಾರಿಯಾಗಿದೆ. ಮಕ್ಕಳ ಆರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ತೋರಿದವರನ್ನು ಯಾವುದೇ ಕಾರಣಕ್ಕೂ ಕ್ಷಮಿಸಲಾಗುವುದಿಲ್ಲ. ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಶಾಶ್ವತ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಅಲ್ಲದೆ, ವಸತಿ ಶಾಲೆಗಳಲ್ಲಿ ಆಹಾರದ ಗುಣಮಟ್ಟ, ಸ್ವಚ್ಛತೆ ಹಾಗೂ ವಿದ್ಯಾರ್ಥಿಗಳ ಕಲ್ಯಾಣಕ್ಕೆ ಸಂಬಂಧಿಸಿದಂತೆ ನಿಯಮಿತ ತಪಾಸಣೆ ನಡೆಸಿ, ಯಾವುದೇ ಲೋಪ ಕಂಡುಬಂದಲ್ಲಿ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಉತ್ತಮ ಆರೋಗ್ಯಕ್ಕೆ ಯೋಗಾಭ್ಯಾಸ ಅಗತ್ಯ: ಜೋಶಿ

ಬೆಳಗಾವಿ: ಯೋಗಾಸನ ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಪಾತ್ರ ಹೊಂದಿದ್ದು, ಪ್ರತಿನಿತ್ಯ ಯೋಗಾಸನ ಮಾಡುವುದರಿಂದ ನಮ್ಮ ಶರೀರದಲ್ಲಿನ ರೋಗ ರುಜಿನಗಳನ್ನು ದೂರ ಮಾಡಿಕೊಳ್ಳುವುದರ ಜೊತೆಗೆ ಮನಸ್ಸನ್ನು ಸಮಚಿತ್ತದಿಂದ ಇಟ್ಟುಕೊಳ್ಳಬಹುದಾಗಿದೆ ಎಂದು ಗ್ರಾಹಕರ ವ್ಯವಹಾರಗಳ, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಹೊಸ ಹಾಗೂ ನವೀಕರಿಸಬಹುದಾದ ಇಂಧನ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಬೆಳಗಾವಿ ಹಾಗೂ ಜಿಲ್ಲಾ ಆಯುಷ ಇಲಾಖೆ ಸಹಯೋಗದಲ್ಲಿ ಸುವರ್ಣ ವಿಧಾನ ಸೌಧದಲ್ಲಿ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಬದಲಾಗುತ್ತಿರುವ ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಭಾರತದ ಪ್ರಾಚೀನ ಪದ್ಧತಿಯಾದಂತಹ ಯೋಗಾಸನ ಮಾಡುವುದು ಅತೀ ಅವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಸ್ಪರ್ಧಾತ್ಮಕ ಜೀವನ ಶೈಲಿಯಲ್ಲಿ ನಮ್ಮ ನಿತ್ಯದ ಕೆಲಸದಲ್ಲಿ ನಿಪುಣತೆಯನ್ನು ಸಾಧಿಸಲು ಯೋಗಾಸನ ಅಗತ್ಯವಾಗಿದ್ದು ಯೋಗಾಸನ ಮಾಡಲು ಸರಿಯಾದ ಆಸನದ ಜ್ಞಾನ ಹೊಂದುವುದು ಕೂಡಾ ಅಷ್ಟೇ ಪ್ರಮುಖವಾಗಿದೆ. ವೇದ ಉಪನಿಷತ್ತುಗಳ ಪ್ರಕಾರ ಜೂನ್ 21ನೇ ದಿನ ಪ್ರಾಮುಖ್ಯತೆಯನ್ನು ಹೊಂದಿದ ದಿನವಾದ್ದರಿಂದ ಅಂತಾರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸಲಾಗುತ್ತಿದೆ. ಐದು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಯೋಗಾಸನವನ್ನು 140ಕ್ಕೂ ಹೆಚ್ಚಿನ ದೇಶಗಳು ಒಪ್ಪಿಕೊಂಡಿವೆ. ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಪ್ರಪಂಚದ ಯಾವುದಾದರೂ ಒಂದು ಪ್ರದೇಶದಲ್ಲಿ ಯೋಗಾಭ್ಯಾಸ ಜರುಗುತ್ತಿರುವುದರಿಂದ ಯೋಗಾಸನಕ್ಕೆ ಗೋಲ್ಡನ್ ರಿಂಗ್ ಎಂದು ಕರೆಯಲಾಗುತ್ತದೆ ಎಂದರು.

ಶಾಸಕ ಅಭಯ ಪಾಟೀಲ, ಬೆಳಗಾವಿ ಮಹಾನಗರ ಪಾಲಿಕೆ ಮಹಾಪೌರೆ ಪ್ರೀತಿ ಕಾಮಕಾರ, ಉಪ ಮಹಾಪೌರ ಹನುಮಂತ ಕೊಂಗಾಲಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್,ಪೊಲೀಸ್ ಆಯುಕ್ತ ಭೋರಸೆ ಗುಲಾಬರಾವ್ ಭೂಷಣ,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಸಿಇಒ ರಾಹುಲ ಶಿಂಧೆ, ಮಹಾನಗರ ಪಾಲಿಕೆ ಆಯುಕ್ತ ಕಾರ್ತಿಕ ಎಂ, ಪ್ರಶಿಕ್ಷಣಾರ್ಥಿ ಐಎಎಸ್‌ಅಧಿಕಾರಿ ರೋಹಿತ್ ಸಿಂಗ್, ಜಿಲ್ಲಾ ಆಯುಷ್ ಅಧಿಕಾರಿ ಶ್ರೀಕಾಂತ ಸುಣದೊಳಿ, ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಯೋಗಾಸಕ್ತರು ಭಾಗವಹಿಸಿದ್ದರು. ಅಂತಾರಾಷ್ಟ್ರೀಯ ಯೋಗ ತರಬೇತಿದಾರರಾದ ಆರತಿ ಸಂಕೇಶ್ವರಿ ಅವರ ಮಾರ್ಗದರ್ಶನದಲ್ಲಿ ಅಂತಾರಾಷ್ಟ್ರೀಯ ಯೋಗ ಪಟುಗಳಾದ ಸತ್ಯಮ್ ಹಾಗೂ ಗಾಯತ್ರಿ ಅವರುಗಳಿಂದ ವಿವಿಧ ಯೋಗಾಸನದ ಭಂಗಿಗಳನ್ನು ಪ್ರದರ್ಶಿಸಿ ಅವುಗಳ ಮಹತ್ವವನ್ನು ವಿವರಿಸಿದರು. ತದನಂತರ ವಿವಿಧ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಧರ್ಮಸ್ಥಳ ಶ್ರೀಕ್ಷೇತ್ರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷ ಸಭೆ

ಬೆಂಗಳೂರು: ವಿಧಾನಪರಿಷತ್ ಚುನಾವಣೆಯಲ್ಲಿನ ಅಡ್ಡ ಮತದಾನದ ಆರೋಪ ಕುರಿತಂತೆ ಅತಿ ಶೀಘ್ರದಲ್ಲೇ ಧರ್ಮಸ್ಥಳದ ಶ್ರೀಕ್ಷೇತ್ರದಲ್ಲಿ ನಮ್ಮ ಶಾಸಕಾಂಗ ಪಕ್ಷದ ಸಭೆ ಕರೆಯಲು ನಿರ್ಧರಿಸಿರುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.



ಭಾನುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ವಿಪಕ್ಷ ನಾಯಕ ಆರ್.ಅಶೋಕ್ ಅವರಿಗ ಸಭೆ ಕರೆಯುವ ಸಂಬಂಧ ಮಾತನಾಡುವೆ. ನಾವೆಲ್ಲರೂ ದೇವರನ್ನು ನಂಬುವವರು. ಧರ್ಮಸ್ಥಳದಲ್ಲಿ ಸಭೆ ಕರೆದು ತಾಯಿಗೆ ದ್ರೋಹ ಮಾಡಿದ ಶಾಸಕರ ಮತ್ತು ಸತ್ಯದ ಬಗ್ಗೆ ಗೊತ್ತಾಗಬೇಕಿದೆ. ಶ್ರೀ ಕ್ಷೇತ್ರದಲ್ಲಿ ತೀರ್ಮಾನ ಆಗಬೇಕೆಂದು ನಿರ್ಧಾರ ಮಾಡಿದ್ದೇನೆ ಎಂದು ವಿವರಿಸಿದರು. ಕಾರ್ಯಕರ್ತರಿಗೆ ನೋವಾಗುವುದು ಸಹಜ. ಅಡ್ಡ ಮತದಾನವನ್ನು ನನ್ನ ಮನಸಾಕ್ಷಿ ಒಪ್ಪುತ್ತಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಬರುತ್ತಿರುವ ಟೀಕೆಗಳ ಬಗ್ಗೆ ನಾನು ಕೂಡ ಗಮನಿಸಿದ್ದೇನೆ. ಇದನ್ನೇ ನೆಪ ಮಾಡಿಕೊಂಡು ಪರೋಕ್ಷ ದಾಳಿ ಮಾಡುವ ಕೆಲಸ ಹಾಗೂ ಕುತಂತ್ರ ನಡೆಯುತ್ತಿದೆ ಎಂದು ಆಕ್ಷೇಪಿಸಿದರು. ಈ ಸಂಬಂಧ ಸತ್ಯಾಸತ್ಯತೆಯನ್ನು ನಾವು ಜನರ ಮುಂದೆ ಇಡಬೇಕಾಗಿದೆ. ಪಕ್ಷದ ಗೌರವ ಉಳಿಸಬೇಕಿದೆ. ಕಾರ್ಯಕರ್ತರಿಗೆ ನೆಮ್ಮದಿ ನೀಡಬೇಕಿದೆ ಎಂದು ಅವರು ನುಡಿದರು.

ಎಲ್ಲ ಶಾಸಕರ ಮೇಲೆ ಅನುಮಾನ ಮೂಡುತ್ತಿದೆ: ಮೊನ್ನೆ ನಡೆದ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಯಿಂದಲೂ 4 ಅಡ್ಡ ಮತದಾನ ಆಗಿರುವ ಬಗ್ಗೆ ಚರ್ಚೆ ಮಾಧ್ಯಮಗಳಲ್ಲಿ ನಡೆಯುತ್ತಿದೆ. ಪತ್ರಿಕೆಗಳಲ್ಲೂ ಬಂದಿದೆ. ಸಾಮಾಜಿಕ ಜಾಲತಾಣದಲ್ಲೂ ಅತಿ ಹೆಚ್ಚು ಚರ್ಚೆ ಆಗುತ್ತಿದೆ ಎಂದರು.

ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್

ಪುಟ ೧➡ ನನಗೆ 2020ರ ಮಾ.10 ರಂದು ಸೋನಿಯಾ ಗಾಂಧಿ ಪಕ್ಷದ ಅಧಿಕಾರ ನೀಡಿದ್ದರು. ಆಗ ಇಷ್ಟೊಂದು ದೊಡ್ಡದಾಗಿ ಕಾರ್ಯಕ್ರಮ ಮಾಡಲು ಆಗಿರಲಿಲ್ಲ. ಝೂಮ್ ಕರೆಯಲ್ಲಿಯೇ ನಾನು ಅಧಿಕಾರ ಸ್ವೀಕರಿಸಿದೆ. ನಿಮ್ಮ ವಿಶ್ವಾಸ, ಸಹಕಾರದಿಂದ ಸೇವೆ ಮಾಡಿದ್ದೇನೆ. ನಾನು ಮನುಷ್ಯ, ನನ್ನ ಕೈಯಲ್ಲಿ ಅನೇಕ ತಪ್ಪು ಆಗಿರಬಹುದು ಎಂದರು. ಪ್ರತಿ ಪಂಚಾಯತಿ, ಪ್ರತಿ ವಾರ್ಡ್‌ಗೆ ಹೆಚ್ಚುವರಿಯಾಗಿ 5 ಕಾರ್ಯಕರ್ತರನ್ನು ಗ್ಯಾರಂಟಿ ಸಮಿತಿಗೆ ನೇಮಕ ಮಾಡಲು ತೀರ್ಮಾನಿಸಿದ್ದೇವೆ. ಗ್ಯಾರಂಟಿ ಪರಿಷ್ಕರಣೆಗೆ ಅವರನ್ನ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಮಾಹಿತಿ ನೀಡಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಹರಿಪ್ರಸಾದ್, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಂಕಲ್ಪ ಮಾಡಬೇಕು. ಎಲ್ಲಾ ಶೋಷಿತರ ಪರವಾದ ಹೋರಾಟಗಳಿಗೆ ಕೈಜೋಡಿಸಬೇಕು ಎಂದರು.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಕಾಂಗ್ರೆಸ್ ಪಕ್ಷ ಶಿಸ್ತಿಗೆ ಹೆಸರಾಗಿದೆ. ಇಲ್ಲಿ ಯಾವುದೇ ಕಾರಣಕ್ಕೂ ವ್ಯಕ್ತಿ ಪೂಜೆಗೆ ಅವಕಾಶವಿಲ್ಲ, ಪಕ್ಷದ ಪೂಜೆಗೆ ಅವಕಾಶ. ಯಾರು ಎಷ್ಟೇ ದೊಡ್ಡವರಿದ್ದರೂ ಪಕ್ಷವೇ ದೊಡ್ಡದು. ನನ್ನ 58 ವರ್ಷಗಳ ರಾಜಕೀಯ ಜೀವನದಲ್ಲಿ ಎಲ್ಲವನ್ನೂ ನೋಡಿದ್ದೇನೆ. ಕಾಂಗ್ರೆಸ್ ಪಕ್ಷದಿಂದ ನಾಯಕರು ಬೆಳೆದಿದ್ದಾರೆಯೇ ಹೊರತು ಅವರಿಂದ ಕಾಂಗ್ರೆಸ್ ಪಕ್ಷವಲ್ಲ. ನಾವೆಲ್ಲರೂ ಸೇರಿ ಕಾಂಗ್ರೆಸ್ ಪಕ್ಷವನ್ನು ಕಟ್ಟಬೇಕು. ಯಾವುದೇ ಕಾರಣಕ್ಕೂ ಶಿಸ್ತನ್ನು ಮರೆಯಬಾರದು ಎಂದರು.

2028ಕ್ಕೆ ಮತ್ತೊಮ್ಮೆ ಅಧಿಕಾರಕ್ಕೆ: 2028ರಲ್ಲಿ ಮತ್ತೊಮ್ಮೆ ನಾವೇ ಅಧಿಕಾರಕ್ಕೆ ಬರುತ್ತೇವೆ. ನಮ್ಮ ಗ್ಯಾರಂಟಿ ಯೋಜನೆಗಳು ಜನರನ್ನು ತಲುಪಿದೆ. ಇದರಿಂದ ಜನರಲ್ಲಿ ಖುಷಿಯಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ 5 ಉಪಚುನಾವಣೆಗಳು ನಡೆದಿವೆ. 5 ಉಪ ಚುನಾವಣೆಗಳಲ್ಲಿ ನಾವು ಗೆಲುವು ಸಾಧಿಸಿರಬೇಕಾದರೆ, ಜನರಪ್ರೀತಿ, ವಿಶ್ವಾಸ ಉಳಿಸಿಕೊಂಡಿದ್ದೇವೆ ಎಂದು ಅರ್ಥ. 2028 ಹಾಗೂ 2029ರಲ್ಲೂ ಮತ್ತೊಮ್ಮೆ ನಮ್ಮ ಪಕ್ಷವನ್ನು ಅಧಿಕಾರಕ್ಕೆ ತನ್ನಿ. ಹರಿಪ್ರಸಾದ್ ಅವರ ನಾಯಕತ್ವದಲ್ಲಿ ಪಕ್ಷ ಸದೃಢವಾಗಲಿ, ಬಲವಾಗಿ ಬೆಳೆಯಲಿ ಎಂದು ಆಶಿಸುತ್ತಾ, ನನ್ನ ಸಹಕಾರವನ್ನು ಸಂಪೂರ್ಣವಾಗಿ ಅವರ ಜತೆ ಧಾರೆ ಎರೆಯುತ್ತೇನೆ ಎಂದು ಭರವಸೆ ನೀಡುತ್ತಿದ್ದೇನೆ ಎಂದರು.

ವ್ಯಕ್ತಿಗತವಾಗಿ ಕೂಗಿದರೆ ಶಿಸ್ತು ಕ್ರಮ: ಖರ್ಗೆ ಎಚ್ಚರಿಕೆ

ಡಿ.ಕೆ.ಶಿವಕುಮಾರ್ ಈ ಹಿಂದೆ ಆರೂವರೆ ವರ್ಷ ಪಕ್ಷದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದರು. ಈಗ ಮುಖ್ಯಮಂತ್ರಿಯಾದ ಮೇಲೆ ಎನ್ನುತ್ತಿದ್ದಂತೆ ಸಭಾಂಗಣದಲ್ಲಿ ಇದ್ದ ಕಾರ್ಯಕರ್ತರು, ಮುಖಂಡರ ಪೈಕಿ ಡಿಕೆ ಡಿಕೆ ಎಂದು ಘೋಷಣೆ ಕೂಗಿದರು. ಆಗ ಮುಜುಗರಕ್ಕೊಳಗಾದ ಮಲ್ಲಿಕಾರ್ಜುನ ಖರ್ಗೆ ಅವರು ನಿಮ್ಮದೆಲ್ಲಾ ಮುಗಿಯಿತೇ? ಮುಂದೆ ಇರುವ ಒಂದು ಗುಂಪಿನಲ್ಲಿ ಮಾತ್ರ ಈ ರೀತಿ ಘೋಷಣೆ ಕೇಳಿಬರುತ್ತಿದೆ. ಇಲ್ಲಿ ನಿಂತು ಕೆಲವರು ಘೋಷಣೆ ಕೂಗಿದರೆ ದೇಶ ನಮ್ಮ ಕೈಗೆ ಬಂದಾಂತಾಗುತ್ತದೆಯೇ? ಯೂಸ್‌ಲೆಸ್ ಫೆಲೋಸ್ ಎಂದು ಖಾರವಾಗಿ ಹೇಳಿದರು. ಇದು ಒಬ್ಬ ವ್ಯಕ್ತಿಯ ಸಭೆಯಲ್ಲ, ಎಲ್ಲರೂ ಸೇರಿ ಪಕ್ಷ ಬಲಗೊಳಿಸಬೇಕು. ಒಬ್ಬರ ಹೆಸರನ್ನು ಮಾತ್ರ ಕೂಗಿದರೆ ಉಳಿದವರು ಕಸ ಗುಡಿಸಲು ಬಂದಿದ್ದಾರೆಯೇ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ರೀತಿಯ ಘೋಷಣೆ ಕೂಗುವವರ ವಿರುದ್ಧ ದೃಶ್ಯಾವಳಿಗಳನ್ನು ಆಧರಿಸಿ ಶಿಸ್ತು ಕ್ರಮ ಜರುಗಿಸುತ್ತೇನೆ ಎಂದು ಎಚ್ಚರಿಕೆ ನೀಡಿದರು. ಇದು ಅತ್ಯಂತ ಮಹತ್ವದ ಸಭೆ. ಶಿಸ್ತು ಪಾಲನೆ ಮಾಡಿ ಎಂದರು.

ಹಂದಿ ಜ್ವರಕ್ಕೆ ಚವತ್ತಿ ಗ್ರಾಮದ ವ್ಯಕ್ತಿ ಬಲಿ

ಯಲ್ಲಾಪುರ: ತಾಲೂಕಿನ ಚವತ್ತಿ ಗ್ರಾಮದಲ್ಲಿ ಇನ್‌ಫ್ಲುಯೆಂಜಾ-ಎ (ಹಂದಿ ಜ್ವರ) ಸೋಂಕಿಗೆ ತುತ್ತಾಗಿ ವ್ಯಕ್ತಿ ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ. ತಾಲೂಕಿನ ಚವತ್ತಿ ಗ್ರಾಮದ ನಿವಾಸಿ ರಾಜು ಮಂಜಾ ಗೌಡ (41) ಅವರು ಇನ್‌ಫ್ಲುಯೆಂಜಾ-ಎ (Influenza A) ವೈರಲ್ ಜ್ವರಕ್ಕೆ ತುತ್ತಾಗಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ರಾಜು ಮಂಜಾ ಗೌಡ ಅವರಿಗೆ ಜೂನ್ 10ರಂದು ಜ್ವರ ಕಾಣಿಸಿಕೊಂಡ ಹಿನ್ನೆಲೆ ಉಮ್ಮಚಗಿಯ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯಲಾಗಿತ್ತು. ಬಳಿಕ ಜೂನ್ 12ರಂದು ಮತ್ತೆ ಜ್ವರ ಕಾಣಿಸಿಕೊಂಡ ಕಾರಣ ಮಂಚಿಕೆರಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಆದರೂ ಆರೋಗ್ಯದಲ್ಲಿ ಚೇತರಿಕೆ ಕಾಣದ ಹಿನ್ನೆಲೆಯಲ್ಲಿ ಜೂನ್ 16 ರಂದು ಜ್ವರ ಹಾಗೂ ಸುಸ್ತಿನ ಲಕ್ಷಣಗಳು ಹೆಚ್ಚಾದ ಕಾರಣ ಶಿರಸಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗೆ ಜೂನ್ 17ರಂದು ಮಂಗಳೂರಿನ ಕೆ.ಎಸ್.ಹೆಗಡೆ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪರೀಕ್ಷೆಯಲ್ಲಿ ಇನ್‌ಫ್ಲುಯೆಂಜಾ-ಎ ಸೋಂಕು ದೃಢಪಟ್ಟಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಜೂನ್ 21ರಂದು ಮೃತಪಟ್ಟಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನೂರು ವರ್ಷದ ಇತಿಹಾಸವಿರುವ ಆರೆಸ್ಸೆಸ್ಸಿನ ದೇಶ ಭಕ್ತಿಗೆ ಪ್ರಿಯಾಂಕಾ ಖರ್ಗೆಯವರ ನೋಂದಣಿಯ ಅಗತ್ಯವಿಲ್ಲ - ಜಗದೀಶ ಶೆಟ್ಟರ್

- ಆದರೆ ಅವರಿಗೆ ಅವರ ಹೆಸರು ಹೈಕಮಾಂಡಿನ ಸಂಘ ವಿರೋಧಿ ಪಟ್ಟಿಗೆ ನೋಂದಣಿಯಾಗಬೇಕಾಗಿದೆ!

ದಿನ ಭವಿಷ್ಯ

ಮೇಷ: ನಿಮ್ಮ ಕೆರಿಯರ್‌ಗೆ ಆದ್ಯತೆ ಕೊಡಿ. ಹೊಣೆ ವಹಿಸಬೇಕಾದ ಸಮಯ ಬಂದಿದೆ. ಕಾಲಹರಣ ಮಾಡಬೇಡಿ. ಹಣದ ಕೊರತೆ ಕಾಡಬಹುದು.

ವೃಷಭ: ನಿಮ್ಮ ಬದುಕಲ್ಲಿ ಇತರರ ಹಸ್ತಕ್ಷೇಪ ಅಸಹನೆ ಮೂಡಿಸಲಿದೆ. ಆರ್ಥಿಕ ವ್ಯವಹಾರವೊಂದು ನೀವು ನಿರೀಕ್ಷಿಸಿದಂತೆ ಸಾಗದು. ಧನ ಹಾನಿ ಉಂಟಾದೀತು.

ಮಿಥುನ: ಗುರಿ ಸಾಧಿಸುವ ಛಲ ನಿಮ್ಮದು. ಕೋಪದಿಂದ ಎಗರಾಡುವ ಪ್ರಸಂಗ ಬಂದೀತು. ಇತರರನ್ನು ಅರಿತು ವ್ಯವಹರಿಸಲು ಪ್ರಯತ್ನಿಸಿ.

ಕಟಕ: ಅವಸರದ ಹೆಜ್ಜೆ ಇಡಬೇಡಿ. ಯೋಚಿಸಿ ಕಾರ್ಯವೆಸಗಿ. ಕಾಣದ ಕೈಗಳು ನಿಮ್ಮ ವಿರುದ್ಧ ಕಾರ್ಯಾಚರಿಸುತ್ತಿವೆ. ಕೌಟುಂಬಿಕ ಸೌಹಾರ್ದ.

ಸಿಂಹ: ನಿಮ್ಮ ಬದುಕು ಸರಿದಾರಿಯಲ್ಲಿ ಸಾಗುತ್ತಿದೆ ಎಂಬ ಭಾವ. ವಿಘ್ನಗಳು ನಿವಾರಣೆ. ದಂಪತಿಗಳಿಗೆ ಶುಭ ಬೆಳವಣಿಗೆ. ಆರ್ಥಿಕ ಕೊರತೆ ನೀಗಲಿದೆ.

ಕನ್ಯಾ: ಉತ್ಸಾಹದ ದಿನ. ಆದರೆ ಫಲ ನೀಡದ ಕಾರ್ಯಕ್ಕೆ ಎಳಸಬೇಡಿ. ಅಪರಿಚಿತರ ಜತೆ ಎಚ್ಚರದ ನಡೆಯಿರಲಿ. ಬೇಸ್ತು ಬೀಳುವ ಸಂಭವವಿದೆ.

ತುಲಾ: ವೃತ್ತಿಯಲ್ಲೂ ಖಾಸಗಿಯಾಗಿಯೂ ಉನ್ನತಿ. ದೊಡ್ಡ ಕಿರಿಕಿರಿಯೊಂದು ಅಂತ್ಯ. ಮನಸ್ಸಿಗೆ ನಿರಾಳತೆ. ಆರೋಗ್ಯ ಸುಸ್ಥಿರ.

ವೃಶ್ಚಿಕ: ಕುಟುಂಬದ ವ್ಯವಹಾರಕ್ಕೆ ಹೆಚ್ಚು ಗಮನ ಕೊಡಿ. ನಿಮ್ಮ ಮೇಲೆ ಒತ್ತಡ ಹೆಚ್ಚಲಿದೆ. ಹೊಸ ವ್ಯವಹಾರ ಆರಂಭಿಸಿದವರಿಗೆ ತೃಪ್ತಿಕರ ಬೆಳವಣಿಗೆ.

ಧನು: ನಿಮ್ಮ ನಿರ್ವಹಣೆ ಇತರರ ಗಮನಕ್ಕೆ ಬರಲಿದೆ. ಕೌಟುಂಬಿಕ ಸೌಹಾರ್ದ. ಮಕ್ಕಳ ಸಾಧನೆಯಿಂದ ತೃಪ್ತಿ. ಆರ್ಥಿಕ ಅಡ್ಡಿ ನಿವಾರಣೆ.

ಮಕರ: ಇತರರ ಜತೆ ಹೆಜ್ಜೆಯಿಟ್ಟು ಸಾಗಿ. ನಿಮ್ಮದೇ ವಿಭಿನ್ನ ದಾರಿ ತುಳಿಯದಿರಿ. ಪರಸ್ಪರ ಸಹಕಾರ ಅಗತ್ಯ. ಕೆಲವು ಅಡ್ಡಿಗಳು ಗೋಚರಿಸಲಿವೆ.

ಕುಂಭ: ಮನಸ್ಸು ಕೆಡಿಸುವ ಬೆಳವಣಿಗೆ. ಸಂಗಾತಿ ಜತೆ ಅಸಮಾಧಾನ. ವೃತ್ತಿಯಲ್ಲಿ ಎಡರುತೊಡರು ಎದುರಿಸುವಿರಿ. ಕೆಲವರ ಅಸಹಕಾರ ಉಂಟಾದೀತು.

ಮೀನ: ಅವಕಾಶಗಳು ನಿಮ್ಮ ಮುಂದಿವೆ. ಅವನ್ನು ಸದುಪಯೋಗ ಮಾಡುವ ಕಾರ್ಯ ನಿಮ್ಮದು. ಕಳೆದುದಕ್ಕೆ ಕೊರಗುತ್ತಾ ಉತ್ಸಾಹ ಕಳಕೊಳ್ಳದಿರಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 0,7,2,6

'ಸಂಘ 100-ಜಾಗತಿಕ ದೃಷ್ಟಿಕೋನ': ಪ್ರಬುದ್ಧರೊಂದಿಗೆ ಸಂವಾದದಲ್ಲಿ ಮುಕುಂದ್ ಸಿ.ಆರ್.

ಸವಾಲುಗಳಿಗೆ ಹಿಂದು ಮೌಲ್ಯಗಳೇ ಪರಿಹಾರ

ಮಂಗಳೂರು: ಜಗತ್ತು ಇಂದು ಬಹು ಧ್ರುವೀಯ ವ್ಯವಸ್ಥೆಯತ್ತ ಸಾಗುತ್ತಿದ್ದು, ಡಿಜಿಟಲೈಸೇಶನ್, ಡಿ-ಗ್ಲೋಬಲೈಸೇಶನ್, ಡಿ-ಕಾರ್ಬನೈಸೇಶನ್ ಹಾಗೂ ಡೆಮಾಕ್ರೆಫಿಕ್ ಚೇಂಜಸ್(ಜನಸಂಖ್ಯಾ ಅಸಮತೋಲನ) ನಂತಹ ಮಹತ್ವದ ಸವಾಲುಗಳನ್ನು ಎದುರಿಸುತ್ತಿದೆ. ಇಂತಹ ಜಾಗತಿಕ ಸವಾಲುಗಳಿಗೆ ಹಿಂದೂ ಧರ್ಮ, ಸಂಸ್ಕೃತಿ ಮತ್ತು ಮೌಲ್ಯಗಳಲ್ಲಿ ಅಡಗಿರುವ ಜೀವನದೃಷ್ಟಿಯೇ ಸಮತೋಲನದ ಪರಿಹಾರವನ್ನು ಒದಗಿಸಬಲ್ಲದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ಮುಕುಂದ ಸಿ.ಆರ್. ಅವರು ಒತ್ತಿ ಹೇಳಿದರು.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಮಂಗಳೂರಿನ ಸಂಘನಿಕೇತನದಲ್ಲಿ ಭಾನುವಾರ ಆಯೋಜಿಸಿದ್ದ 'ಸಂಘದ ಶತಮಾನೋತ್ಸವ ಮತ್ತು ಜಾಗತಿಕ ದೃಷ್ಟಿಕೋನ' ವಿಷಯದ ಕುರಿತು ಪ್ರಬುದ್ಧ ನಾಗರಿಕರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಘವೆಂಬುದು ಜೀವನ ವಿಧಾನ: ಸಂಘವು ಕೇವಲ ಒಂದು ಸಂಘಟನೆಯಲ್ಲ; ಅದು ಸಿದ್ಧಾಂತ, ಸಂಘಟನೆ, ಆಂದೋಲನ ಹಾಗೂ ಜೀವನ ವಿಧಾನವೂ ಆಗಿದೆ. ಕಳೆದ ನೂರು ವರ್ಷಗಳಲ್ಲಿ ಸಂಘವು ವ್ಯಕ್ತಿ ನಿರ್ಮಾಣದ ಮೂಲಕ ಸಮಾಜದಲ್ಲಿ ಮೌಲ್ಯಾಧಾರಿತ ಕಾರ್ಯಶಕ್ತಿಯನ್ನು ರೂಪಿಸಿದೆ. ಈ ಕಾರ್ಯಶಕ್ತಿಯೇ ಸಮಾಜ ಮತ್ತು ವ್ಯವಸ್ಥಾ ಪರಿವರ್ತನೆಗೆ ಕಾರಣವಾಗಿದೆ ಎಂದರು.

ಕಾಶ್ಮೀರದ 370ನೇ ವಿಧಿ ರದ್ದು, ಅಯೋಧ್ಯೆಯ ಶ್ರೀರಾಮಮಂದಿರ ನಿರ್ಮಾಣ, ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಆತ್ಮನಿರ್ಭರ ಭಾರತದಂತಹ ಉಪಕ್ರಮಗಳನ್ನು ವ್ಯವಸ್ಥಾ ಪರಿವರ್ತನೆಯ ಉದಾಹರಣೆಗಳಾಗಿ ಉಲ್ಲೇಖಿಸಿದರು. ಆದರೆ ಇವುಗಳಿಗಿಂತಲೂ ಮುಖ್ಯವಾದುದು ಸಾಮಾಜಿಕ ಪರಿವರ್ತನೆ ಎಂದು ಪ್ರತಿಪಾದಿಸಿದರು.

ಮನಃಸ್ಥಿತಿ ಬದಲಾಗಬೇಕು: ಸಮರಸತೆ, ಸ್ವದೇಶಿ, ಪರಿಸರ ಸಂರಕ್ಷಣೆ, ಕುಟುಂಬ ಪ್ರಬೋಧನ ಹಾಗೂ ನಾಗರಿಕ ಶಿಷ್ಟಾಚಾರ-ಕರ್ತವ್ಯಗಳಂತಹ ವಿಷಯಗಳಲ್ಲಿ ವ್ಯಕ್ತಿ ಮತ್ತು ಕುಟುಂಬದ ಮಟ್ಟದಿಂದಲೇ ಬದಲಾವಣೆ ಆಗಬೇಕಿದೆ. ಸಮಾಜದ ಮನಃಸ್ಥಿತಿಯಲ್ಲಿ ಬದಲಾವಣೆ ಇಲ್ಲದೆ ಯಾವುದೇ ವ್ಯವಸ್ಥಾ ಬದಲಾವಣೆ ಶಾಶ್ವತವಾಗುವುದಿಲ್ಲ ಎಂದು ಅವರು ಹೇಳಿದರು.

ಜಾಗತಿಕ ಬೆಳವಣಿಗೆಗಳ ಕುರಿತು ಮಾತನಾಡಿದ ಮುಕುಂದ ಅವರು, ವಿಶ್ವ ಈಗ ಅಮೆರಿಕ-ರಷ್ಯಾ ಕೇಂದ್ರಿತ ವ್ಯವಸ್ಥೆಯಿಂದ ಹೊರಬಂದು ಬಹುಧ್ರುವೀಯ ವ್ಯವಸ್ಥೆಯತ್ತ ಹೊರಳಿಕೊಳ್ಳುತ್ತಿದೆ. ಇದೇ ವೇಳೆ ತಂತ್ರಜ್ಞಾನ, ಪೂರೈಕೆ ಸರಪಳಿ, ಇಂಧನ, ಪರಿಸರ ಹಾಗೂ ಜನಸಂಖ್ಯಾ ರಚನೆಯಲ್ಲಿ ಸಂಭವಿಸುತ್ತಿರುವ ವೇಗದ ಬದಲಾವಣೆಗಳು ಹೊಸ ಸವಾಲುಗಳನ್ನು ಸೃಷ್ಟಿಸುತ್ತಿವೆ ಎಂದು ಅವರು ವಿಶ್ಲೇಷಿಸಿದರು.

ವಿಶೇಷವಾಗಿ ಜನಸಂಖ್ಯಾ ಪರಿವರ್ತನೆ ಮತ್ತು ಜನಸಂಖ್ಯಾ ಅಸಮತೋಲನದ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಭಾರತದಲ್ಲಿಯೂ ಈ ವಿಚಾರದ ಬಗ್ಗೆ ಗಂಭೀರ ಚಿಂತನೆ ಅಗತ್ಯವಿದೆ. ಕುಟುಂಬ ವ್ಯವಸ್ಥೆ ಮತ್ತು ಸಮಾಜದ ಸಮತೋಲನ ಕಾಪಾಡಲು ಆರೋಗ್ಯಕರ ಜನಸಂಖ್ಯಾ ರಚನೆ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಫಲವತ್ತತೆ ಕುಸಿತ ಗಂಭೀರ ವಿಚಾರ: ಒಂದು ಸಮಾಜ ಸದೃಢವಾಗಿ ಉಳಿದು ಮುಂದುವರಿಯಬೇಕಾದರೆ ಅಂತಹ ಸಮಾಜದ ಫಲವತ್ತದೆ 2.5ರಷ್ಟಿರಬೇಕು. ಆದರೆ ಜಗತ್ತಿನಾದ್ಯಂತ ಇಂದು ಫಲವತ್ತತೆಯ ಕುಸಿತ ಕಂಡುಬರುತ್ತಿದ್ದು, ಭಾರತದಲ್ಲಿದು 1.9 ಆಗಿದ್ದು, ಹಿಂದುಗಳಲ್ಲಿದು 1.7ಕ್ಕೆ ಕುಸಿದಿದೆ. ಸಮೃದ್ಧ, ಸದೃಢ ಸಮಾಜ ರೂಪುಗೊಳ್ಳಬೇಕಾದರೆ ಈ ಫಲವತ್ತತೆಯನ್ನು ಹೆಚ್ಚಿಸಬೇಕಿದೆ. ಕುಟುಂಬಕ್ಕೆ ಒಂದು ಮಗು ಇದ್ದಲ್ಲಿ ಹಂಚಿ ತಿನ್ನಬೇಕೆಂಬ ಕಲ್ಪನೆಯೇ ಇಲ್ಲವಾಗಿ ವ್ಯಕ್ತಿ-ಸಮಾಜದ ವರ್ತನೆಯಲ್ಲೇ ವ್ಯತ್ಯಯವಾಗುವ ಅಪಾಯವಿದೆ. ಅದೇ 3 ಮಕ್ಕಳಿರುವಲ್ಲಿ ಕೌಟುಂಬಿಕ ಸುಭದ್ರತೆ, ಸ್ವಸ್ಥತೆ ಹೆಚ್ಚಿರುತ್ತದೆ. ಈ ಬಗ್ಗೆ ಸಮಾಜ ಗಂಭೀರವಾಗಿ ಚಿಂತಿಸುವ ಅಗತ್ಯ ಇರುವುದನ್ನು ತಜ್ಞರು ಒತ್ತಿ ಹೇಳುತ್ತಿದ್ದಾರೆ.

ಹಿಂದೂ ಜೀವನದೃಷ್ಟಿಯು 'ವಸುಧೈವ ಕುಟುಂಬಕಂ', 'ಕೃಣ್ವಂತೋ ವಿಶ್ವಮಾರ್ಯಂ' ಮುಂತಾದ ತತ್ವಗಳ ಮೂಲಕ ವಿಶ್ವಮಾನವೀಯ ಸಂದೇಶ ನೀಡಿದೆ. ಪ್ರಕೃತಿಯನ್ನು ಶೋಷಿಸುವುದಲ್ಲ, ಸಹಜೀವನ ನಡೆಸುವುದು ಭಾರತೀಯ ಸಂಸ್ಕೃತಿಯ ಮೂಲ ತತ್ವವಾಗಿದೆ. ಇಂದು ಜಗತ್ತು 'ಸುಸ್ಥಿರ ಅಭಿವೃದ್ಧಿ' ಎಂದು ಕರೆಯುತ್ತಿರುವ ಚಿಂತನೆಗಳನ್ನು ಭಾರತೀಯ ಋಷಿಮುನಿಗಳು ಸಾವಿರಾರು ವರ್ಷಗಳ ಹಿಂದೆ ಸಹಜವಾಗಿಯೇ ಪ್ರತಿಪಾದಿಸಿದ್ದರು ಎಂದು ನೆನಪಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರೀಯ ಸಂಘ ಚಾಲಕ್ ಡಾ.ಪಿ. ವಾಮನ ಶೆಣೈ, ಮಂಗಳೂರು ಮಹಾನಗರ ಸಂಘ ಚಾಲಕ್ ಡಾ.ಸತೀಶ್ ರಾವ್ ಇದ್ದರು.

ಸಂಘದ ವಿಚಾರಕ್ಕೆ ಜಗದ ಮನ್ನಣೆ

ಇತ್ತೀಚಿನ ವರ್ಷಗಳಲ್ಲಿ ಜಗತ್ತಿನ ವಿವಿಧ ದೇಶಗಳ ಚಿಂತಕರು ಮತ್ತು ನೀತಿ ನಿರೂಪಕರು ಸಂಘದ ಕಾರ್ಯ ಹಾಗೂ ಹಿಂದೂ ಮೌಲ್ಯಗಳ ಬಗ್ಗೆ ಆಸಕ್ತಿ ತೋರಿಸುತ್ತಿದ್ದಾರೆ. ವಿವಿಧ ದೇಶಗಳಿಂದ ಬಂದ ಪ್ರತಿನಿಧಿಗಳು ಸಂಘದ ಕಾರ್ಯಪದ್ಧತಿಯನ್ನು ಮೆಚ್ಚಿಕೊಂಡಿದ್ದು, ತಮ್ಮ ದೇಶಗಳಲ್ಲಿಯೂ ಇಂತಹ ಮೌಲ್ಯಾಧಾರಿತ ಸಾಮಾಜಿಕ ಸಂಘಟನೆಗಳ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದ ಅವರು, ಅರಬ್ ಮತ್ತು ಯುರೋಪಿನ ಗಣ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಉಲ್ಲೇಖಿಸಿದರು.

ಬೇನಾಮಿ ಆಸ್ತಿ ಸಾಬೀತಾದ್ರೆ ದಾನ

ಪುಟ ೧➡ ರೈತರಿಗೆ ಅನುಕೂಲ ಮಾಡಲು ಹಾಲಿನ ಉತ್ಪನ್ನಗಳ ಉತ್ಪಾದನೆಗೆ ಅದನ್ನು ಬಳಸಲು ಇಟ್ಟಿದ್ದೇವೆ ಎಂದು ತಿಳಿಸಿದರು. ರೈತರು ಬೇಡ ಅಂದಿದಕ್ಕೆ ಕುಮಾರಸ್ವಾಮಿ ಈ ಯೋಜನೆ ಕೈಬಿಟ್ಟಿದ್ದರು. ಕುಮಾರಸ್ವಾಮಿ ಯಾವತ್ತೂ ರೈತರ ವಿರುದ್ಧ ತೀರ್ಮಾನ ಮಾಡಿಲ್ಲ. ನಾವು ಎಲ್ಲಾ ರೀತಿಯ ಹೋರಾಟಕ್ಕೆ ಸಿದ್ಧರಿದ್ದೇವೆ. ನಾವು ಹೋರಾಟದಿಂದ ಹೆದರಿ ಓಡಿಹೋಗುವುದಿಲ್ಲ. ಯಾರ ಬೆದರಿಕೆಗೂ ದೇವೇಗೌಡರ ಕುಟುಂಬ ಹೆದರಲ್ಲ ಎಂದರು.

ರೆಡ್ ಝೋನ್ ಹಾಕಿದ್ದಾರೆ ಎಂದು ಆರೋಪ ಮಾಡುತ್ತೀರಲ್ಲ. ನೀವು ಯೋಜನೆ ಕೈಬಿಡಿ, ಮುಂದೆ ನಾವೇ ಬಂದು ರೆಡ್ ಝೋನ್ ತೆಗೆಯುತ್ತೇವೆ. ಸರ್ಕಾರ ರಾತ್ರೋರಾತ್ರಿ ಅಂತಿಮ ಅಧಿಸೂಚನೆ ಹೊರಡಿಸಿದೆ. ಇದರ ವಿರುದ್ಧ ಜೆಡಿಎಸ್ ಹೋರಾಟ ನಡೆಸುತ್ತಿದೆ ಎಂದರು. ರೈತರು 450 ದಿನಗಳಿಂದ ನಿರಂತರ ಹೋರಾಟ ಮಾಡುತ್ತಿದ್ದಾರೆ. ಸರ್ಕಾರದ ಯಾವುದೇ ಪ್ರತಿನಿಧಿಗಳು ರೈತರನ್ನು ಭೇಟಿ ಮಾಡಿಲ್ಲ. ರಾಜ್ಯ ಸರ್ಕಾರಕ್ಕೆ ಕಿವಿ ಕೇಳ್ತಿಲ್ಲ, ಕಣ್ಣು ಕಾಣ್ತಿಲ್ಲ. ಯೋಜನೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಮಾಡುತ್ತಿದ್ದಾರೆ. ಇದರಲ್ಲಿ ಸಾರ್ವಜನಿಕರ ಹಿತಾಸಕ್ತಿ ಇಲ್ಲ. ರೈತರ ಅನುಮತಿ ಪಡೆಯದೆ ಯೋಜನೆ ಮಾಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ರೈತರ ಭೂಮಿ ಕಸಿಯಲು ಸರ್ಕಾರ ದಲ್ಲಾಳಿಗಳನ್ನು ಬಿಟ್ಟಿದೆ. ಅವರು ರೈತರನ್ನು ಯಾಮಾರಿಸುವ ಕೆಲಸ ಮಾಡುತ್ತಿದ್ದಾರೆ. ರೈತರ ಒಗ್ಗಟ್ಟು ಒಡೆಯುವ ಕೆಲಸ ನಡೆಯುತ್ತಿದೆ. ಇದಕ್ಕೆ ರೈತರು ಅವಕಾಶ ಮಾಡಿಕೊಡಬಾರದು ಎಂದರು. ಪಾದಯಾತ್ರೆಯಲ್ಲಿ ಸಾವಿರಾರು ರೈತರು, ಜೆಡಿಎಸ್ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ಎಂಎಲ್‌ಸಿ ಜವರಾಯಿಗೌಡ ಹಾಗೂ ಮಾಜಿ ಎಂಎಲ್‌ಸಿ ಶ್ರೀಕಂಠೇಗೌಡ, ಮಾಜಿ ಶಾಸಕ ಎ.ಮಂಜುನಾಥ್ ಹಾಗೂ ಇತರರು ಪಾಲ್ಗೊಂಡಿದ್ದರು.

ಪಾದಯಾತ್ರೆ ವೇಳೆ ವಾಗ್ವಾದ

ಪುಟ ೧➡ ಪಾದಯಾತ್ರೆಯನ್ನು ಅಂಚಿಪುರ ಗ್ರಾಮದಲ್ಲಿ ಆರಂಭಿಸಿದ ನಿಖಿಲ್ ನಂತರ ಗ್ರಾಮದ ಕಾಲೊನಿ ಕಡೆಗೆ ಪಾದಯಾತ್ರೆ ಹೊರಟರು. ಅಷ್ಟೊತ್ತಿಗಾಗಲೇ ಗ್ರಾಮದ ವೃತ್ತದಲ್ಲಿ ಅಳವಡಿಸಿದ್ದ ಟೌನ್ ಶಿಪ್ ಪರವಾದ ಫ್ಲೆಕ್ಸ್ ಗಳನ್ನು ಹೋರಾಟಗಾರರು ಹರಿದಿರುವ ಸುದ್ದಿ ಹಬ್ಬಿತ್ತು.

ನಟ ಪ್ರಕಾಶ್ ರಾಜ್‌ಗೆ ಕಾನೂನು ಸಂಕಷ್ಟ

ಪುಟ ೧➡ ಈ ವೇಳೆ ವಕೀಲ ದಿಲೀಪ್ ಕುಮಾರ್ ಎಂಬುವರು ನಟನ ವಿರುದ್ಧ ಗಂಭೀರ ಆರೋಪ ಮಾಡಿದ್ದರು. ಪ್ರಕಾಶ್‌ರಾಜ್ ಅವರು ದೇಶದ ವಿವಿಧ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಪಾಂಡಿಚೇರಿಯಲ್ಲಿ ಮತದಾರರ ಗುರುತಿನ ಚೀಟಿ ಹೊಂದಿದ್ದಾರೆ. ಇದು ಜನಪ್ರತಿನಿಧಿ ಕಾಯಿದೆ ಹಾಗೂ ದೇಶದ ಚುನಾವಣಾ ನಿಯಮಾವಳಿಗಳ ಅನ್ವಯ ಗಂಭೀರ ಅಪರಾಧ ಎಂದು ಆರೋಪಿಸಿದ್ದರು. ಈ ಅಕ್ರಮದ ಕುರಿತು ವಕೀಲ ದಿಲೀಪ್ ಕುಮಾರ್ ಅವರು 2019ರಲ್ಲಿ ಮೊದಲ ಬಾರಿಗೆ ಬೆಂಗಳೂರಿನ ಹಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಆದರೆ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳದಿದ್ದಾಗ, ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಹಾಗೂ ಕೇಂದ್ರ ಚುನಾವಣಾ ಆಯೋಗಕ್ಕೂ ಅಧಿಕೃತವಾಗಿ ದೂರು ಸಲ್ಲಿಸಲಾಯಿತು. ಯಾವುದೇ ಇಲಾಖೆಯಿಂದ ನಿರೀಕ್ಷಿತ ಮಟ್ಟದ ಕಾನೂನು ಕ್ರಮ ಜರುಗದ ಹಿನ್ನೆಲೆಯಲ್ಲಿ ದೂರುದಾರರು ಅಂತಿಮವಾಗಿ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮೊರೆ ಹೋಗಿ ಖಾಸಗಿ ದೂರು ದಾಖಲಿಸಿದ್ದರು. ಅದಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ 48ನೇ ಎಸಿಜೆಎಂ ಕೋರ್ಟ್‌ನಿಂದ ಅರೆಸ್ಟ್ ವಾರೆಂಟ್ ಜಾರಿ ಮಾಡಲಾಗಿದೆ. ಒಬ್ಬ ವ್ಯಕ್ತಿಗೆ ಒಂದೇ ಗುರುತಿನ ಚೀಟಿ ಇರಬೇಕು. ಪ್ರಕಾಶ್ ರಾಜ್ ಅವರು ಏಕಕಾಲಕ್ಕೆ 4 ಕಡೆ ಗುರುತಿನ ಚೀಟಿ ಹೊಂದಿದ್ದಾರೆ. ಹಾಗಾಗಿ ದೂರು ನೀಡಿದ್ದೆ ಎಂದು ದಿಲೀಪ್ ಕುಮಾರ್ ಹೇಳಿದ್ದಾರೆ.

ದೇಶದಾದ್ಯಂತ ನೀಟ್ ಮರುಪರೀಕ್ಷೆ ಸುಗಮ

ಪುಟ ೧➡ **ವಿಶೇಷ ಅಭ್ಯರ್ಥಿಗಳಿಗೆ ನೆರವು:** 10 ಸಾವಿರಕ್ಕೂ ಹೆಚ್ಚು ವಿಶಿಷ್ಟಚೇತನ ಅಭ್ಯರ್ಥಿಗಳಿಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿತ್ತು. ರಸ್ತೆ ಅಪಘಾತಕ್ಕೊಳಗಾದ ಹಾಗೂ ಕೀಮೋಥೆರಪಿ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೂ ಪ್ರತ್ಯೇಕ ಸೌಲಭ್ಯಗಳನ್ನು ಒದಗಿಸಲಾಗಿತ್ತು:

ನೀಟ್ ಸುಸೂತ್ರ: ನಕಲಿ ಪ್ರವೇಶ ಪತ್ರ ಹಾಗೂ ಮೊಬೈಲ್ ತೆಗೆದುಕೊಂಡು ಬರಲು ಯತ್ನಿಸಿದ ಕೆಲ ಪ್ರಕರಣಗಳು ಪತ್ತೆಯಾಗಿದ್ದರೂ, ಯಾವುದೇ ಅಕ್ರಮ ನಡೆಯದಂತೆ ತಡೆಯಲಾಗಿದೆ. ನೀಟ್ ಮರು ಪರೀಕ್ಷೆ ಸುಸೂತ್ರವಾಗಿ ನಡೆದಿದೆ ಎಂದು ಎನ್‌ಟಿಎ ಮಹಾನಿರ್ದೇಶಕ ಅಭಿಷೇಕ್ ಸಿಂಗ್ ತಿಳಿಸಿದ್ದಾರೆ. ಕೆಲವೆಡೆ ವಿದ್ಯಾರ್ಥಿಗಳು ಮಳೆ, ಸಂಚಾರ ದಟ್ಟಣೆ ಹಾಗೂ ಅಪಘಾತಗಳಿಂದ ಪರೀಕ್ಷಾ ಕೇಂದ್ರಗಳಿಗೆ ತಡವಾಗಿ ತಲುಪಿದ ಕಾರಣ ಪ್ರವೇಶ ನಿರಾಕರಣೆಯಾದ ಘಟನೆಗಳೂ ವರದಿಯಾಗಿವೆ.

ದಿಲ್ಲಿ ಏರ್‌ಪೋರ್ಟ್‌ನಲ್ಲಿ 45 ನಿಮಿಷ ಕಾದ ಮೋದಿ

ಪುಟ ೧➡ ಅವರು ತಮ್ಮ 2 ದಿನಗಳ ಒಡಿಶಾ ಮತ್ತು ಪಶ್ಚಿಮ ಬಂಗಾಳ ಭೇಟಿ ಮುಗಿಸಿ ಹಿಂತಿರುಗಿದ್ದರು. ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡು ಅವರು ಮರಳುತ್ತಿದ್ದರು. ದಿಲ್ಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಳಿದು ಲೋಕಕಲ್ಯಾಣ ಮಾರ್ಗದಲ್ಲಿರುವ ತಮ್ಮ ನಿವಾಸಕ್ಕೆ ತೆರಳುವ ವೇಳೆ ನೀಟ್ ಪರೀಕ್ಷೆ 2 ಗಂಟೆಯಿಂದ ಆರಂಭಗೊಳ್ಳಲಿದ್ದ ಕಾರಣ ಅವರು ವಿದ್ಯಾರ್ಥಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದಕ್ಕಾಗಿ ಏರ್‌ಪೋರ್ಟ್‌ನಲ್ಲೇ 45 ನಿಮಿಷ ಉಳಿದು ಬಳಿಕ ನಿವಾಸಕ್ಕೆ ತೆರಳಿದರು.

ಮೈಸೂರಲ್ಲಿ ಶಂಕಿತ ಬಾಂಗ್ಲಾ ವಲಸಿಗರ ಪತ್ತೆ

ಮೈಸೂರು: ರೈಲು ನಿಲ್ದಾಣದಲ್ಲಿ 40ಕ್ಕೂ ಹೆಚ್ಚು ಶಂಕಿತ ಬಾಂಗ್ಲಾ ವಲಸಿಗರು ಪತ್ತೆಯಾಗಿದ್ದು, ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಇವರನ್ನು ಗುರುತಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೊಲ್ಕತ್ತಾದಿಂದ ವಾರಕ್ಕೊಮ್ಮೆ ಸಂಚರಿಸುವ ಹೌರಾ ಎಕ್ಸ್‌ಪ್ರೆಸ್ ರೈಲಿನ ಮೂಲಕ ಇವರು ಮೈಸೂರಿಗೆ ಬಂದಿರುವುದಾಗಿ ತಿಳಿದುಬಂದಿದೆ. ರೈಲು ನಿಲ್ದಾಣದಲ್ಲಿ ಕಾರ್ಯಕರ್ತರು ಅವರ ಗುರುತಿನ ಚೀಟಿಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಪರಿಶೀಲನೆ ವೇಳೆ ಹಲವರ ಬಳಿ ಇದ್ದ ಗುರುತಿನ ಚೀಟಿಗಳ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಕೆಲವು ದಾಖಲೆಗಳು ನಕಲಿಯಾಗಿರುವ ಶಂಕೆ ಮೂಡಿದೆ ಎಂದು ಹೇಳಲಾಗಿದೆ. ಹೆಚ್ಚಿನವರ ಬಳಿ ಪಶ್ಚಿಮ ಬಂಗಾಳದ ಗುರುತಿನ ಚೀಟಿಗಳು ಪತ್ತೆಯಾಗಿವೆ. ವಿಚಾರಣೆ ವೇಳೆ ಪ್ರತಿಯೊಬ್ಬರೂ ಬೇರೆ ಬೇರೆ ಕಾರಣಗಳನ್ನು ನೀಡಿರುವುದು ಅನುಮಾನಕ್ಕೆ ಕಾರಣವಾಗಿದೆ. ಕೆಲವರು ಕೆಲಸಕ್ಕಾಗಿ ಬಂದಿದ್ದೇವೆ ಎಂದರೆ, ಇನ್ನೂ ಕೆಲವರು ಬೇರೆ ಕಾರಣಗಳನ್ನು ತಿಳಿಸಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಮೈಸೂರಿನಿಂದ ಕೇರಳ ಹಾಗೂ ಮಡಿಕೇರಿ ಭಾಗಗಳಿಗೆ ತೆರಳುವ ಉದ್ದೇಶದಿಂದ ಇವರು ಬಂದಿದ್ದರು ಎಂದು ತಿಳಿದುಬಂದಿದೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ರೈಲ್ವೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಎಲ್ಲರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಬಳಿಕ ಸ್ಥಳೀಯ ಪೊಲೀಸರು ಕೂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಲಸಿಗರ ದಾಖಲೆಗಳು, ಗುರುತು ಮತ್ತು ಪ್ರಯಾಣದ ಉದ್ದೇಶದ ಬಗ್ಗೆ ಅಧಿಕಾರಿಗಳು ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ. ತನಿಖೆಯ ಬಳಿಕ ಸತ್ಯಾಸತ್ಯತೆ ಹೊರಬೀಳಲಿದೆ.

ವಿಶ್ವ ಶಾಂತಿಗೆ ಯೋಗ

ಪುಟ ೧➡ ಯೋಗವು ಜನರಿಗೆ ಇದನ್ನೇ ಕಲಿಸುತ್ತದೆ. ಯೋಗದ ಮೂಲ ಅಗ್ನಿಪರೀಕ್ಷೆ ಸಮತೋಲನ ಮತ್ತು ಇದು ನಮ್ಮೆಲ್ಲರ ಬದುಕಿಗೆ ಅತ್ಯವಶ್ಯ ಎಂದು ಹೇಳಿದರು. ಕೋಲ್ಕತ್ತಾದ ಐಕಾನಿಕ್ ರೆಡ್ ರೋಡ್‌ನಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಸಾವಿರಾರು ಜನರ ಎದುರ ರಾಷ್ಟ್ರವನ್ನುದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು.

ಮಾನಸಿಕ ಸ್ವಾಸ್ಥ್ಯಕ್ಕೂ ಯೋಗವೇ ಮದ್ದು: ಬಹುತೇಕ ಜನರು ತಮ್ಮ ಆಧುನಿಕ ಜೀವನಶೈಲಿಯಿಂದಾಗಿ ಬದುಕಲ್ಲಿ ಸಮತೋಲನ ಕಾಯ್ದುಕೊಳ್ಳಲು ಹೆಣಗಾಡುತ್ತಾರೆ. ಸಮತೋಲಿತವಾಗಿ ಬದುಕುವುದು ಹೇಗೆಂಬುದನ್ನು ಯೋಗವು ನಮಗೆ ಕಲಿಸುತ್ತದೆ. ಯಾವುದು ಬೇಕು, ಯಾವುದು ಬೇಡ ಎಂಬುದನ್ನೂ ಕಲಿಸುತ್ತದೆ. ನಮ್ಮ ಶರೀರಗಳನ್ನು ಸೂಕ್ತವಾದ ರೀತಿಯಲ್ಲಿ ನಿರ್ವಹಿಸಲು ಕಲಿತಾಗ ಆರೋಗ್ಯವು ನಮಗೊಂದು ಅಭ್ಯಾಸವಾಗುತ್ತದೆ. ಯೋಗವು ಕೇವಲ ಶಾರೀರಿಕ ಸ್ವಾಸ್ಥ್ಯ ಕಾಪಾಡಲು ಸೀಮಿತವಲ್ಲ. ವಾಸ್ತವದಲ್ಲಿ ಮಾನಸಿಕ ಆರೋಗ್ಯ ಕಾಪಾಡಲು ಸಹಕರಿಸುವ ಮುಖೇನ ಶಾರೀರಿಕ ಆರೋಗ್ಯಕ್ಕೆ ಹಾದಿ ತೋರುವುದು ಎಂದು ಯೋಗದ ಮಹತ್ತ್ವವನ್ನು ಪ್ರಧಾನಿ ಮೋದಿ ಅರ್ಥಪೂರ್ಣವಾಗಿ ವಿವರಿಸಿದರು.

ಜಾಗತಿಕ ಶಾಂತಿಗೂ ಹಾದಿ ಸುಗಮ: ಯಾವುದು ಸರಿ ಮತ್ತು ಯಾವುದು ತಪ್ಪು ಅಥವಾ ಯಾವುದು ಬೇಕು, ಯಾವುದು ಬೇಡ ಎಂಬುದನ್ನು ನಿರ್ಧರಿಸುವ ಆತ್ಮಪ್ರಜ್ಞೆಯಿಂದ ಮಾನಸಿಕ ಶಾಂತಿ ಲಭಿಸುವುದು ಮಾತ್ರವಲ್ಲ, ಜಾಗತಿಕ ಶಾಂತಿಗೂ ಹಾದಿ ಸುಗಮವಾಗುವುದು. ಹಾಗಾಗಿಯೇ ನಮ್ಮ ವೈಯಕ್ತಿಕ ಜೀವನಶೈಲಿಗೆ ಮಾತ್ರವಲ್ಲ, ಈ ಜಗತ್ತಿನ ಉಜ್ವಲ ಭವಿಷ್ಯಕ್ಕಾಗಿ ಕೂಡ ಯೋಗ ಅತ್ಯವಶ್ಯ ಎಂದು ಪ್ರಧಾನಿ ಮೋದಿ ಹೇಳಿದರು.

ಜಗತ್ತಿನ ಹಲವು ವಲಯಗಳು ಸಶಸ್ತ್ರ ಸಂಘರ್ಷಗಳಿಂದ ಜರ್ಝರಿತವಾಗಿ ರುವುದು ಹಾಗೂ ರಾಜತಾಂತ್ರಿಕ ಒತ್ತಡಗಳಿಂದ ತೊಳಲಾಡುತ್ತಿರುವುದು ಮತ್ತು ಸಂಘರ್ಷ, ವಿವಾದಗಳಿಗೆ ಮಾತುಕತೆ ಮುಖೇನ ಶಾಂತಿಯುತ ಪರಿಹಾರ ಕಂಡುಕೊಳ್ಳುವಂತೆ ಭಾರತ ಸುದೀರ್ಘ ಕಾಲದಿಂದ ಆಗ್ರಹಿಸುತ್ತಿರುವ ವಾಸ್ತವ ಮಧ್ಯೆ, ಸಮತೋಲಿತ ಬದುಕು, ಆತ್ಮಪ್ರಜ್ಞೆ, ಆಂತರಿಕವಾಗಿ ಸ್ಥಿರತೆ-ಮೌಲ್ಯಗಳಿಗಾಗಿ ಯೋಗಾಭ್ಯಾಸ ಮಾಡಿ, ಯೋಗವು ಪರಸ್ಪರ ದ್ವೇಷಾಸೂಯೆ, ಸಂಘರ್ಷಗಳಿಂದ ಮುಕ್ತರಾಗಲು ಸಮಾಜಕ್ಕೆ ನೆರವಾಗುವುದೆಂಬ ಅಪೂರ್ವ ಸಂದೇಶವನ್ನು ಪ್ರಧಾನಿ ಮೋದಿ ನೀಡಿದ್ದಾರೆ.

ಕೋಲ್ಕತ್ತಾ ಜನತೆಗೆ ಮೋದಿ ಅಭಿನಂದನೆ

ಸ್ವಚ್ಛತಾ ಸೆ ಸ್ವಾಗತ್ ಉಪಕ್ರಮವನ್ನು ಯಶಸ್ವಿಯಾಗಿ ಜಾರಿಗೊಳಿಸಿರುವ ಕೋಲ್ಕತ್ತಾ ಜನತೆಯನ್ನು ಪ್ರಧಾನಿ ಮೋದಿ ಅಭಿನಂದಿಸಿದರು. ಸ್ವಚ್ಛತಾ ಸೆ ಸ್ವಾಗತ್ ಘೋಷಣೆಯನ್ನು ಕಾರ್ಯಗತಗೊಳಿಸಲು ಸಮರ್ಪಣಾ ಭಾವದಿಂದ ಪ್ರಯತ್ನಿಸಿ, ದುಡಿದ ಕೋಲ್ಕತ್ತಾ ಜನತೆಯನ್ನು ತಾನು ಅಭಿನಂದಿಸುತ್ತೇನೆ. ಅವರ ನಾಗರಿಕ ಕರ್ತವ್ಯವು ಇಡೀ ದೇಶವನ್ನೇ ಪ್ರಭಾವಿತಗೊಳಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು. ಈ ವರ್ಷದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಧಾನ ವಿಚಾರವಾದ ಯೋಗ ಫಾರ್ ಹೆಲ್ತೀ ಏಜಿಂಗ್‌ನ್ನು ಉಲ್ಲೇಖಿಸಿ, ಶಾರೀರಿಕ ಆರೋಗ್ಯ, ಮಾನಸಿಕ ಸ್ವಾಸ್ಥ್ಯದ ಜತೆ ವಯಸ್ಸು ಮೀರಿದರೂ ಕ್ರಿಯಾಶೀಲರಾಗಿರಲು, ತನ್ಮೂಲಕ ಬದುಕಿನ ಗುಣಮಟ್ಟವನ್ನು ಸುಧಾರಿಸಲು ನಮ್ಮ ಪ್ರಾಚೀನ ಯೋಗ ಪದ್ಧತಿ ನೆರವಾಗುತ್ತದೆ ಅಥವಾ ನಿರ್ಣಾಯಕ ಪಾತ್ರ ವಹಿಸುತ್ತದೆ. ಬದುಕಿನುದ್ದಕ್ಕೂ ನಮ್ಮ ಶರೀರ ಮತ್ತು ಮನಸ್ಸನ್ನು ಸ್ವಯಂ ಅರ್ಥೈಸಿಕೊಳ್ಳಲು ನಿತ್ಯ ಯೋಗಾಭ್ಯಾಸ ನೆರವಾಗುತ್ತದೆ. ನಮ್ಮನ್ನು ನಾವು ಚೆನ್ನಾಗಿ ಅರ್ಥಮಾಡಿಕೊಂಡಲ್ಲಿ ಅಷ್ಟೇ ಚೆನ್ನಾಗಿ ನಮ್ಮನ್ನು ನಾವು ನಿಭಾಯಿಸಿಕೊಳ್ಳಲು ಶಕ್ತರಾಗುತ್ತೇವೆ. ಹಾಗಾಗಿಯೇ ಹಿರಿಯರಿಗೆ ಮಾತ್ರವಲ್ಲ ಎಲ್ಲಾ ವಯೋಮಾನದವರಿಗೂ ಯೋಗ ಬೇಕೆಂಬುದು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಧಾನ ತಿರುಳಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ರಾಜ್ಯದ ವಿವಿಧೆಡೆ ಯೋಗ ಕಾರ್ಯಕ್ರಮ

ಪುಟ ೧➡ ಇದೇ ವೇಳೆ ಮಲ್ಲಕಂಬ ಪ್ರದರ್ಶನ ಕಣ್ಮನ ಸೆಳೆಯಿತು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸೇರಿದಂತೆ ನಗರದ ವಿವಿಧೆಡೆ ಬೃಹತ್ ಯೋಗ ಶಿಬಿರಗಳು ನಡೆದವು. ಏಕಕಾಲಕ್ಕೆ 45 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಯೋಗಾಭ್ಯಾಸದಲ್ಲಿ ತೊಡಗಿಸಿಕೊಂಡು ಗಮನ ಸೆಳೆದರು. ಮೈಸೂರಿನಲ್ಲಿ ಬೆಳಗ್ಗೆಯಿಂದಲೇ ಅರಮನೆ ಆವರಣ ಸೇರಿದಂತೆ ನಗರದ ಪ್ರಮುಖ ಸ್ಥಳಗಳಲ್ಲಿ ಓಂಕಾರ ಮತ್ತು ಯೋಗಾಸನಗಳ ಪ್ರದರ್ಶನಗಳು ನಡೆದವು. ಬೆಳಗಾವಿಯಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಭಾಗವಹಿಸಿದ್ದರು. ಚಾಮರಾಜನಗರದ ಪೊಲೀಸ್ ಕವಾಯತು ಮೈದಾನ, ಶಿವಮೊಗ್ಗ, ಬಳ್ಳಾರಿ ಹಾಗೂ ದಾವಣಗೆರೆ ಜಿಲ್ಲೆಗಳಲ್ಲೂ ಜಿಲ್ಲಾಡಳಿತ ಹಾಗೂ ಆಯುಷ್ ಇಲಾಖೆಯ ವತಿಯಿಂದ ವಿಶೇಷ ಯೋಗ ದಿನವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು.

50 ವರ್ಷಗಳಿಂದಲೂ ಕಾವೇರಿ ಸಮಸ್ಯೆ: ಎಚ್ಡಿಕೆ

ಮಂಡ್ಯ: ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ತಮಿಳುನಾಡಿನ ರಾಜಕೀಯ ಪಕ್ಷಗಳು ಕರ್ನಾಟಕದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ರಾಜಕೀಯ ಕಾರಣಗಳಿಗಾಗಿ ಪ್ರತಿಷ್ಠೆಯನ್ನು ಮುಂದಿಟ್ಟುಕೊಂಡು ದಬ್ಬಾಳಿಕೆ ನಡೆಸುವುದು ಸರಿಯಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ನದಿ ನೀರಿನ ವಿಚಾರವಾಗಿ ತ.ನಾಡು ಕ್ಯಾತೆ ತೆಗೆಯುವುದು ಹೊಸದೇನಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ತಮಿಳುನಾಡಿನ ರಾಜಕೀಯ ಪಕ್ಷಗಳು ಎರಡೂ ರಾಜ್ಯದ ರೈತರ ಹಿತ ಬಯಸಬೇಕು. ಎರಡೂ ರಾಜ್ಯದವರು ಅಣ್ಣ-ತಮ್ಮಂದಿರ ರೀತಿ ಇರಬೇಕು. ಸಂಕಷ್ಟಕಾಲದಲ್ಲಿ ನೀರನ್ನು ಯಾವ ರೀತಿ ಹಂಚಿಕೊಳ್ಳಬೇಕೆಂಬ ಬಗ್ಗೆ ಮಾತುಕತೆ ನಡೆಸಿ ಸಿದ್ಧ ಸೂತ್ರ ರೂಪಿಸಬೇಕು ಎಂದರು.

ಮದ್ಯ ಪರವಾನಗಿ ಹರಾಜುಗಳಲ್ಲಿ ಎಸ್ಸಿ, ಎಸ್ಟಿಗಳಿಗೆ ಮೀಸಲಾತಿ

ಬೆಂಗಳೂರು : ರಾಜ್ಯದಲ್ಲಿ ಮೊದಲ ಬಾರಿಗೆ ಮದ್ಯ ಪರವಾನಗಿ ಹರಾಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡಲು ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ. ಸರ್ಕಾರವು 2026ರ ಜೂನ್ 17ರಂದು ಹೊರಡಿಸಿದ ಅಧಿಸೂಚನೆಯ ಈ ತಿದ್ದುಪಡಿಯಡಿ, CL 2A ಮತ್ತು ಇಔ9ಅ ಪರವಾನಗಿಗಳ ಇ-ಹರಾಜುಗಳಲ್ಲಿ ಮೀಸಲಾತಿ ಹಂಚಿಕೆ ಮಾಡಿದೆ. ಪರಿಶಿಷ್ಟ ಜಾತಿ -ಎಗೆ 5.25%, ಪರಿಶಿಷ್ಟ ಜಾತಿ-ಬಿಗೆ 5.25%, ಪರಿಶಿಷ್ಟ ಜಾತಿ-ಸಿಗೆ 4.5%, ಮತ್ತು ಪರಿಶಿಷ್ಟ ಪಂಗಡಕ್ಕೆ 3% ಮೀಸಲಾತಿ ನಿಗದಿಪಡಿಸಲಾಗಿದೆ.

ಮಲ್ಲಕಂಬ ಪ್ರದರ್ಶನ



ಆಯುಷ್ ಇಲಾಖೆಯ ವತಿಯಿಂದ ಭಾನುವಾರ ವಿಧಾನಸೌಧದ ಮುಂಭಾಗದಲ್ಲಿ ಆಯೋಜಿಸಲಾಗಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರದರ್ಶಿಸಿದ ಮಲ್ಲಕಂಬ ಎಲ್ಲರ ಗಮನ ಸೆಳೆಯಿತು.

ಜಗನ್ನಾಥ ರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆ | ದತ್ತಾತ್ರೇಯ ಹೊಸಬಾಳೆ ಮಾತು

ಸಮಾಜದ ಔನ್ನತ್ಯಕ್ಕೆ ಜಗನ್ನಾಥ ಭವನ ಬಳಕೆಯಾಗಲಿ

ಬೆಳಗಾವಿ: ತಮ್ಮ ಜೀವನವನ್ನೇ ಸಮಾಜ ಸೇವೆಗೆ ಸಮರ್ಪಿಸಿದ ಜಗನ್ನಾಥ ರಾವ್ ಜೋಶಿ ಅವರ ಸ್ಮರಣಾರ್ಥ ನಿರ್ಮಿಸಲಾದ ಜಗನ್ನಾಥರಾವ್ ಜೋಶಿ ಸ್ಮಾರಕ ಭವನವನ್ನು ಇಡೀ ಸಮಾಜಕ್ಕೆ ಅರ್ಪಿಸಲಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ಭಾನುವಾರ ನಗರದ ಸಂಘ ಸದನದಲ್ಲಿ ನ್ಯೂ ಗೂಡ್ಸ್ ಶೆಟ್ ರಸ್ತೆಯಲ್ಲಿರುವ ಭವ್ಯ ಅಂತಸ್ತಿನ ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆಗೊಳಿಸಿದ ಬಳಿಕ ವೇದಿಕೆಯ ಸಮಾರಂಭದಲ್ಲಿ ಮಾತನಾಡಿದ ಅವರು, ಜನವಿಕಾಸ ಮತ್ತು ಜನಕಲ್ಯಾಣದ ಉದ್ದೇಶದಿಂದ ಈ ಭವನ ನಿರ್ಮಿಸಲಾಗಿದೆ. ಭವನ ನಿರ್ಮಾಣಕ್ಕೆ ಬಳಸಿರುವ ಪ್ರತಿಯೊಂದು ಪೈಸೆಯೂ ಸದುಪಯೋಗವಾಗಬೇಕು ಹಾಗೂ ಪ್ರತಿಯೊಂದು ಇಂಚು ಜಾಗವೂ ಸಮಾಜದ ಹಿತಕ್ಕಾಗಿ ಬಳಕೆಯಾಗಬೇಕು ಎಂದರು.

ಕಾರಂಜಿಮಠದ ಶ್ರೀ ಗುರುಸಿದ್ಧ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಸಂಘಚಾಲಕ ಬಸವರಾಜ ಡಂಬಳ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ ಸ್ವಾಗತಿಸಿದರು. ಜನ ಕಲ್ಯಾಣ ಟ್ರಸ್ಟ್‌ನ ನಿರ್ವಾಹಕ ವಿಶ್ವಸ್ಥ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖಮಂಗೇಶಬೇಂಡೆ,ಆರ್‌ಎಸ್‌ಎಸ್‌ಪ್ರಾಂತಕಾರ್ಯವಾಹ ರಾಘವೇಂದ್ರ ಕಾಗವಾಡ ಸೇರಿದಂತೆ ಹಲವು ಗಣ್ಯರು ಇದ್ದರು.



ಅತ್ಯಂತ ಸರಳ ಜೀವನ
ಜಗನ್ನಾಥರಾವ್ ಜೋಶಿ ಅವರು ಜಾತಿ, ಮತ, ಧರ್ಮಗಳ ಗಡಿಗಳನ್ನು ಮೀರಿ ಬದುಕಿದ ಮಹನೀಯರಾಗಿದ್ದು, ದೇಶ ಸೇವೆಯನ್ನೇ ಪರಮೋಚ್ಚ ಗುರಿಯನ್ನಾಗಿಸಿಕೊಂಡಿದ್ದರು. ಜನರಿಗಾಗಿ ಜೀವನವನ್ನೇ ಮುಡಿಪಾಗಿಟ್ಟ ಅವರು ಅತ್ಯಂತ ಸರಳ ಜೀವನ ನಡೆಸಿದ್ದರು. ಅವರ ಸಾರ್ಥಕ ಜೀವನಕ್ಕೆ ಗೌರವ ಸಲ್ಲಿಸುವ ಉದ್ದೇಶದಿಂದ ಈ ಸ್ಮಾರಕ ಭವನ ನಿರ್ಮಿಸಲಾಗಿದೆ ಎಂದರು. ಸಮಾಜದ ಔನ್ನತ್ಯ, ಜನಕಲ್ಯಾಣದ ಕಾರ್ಯಗಳಿಗೆ ಈ ಭವನ ಕೇಂದ್ರವಾಗಲಿ. ಜಗನ್ನಾಥರಾವ್ ಜೋಶಿ ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯಕ್ಕೆ ಇದು ನೆರವಾಗಲಿ ಎಂದು ದತ್ತಾತ್ರೇಯ ಹೊಸಬಾಳೆ ಆಶಿಸಿದರು.

ಸಮಾರಂಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ, ಗೋವಿಂದ ಕಾರಜೋಳ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಸಚಿವರಾದ ಸಿ.ಟಿ.ರವಿ, ಮುರುಗೇಶ ನಿರಾಣಿ, ಕೆ.ಎಸ್.ಈಶ್ವರಪ್ಪ, ಸಿ.ಸಿ.ಪಾಟೀಲ, ಶಶಿಕಲಾ ಜೊಲ್ಲೆ, ಕೋಟ ಶ್ರೀನಿವಾಸ ಪೂಜಾರಿ, ಜನಪ್ರತಿನಿಧಿಗಳು, ಸಂಘದ ಪ್ರಮುಖರು ಸೇರಿದಂತೆ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕಿರುಸುದ್ದಿ

ಹೈಗೆ ವರದಿ ಸಲ್ಲಿಕೆ: ಸಿಟಿ ರವಿ

ಬೆಳಗಾವಿ: ಪರಿಷತ್ ಚುನಾವಣೆಯ ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಮುಂದಿನ ಎರಡು ದಿನಗಳಲ್ಲಿ ಪಕ್ಷದ ಹೈಕಮಾಂಡ್‌ಗೆ ಪ್ರಾಥಮಿಕ ಹಾಗೂ ಮಧ್ಯಂತರ ವರದಿಯನ್ನು ಸಲ್ಲಿಸಲಾಗುವುದು ಎಂದು ಸತ್ಯಶೋಧನಾ ಸಮಿತಿ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದರು. ಭಾನುವಾರ ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್ ಎರಡೂ ಪಕ್ಷಗಳಿಂದ ಒಟ್ಟು 12 ಮತಗಳು ವ್ಯತ್ಯಾಸವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಗೌಪ್ಯ ಮತದಾನ ಆಗಿರುವ ಹಿನ್ನೆಲೆಯಲ್ಲಿ ಮತಗಳ ಕೊರತೆ ಎದುರಾಗಿದೆ. ಇದರಲ್ಲಿ ಒಂದು ಮತ ಕುಲಗೆಟ್ಟಿದೆ (ಅಸಿಂಧು). ತಲಾ 30 ವೋಟುಗಳಂತೆ ಪ್ರತ್ಯೇಕವಾಗಿ ಯೋಜನೆ ರೂಪಿಸಿ ಜವಾಬ್ದಾರಿ ಹಂಚಲಾಗಿತ್ತು. ಆದರೆ, ಈಗ ಲೆಕ್ಕಾಚಾರ ಉಲ್ಟಾ ಆಗಿದೆ ಎಂದರು. ಯಾವ ಶಾಸಕರು ಕ್ರಾಸ್ ವೋಟಿಂಗ್ ಮಾಡಿದ್ದಾರೆ ಎನ್ನುವುದರ ಬಗ್ಗೆ ಸದ್ಯಕ್ಕೆ ಯಾರ ಮೇಲೂ ನಾವು ನೇರ ಆರೋಪ ಮಾಡುವುದಿಲ್ಲ. ಕೇವಲ ಸಾಂದರ್ಭಿಕ ಸಾಕ್ಷ್ಯಗಳನ್ನು ಮತ್ತು ಮಾಹಿತಿಯನ್ನು ಕಲೆ ಹಾಕುತ್ತಿದ್ದೇವೆ. ಅನುಮಾನಿಸಬಹುದಷ್ಟೇ ಹೊರತು, ಇವರೇ ತಪ್ಪು ಮಾಡಿದ್ದಾರೆ ಎಂದು ಸಾರಲು ಸಾಧ್ಯವಿಲ್ಲ. ಸತ್ಯಶೋಧನೆ ನಡೆಸಿ ನಿಖರವಾದ ವರದಿ ಕೊಡುವ ಕೆಲಸವನ್ನು ಸಮಿತಿ ಪ್ರಾಮಾಣಿಕವಾಗಿ ಮಾಡಲಿದೆ. ವರದಿ ಸಲ್ಲಿಕೆಯಾದ ಬಳಿಕ ಪಕ್ಷದ ಶಿಸ್ತು ಸಮಿತಿಯು ಮುಂದಿನ ಕ್ರಮಗಳ ಬಗ್ಗೆ ಆಲೋಚನೆ ಮಾಡಲಿದೆ ಎಂದು ಹೇಳಿದರು.

ಪಕ್ಷದಲ್ಲಿ ಆತ್ಮಾವಲೋಕನ ಅಗತ್ಯ: ಶಾಸಕ ಬೆಲ್ಲದ

ಬೆಳಗಾವಿ: ರಾಜ್ಯ ಬಿಜೆಪಿಯಲ್ಲಿ ಇತ್ತೀಚೆಗೆ ನಡೆದ ರಾಜಕೀಯ ಬೆಳವಣಿಗೆಗಳು ಹಾಗೂ ಚುನಾವಣಾ ಫಲಿತಾಂಶಗಳ ಹಿನ್ನೆಲೆಯಲ್ಲಿ ಪಕ್ಷದೊಳಗಿನ ಸ್ಥಿತಿಗತಿಗಳ ಕುರಿತು ಹಾಗೂ ಪಕ್ಷದ ಸಂಘಟನೆ ಮತ್ತಷ್ಟು ಬಲಪಡಿಸಲು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂದು ಶಾಸಕ ಅರವಿಂದ ಬೆಲ್ಲದ ಅಭಿಪ್ರಾಯಪಟ್ಟರು. ಭಾನುವಾರ ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಕ್ಷದ ಸಂಘಟನೆ ಮತ್ತು ಇತ್ತೀಚಿನ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಹೈಕಮಾಂಡ್ ನಾಯಕರು ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಿದ್ದಾರೆ. ಪಕ್ಷದಲ್ಲಿರುವ ಲೋಪದೋಷಗಳನ್ನು ಗುರುತಿಸಿ ಸರಿಪಡಿಸಿಕೊಂಡು ಮುನ್ನಡೆಯುವುದು ಈಗಿನ ಅಗತ್ಯವಾಗಿದ್ದು, ಇದು ಎಲ್ಲರಿಗೂ ಆತ್ಮಾವಲೋಕನದ ಸಮಯವಾಗಿದೆ ಎಂದು ಹೇಳಿದರು. ರಾಜ್ಯ ಬಿಜೆಪಿ ಅಧ್ಯಕ್ಷರು ಪಕ್ಷದ ಎಲ್ಲ ನಾಯಕರನ್ನು ಹಾಗೂ ಕಾರ್ಯಕರ್ತರನ್ನು ಒಗ್ಗೂಡಿಸಿಕೊಂಡು ಸಾಗುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ ಎಂದರು.

ಕೆರೆಗೆ ತ್ಯಾಜ್ಯ: ಡಾಕ್ಟರ್ ಮೇಲೆ ದೂರು ದಾಖಲು

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆ ಯಂಟಗಾನಹಳ್ಳಿ ಕೆರೆಗೆ ವೈದ್ಯಕೀಯ ತ್ಯಾಜ್ಯ ಸುರಿದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಸೂಚನೆ ಮೇರೆಗೆ ಅಧಿಕಾರಿಗಳು ಕ್ರಮ ವಹಿಸಿದ್ದು, ಖಾಸಗಿ ಕ್ಲಿನಿಕ್ ವೈದ್ಯರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಯಂಟಗಾನಹಳ್ಳಿ ಗ್ರಾಮಪಂಚಾಯ್ತಿಗೆ ಸಚಿವರು ಹಠಾತ್ ಭೇಟಿ ನೀಡಿದ್ದ ವೇಳೆ ಸಾರ್ವಜನಿಕರು ವೈದ್ಯಕೀಯ ತ್ಯಾಜ್ಯವನ್ನು ಕೆರೆಗೆ ಸುರಿದಿರುವ ಬಗ್ಗೆ ಮಾಹಿತಿ ನೀಡಿದ್ದರು. ಕೂಡಲೇ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗೆ ಸ್ಥಳ ಪರಿಶೀಲಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸೂಚಿಸಿದ್ದರು. ಸಚಿವ ಖಂಡ್ರೆ ಅವರ ಸೂಚನೆಯಂತೆ ಸ್ಥಳ ಪರಿಶೀಲನೆ ನಡೆಸಿದ ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಬಿಂದು, ಸಚಿತ್ರ ಮಾಹಿತಿ ನೀಡಿದ ತರುವಾಯ ತಾಲೂಕು ವೈದ್ಯಾಧಿಕಾರಿ ಡಾ. ಪದ್ಮಿನಿ ನೆಲಮಂಗಲ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನನಗೆ ಶಕ್ತಿ ತುಂಬಿದ ಪದಾಧಿಕಾರಿಗಳು: ಸಿಎಂ ಡಿ.ಕೆ.ಶಿವಕುಮಾರ್

ಕಾರ್ಯಕರ್ತರಿಗೆ ಅಧಿಕಾರ

ಬೆಂಗಳೂರು: ಕಳೆದ ಆರು ವರ್ಷಗಳಲ್ಲಿ ನನ್ನ ಜೊತೆ ಪಕ್ಷದ ಅನೇಕ ಪದಾಧಿಕಾರಿಗಳು ಶ್ರಮಿಸಿದ್ದು, ಎಲ್ಲಾ ಶಾಸಕರು ಹಾಗೂ ಮುಖಂಡರು ತನು, ಮನ, ಧನ ಅರ್ಪಿಸಿ ನನಗೆ ಶಕ್ತಿ ತುಂಬಿದ್ದಾರೆ. ಎಷ್ಟೋ ಜನಕ್ಕೆ ಅಧಿಕಾರ ನೀಡಲು ಸಾಧ್ಯವಾಗಿಲ್ಲ. ನಾವು ಗ್ಯಾರಂಟಿ ಯೋಜನೆಗಳ ಸಮಿತಿ ಮಾಡಿ, ಸಾವಿರಾರು ಕಾರ್ಯಕರ್ತರಿಗೆ ಅಧಿಕಾರ ನೀಡಿದ್ದೇವೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು. ಪಂಚಾಯಿತಿ ಹಾಗೂ ವಾರ್ಡ್ ಮಟ್ಟದಲ್ಲಿ ಸಮಿತಿ ರಚನೆಗೆ ನಾನು ಹಾಗೂ ನಮ್ಮ ವರಿಷ್ಠರು ಚರ್ಚೆ ಮಾಡಿದ್ದೇವೆ. ಎಲ್ಲಾ ವರ್ಗದವರಿಗೂ ಸಮಾನವಾಗಿ ಈ ಸಮಿತಿಯಲ್ಲಿ ನೇಮಕ ಮಾಡಲಾಗುವುದು.ಈಸಮಿತಿಸದಸ್ಯರುಗ್ಯಾರಂಟಿಫಲಾನುಭವಿಗಳ ದಾಖಲೆ ಮರುಪರಿಶೀಲನೆ ಮಾಡಬೇಕು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಕರೆ ನೀಡಿದರು.

ಪ್ರತಿ ವಾರ್ಡ್ ಹಾಗೂ ಪಂಚಾಯಿತಿಯಲ್ಲಿ ಐದು ಜನರಂತೆ, 7 ಸಾವಿರ ಪಂಚಾಯಿತಿ, 4 ಸಾವಿರ ವಾರ್ಡ್‌ಗಳಲ್ಲಿ ಗ್ಯಾರಂಟಿ ಸಮಿತಿ ರಚಿಸಲಾಗುವುದು. ಆಮೂಲಕ ನಾವು ಎಷ್ಟು ನಾಯಕರನ್ನು ತಯಾರು ಮಾಡುತ್ತಿದ್ದೇವೆ ಎಂದು ನೀವೇ ಆಲೋಚಿಸಿ. ನಾಯಕನಾದವನು ನಾಯಕರನ್ನು ಬೆಳೆಸಬೇಕೇ ಹೊರತು, ಹಿಂಬಾಲಕರನ್ನಲ್ಲ ಎಂಬುದಕ್ಕೆ ಕಾಂಗ್ರೆಸ್ ಪಕ್ಷ ಬದ್ಧವಾಗಿದೆ ಎಂದು ತಿಳಿಸಿದರು.

ಕಾರ್ಯಕರ್ತ ನಂತೆ ಕೆಲಸ: ನಾನು ಮುಖ್ಯಮಂತ್ರಿಯಾಗಿದ್ದರೂ ಕಾರ್ಯಕರ್ತನಾಗಿ ನಿಮ್ಮ ಜತೆಗೆ ಕೆಲಸ ಮಾಡುತ್ತೇನೆ. 2028ರಲ್ಲಿ ಕಾಂಗ್ರೆಸ್ ಅನ್ನು ಮತ್ತೆ ಅಧಿಕಾರಕ್ಕೆ ತಂದು 2029ರಲ್ಲಿ ರಾಹುಲ್ ಗಾಂಧಿ ಅವರನ್ನು ದೇಶದ ಪ್ರಧಾನಿಯಾಗಿ ಮಾಡಲು ನಾವೆಲ್ಲರೂ ಸಂಕಲ್ಪ ಮಾಡಿದ್ದೇವೆ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರಿಗೆ ಸಿಕ್ಕ ಅವಕಾಶ ನಮಗೆ ಸಿಕ್ಕಿಲ್ಲ ಎಂದು ಬಿಜೆಪಿಯವರು ಕೈ ಹಿಸುಕಿಕೊಳ್ಳುತ್ತಿದ್ದಾರೆ. ನೀವು ಚಿಂತೆ ಮಾಡುವ ಅಗತ್ಯವಿಲ್ಲ. 2028ರಲ್ಲಿ ಹಾಗೂ 2029ರಲ್ಲೂ ನಿಮ್ಮದೇ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಸಂದೇಶ ನೀಡಿದರು.

ನನ್ನ ಶಕ್ತಿ ಮೀರಿ ಕಾರ್ಯಕರ್ತರ ಸೇವೆ, ಪಕ್ಷ ಸಂಘಟನೆ: ನಾನು ನನ್ನ ಶಕ್ತಿ ಮೀರಿ, ಕಾರ್ಯಕರ್ತರ ಸೇವೆ ಮಾಡಿ, ಪಕ್ಷವನ್ನು ಸಂಘಟನೆ ಮಾಡಿದ್ದೇನೆ. ನನ್ನಿಂದ ಅನೇಕ ತಪ್ಪುಗಳಾಗಿರಬಹುದು ಎಂದರು.



> ಎಲ್ಲಾ ಜಿಲ್ಲಾ ಮಂತ್ರಿಗಳು ವಾರಕ್ಕೆ ಒಂದು ದಿನ ನಿಮ್ಮ ಜಿಲ್ಲೆಗಳಲ್ಲಿರುವ ಒಂದು ತಾಲ್ಲೂಕಿನಲ್ಲಿ ಜನಸ್ಪಂದನ ಕಾರ್ಯಕ್ರಮ ಮಾಡಿ, ಜನರ ಸಮಸ್ಯೆಗೆ ಪರಿಹಾರ ನೀಡಬೇಕು ಎಂದು ಸೂಚಿಸಿದ್ದೇನೆ. ನೀವು ಶಕ್ತಿಶಾಲಿಯಾದರೆ, ನಾವು ಬಲಿಷ್ಠವಾಗುತ್ತೇವೆ.
> ■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಈ ವರ್ಷದಿಂದಲೇ ವಿದ್ಯಾರ್ಥಿ ಚುನಾವಣೆ

ರಾಜ್ಯದಲ್ಲಿ ನಿಲ್ಲಿಸಿರುವ ವಿದ್ಯಾರ್ಥಿ ಚುನಾವಣೆಯನ್ನು ಈ ವರ್ಷದಿಂದಲೇ ಆರಂಭಿಸುತ್ತೇವೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ, ಅಧಿಕಾರ ಹಸ್ತಾಂತರಿಸಿ ಅವರು ಮಾತಾಡಿದರು. ಈ ವೇಳೆ ವಿದ್ಯಾರ್ಥಿ ಚುನಾವಣೆ ಆರಂಭಿಸುವ ಬಗ್ಗೆ ಅವರು ಮಾಹಿತಿ ನೀಡಿದರು. ಕೋವಿಡ್ ಕಾಲದಲ್ಲಿ ಮನೆಯಿಂದ ಹೊರಗೆ ಹೋಗೋಕೆ ಆಗಿರಲಿಲ್ಲ. ಜೂಮ್ ಮೀಟಿಂಗ್ ಮೂಲಕವೇ ಅನೇಕ ಸಮಸ್ಯೆ ಪರಿಹರಿಸಿದ್ದೇವೆ. ಕೋಟಿ ಕೋಟಿ ಹಣ ವೆಚ್ಚ ಮಾಡಿ ಫುಡ್ ಕಿಟ್ ಕೊಟ್ಟಿದ್ದೇವೆ. ಕೆಲವರು ಯಾದಗಿರಿ ವರೆಗೂ ಬಸ್ನಲ್ಲಿ ಹೋಗಬೇಕಿತ್ತು. ಆಗ ಕೆಪಿಸಿಸಿ ವತಿಯಿಂದ 1 ಕೋಟಿ ರೂ. ಚೆಕ್ ಕೊಟ್ಟೆ. ರೈಲು, ಬಸ್ನಲ್ಲಿ ಹೋಗೋಕೆ ವ್ಯವಸ್ಥೆ ಮಾಡಿದೆ. ಅಂದು ಮಾತು ಕೊಟ್ಟಂತೆ ನಡೆದುಕೊಂಡಿದ್ದೇವೆ. ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಸರ್ಕಾರಿ ನೌಕರಿ ನೀಡಿದ್ದೇವೆ ಎಂದರು. ಕೃಷಿ ಕಾಯ್ದೆ ವಿರುದ್ಧ ಹೋರಾಟ ಮಾಡಿದ್ದೆವು. ಬೆಲೆ ಏರಿಕೆ ವಿರುದ್ಧ ಹೋರಾಟ ಮಾಡಿದ್ದೆವು. ಆಗ ಇಬ್ಬರು ಮಂತ್ರಿಗಳು ರಾಜೀನಾಮೆ ಕೊಡಿಸಿದ್ದೆವು. ಆಗ ಸೋನಿಯಾ ಗಾಂಧಿ, ರಾಹುಲ್ ಗಾಂಧಿಯವರಿಗೆ ಕಿರುಕುಳ ನೀಡಿದರು. ಅದೆಲ್ಲಾ ಗಮನದಲ್ಲಿಟ್ಟುಕೊಂಡು ಹೋರಾಟ ಮಾಡಿದ್ವಿ. ಕೃಷ್ಣ ಕಾವೇರಿ ಹೋರಾಟ, ಮೇಕೆದಾಟು ಹೋರಾಟ ಮಾಡಿದ್ವಿ. ಅಂದು ಬಿಜೆಪಿವರು ಅವಕಾಶ ನೀಡಲಲ್ಲಿ. ಈಗ ಅದೆಲ್ಲಾ ಇತಿಹಾಸ ಎಂದರು.

ಒತ್ತಡಕ್ಕೆ ಯೋಗ ಮದ್ದು

ಬೆಂಗಳೂರು: ಇಂದಿನ ಆಧುನಿಕ ದಿನಗಳಲ್ಲಿ ನಾವೆಲ್ಲ ಒತ್ತಡದಲ್ಲಿದ್ದೇವೆ. ಇದಕ್ಕೆ ಯೋಗವೇ ಮದ್ದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.



ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದ ಮುಂಭಾಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 12ನೇ ಯೋಗ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಬಾರಿ ಸೌಹಾರ್ದತೆ ಮತ್ತು ಶಾಂತಿಗಾಗಿ ಯೋಗ ಎಂಬ ಧ್ಯೇಯದಡಿ ವಿಶ್ವ ಯೋಗ ದಿನವನ್ನು ಆಚರಿಸಲಾಗುತ್ತಿದೆ. ಜಗತ್ತಿನಲ್ಲಿ ಯುದ್ಧದಿಂದಾಗಿ ಸಾಕಷ್ಟು ತೊಂದರೆಯನ್ನು ನಾವೆಲ್ಲ ಅನುಭವಿಸುತ್ತಿದ್ದೇವೆ. ಇದಕ್ಕೆ ಪ್ರಮುಖ ಕಾರಣ ವಿಶ್ವಾಸದ ಕೊರತೆ. ಈ ವಿಶ್ವಾಸವನ್ನು ಯೋಗದಿಂದ ವೃದ್ಧಿಸಿಕೊಳ್ಳಲು ಸಾಧ್ಯವಿದೆ ಎಂದರು.

ಇಂದು ಎಲ್ಲರಿಗೂ ಒತ್ತಡವಿದೆ. ಅದು ವಿದ್ಯಾರ್ಥಿ ಇರಬಹುದು, ರಾಜಕಾರಣಿಗಳು ಇರಬಹುದು. ಎಲ್ಲರದೂ ಒತ್ತಡದ ಬದುಕಾಗಿದೆ. ಈ ಒತ್ತಡದ ನಡುವೆ ಸಮಾಧಾನವಾಗಿ ಕೆಲಸ ಮಾಡಲು ಯೋಗ ಸಹಕಾರಿ. ಮನಸಿನ ಸಮತೋಲನ ಕಾಪಾಡಲು ಯೋಗ ಬೇಕು. ದೈಹಿಕ ಆರೋಗ್ಯದ ಜೊತೆಗೆ ಮನಸಿನ ಆರೋಗ್ಯವೂ ಇದ್ದರೆ ಭವಿಷ್ಯ ಉಜ್ವಲವಾಗಲಿದೆ. ನಮ್ಮ ಭವಿಷ್ಯ ಉಜ್ವಲವಾಗಿದ್ದರೆ ದೇಶದ ಭವಿಷ್ಯ ಉಜ್ವಲವಾಗಲಿದೆ. ದೇಶದ ಭವಿಷ್ಯ ಉಜ್ವಲವಾದರೆ ವಿಶ್ವದ ಭವಿಷ್ಯ ಚೆನ್ನಾಗಿ ಇರಲಿದೆ ಎಂದು ವಿಜಯೇಂದ್ರ ವಿವರಿಸಿದರು.

ನಿತ್ಯಯೋಗಿಗಳಾಗೋಣ: ಒತ್ತಡ ನಿವಾರಣೆಗೆ ನಾವೆಲ್ಲ ಪ್ರತಿ ದಿನ ಯೋಗ ಮಾಡೋಣ. ನಮ್ಮ ಬದುಕು ಉತ್ತಮವಾಗಲು, ಉತ್ತಮ ಬದುಕು ಕಾಣಲು ಪ್ರತಿ ದಿನ ಯೋಗಾಭ್ಯಾಸ ಮಾಡಲೇಬೇಕು. ಪ್ರತಿಯೊಬ್ಬರ ಬದುಕು ಚೆನ್ನಾಗಿರಲು ಯೋಗ ಸಹಕಾರಿ. ಯೋಗ ಮಾಡಲು ಕೇವಲ ಮನಸು ಮತ್ತು ಉದ್ದೇಶ ಮಾತ್ರ ಸಾಕು. ಪ್ರತಿಯೊಬ್ಬರ ವ್ಯಕ್ತಿತ್ವ ರೂಪಿಸುವಲ್ಲಿ ಯೋಗ ಮಹತ್ವದ ಪಾತ್ರ ವಹಿಸಲಿದೆ ಎಂದು ಶಾಸಕ ಡಾ. ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಥಟ್ ಅಂತ ಹೇಳಿ ಖ್ಯಾತಿಯ ಡಾ. ನಾ. ಸೋಮೇಶ್ವರ ಮಾತನಾಡಿ, ಯೋಗದಿಂದ ಹಲವಾರು ಪ್ರಯೋಜನಗಳಿವೆ. ವೈಜ್ಞಾನಿಕವಾಗಿ ಇವು ಸಾಬೀತಾಗಿವೆ ಎಂದರು. ಯೋಗ ಗುರುಗಳಾದ ಮಂಜುನಾಥ್ ಹಾಗೂ ಗೀತಾ ಮಂಜುನಾಥ್ ಅವರು ಯೋಗಭ್ಯಾಸ ಮಾಡಿಸಿದರು. ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ನಟಿ ಕಾರುಣ್ಯ ರಾಮ್ ಭಾಗವಹಿಸಿದ್ದರು.

ಬಿಗಿ ಭದ್ರತೆಯಲ್ಲಿ ಮರು ನೀಟ್

ಬೆಂಗಳೂರು: ಪರೀಕ್ಷಾ ಅಕ್ರಮಗಳ ಕಹಿ ಅನುಭವದ ಬಳಿಕ ದೇಶಾದ್ಯಂತ ಮರುನಡೆಸಲಾದ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) ಭಾನುವಾರ ರಾಜ್ಯ ಸೇರಿದಂತೆ ದೇಶದಾದ್ಯಂತ ಬಿಗಿ ಭದ್ರತೆಯ ನಡುವೆ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈ ಬಾರಿ ಪ್ರಶ್ನೆಪತ್ರಿಕೆ ಹಿಂದಿನ ಪರೀಕ್ಷೆಗಿಂತ ಹೆಚ್ಚು ಕಠಿಣವಾಗಿದ್ದು, ವಿಶೇಷವಾಗಿ ಭೌತಶಾಸ್ತ್ರ ವಿಭಾಗ ವಿದ್ಯಾರ್ಥಿಗಳಿಗೆ ತೀವ್ರ ಸವಾಲೊಡ್ಡಿದೆ ಎಂದು ಪರೀಕ್ಷಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ.

ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಇತರೆ ಅಕ್ರಮಗಳ ಆರೋಪಗಳು ದೇಶವ್ಯಾಪಿ ವಿವಾದಕ್ಕೆ ಕಾರಣವಾಗಿ ಪರೀಕ್ಷೆಯನ್ನು ರದ್ದುಗೊಳಿಸಲಾಗಿತ್ತು. ಇದರ ಬೆನ್ನಲ್ಲೇ ಎಚ್ಚೆತ್ತ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ), ದೇಶಾದ್ಯಂತ 22,79,743 ವಿದ್ಯಾರ್ಥಿಗಳಿಗಾಗಿ ಮರುಪರೀಕ್ಷೆಯನ್ನು ಅತ್ಯಂತ ಪಾರದರ್ಶಕವಾಗಿ ಮತ್ತು ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಯೊಂದಿಗೆ ನಡೆಸಿತು.

ಪ್ರಶ್ನೆಪತ್ರಿಕೆ ಕಠಿಣ: ಪರೀಕ್ಷೆ ಮುಗಿದ ಬಳಿಕ ವಿವಿಧ ಕೇಂದ್ರಗಳಿಂದ ಹೊರಬಂದ ವಿದ್ಯಾರ್ಥಿಗಳು ಈ ಬಾರಿ ಪ್ರಶ್ನೆಪತ್ರಿಕೆಯು ನಿರೀಕ್ಷೆಗಿಂತ ಕಠಿಣವಾಗಿತ್ತು ಎಂದು ಪ್ರತಿಕ್ರಿಯಿಸಿದರು. ವಿಷಯವಾರು ನೋಡಿದರೆ ಭೌತಶಾಸ್ತ್ರ ವಿಭಾಗದ ಪ್ರಶ್ನೆಗಳು ದೀರ್ಘವಾಗಿದ್ದು, ವಿಶ್ಲೇಷಣಾತ್ಮಕ ಚಿಂತನೆಗೆ ಹೆಚ್ಚಿನ ಸಮಯ ಬೇಕಾಗಿತ್ತು. ರಸಾಯನಶಾಸ್ತ್ರ ವಿಭಾಗ ಸಾಧಾರಣದಿಂದ ಕಠಿಣ ಮಟ್ಟದಲ್ಲಿದ್ದರೆ, ಜೀವಶಾಸ್ತ್ರ ವಿಭಾಗದ ಪ್ರಶ್ನೆಗಳು ಸುಲಭವಾಗಿದ್ದರೂ ಅವುಗಳನ್ನು ಅರ್ಥೈಸಿ ಉತ್ತರಿಸಲು ಹೆಚ್ಚಿನ ಸಮಯ ತೆಗೆದುಕೊಂಡಿತು ಎಂದು ವಿದ್ಯಾರ್ಥಿಗಳು ತಿಳಿಸಿದರು.

ಒಟ್ಟಾರೆ ಮೇ 3ರಂದು ನಡೆದಿದ್ದ ಪರೀಕ್ಷೆಗಿಂತ ಈ ಬಾರಿಯ ಮರುಪರೀಕ್ಷೆ ಹೆಚ್ಚು ಸವಾಲಿನಿಂದ ಕೂಡಿತ್ತು ಎಂದು ಬಹುತೇಕ ಪರೀಕ್ಷಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ. ಕೆಲವರು ಹಿಂದಿನ ಪರೀಕ್ಷೆಯ 2, 3 ಪ್ರಶ್ನೆಗಳು ಪುನರಾವರ್ತನೆಯಾಗಿದ್ದವು ಎಂಬುದನ್ನೂ ಉಲ್ಲೇಖಿಸಿದರು.

ಹೆಚ್ಚುವರಿ 15 ನಿಮಿಷಗಳ ಕಾಲಾವಕಾಶ

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಬಾರಿ ಪರೀಕ್ಷೆಯ ಅವಧಿಯನ್ನು 15 ನಿಮಿಷಗಳ ಕಾಲ ವಿಸ್ತರಿಸಲಾಗಿತ್ತು. ಮಧ್ಯಾಹ್ನ 2 ಗಂಟೆಗೆ ಆರಂಭವಾದ ಪರೀಕ್ಷೆ ಸಂಜೆ 5.15 ಗಂಟೆವರೆಗೆ ನಡೆಯಿತು. ಹೆಚ್ಚುವರಿ ಸಮಯದಿಂದಾಗಿ ದೀರ್ಘ ಪ್ರಶ್ನೆಗಳಿಗೆ ಉತ್ತರಿಸಲು ಸ್ವಲ್ಪ ಅನುಕೂಲವಾಯಿತು ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್.ಸೋಮನಾಥನ್ ಇಂಗಿತ

ಯೋಗ ಜಗತ್ತಿನೊಂದಿಗೆ ಬೆಸೆಯುವ ಕೊಂಡಿ

ಬೆಂಗಳೂರು: ಯೋಗ ಎಂಬುದು ಕೇವಲ ದೈಹಿಕ ಭಂಗಿ ಅಥವಾ ಆಸನಗಳಿಗೆ ಸೀಮಿತವಾದುದಲ್ಲ. ಅದು ನಮ್ಮ ಒಳಮನಸ್ಸನ್ನು ಜಗತ್ತಿನೊಂದಿಗೆ ಬೆಸೆಯುವ ಕೊಂಡಿ ಹಾಗೂ ಜಾಗತಿಕ ಮಟ್ಟಕ್ಕೆ ಭಾರತ ನೀಡಿರುವ ಅತ್ಯುನ್ನತ ಕೊಡುಗೆಯಾಗಿದೆ ಎಂದು ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್.ಸೋಮನಾಥನ್ ಹೇಳಿದರು.

ವಿಶ್ವ ಯೋಗದಿನದ ಅಂಗವಾಗಿ ರಾಷ್ಟ್ರೋತ್ಥಾನ ಪರಿಷತ್ ಸಭಾಂಗಣದಲ್ಲಿ ನಡೆದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಯೋಗ ಎಂಬುದು ಒಂದು ಜಾಗತಿಕ ಆಂದೋಲನವಾಗಿ ಮಾರ್ಪಟ್ಟಿದೆ. ಜಗತ್ತಿನಾದ್ಯಂತ ನಡೆಯುತ್ತಿರುವ ಈ ಮಹತ್ತರ ಚಳುವಳಿಯಲ್ಲಿ ನಾವೆಲ್ಲರೂ ಭಾಗಿಯಾಗಿರುವುದು ಹೆಮ್ಮೆಯ ಸಂಗತಿ. ಭಾರತವು ಇತ್ತೀಚಿನ ದಿನಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಜಗತ್ತಿಗೆ ನೀಡಿದ ಅತ್ಯಂತ ದೊಡ್ಡ ಕೊಡುಗೆ ಎಂದರೆ ಯೋಗ ಎಂದು ಬಣ್ಣಿಸಿದರು.

ಸದೃಢ ಮನಸ್ಸಿಗೆ ಯೋಗದ ಆಸರೆ: ಯೋಗವನ್ನು ದಿನನಿತ್ಯದ ಬದುಕಿನಲ್ಲಿ ಶಿಸ್ತಿನಿಂದ ಅಳವಡಿಸಿಕೊಂಡರೆ, ಮಾನಸಿಕ ಒತ್ತಡಗಳನ್ನು ಗಣನೀಯವಾಗಿ ಕಡಿಮೆ ಮಾಡಿಕೊಳ್ಳಬಹುದು. ಭಾರತವು ಜಾಗತಿಕವಾಗಿ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಲು ಯೋಗದಂತಹ ಸಂಸ್ಕೃತಿ ಪ್ರಮುಖ ಕಾರಣವಾಗಿದೆ. ಧರ್ಮ, ಪ್ರಾದೇಶಿಕತೆಗಳನ್ನು ಮೀರಿ ಜಗತ್ತಿನ ಪ್ರತಿಯೊಬ್ಬರನ್ನೂ ಬೆಸೆಯುವ ವಿಶಿಷ್ಟ ಶಕ್ತಿ ಯೋಗಕ್ಕಿದೆ ಎಂದು ಹೇಳಿದರು.

ವಿಶ್ವದ ಪ್ರತಿಯೊಬ್ಬರನ್ನು ಶ್ರೇಷ್ಠ ವ್ಯಕ್ತಿಗಳನ್ನಾಗಿ ರೂಪಿಸುವುದೇ ಭಾರತದ ಮೂಲ ಆದರ್ಶವಾಗಿದೆ. ಮನುಷ್ಯ ದೈಹಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕವಾಗಿ ಬೆಳೆಯಬೇಕು. ಆಧುನಿಕ ಜೀವನಶೈಲಿಯ ತೊಂದರೆಗಳಿಗೆ ಪ್ರಾಚೀನ ಭಾರತೀಯ ಪರಂಪರೆಯು ಜಗತ್ತಿಗೆ ನೀಡಿದ ಯೋಗ ಅತ್ಯುತ್ತಮ ಪರಿಹಾರವಾಗಿದೆ. ಶೀಘ್ರವಾಗಿ ಉಸಿರಾಡುವುದರಿಂದ ಆಯುಷ್ಯ ಕ್ಷೀಣಿಸುತ್ತದೆ ಎಂದು ತಿಳಿಸಿದರು.



> ರಾಷ್ಟ್ರೋತ್ಥಾನ ಪರಿಷತ್ತು ವತಿಯಿಂದ ಬೆಂಗಳೂರಿನ 26 ಕಡೆಗಳಲ್ಲಿ ಪ್ರತಿನಿತ್ಯ 4,000 ಕ್ಕೂ ಹೆಚ್ಚು ಜನರು ಯೋಗಾಭ್ಯಾಸ ಮಾಡುತ್ತಿದ್ದಾರೆ.
> ■ ನಾ.ದಿನೇಶ್ ಹೆಗ್ಡೆ, ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ

ಯೋಗ ಆರೋಗ್ಯಕರ

ಬೆಂಗಳೂರು: ಯೋಗವು ಆರೋಗ್ಯಕರ ವೃದ್ಧಾಪ್ಯಕ್ಕೆ ಮಾತ್ರವಲ್ಲ, ಶಾಶ್ವತ ಯೌವನದತ್ತ ಕೊಂಡೊಯ್ಯುವ ಜೀವನಶೈಲಿಯಾಗಿದೆ ಎಂದು ಪದ್ಮಶ್ರೀ ಡಾ.ಬಿ.ಎನ್.ಗಂಗಾಧರ್ ತಿಳಿಸಿದರು.



ರಾಷ್ಟ್ರೋತ್ಥಾನ ವತಿಯಿಂದ ಜಯನಗರದ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆಯಲ್ಲಿ ಮಾತನಾಡಿ, ಯೋಗಾಭ್ಯಾಸದ ವೇಳೆ ಓಂಕಾರ ಜಪದ ಪರಿಣಾಮಗಳ ಕುರಿತು ನಡೆದ ಸಂಶೋಧನೆಗಳನ್ನೂ ಉಲ್ಲೇಖಿಸಿದ ಡಾ. ಗಂಗಾಧರ್, ವಿಶೇಷ ಎಂಆರ್‌ಐ ತಂತ್ರಜ್ಞಾನದ ಮೂಲಕ ನಡೆಸಿದ ಅಧ್ಯಯನದಲ್ಲಿ ಓಂಕಾರ ಜಪ ಮಾಡುವಾಗ ಭಾವನೆಗಳನ್ನು ನಿಯಂತ್ರಿಸುವ ಲಿಂಬಿಕ್ ವ್ಯವಸ್ಥೆಯ ಚಟುವಟಿಕೆ ಕಡಿಮೆಯಾಗುವುದು ಕಂಡುಬಂದಿದೆ ಎಂದರು. ರಾಷ್ಟ್ರೋತ್ಥಾನ ಪರಿಷತ್‌ನ ಖಜಾಂಚಿ ನಾರಾಯಣ ಕೆ.ಎಸ್. ಹಾಗೂ ಯೋಗ ಪಟುಗಳು, ಯೋಗಾಭ್ಯಾಸಿಗಳು ಇದ್ದರು.

ಬದುಕನ್ನು ಗೆದ್ದವರು...

ಗಿರಿಧರ್ ಉದ್ಯಾವರ

ಸೇವಾಗಾಥ
ಕಥೆ-10

ದೂರವಾಣಿಯಲ್ಲಿ ದನಿಯೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ ಮತ್ತು ಕೃಷ್ಣಮಹಾದಿಕರಿಗೆ ಆ ಬಂಗಾಲಿ ಬಾಬು ಯಾರು ಎಂಬುದೇ ಅಂದಾಜಾಗುತ್ತಿರಲಿಲ್ಲ. ಸಿಲಿಗುಡಿಯ ಯಾರೋ ವಿಕಾಸ ಚಕ್ರವರ್ತಿ ತಮ್ಮ ಮಗನ ವಿವಾಹಕ್ಕೆ ನನಗೇಕೆ ವಿಮಾನದ ಟಿಕೆಟ್ ಕಳುಹಿಸಿದ್ದಾರೆ ಎಂಬ ಗೊಂದಲ ಅವರದು!

ಅದು ಸುಮಾರು 20 ವರ್ಷಗಳ ಹಿಂದಿನ ಕಥೆ. ಅಂದು ಇದೇ ವಿಕಾಸ ಚಕ್ರವರ್ತಿ ತಮ್ಮ ಮಗನನ್ನು ಉಲ್ಬಣಿಸಿದ್ದ ಕಾಯಿಲೆಯ ಚಿಕಿತ್ಸೆಗಾಗಿ ಮುಂಬಯಿಯ ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಕರೆತಂದಿದ್ದರು. ಆಗ ಅವರ ಕುಟುಂಬದವರೆಲ್ಲಾ ನಾನಾ ಪಾಲ್ಕರ್ ಸ್ಮೃತಿ ಸಮಿತಿಯ ರುಗ್ಣಸೇವಾ ಸದನದಲ್ಲಿ ಉಳಿದುಕೊಂಡಿದ್ದರು. ಆಗ ಆ ಸಮಿತಿಯ ಪ್ರಬಂಧಕರಾಗಿದ್ದವರು ಸಂಘದ ಸ್ವಯಂಸೇವಕ ಕೃಷ್ಣಮಹಾದಿಕ್.

ಅಲ್ಲಿಗೆ ಬರುತ್ತಿದ್ದ ನೂರಾರು ಕುಟುಂಬಗಳಂತೆಯೇ ಈ ಬಂಗಾಲಿ ಮಧ್ಯಮ ವರ್ಗದ ಕುಟುಂಬದವರಿಗೂ ಉಚಿತ ಊಟ ಮತ್ತು ವಸತಿಯ ಜೊತೆಯಲ್ಲಿ ಉಳಿದೆಲ್ಲ ತರಹದ ಸಹಾಯವೂ ದೊರೆತಿತ್ತು. 5 ವರ್ಷ ವಯಸ್ಸಿನ ವಿದುರನ್ ಗಂಭೀರವಾದ ರಕ್ತದ ಕ್ಯಾನ್ಸರಿನಿಂದ ಬಳಲುತ್ತಿದ್ದ. ಬಳಲುವವರಲ್ಲಿ ಲಕ್ಷಕ್ಕೆ ಒಬ್ಬರು ಮಾತ್ರ ಬದುಕುಳಿಯುವ ಸಾಧ್ಯತೆ ಇರುವ ಕುಖ್ಯಾತಿ ಹೊಂದಿದ್ದ ಈ ಹೆಮ್ಮಾರಿಯನ್ನು ಹೊಡೆದೋಡಿಸಲು ಬೋನ್ ಮ್ಯಾರೋ ಟ್ರಾನ್ಸ್ ಪ್ಲ್ಯಾಂಟೇಶನ್ ಅನಿವಾರ್ಯವಿತ್ತು. 1997ರಲ್ಲಿ ವೈದ್ಯರು ಹೇಳಿದ್ದ 13 ಲಕ್ಷ ರೂಪಾಯಿಗಳನ್ನು ಹೊಂದಿಸುವುದು ಆ ಕುಟುಂಬದ ಕಲ್ಪನೆಗೂ ಮೀರಿದ್ದಾಗಿತ್ತು. ಆಗ ಮುಂಬಯಿಯ ನಾನಾ ಪಾಲ್ಕರ್ ಸ್ಮೃತಿ ಸಮಿತಿಯು ಈ ಪರಿವಾರಕ್ಕೆ ಸಹಾಯ ಮಾಡುವ ಹೊಣೆ ಹೊತ್ತಿತ್ತು.



ಇಂದು IITಯಿಂದ ಇಂಜಿನಿಯರ್ ಪದವಿ ಪಡೆದಿರುವ ವಿದುರನ್ ತನಗೆ ಪುನರ್ಜನ್ಮ ನೀಡಿದ್ದ ಕೃಷ್ಣ ಚಾಚಾರನ್ನು ಮರೆತಿರಲಿಲ್ಲ. ಅದಕ್ಕೆಂದೇ, ವಿಕಾಸ ಚಕ್ರವರ್ತಿಯವರು ತಮ್ಮ ಮಗನ ವಿವಾಹದ ಮೊದಲ ಆಮಂತ್ರಣ ಪತ್ರಿಕೆಯನ್ನು ದೇವರ ಮುಂದಿಡದೇ, ಸಮಿತಿಯ ಕಾರ್ಯಕರ್ತರ ಮುಂದಿರಿಸಿದ್ದರು. ವಿದುರನ್ ತರಹದ ಅದೆಷ್ಟೋ ರೋಗಿಗಳು ಕ್ಯಾನ್ಸರಿನಂತಹ ಭೀಕರ ಖಾಯಿಲೆಯ ಚಿಕಿತ್ಸೆಗಾಗಿ ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಬಂದಾಗಲೆಲ್ಲಾ, ನಾನಾ ಪಾಲ್ಕರ್ ರುಗ್ಣ ಸೇವಾ ಸದನವೇ ಅವರಿಗೆಲ್ಲಾ ಮನೆ ಹಾಗೂ ಸಮಿತಿಯ ಸದಸ್ಯರೇ ಅವರ ಬಂಧುಗಳು. ರೋಗಿಗಳಿಗಾಗಿ ಮತ್ತು ಅವರನ್ನು ನೋಡಿಕೊಳ್ಳುವವರಿಗಾಗಿ ಒಂದು ತಿಂಗಳವರೆಗೆ 5 ರೂಪಾಯಿಯ ತಿಂಡಿ ಹಾಗೂ 10 ರೂಪಾಯಿಯ ಊಟ ಮಾತ್ರವಲ್ಲದೆ ಉಚಿತ ವಸತಿ ಸೌಲಭ್ಯವನ್ನೂ ಸಮಿತಿ ಕಲ್ಪಿಸಿತ್ತು. 1968ರಲ್ಲಿ ಕೆಲವೇ ಕೊಠಡಿಗಳಿಂದ ಪ್ರಾರಂಭವಾದ ಈ ಸಮಿತಿ ಇಂದು ಹತ್ತು ಅಂತಸ್ತಿನ ಕಟ್ಟಡವಾಗಿ ಬೆಳೆದಿದೆ. ಇದರಲ್ಲಿ ಇಂದು ಡಯಾಲಿಸಿಸ್ ಪ್ಯಾಥಾಲಜಿ ಲ್ಯಾಬ್, 14 ಡಯಾಲಿಸಿಸ್ ಯಂತ್ರಗಳು, ಟಿಬಿ ಚಿಕಿತ್ಸಾ ಕೇಂದ್ರ, ಯೋಗ ಪ್ರಶಿಕ್ಷಣ ಕೇಂದ್ರ, ಆಂಬ್ಯುಲೆನ್ಸ್ ಸೇವೆ ಹಾಗೂ ಚಿಕಿತ್ಸಾ ಕೇಂದ್ರಗಳೆಲ್ಲ ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ.

ಅಂದು ತಂದೆ ತಾಯಿಯ ಒಬ್ಬನೇ ಮಗನಾದ ವಿದುರನ್ ಚಕ್ರವರ್ತಿಯ ಚಿಕಿತ್ಸೆಗಾಗಿ, ಬೋನ್ ಮ್ಯಾರೋವನ್ನು ಕೇವಲ ಒಡಹುಟ್ಟಿದವರಿಂದಲೇ ಪಡೆದು ವಿದುರನ್ ಗೆ ಟ್ರಾನ್ಸ್ ಪ್ಲ್ಯಾಂಟ್ ಮಾಡಬೇಕಾಗಿತ್ತು. ಆಗ ವಿದುರನ್ ನ ತಾಯಿಗೆ ಸಮಿತಿಯ ಸದನವೇ ತವರು ಮನೆಯಂತಾಗಿ ಒಂಭತ್ತು ತಿಂಗಳ ಬಳಿಕ ಆಕೆ ಹೆಣ್ಣು ಮಗುವೊಂದಕ್ಕೆ ಜನ್ಮ ನೀಡಿದಳು. ನಂತರವೇ ವಿದುರನ್ ನ ಚಿಕಿತ್ಸೆ ಪೂರ್ಣಗೊಂಡಿದ್ದು! ನಂತರದ ಸಮಸ್ಯೆ ಚಿಕಿತ್ಸೆಯನ್ನು ಮುಂದುವರಿಸಲು ಆಗುವ ಖರ್ಚಿನದಾಗಿತ್ತು. ಆಗ ಸಮಿತಿಯು ಮುಂದೆ ಬಂದು ಕೆಲ ದಾನಿಗಳ ಮುಖಾಂತರ ಒದಗಿಸಿದ 2 ಲಕ್ಷ ರೂಪಾಯಿಗಳ ಸಹಾಯದೊಂದಿಗೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿಯವರ 4 ಲಕ್ಷ ರೂಪಾಯಿಗಳ ಉದಾರ ಧನಸಹಾಯವೂ ಬಂದು ಸೇರಿತು.

ಇಂದು ಬೆಂಗಳೂರಿನ ಪ್ರತಿಷ್ಠಿತಕಂಪನಿಯಲ್ಲಿ ಸೀನಿಯರ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ವಿದುರನ್ ಚಕ್ರವರ್ತಿಯ ಬಾಲ್ಯದಲ್ಲಿ ನಡೆದ ಯಶಸ್ವೀ ಶಸ್ತ್ರಚಿಕಿತ್ಸೆಯನ್ನು ವೈದ್ಯಕೀಯ ಪವಾಡವೆಂಬಂತೆ ಇಂದಿಗೂ ಅಮೆರಿಕದ ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲಾಗುತ್ತಿದೆ. ಇದೆಲ್ಲಾ ಕೇವಲ ಟಾಟಾ ಮೆಮೋರಿಯಲ್ ಆಸ್ಪತ್ರೆಯ ವೈದ್ಯರ ಪರಿಶ್ರಮದಿಂದ ಮಾತ್ರವಲ್ಲದೆ ಸಮಿತಿಯ ಕಾರ್ಯಕರ್ತರ ಸ್ನೇಹ, ಸಹಕಾರ ಹಾಗೂ ಹಾರೈಕೆಗಳಿಂದ ಸಾಧ್ಯವಾಯಿತೆಂದು ವಿಕಾಸರು ನಂಬಿದ್ದಾರೆ. ಇಂತಹ ಅದೆಷ್ಟೋ ಮನಮುಟ್ಟುವ ಕಥೆಗಳಿಗೆ ರುಗ್ಣಸೇವಾ ಸದನವು ಕಾರಣವಾಗಿದೆ. ಆರ್.ಎಸ್.ಎಸ್. ಪ್ರಚಾರಕರಾಗಿದ್ದ ಸ್ವರ್ಗೀಯ ನಾನಾ ಪಾಲ್ಕರ್ ರವರ ನೆನಪಲ್ಲಿ ರಚಿತವಾದ ಈ ರುಗ್ಣಸೇವಾ ಸದನವು ಬಡ ರೋಗಿಗಳು ಮತ್ತು ಅವರ ಮನೆ ಮಂದಿಯ ಪಾಲಿಗೆ ದೇವಾಲಯವೇ ಆಗಿಹೋಗಿದೆ. ಇತರೆಡೆ ಸಾವಿರಾರು ರೂಪಾಯಿಗಳಷ್ಟು ಶುಲ್ಕವಿರುವ ಡಯಾಲಿಸಿಸನ್ನು ಇಲ್ಲಿ ಕೇವಲ 350 ರೂಪಾಯಿಗಳಲ್ಲಿ ಮಾಡಲಾಗುತ್ತಿದೆ. ಅಂತಹ 1,10,000 ಡಯಾಲಿಸಿಸುಗಳನ್ನು ಸದನದ ಡಯಾಲಿಸಿಸ್ ಸೆಂಟರಿನಲ್ಲಿ 2004ರಿಂದ 2017ನೇ ಇಸವಿಯವರೆಗಿನ ಅವಧಿಯಲ್ಲಿ ಮಾಡಲಾಗಿದೆ. ಈ ಸಮಿತಿಯು ಮಾಸಿಕ ಆರೂವರೆ ಲಕ್ಷ ರುಪಾಯಿಗಳನ್ನು ವಿವಿಧ ಚಿಕಿತ್ಸಾ ಕೇಂದ್ರಗಳಲ್ಲಿರುವ ಅನಾರೋಗ್ಯಪೀಡಿತರ ಶಸ್ತ್ರಚಿಕಿತ್ಸೆ ಇತ್ಯಾದಿಗಳಿಗಾಗಿ ವ್ಯಯಿಸುತ್ತಿದೆ. ವಾಡಿಯಾ ಆಸ್ಪತ್ರೆಯಲ್ಲಿ ಬಾಣಂತಿಯರಿಗೆ ಶುಲ್ಕರಹಿತ ಊಟದ ವ್ಯವಸ್ಥೆಯನ್ನೂ ಮಾಡಲಾಗಿದೆ. ಮುಂಬಯಿಯ ಯಾವೊಬ್ಬ ರೋಗಿಯೂ ಚಿಕಿತ್ಸೆಯಿಂದ ವಂಚಿತನಾಗದಿರು ವಂಥ ವ್ಯವಸ್ಥೆ ನಿರ್ಮಿಸುವುದು ಈ ಸಮಿತಿಯ ಗುರಿಯಾಗಿದೆ.

ಸಂಪರ್ಕ- ಕೃಷ್ಣ ಮಹಾದಿಕ್,
ಮೊಬೈಲ್- 9969612553

ಸಂಪಾದಕೀಯ

ಪ್ರಜೆಗಳ ಧ್ವನಿಗೆ ವೇದಿಕೆ

ರಾಜ್ಯದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಅವುಗಳಿಗೆ ತ್ವರಿತ ಪರಿಹಾರ ಒದಗಿಸುವ ಉದ್ದೇಶದಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ 'ಪ್ರಜಾಸೇವೆ' ಎಂಬ ಹೊಸ ಇಲಾಖೆಯನ್ನು ಸ್ಥಾಪಿಸಲು ಮುಂದಾಗಿರುವುದು ಗಮನಾರ್ಹ ಬೆಳವಣಿಗೆ. ಸರ್ಕಾರ ಮತ್ತು ಜನರ ನಡುವಿನ ಅಂತರವನ್ನು ಕಡಿಮೆ ಮಾಡುವ ಪ್ರಯತ್ನವಾಗಿ ಈ ನಿರ್ಧಾರವನ್ನು ನೋಡಬಹುದು. ಜನಸಾಮಾನ್ಯರು ತಮ್ಮ ಸಮಸ್ಯೆಗಳನ್ನು ಎಲ್ಲಿ, ಯಾರ ಮುಂದೆ ಮಂಡಿಸಬೇಕು ಎಂಬ ಗೊಂದಲವನ್ನು ನಿವಾರಿಸುವ ನಿಟ್ಟಿನಲ್ಲಿ ಈ ಇಲಾಖೆ ಮಹತ್ವದ ಪಾತ್ರ ವಹಿಸುವ ನಿರೀಕ್ಷೆಯಿದೆ.

ಸಾಮಾನ್ಯವಾಗಿ ಜನರು ಸರ್ಕಾರಿ ಕಚೇರಿಗಳ ಬಾಗಿಲು ತಟ್ಟಿದಾಗ, ಅವರ ಅರ್ಜಿಗಳು ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗಾವಣೆಯಾಗುತ್ತಲೇ ಇರುತ್ತವೆ. ಸಮಸ್ಯೆಗಳ ಪರಿಹಾರಕ್ಕೆ ತಿಂಗಳುಗಳು, ಕೆಲವೊಮ್ಮೆ ವರ್ಷಗಳೂ ಬೇಕಾಗುವ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕ ಕುಂದುಕೊರತೆಗಳ ನಿರ್ವಹಣೆಗೆ ಕೇಂದ್ರೀಕೃತ ವ್ಯವಸ್ಥೆ ರೂಪಿಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹವಾಗಿದೆ. ಸಚಿವ ಸಂಪುಟದಿಂದ ಅನುಮೋದನೆ ಪಡೆದಿರುವ 'ಪ್ರಜಾಸೇವೆ' ಇಲಾಖೆ ನಾಗರಿಕರ ಅಹವಾಲುಗಳನ್ನು ದಾಖಲಿಸುವುದಷ್ಟೇ ಅಲ್ಲ, ಅವುಗಳ ಪರಿಹಾರ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನೂ ವಹಿಸಿಕೊಳ್ಳಲಿದೆ ಎಂಬುದು ವಿಶೇಷ.

ಈ ಇಲಾಖೆಗೆ ಒಬ್ಬರು ಸಚಿವರು ಹಾಗೂ ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸುವ ಯೋಜನೆ ಸರ್ಕಾರದ ಗಂಭೀರತೆಯನ್ನು ತೋರಿಸುತ್ತದೆ. ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಸಚಿವರು ಮತ್ತು ಸ್ಥಳೀಯ ಶಾಸಕರು ವಾರಕ್ಕೊಮ್ಮೆ ಸಭೆ ನಡೆಸಿ, ಜನರ ಅಹವಾಲುಗಳನ್ನು ಆಲಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ. ಜನರು ರಾಜಧಾನಿಗೆ ಬರುವ ಅಗತ್ಯವಿಲ್ಲದೆ ತಮ್ಮ ಕ್ಷೇತ್ರದಲ್ಲೇ ಸಮಸ್ಯೆಗಳನ್ನು ಮಂಡಿಸಲು ಅವಕಾಶ ಸಿಗುವುದು ಈ ಯೋಜನೆಯ ಪ್ರಮುಖ ಅಂಶವಾಗಿದೆ. ಆದರೆ, ಯಾವುದೇ ಹೊಸ ವ್ಯವಸ್ಥೆಯ ಯಶಸ್ಸು ಅದರ ಘೋಷಣೆಯಲ್ಲಿ ಅಲ್ಲ, ಅನುಷ್ಠಾನದಲ್ಲಿ ಅಡಗಿದೆ. 'ಪ್ರಜಾಸೇವೆ' ಇಲಾಖೆ ಮತ್ತೊಂದು ಆಡಳಿತಾತ್ಮಕ ಹಂತವಾಗಿ ಪರಿಣಮಿಸದೆ, ನಿಜವಾಗಿಯೂ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ವೇದಿಕೆಯಾಗಬೇಕಿದೆ. ಸಾರ್ವಜನಿಕರು ಸಲ್ಲಿಸುವ ಅರ್ಜಿಗಳಿಗೆ ನಿಗದಿತ ಅವಧಿಯಲ್ಲಿ ಸ್ಪಂದನೆ ನೀಡುವುದು, ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು ಮತ್ತು ಪರಿಹಾರದ ಪ್ರಗತಿಯನ್ನು ಪಾರದರ್ಶಕವಾಗಿ ತಿಳಿಸುವುದು ಅತ್ಯಗತ್ಯ. ಇಲ್ಲವಾದರೆ ಜನರ ನಿರೀಕ್ಷೆಗಳು ಹುಸಿಯಾಗುವ ಸಾಧ್ಯತೆಯೂ ಇದೆ.

ಇತ್ತೀಚಿನ ದಿನಗಳಲ್ಲಿ ವಿವಿಧ ಬೇಡಿಕೆಗಳಿಗಾಗಿ ಪ್ರತಿಭಟನೆಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನ ಸೆಳೆದಿದೆ. ಪ್ರತಿಭಟನೆಗಳ ಹಿಂದಿರುವ ಅಸಮಾಧಾನವನ್ನು ಅರಿತು, ಸಮಸ್ಯೆಗಳಿಗೆ ಮುಂಚಿತವಾಗಿ ಸ್ಪಂದಿಸುವ ವ್ಯವಸ್ಥೆಯನ್ನು ರೂಪಿಸುವುದು ಉತ್ತಮ ಆಡಳಿತದ ಲಕ್ಷಣವಾಗಿದೆ. ಈ ದೃಷ್ಟಿಯಿಂದ 'ಪ್ರಜಾಸೇವೆ' ಇಲಾಖೆಯ ಪರಿಕಲ್ಪನೆ ಮಹತ್ವ ಪಡೆದುಕೊಳ್ಳುತ್ತದೆ.

ಒಟ್ಟಾರೆ, 'ಪ್ರಜಾಸೇವೆ' ಇಲಾಖೆ ಜನರ ಸಮಸ್ಯೆಗಳನ್ನು ನೇರವಾಗಿ ಸರ್ಕಾರದ ಗಮನಕ್ಕೆ ತಂದು, ಪರಿಹಾರದ ಪ್ರಕ್ರಿಯೆಯನ್ನು ವೇಗಗೊಳಿಸುವ ಸಾಮರ್ಥ್ಯ ಹೊಂದಿದೆ. ರಾಜಕೀಯ ಘೋಷಣೆಯಾಗಿ ಉಳಿಯದೆ, ಜನಸೇವೆಯ ಪರಿಣಾಮಕಾರಿ ಸಾಧನವಾಗಿ ರೂಪುಗೊಂಡರೆ, ಇದು ಕರ್ನಾಟಕದ ಆಡಳಿತ ವ್ಯವಸ್ಥೆಯಲ್ಲಿ ಜನಸ್ಪಂದನಕ್ಕೆ ಹೊಸ ಮಾನದಂಡವನ್ನು ಸ್ಥಾಪಿಸಬಹುದು.

'ಬಾಲ್ಕನೀಕರಣ'ದ ಅಪಾಯಗಳು

ಭಾರತವನ್ನು ದುರ್ಬಲಗೊಳಿಸಲು ಕಟಿಬದ್ಧರಾಗಿರುವವರು ವಿದೇಶಿ ಶಕ್ತಿಗಳೊಡನೆ ಕೈಜೋಡಿಸಿ, ದೇಶವನ್ನು ಬಾಲ್ಕನೀಕರಣಗೊಳಿಸುವ ಪಿತೂರಿ ಮಾಡುತ್ತಿದ್ದಾರೆ.

ಗುರುಪ್ರಸಾದ ಭಟ್ ಉಡುಪಿ

ಆಂತರಿಕ ಬಿರುಕುಗಳನ್ನು ಸೃಷ್ಟಿಸಿ, ತನ್ಮೂಲಕ ಸದೃಢ ರಾಷ್ಟ್ರಗಳನ್ನು ಹೇಗೆ ವಿಭಜಿಸಬಹುದು ಎಂದು ಲೆಕ್ಕಾಚಾರ ಮಾಡಿ, ಅದಕ್ಕೆ ಬೇಕಾಗುವ ಸೈದ್ಧಾಂತಿಕ ಮತ್ತು ಧನ ಸಮರ್ಥನೆ ನೀಡಿ ಅವುಗಳನ್ನು ಕೆಡವುದರ ಹಿಂದೆ ಅದೆಷ್ಟೋ ಅಗೋಚರ ಅಂತಾರಾಷ್ಟ್ರೀಯ ಶಕ್ತಿಗಳ ಹುನ್ನಾರವಿದೆ.

ವಿಶ್ವದ ಇತಿಹಾಸವನ್ನು ಗಮನಿಸಿದರೆ, ರಾಷ್ಟ್ರಗಳು ಯಾವಾಗಲೂ ವಿದೇಶಿ ಆಕ್ರಮಣಗಳಿಂದಮಾತ್ರ ವಿಭಜನೆಯಾಗುವುದಿಲ್ಲಎಂಬುದು ಸ್ಪಷ್ಟವಾಗುತ್ತದೆ. ಅನೇಕ ಬಾರಿ ಒಂದು ದೇಶವನ್ನು ದುರ್ಬಲಗೊಳಿಸುವ ಅತ್ಯಂತ ಪರಿಣಾಮಕಾರಿ ವಿಧಾನವೆಂದರೆ ಅದರೊಳಗೇ ಇರುವ ಬಿರುಕುಗಳನ್ನು ಬಳಸಿಕೊಳ್ಳುವುದು. ಭಾಷೆ, ಜನಾಂಗ, ಧರ್ಮ, ಮತ, ಪ್ರದೇಶ, ಬುಡಕಟ್ಟು, ವರ್ಗ ಅಥವಾ ಸೈದ್ಧಾಂತಿಕ ಭಿನ್ನತೆಗಳು ಕ್ರಮೇಣ ಒಂದು ಸದೃಢ ರಾಷ್ಟ್ರವನ್ನು ಸಣ್ಣ-ಸಣ್ಣ ರಾಜಕೀಯ ಘಟಕಗಳಾಗಿ ಒಡೆಯುವ ಸಾಧನಗಳಾಗುತ್ತವೆ. ಈ ಪ್ರಕ್ರಿಯೆಯನ್ನೇ ಬಾಲ್ಕನೀಕರಣ (Balkanization) ಎಂದು ಕರೆಯಲಾಗುತ್ತದೆ.

ಈ ಪದವು ಆಗ್ನೇಯ ಯುರೋಪಿನ 'ಬಾಲ್ಕನ್' ಪ್ರದೇಶದಿಂದ ಬಂದಿದೆ. 19ನೇ ಮತ್ತು 20ನೇ ಶತಮಾನಗಳಲ್ಲಿ ಅಲ್ಲಿ ಬೃಹತ್ ರಾಜಕೀಯ ಸಾಮ್ರಾಜ್ಯಗಳು ಮತ್ತು ಒಕ್ಕೂಟಗಳು ಅನೇಕ ಸಣ್ಣಸಣ್ಣ ರಾಷ್ಟ್ರಗಳಾಗಿ ವಿಭಜನೆಯಾದವು. ಇಂದು ಈ ಪದವನ್ನು ವಿಶಾಲ ಅರ್ಥದಲ್ಲಿ ಬಳಸಲಾಗುತ್ತಿದ್ದು, ಒಂದು ದೇಶವು ಅನೇಕ ಸಣ್ಣ, ಪರಸ್ಪರ ಸ್ಪರ್ಧಾತ್ಮಕ ಅಥವಾ ದುರ್ಬಲ ಘಟಕಗಳಾಗಿ ಒಡೆಯುವ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಯಾವುದೇ ಒಂದು ರಾಷ್ಟ್ರವನ್ನು ವಿಭಜನೆ ಮಾಡುವ ಮೊದಲು ಅಲ್ಲಿನ ಜನತೆಯ ಮನಸ್ಸಿನಲ್ಲಿ ವಿಷಬೀಜವನ್ನು ಬಿತ್ತಲಾಗುತ್ತದೆ, ಒಂದಾಗಿ ಬಾಳುವ ಸಮಾಜವನ್ನು ಜಾತಿ, ಧರ್ಮ-ಮತ, ಭಾಷೆ, ಬಲ್ಲಿದ-ಬಡವ ಇತ್ಯಾದಿ ಕಾರಣಗಳನ್ನೊಡ್ಡಿ ಒಡೆಯಲಾಗುತ್ತದೆ. ಸಮಾಜದ ಒಂದು ನಿರ್ದಿಷ್ಟ ಗುಂಪಿನಲ್ಲಿ 'ನಮ್ಮನ್ನು ಬಲಿಪಶು ಮಾಡಲಾಗಿದೆ' (Victimisation ಅಥವಾ ಶೋಷಣೆಗೆ ಒಳಪಡಿಸಲಾಗಿದೆ) ಎಂಬ ಕಹಿ ಭಾವನೆಯನ್ನು ಹುಟ್ಟುಹಾಕುವುದು, ಅವರನ್ನು ಸಮಾಜದ ಇತರರಿಂದ ಬೇರ್ಪಡಿಸುವ, ಮತ್ತು ಆ ಮೂಲಕ ರಾಜಕೀಯ ಲಾಭಕ್ಕಾಗಿ ಆ ಭಿನ್ನತೆಯನ್ನು ಬಳಸಿಕೊಳ್ಳುವ ಪ್ರಕ್ರಿಯೆ ವಿಭಜನೆಯ ಮೊದಲ ಹೆಜ್ಜೆಯಾಗಿದೆ.

ಜಿನ್ನಾ ನಾವು ಮುಸ್ಲಿಮರು, ನಮಗೆ ಹಿಂದೂಗಳ ಜೊತೆಗೆ ಇರಲು ಸಾಧ್ಯವಿಲ್ಲ ನಮಗೆ ಪ್ರತ್ಯೇಕ ದೇಶ ಬೇಕು ಎಂದು ಪಟ್ಟು ಹಿಡಿದು, 1926 ರಲ್ಲಿ ಮುಸ್ಲಿಂ ಲೀಗ್ ಬಿತ್ತಿದ್ದ ವಿಷಬೀಜ 1947ರ ಹೊತ್ತಿಗೆ ಹೆಮ್ಮರವಾಗಿ, ಕೊನೆಗೆ ಭಾರತ ಇಬ್ಭಾಗವಾಯಿತು. ಈ ವಿಭಜನೆ ಮಾಡುವ ಪ್ರಕ್ರಿಯೆ 1947 ಕ್ಕೇ ಕೊನೆಯಾಗಲಿಲ್ಲ. ಸ್ವಾತಂತ್ರ್ಯ ಲಭಿಸಿ 78 ವರ್ಷಗಳು ಕಳೆದರೂ ದೇಶದ ಒಳ-ಹೊರಗಿನ ಶತ್ರುಗಳು ದೇಶವನ್ನು ದುರ್ಬಲಗೊಳಿಸಲು, ಅರಾಜಕತೆ ಸೃಷ್ಟಿಸಲು ಇಂತಹ 'ಬಾಲ್ಕನೀಕರಣ' ಸಬೂಬುಗಳನ್ನು ನಿರಂತರವಾಗಿ ಹುಟ್ಟುಹಾಕುತ್ತಲೇ ಇರುತ್ತಾರೆ.

ವಿಶ್ವಾದ್ಯಂತ ಇಂತಹ ಕೆಲವೊಂದು ಬಾಲ್ಕನೀಕರಣಗಳು ನಡೆದವು. ಉದಾಹರಣೆಗೆ ಪೂರ್ವ ಐರೋಪ್ಯ ಭಾಗದಲ್ಲಿದ್ದ ಯುಗೊಸ್ಲಾವಿಯ ಮತ್ತು ಜೆಕೊಸ್ಲೊವಾಕಿಯಾ ದೇಶಗಳು. ಇವುಗಳು ಅದೆಷ್ಟು ಬಾರಿ ತುಂಡರಿಸಲ್ಪಟ್ಟಿದೆ ಎಂದರೆ, ಅದರ ಮೂಲಸ್ವರೂಪವೇ ಊಹಿಸಿಕೊಳ್ಳಲಾಗದಷ್ಟು ಬದಲಾಗಿವೆ. ಒಂದಾಗಿ ಬಲಿಷ್ಠವಾಗಿದ್ದ ದೇಶ, ಬಾಲ್ಕನೀಕರಣಕ್ಕೊಳಪಟ್ಟು, ಪರಸ್ಪರ ಕಚ್ಚಾಡಿಕೊಂಡು, ಈಗ ಪರಾವಲಂಬಿಗಳಾಗಿವೆ.

ಬಾಲ್ಕನೀಕರಣ ಹೇಗೆ ನಡೆಯುತ್ತದೆ?

ಒಂದು ದೇಶವು ಒಂದೇ ದಿನದಲ್ಲಿ ವಿಭಜನೆಯಾಗುವುದಿಲ್ಲ. ಈ ಪ್ರಕ್ರಿಯೆ ಸಾಮಾನ್ಯವಾಗಿ ಹಲವು ಹಂತಗಳಲ್ಲಿ ನಡೆಯುತ್ತದೆ. ಮೊದಲಿಗೆ, ಈಗಾಗಲೇ ಅಸ್ತಿತ್ವದಲ್ಲಿರುವ ಸಾಮಾಜಿಕ, ಭಾಷಿಕ, ಧಾರ್ಮಿಕ ಅಥವಾ ಜನಾಂಗೀಯ ಭಿನ್ನತೆಗಳನ್ನು ಹೆಚ್ಚಾಗಿ ಪ್ರಚೋದಿಸಲಾಗುತ್ತದೆ. ದೀರ್ಘಕಾಲ ಒಟ್ಟಾಗಿ ಬದುಕಿದ್ದ ಜನರು ತಮ್ಮನ್ನು ಮೊದಲು ರಾಷ್ಟ್ರದ ಪ್ರಜೆಗಳೆಂದು ಅಲ್ಲ, ಬದಲಾಗಿ ತಮ್ಮ ಸಣ್ಣ ಗುಂಪಿನ ಸದಸ್ಯರೆಂದು ಗುರುತಿಸಿಕೊಳ್ಳಲು ಆರಂಭಿಸುತ್ತಾರೆ. ಉದಾಹರಣೆಗೆ: ಅಹಿಂದ, ಬ್ರಾಹ್ಮಣ, ದ್ರಾವಿಡ-ಆರ್ಯ, ಅಲ್ಪ-ಸಂಖ್ಯಾತರು, ಮತಾಂತರವಾದಿಗಳು, ಭಾಷಾಂಧತೆ, ಇತ್ಯಾದಿ. ಒಂದು ಬಣಕ್ಕೆ ಶಸ್ತ್ರಾಸ್ತ್ರ ನೀಡಿ ಇನ್ನೊಂದು ಬಣದ ವಿರುದ್ಧ ಹಿಂಸಾಚಾರಕ್ಕೆ ಇಂಬು ನೀಡಲಾಗುತ್ತದೆ. ಅವರು ಪ್ರತಿಕ್ರಿಯಿಸಿದಾಗ, ಗಲಭೆ ಉಲ್ಬಣಗೊಳ್ಳುತ್ತದೆ. ಆ ಬೆಂಕಿಯಲ್ಲಿ ಆಂತರಿಕ ಶತ್ರುಗಳು ಮೈ ಕಾಯಿಸಿಕೊಳ್ಳುವುದಲ್ಲದೆ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಜನಸಾಮಾನ್ಯರ ಜೀವನ ಅಸ್ತವ್ಯಸ್ತವಾಗಿ, ಸಮಾಜ ಅಲ್ಲೋಲಕಲ್ಲೋಲವಾಗುತ್ತದೆ.

ಎರಡನೆಯದಾಗಿ, ಐತಿಹಾಸಿಕ ಅನ್ಯಾಯಗಳು, ಅಸಮಾಧಾನಗಳು ಮತ್ತು ಪ್ರಾದೇಶಿಕ ಭಾವನೆಗಳನ್ನು ಆಧರಿಸಿದ ರಾಜಕೀಯ ಚಳುವಳಿಗಳು ಉದಯಿಸುತ್ತವೆ. ಇವು ಸ್ವಾಯತ್ತತೆ, ವಿಶೇಷ ಹಕ್ಕುಗಳು, ಪ್ರತ್ಯೇಕ ಆಡಳಿತ ಅಥವಾ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಗಳನ್ನು ಮುಂದಿಡುತ್ತವೆ.

ಮೂರನೆಯದಾಗಿ, ರಾಷ್ಟ್ರೀಯ ಸಂಸ್ಥೆಗಳ ಮೇಲಿನ ನಂಬಿಕೆ ಕುಗ್ಗುವಂತೆ ಜನರ 'ಬ್ರೇನ್‌ವಾಶಿಂಗ್' ಮಾಡುವುದು. ಜನರು ರಾಷ್ಟ್ರದ ನಾಯಕರಿಗಿಂತ ತಮ್ಮ ಸ್ಥಾನೀಯ, ಭಾಷೀಯ, ವರ್ಗೀಯ, ಮತೀಯ, ಪ್ರಾದೇಶಿಕ, ಧಾರ್ಮಿಕ, ಅಥವಾ ಜನಾಂಗೀಯ ನಾಯಕರೊಂದಿಗೆ ಹೆಚ್ಚು ಗುರುತಿಸಿಕೊಳ್ಳಲು ಆರಂಭಿಸುತ್ತಾರೆ. ಮತಭೇದದಿಂದ ಪ್ರಾರಂಭಗೊಳ್ಳುವ ಈ ಪ್ರಕ್ರಿಯೆ ಮನಭೇದಕ್ಕೆ ತಿರುಗಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ: ವಿಫಲಗೊಂಡ ವೋಟ್-ಚೋರಿ ಆಪಾದನೆ, ಸಾಂವಿಧಾನಿಕ ಕೇಂದ್ರೀಯ ಸ್ವಾಯತ್ತ ಸಂಸ್ಥೆಗಳ ಮೇಲೆ ಆರೋಪ, ಕಲ್ಪಿತ ಕತೆಗಳ ಸೃಷ್ಟಿ ಮತ್ತು ಸುಳ್ಳನ್ನೇ ನಿಜವೆಂದು ತಿಳಿಸುವ ವ್ಯಾಪಾರೀ-ಮಾಧ್ಯಮಗಳ ಮೂಲಕ ಮಾಡುವ ವ್ಯಾಪಕ ಪ್ರಚಾರ.

ಕೊನೆಯ ಹಂತದಲ್ಲಿ ರಾಜಕೀಯ ವಿಭಜನೆ ಸಂಭವಿಸುತ್ತದೆ. ಇದು ಕೆಲವೊಮ್ಮೆ ಮಾತುಕತೆ ಮತ್ತು ಒಪ್ಪಂದಗಳ ಮೂಲಕ ಶಾಂತಿಯುತವಾಗಿ ನಡೆಯಬಹುದು; ಮತ್ತೆ ಕೆಲವೊಮ್ಮೆ ಹಿಂಸಾಚಾರ, ಗಲಭೆಗಳು ಅಥವಾ ಆಂತರಿಕ ಯುದ್ಧದ ಸ್ವರೂಪವನ್ನು ಪಡೆಯಬಹುದು.

ಯುಗೋಸ್ಲಾವಿಯಾದ ಉದಾಹರಣೆ

ಆಧುನಿಕ ಯುಗದಲ್ಲಿ ಬಾಲ್ಕನೀಕರಣದ ಅತ್ಯಂತ ಸ್ಪಷ್ಟ ಉದಾಹರಣೆ ಯುಗೋಸ್ಲಾವಿಯಾ ರಾಷ್ಟ್ರ. ದ್ವಿತೀಯ ಮಹಾಯುದ್ಧದ ನಂತರ ಯುಗೋಸ್ಲಾವಿಯಾ ಹಲವು ಗಣರಾಜ್ಯಗಳು ಮತ್ತು ವೈವಿಧ್ಯಮಯ ಸಮಾಜ ಮತ್ತು ಜನಾಂಗಗಳನ್ನು ಒಳಗೊಂಡ ಒಂದು ಒಕ್ಕೂಟ ರಾಷ್ಟ್ರವಾಗಿತ್ತು. ಹೊರಗೆ ಅದು ಏಕೀಕೃತ ದೇಶದಂತೆ ಕಂಡರೂ, ಅದರೊಳಗೆ ಜನಾಂಗೀಯ, ಧಾರ್ಮಿಕ ಮತ್ತು ಐತಿಹಾಸಿಕ ಭಿನ್ನತೆಗಳು ಜೀವಂತವಾಗಿಯೇ ಇದ್ದವು. ಅವೆಲ್ಲವನ್ನು ಒಂದು ಸೂತ್ರದಲ್ಲಿ ಕಟ್ಟುವ ವ್ಯವಸ್ಥೆ - ''ನಾವೆಲ್ಲ ಒಂದು'' ಎನ್ನುವ ಅಚಲ ದೇಶಪ್ರೇಮ - ಅಲ್ಲಿ ಪ್ರಾಯಶಃ ಉತ್ಕಟವಾಗಿರಲಿಲ್ಲ. ಅದೇ ಅದರ ಪ್ರಮುಖ ದೌರ್ಬಲ್ಯವೆಂದು ಸಾಬೀತಾಯಿತು.

20ನೇ ಶತಮಾನದ ಕೊನೆಯ ಭಾಗದಲ್ಲಿ ಕೇಂದ್ರೀಯ ಸರ್ಕಾರದ ಪ್ರಭಾವ ಮತ್ತು ಹಿಡಿತ ದುರ್ಬಲವಾಗುತ್ತಿದ್ದಂತೆ, ಅನೇಕ ಪ್ರಾದೇಶಿಕ ರಾಷ್ಟ್ರೀಯತೆಯ ಚಳುವಳಿಗಳು ಬಲಗೊಂಡವು. 1990ರ ದಶಕದಿಂದ ಆರಂಭವಾಗಿ ಯುಗೋಸ್ಲಾವಿಯಾ ಕ್ರಮೇಣ ಅನೇಕ ರಾಷ್ಟ್ರಗಳಾಗಿ ವಿಭಜನೆಯಾಯಿತು. ಯುದ್ಧ, ರಕ್ತಪಾತ, ವೈಮನಸ್ಯಗಳ ನಡುವೆ ಒಂದೇ ರಾಷ್ಟ್ರವಾಗಿದ್ದ ಯುಗೋಸ್ಲಾವಿಯಾ ಈಗ ಹರಿದು ಹಂಚಿ ಅನೇಕ ಸ್ವತಂತ್ರ ದೇಶಗಳಾಗಿವೆ. ಸ್ಲೋವೇನಿಯಾ, ಕ್ರೊಯೇಷಿಯಾ, ಬೋಸ್ನಿಯಾ-ಹರ್ಜೆಗೋವಿನಾ, ಉತ್ತರ ಮ್ಯಾಸಿಡೋನಿಯಾ, ಸರ್ಬಿಯಾ, ಮಾಂಟೆನೆಗ್ರೊ ಹಾಗೂ ಕೊಸೊವೊ ಎಂಬ ಏಳು ಪ್ರತ್ಯೇಕ ಘಟಕಗಳಾಗಿ ಮಾರ್ಪಟ್ಟಿತು! ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ನಖಶಿಕಾಂತ ಅಲರ್ಜಿ.

ಪರಿಣಾಮ

ಈ ಬಾಲ್ಕನೀಕರಣ ಪ್ರಕ್ರಿಯೆಯಲ್ಲಿ ಅಸಂಖ್ಯ ಆಂತರಿಕ ಯುದ್ಧಗಳು, ಜನಾಂಗೀಯ ಘರ್ಷಣೆಗಳು, ಆರ್ಥಿಕ ಕುಸಿತ ಮತ್ತು ಎಲ್ಲದಕ್ಕಿಂತ ಮುಖ್ಯವಾಗಿ ಅಸಂಖ್ಯ ಅಮಾಯಕ ಪ್ರಜೆಗಳ ಮಾರಣಹೋಮ ಜರುಗಿತು. ಶತಮಾನಗಳಿಂದ ನೆಲೆಸಿದ್ದ ಜನರು ಭಾಷೆ, ಜನಾಂಗ, ಮತಗಳ ಆಧಾರದ ಮೇಲೆ ಗುಳೆ ಎದ್ದು ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು. ಸುಮಾರು 150,000 ಜನರು ಸಾವಿಗೀಡಾದರು. ಪುರುಷರು ಯುದ್ಧ ಘರ್ಷಣೆಯಲ್ಲಿ ಮಡಿದರೆ, ಸ್ತ್ರೀಯರು ಮತ್ತು ಮಕ್ಕಳು ಅನಾಥರಾದರು. ರೋಗರುಜಿನಗಳು ಉಲ್ಬಣಗೊಂಡವು. ಒಮ್ಮೆ ಪ್ರಭಾವಶಾಲಿಯಾಗಿದ್ದ ಯುಗೋಸ್ಲಾವಿಯಾದ ಭೌಗೋಳಿಕ ಮತ್ತು ರಾಜಕೀಯ ಶಕ್ತಿ ಸಂಪೂರ್ಣವಾಗಿ ನಾಶವಾಯಿತು. ಇಂದು ಬಲಹೀನ ತುಂಡು ರಾಷ್ಟ್ರಗಳಾಗಿ, ಇತರ ಹಿರಿಯಣ್ಣರ ಮರ್ಜಿಯಂತೆ ನಡೆಯಬೇಕಾದ ದುಸ್ಥಿತಿ ಬಂದೊದಗಿದೆ.

ಅಂತೆಯೇ, ಜೆಕೊಸ್ಲೋವಾಕಿಯಾದ ಕಥೆಕೂಡ. ಯುಗೋಸ್ಲಾವಿಯಾದಂತೆ ಹಿಂಸಾಚಾರದ ಮೂಲಕ ಅಲ್ಲ, ಶಾಂತಿಯುತ ಮಾತುಕತೆಗಳ ಮೂಲಕ ಈ ದೇಶ ವಿಭಜನೆಯಾಯಿತು. ಸೋವಿಯೆತ್ ಕಮ್ಯುನಿಸ್ಟ್ ಆಡಳಿತದ ಪತನದ ನಂತರ ಜೆಕ್ ಮತ್ತು ಸ್ಲೋವಾಕ್ ಜನಾಂಗದ ನಾಯಕರು ಪ್ರತ್ಯೇಕ ರಾಷ್ಟ್ರಗಳಾಗಿರುವುದೇ ತಮ್ಮ ಜನರ ಹಿತಕ್ಕೆ ಅನುಕೂಲಕರ ಎಂದು ನಿರ್ಧರಿಸಿದರು. 1993 ರಲ್ಲಿ ಜೆಕೊಸ್ಲೋವಾಕಿಯಾ ಶಾಂತಿಯುತವಾಗಿ ಎರಡು ರಾಷ್ಟ್ರಗಳಾಗಿ ವಿಭಜನೆಯಾಯಿತು- ಜೆಕ್ ಗಣರಾಜ್ಯ ಮತ್ತು ಸ್ಲೋವಾಕಿಯಾ. ಈ ಘಟನೆಯನ್ನು 'ಮಕಮಲ್ಲು ವಿಚ್ಛೇದನ' (Velvet Divorce) ಎಂದು ಹೆಸರಿಸಿ, ಬಾಲ್ಕನೀಕರಣವನ್ನು ಪ್ರಚೋದಿಸಿ ಸಮರ್ಥಿಸುವ ವಿಶ್ವನಾಯಕರು ಚಪ್ಪಾಳೆತಟ್ಟಿದರು.

ವಿಭಜನೆಗೆ ಸಾಮಾನ್ಯವಾಗಿ ಬಳಸಲಾಗುವ 6 ಪ್ರಮುಖ ಬಿರುಕುಗಳು

ಜನಾಂಗೀಯ ಭಿನ್ನತೆ, ಧಾರ್ಮಿಕ ಭಿನ್ನತೆ, ಭಾಷಾಧಾರಿತ ಅಸ್ಮಿತೆ, ಪ್ರಾದೇಶಿಕ ಆರ್ಥಿಕ ಅಸಮಾನತೆ, ಐತಿಹಾಸಿಕ ಅಸಮಾಧಾನಗಳು, ಬುಡಕಟ್ಟು ಅಥವಾ ಸಮುದಾಯ ಗುರುತು ಮತ್ತು ಸೈದ್ಧಾಂತಿಕ ಧ್ರುವೀಕರಣ.

ಇವುಗಳಲ್ಲಿ, ಯಾವುದಾದರೂ ಮೂರ್ನಾಲ್ಕು ಬಿರುಕುಗಳು ರಾಷ್ಟ್ರೀಯ ಗುರುತಿಗಿಂತ ಪ್ರಬಲವಾಗಲು ಆರಂಭಿಸಿದಾಗ, ರಾಷ್ಟ್ರದ ಏಕತೆಗೆ ದುಷ್ಪರಿಣಾಮ ಬೀರುತ್ತದೆ. ಅದರ ಆರ್ಥಿಕ ಸಂಪನ್ಮೂಲಗಳು, ವಿಶಾಲ ಮಾರುಕಟ್ಟೆ, ಬಲಿಷ್ಠ ಸೇನೆ ಮತ್ತು ಹೆಚ್ಚಿನ ರಾಜತಾಂತ್ರಿಕ ಪ್ರಭಾವಗಳು ಕ್ರಮೇಣ ದುರ್ಬಲವಾಗುತ್ತವೆ. ಒಂದು ಬಲಿಷ್ಠ ರಾಷ್ಟ್ರ ಅನೇಕ ಸಣ್ಣ ಘಟಕಗಳಾಗಿ ವಿಭಜನೆಯಾದರೆ, ಅದರ ಒಟ್ಟಾರೆ ಶಕ್ತಿ ಕುಗ್ಗುತ್ತದೆ. ತುಂಡರಿಸಲ್ಪಟ್ಟ ಸಣ್ಣ ಸಣ್ಣ ರಾಷ್ಟ್ರಗಳು ಸೇನಾ ಸುರಕ್ಷತೆ, ಆಂತರಿಕ ಭದ್ರತೆ, ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಹೂಡಿಕೆಗಳಿಗಾಗಿ ಹೊರಗಿನ ಶಕ್ತಿಗಳ ಪರಾವಲಂಬಿತವಾಗುವ ಸಾಧ್ಯತೆ ಹೆಚ್ಚುತ್ತದೆ. ಈ ಕಾರಣದಿಂದಲೇ ರಾಷ್ಟ್ರೀಯ ಏಕತೆ ಮತ್ತು ಸಾಮೂಹಿಕ ಗುರುತನ್ನು ಅನೇಕ ರಾಜಕೀಯ ಚಿಂತಕರು ರಾಷ್ಟ್ರದ ದೀರ್ಘಕಾಲೀನ ಶಕ್ತಿಯ ಮೂಲವೆಂದು ಪರಿಗಣಿಸುತ್ತಾರೆ.

ಬಾಲ್ಕನೀಕರಣಗೊಂಡ ಈ ಎರಡೂ ಐರೋಪ್ಯ ರಾಷ್ಟ್ರಗಳು ಭಾರತಕ್ಕೆ ಒಂದು ಪ್ರಮುಖ ಪಾಠವನ್ನು ಕಲಿಸುತ್ತವೆ. ದೇಶವನ್ನು ಆಳುವ ಪಕ್ಷವನ್ನು ವಿರೋಧಿಸುತ್ತಲೇ, ಅದರ ನಾಯಕ ಹಾಗೂ ಪ್ರಧಾನಮಂತ್ರಿಯನ್ನು ದ್ವೇಷಿಸುತ್ತಲೇ, ಬಹುತೇಕ ಎಲ್ಲ ರಾಜಕೀಯ ವಿರೋಧ ಪಕ್ಷಗಳು ಇಂದು ಹಿಂದೂ ವಿರೋಧಿ ಹಾಗೂ ದೇಶ ವಿರೋಧಿ ಕಾರ್ಯವನ್ನೆಸಗಲು ಹಿಂಜರಿಯುತ್ತಿಲ್ಲ.

ಭಾರತವನ್ನು ದುರ್ಬಲಗೊಳಿಸಲು ಕಂಕಣಬದ್ಧರಾಗಿರುವ ಇವರು ವಿದೇಶಿ ಶಕ್ತಿಗಳೊಡನೆ ಖುಲ್ಲಂಖುಲ್ಲಾ ಕೈಜೋಡಿಸಿ, ದೇಶವನ್ನು ಬಾಲ್ಕನೀಕರಣದತ್ತ ಸಾಗಿಸಬೇಕೆನ್ನುವ ಪಿತೂರಿ ನಿರಂತರವಾಗಿ ಮಾಡುತ್ತಿದ್ದಾರೆ. ಇದು ದೇಶದ ಮೇಲೆ ದುಷ್ಪರಿಣಾಮ ಬೀರದಂತೆ ತಡೆಯಲು ಪ್ರತಿಯೊಬ್ಬ ದೇಶಭಕ್ತನೂ ಎಚ್ಚರಿಕೆಯಿಂದಿರಬೇಕು.

ಆಂತರಿಕ ಸಾಮರಸ್ಯವೇ ರಾಷ್ಟ್ರದ ಬಲ. ಕೇವಲ ಗಡಿಗಳಲ್ಲಿ ಮಾತ್ರ ಇರುವುದಿಲ್ಲ; ಅದರ ಜನರನ್ನು ಒಗ್ಗೂಡಿಸುವ ಸಾಮೂಹಿಕ ಚೇತನ ಮತ್ತು ಏಕತೆಯಲ್ಲಿಯೂ ಅಡಗಿದೆ. ಇಂದು ಭಾರತದಲ್ಲಿ ಯಾವುದಾದರೂ ಒಂದು ಸಂಸ್ಥೆ ''ನಾವೆಲ್ಲ ಒಂದು'' - ಎಂಬ ಕಾರ್ಯವನ್ನು ನಿಸ್ವಾರ್ಥತೆಯಿಂದ ನಿರ್ವಹಿಸುತ್ತೆಂದರೆ, ಅದು ರಾಷ್ಟ್ರೀಯ ಸ್ವಯಂಸೇವಕ ಸಂಘ ಮಾತ್ರ.

ಹರೆಯದವರು ಮತ್ತು ಲೈಂಗಿಕ ವಿಜ್ಞಾನ -2

ನಮ್ಮ ಸಮಾಜದಲ್ಲಿ ಲೈಂಗಿಕತೆಯ ಅರಿವು ಮೂಡಿಸುವ ಪದ್ಧತಿ ಮೂರನೇ ಶತಮಾನದಲ್ಲೇ ರೂಢಿಯಲ್ಲಿತ್ತು. ಇದಕ್ಕೆ ಉದಾಹರಣೆ ವಾತ್ಸಾಯನ ಅವರ ಕಾಮಸೂತ್ರ.

ತಾರುಣ್ಯ ತಲ್ಲಣ

ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಹಿಂದಿನ ಲೇಖನದಲ್ಲಿ ಹರೆಯದವರಿಗೆ ಲೈಂಗಿಕ ವಿಜ್ಞಾನ ಅವಶ್ಯವೇ ಎಂಬ ಚರ್ಚೆಗಳು ನಡೆದ ಕುರಿತು ವಿವರಿಸಿದೆ. ಪ್ರಸ್ತುತ ಹರೆಯದವರಿಗೆ ಲೈಂಗಿಕ ವಿಜ್ಞಾನ ಅಗತ್ಯ ಎಂಬುದನ್ನು ಮನಗಂಡ ತಜ್ಞರು ಲೈಂಗಿಕ ವಿಜ್ಞಾನದ ವಿಷಯವನ್ನು ಪಠ್ಯಪುಸ್ತಕದಲ್ಲಿ ಸೇರಿಸಿ ಅದಕ್ಕೆ 'ಲೈಂಗಿಕ ಶಿಕ್ಷಣ' ಎಂದು ಕರೆಯಲಾಯಿತು. ಲೈಂಗಿಕ ಶಿಕ್ಷಣಕ್ಕೆ 'ಆರೋಗ್ಯ ಲೈಂಗಿಕ ಶಿಕ್ಷಣ', 'ಲೈಂಗಿಕತೆ ಮತ್ತು ಸಂಬಂಧಗಳು' ಅಥವಾ 'ಲೈಂಗಿಕತೆ ಮತ್ತು ಸಂತಾನೋತ್ಪತ್ತಿ ವ್ಯವಸ್ಥೆ' ಎಂದೂ ಕರೆಯುತ್ತಾರೆ. ಓದುಗರಿಗೆ ಇಷ್ಟವಾಗುತ್ತದೆಂದು 'ಆರೋಗ್ಯ ಲೈಂಗಿಕ ಶಿಕ್ಷಣ' ಎಂದು ಬರೆಯುತ್ತಿದ್ದೇನೆ. ಲೈಂಗಿಕ ಶಿಕ್ಷಣದ ಪರಿಕಲ್ಪನೆಯು ಲೈಂಗಿಕತೆಯ ಹಲವು ಆಯಾಮಗಳನ್ನು ಹೊಂದಿರುತ್ತದೆ. ಆರೋಗ್ಯ ಲೈಂಗಿಕತೆ ಕುರಿತು ಸರಿಯಾದ ಜ್ಞಾನ ಗಳಿಸುವುದು, ಸಕಾರಾತ್ಮಕ ಮನಸ್ಥಿತಿಯನ್ನು ಬೆಳೆಸಿಕೊಳ್ಳುವುದು ಮತ್ತು ಹರೆಯದವರಿಗೆ ಸ್ಪಷ್ಟಪಡಿಸುವುದು ಅಗತ್ಯ. ಲಿಂಗಭೇದವನ್ನು ಅರಿತುಕೊಂಡು ಮಾನವೀಯ ಸಂಬಂಧದ ಕುರಿತು ಮಾಹಿತಿ ನೀಡಬೇಕು. ನಿಕಟ ಪುರುಷ ಸ್ತ್ರೀ ಲಿಂಗದ ಸಂಬಂಧಗಳು ಮತ್ತು ಪಾತ್ರಗಳನ್ನು ಕುರಿತು, ಗರ್ಭನಿರೋಧಕ ವಿಧಗಳ ಕುರಿತಾದ ಅರಿವು, ಹೆಚ್.ಐ.ವಿ. ಮತ್ತು ಲೈಂಗಿಕ ಸೋಂಕು ರೋಗಗಳ ತಡೆಗಟ್ಟುವಿಕೆ ಕುರಿತಾದ ಅಂಶಗಳೇ ಆರೋಗ್ಯ ಲೈಂಗಿಕ ಶಿಕ್ಷಣದ ಪರಿಕಲ್ಪನೆ. ಈ ಅಂಶಗಳ ಅರಿವನ್ನು ಮೂಡಿಸಿದಾಗ ಹರೆಯದವರು ಆರೋಗ್ಯಕರ ಲೈಂಗಿಕ ಜ್ಞಾನಗಳಿಸಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಶಕ್ತರಾಗುತ್ತಾರೆ. ಭವಿಷ್ಯದಲ್ಲಿ ಆತ್ಮವಿಶ್ವಾಸದಿಂದ ಸಾಧನೆಗೈಯಲು ಮತ್ತು ಮಾನವೀಯ ಸಂಬಂಧಗಳನ್ನು ರೂಢಿಸಿಕೊಂಡು ಆತ್ಮೀಯ ದಾಂಪತ್ಯ ಜೀವನ ಸಾಧಿಸುವುದರಲ್ಲಿ ಯಶಸ್ವಿಯಾಗಬೇಕೆಂಬುದೇ ಲೈಂಗಿಕ ಆರೋಗ್ಯ ಶಿಕ್ಷಣ.


ವಾತ್ಸಾಯನ

ಇನ್ನೊಂದು ಅಂಶವನ್ನು ಓದುಗರು ಗಮನಿಸಬೇಕು. 'ಆರೋಗ್ಯ ಲೈಂಗಿಕ ಶಿಕ್ಷಣ'ವನ್ನು ಈಗ 'ಕುಟುಂಬ ಜೀವನ ಶಿಕ್ಷಣ'(Family life education) ಎಂದೂ ಕರೆಯುತ್ತಾರೆ. ಕುಟುಂಬ ಮತ್ತು ಸಮಾಜದ ಕುರಿತು, ಮೌಲ್ಯಗಳು, ಧೋರಣೆಗಳು ಮತ್ತು ಆರೋಗ್ಯಕರ ನಡವಳಿಕೆಗಳ ಕುರಿತಾದ ವ್ಯಕ್ತಿತ್ವವನ್ನು ರೂಪಿಸುವುದು ಲೈಂಗಿಕ ಶಿಕ್ಷಣದ ಮತ್ತೊಂದು ಉದ್ದೇಶ. ಲೈಂಗಿಕ ಶಿಕ್ಷಣವು ಹರೆಯದವರಿಗೆ, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅವರ ಜವಾಬ್ದಾರಿಗಳು, ಸಾಮಾಜಿಕ ಧೋರಣೆಗಳು, ಕುಟುಂಬ ಮತ್ತು ಸಮಾಜದ ನಂಟು, ಗಂಡು ಹೆಣ್ಣಿನ ಪರಸ್ಪರ ಸಂಬಂಧಗಳು ಹೀಗೆ ಹಲವಾರು ಅಂಶಗಳನ್ನು 'ಕುಟುಂಬ ಜೀವನ ಶಿಕ್ಷಣ'ವು ತಿಳಿಸುತ್ತದೆ.

ಆರೋಗ್ಯ ಲೈಂಗಿಕ ಶಿಕ್ಷಣದ ಅರಿವನ್ನು ಹರೆಯದವರಲ್ಲಿ ಮೂಡಿಸುವುದರಿಂದ, ಲೈಂಗಿಕ ಸಂಬಂಧಗಳು, ಲೈಂಗಿಕತೆಗೆ ಅವಶ್ಯವಿರುವ ಕೌಶಲಗಳು, ಭವಿಷ್ಯದ ಲೈಂಗಿಕ ಜೀವನದ ಕುರಿತು ತೆಗೆದುಕೊಳ್ಳಬೇಕಾದ ತೀರ್ಮಾನಗಳು, ಭವಿಷ್ಯದಲ್ಲಿ ಸುಖೀ ದಾಂಪತ್ಯ, ಸಂತಾನೋತ್ಪತ್ತಿ ವ್ಯವಸ್ಥೆ, ಮತ್ತು ಸಾಮಾಜಿಕ ಬದ್ಧತೆ ಇತ್ಯಾದಿಗಳ ಅರಿವು ಉಂಟಾಗುತ್ತದೆ. ಲೈಂಗಿಕತೆ ಕುರಿತಾದ ಭಾವನೆಗಳ ಹಿಡಿತ ಸಾಧಿಸಲು, ಹೆಣ್ಣು ಮಕ್ಕಳು ಹರೆಯದಲ್ಲಿ ಗರ್ಭಧರಿಸುವಿಕೆ, ಅದರಿಂದ ಆಗುವ ದುಷ್ಪರಿಣಾಮಗಳು, ದಾಂಪತ್ಯದಲ್ಲಿ ಅವಶ್ಯವಾದ ಪರಸ್ಪರ ಲೈಂಗಿಕ ಸಂಬಂಧ ಇವುಗಳನ್ನರಿಯುವುದು ಲೈಂಗಿಕ ಶಿಕ್ಷಣದ ಉದ್ದೇಶ.

ಲೈಂಗಿಕ ಶಿಕ್ಷಣದಿಂದ ಆಗುವ ಉಪಯೋಗಗಳು ವ್ಯಾಪಕವಾಗಿವೆ. ಲೈಂಗಿಕ ಶಿಕ್ಷಣದಿಂದ ಹರೆಯದವರಲ್ಲಿ ತಮ್ಮ ಕುರಿತು ದೈಹಿಕ ಚಿತ್ರಣವು (Body image) ಉಂಟಾಗುತ್ತದೆ. ತಮ್ಮ ಬಗ್ಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಪರಿಣಾಮಕಾರಿ ಸಂವಹನ ಸಾಮರ್ಥ್ಯವನ್ನು ಗಳಿಸಲು ಲೈಂಗಿಕ ಶಿಕ್ಷಣವು ಪೂರಕ. ಲೈಂಗಿಕ ಶಿಕ್ಷಣವು ಅನುಭೂತಿಯ ಗುಣವನ್ನು ರೂಢಿಸಿಕೊಳ್ಳಲು, ಹರೆಯದವರು ತಮ್ಮ ನಡವಳಿಕೆಯನ್ನು ಕುರಿತು ನೈತಿಕವಾಗಿ ಹಿಡಿತ ಸಾಧಿಸಬಹುದು. ಹರೆಯದ ಅವಧಿಯಲ್ಲಿ ಲಿಂಗ ಗುರುತಿಸಿ ತನ್ನಲ್ಲುಂಟಾಗುವ ಸಂದೇಹಗಳನ್ನು ದೂರಮಾಡಿಕೊಳ್ಳಲು ಅವಶ್ಯವಿರುವುದು ಲೈಂಗಿಕ ಶಿಕ್ಷಣ. ಹಿಂಸಾತ್ಮಕ ನಡವಳಿಕೆಗಳನ್ನು ದೂರವಿಟ್ಟು, ಮಾನಸಿಕ ನೆಮ್ಮದಿ ಸಾಧಿಸಲು ಲೈಂಗಿಕ ಶಿಕ್ಷಣವು ಅವಶ್ಯ. ಲೈಂಗಿಕ ಶಿಕ್ಷಣದಿಂದ ಸೋಂಕು ರೋಗಗಳು ಮತ್ತು ಎಚ್.ಐ.ವಿ. ಅಂತಹ ಅತಿ ಅಪಾಯದ ಕಾಯಿಲೆಗಳಿಂದ ದೂರವಿರಬಹುದು. ಅನೈತಿಕ ಲೈಂಗಿಕತೆ, ಸಲಿಂಗ ಕಾಮ ಮತ್ತು ಲೈಂಗಿಕ ಹಿಂಸಾಚಾರಗಳನ್ನು ತಡೆಗಟ್ಟಬಹುದು. ಹರೆಯದ ಹೆಣ್ಣು ಮಕ್ಕಳ ಭವಿಷ್ಯದಲ್ಲಿ ಡೋಲಾಯಮಾನ ಉಂಟು ಮಾಡುವ ಹರೆಯದವರ ಗರ್ಭಧಾರಣೆ, ಅದರಿಂದ ಗರ್ಭಪಾತವಾಗುವುದನ್ನು ತಡೆಗಟ್ಟಬಹುದು. ಲೈಂಗಿಕತೆಯ ಕುರಿತು ಹರೆಯದವರನ್ನು ತಪ್ಪು ಕಲ್ಪನೆಗಳು ಮತ್ತು ಅದರಿಂದ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು. ಜೀವನ ಕೌಶಲಗಳಾದ ಸಮಸ್ಯೆಗಳ ಪರಿಹಾರ, ಸಮಗ್ರವಾಗಿ ಆಲೋಚಿಸುವುದು, ಸೃಜನಶೀಲತೆ, ಅನುಭೂತಿ, ಮಾನವೀಯ ಸಂಬಂಧಗಳು, ಒತ್ತಡ ನಿವಾರಣೆ ಇವು ಲೈಂಗಿಕ ಶಿಕ್ಷಣದಿಂದ ವೃದ್ಧಿಗೊಳ್ಳುತ್ತವೆ ಎಂಬುದು ಅಧ್ಯಯನಗಳ ಅಂಬೋಣ. ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸಮಾಜದಲ್ಲಿ ಒಳ್ಳೆಯ ಸಂಸ್ಕಾರದಿಂದ ಕೂಡಿದ ಪ್ರಜ್ಞಾವಂತ ಪ್ರಜೆಯಾಗಿ ಆರೋಗ್ಯಕರ ಸಮಾಜವನ್ನು ಕಟ್ಟುವಲ್ಲಿ ಲೈಂಗಿಕ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ.

ನಮ್ಮ ಸಮಾಜದಲ್ಲಿ ಲೈಂಗಿಕತೆಯ ಅರಿವು ಮೂಡಿಸುವ ಪದ್ಧತಿ ಮೂರನೇ ಶತಮಾನದಲ್ಲೇ ರೂಢಿಯಲ್ಲಿತ್ತು. ಇದಕ್ಕೆ ಉದಾಹರಣೆ ವಾತ್ಸಾಯನ ಅವರ ಕಾಮಸೂತ್ರ. ತತ್ವಜ್ಞಾನಿಯಾಗಿದ್ದ ವಾತ್ಸಾಯನ ಆ ಕಾಲದಲ್ಲೇ 'ಕಾಮಸೂತ್ರ'ವೆಂಬ ಗ್ರಂಥವನ್ನು ಬರೆದು ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಅವರು ಆರೋಗ್ಯ ಲೈಂಗಿಕ ಶಿಕ್ಷಣದಿಂದ ಆಗುವ ಉಪಯೋಗಗಳ ಕುರಿತು ಆಳವಾದ ಚಿಂತನೆ ನಡೆಸಿದ್ದರು ಎನ್ನುವುದು ಹೆಮ್ಮೆಯ ಸಂಗತಿ. ಆದರೆ ವರ್ಷಗಳು ಕಳೆದಂತೆ ಲೈಂಗಿಕತೆ ಕುರಿತು ಮಡಿವಂತಿಕೆ ಮತ್ತು ನಕಾರಾತ್ಮಕ ಧೋರಣೆಗಳನ್ನು ತಳೆಯಲಾಯಿತು. ಇದಕ್ಕೆ ಉದಾಹರಣೆಯಾಗಿ, ಹೆಸರಾಂತ ವೈದ್ಯ ಸಾಹಿತಿ ದಿ. ಡಾ. ವೆಂಕಟರಾವ್ ದೊಡ್ಡೇರಿಯವರು ಕಳೆದ ಶತಮಾನದ ನಲವತ್ತನೇ ದಶಕದಲ್ಲಿ ಬರೆದ 'ದಾಂಪತ್ಯ ದೀಪಿಕಾ' ಎಂಬ ಕೃತಿಯನ್ನು ಸಾರ್ವಜನಿಕರು ವಿರೋಧಿಸಿದರು. ಅದಕ್ಕೆ ಬೆಂಬಲವಾಗಿ ಸರ್ಕಾರವು ಅದನ್ನು ಮುಟ್ಟುಗೋಲು ಹಾಕಿಕೊಂಡಿತು ಎನ್ನುವುದು ವಿಷಾದಕರ.

ಕಳೆದ ಶತಮಾನದ ಎಂಭತ್ತನೇ ದಶಕದಲ್ಲಿ ಅಮೆರಿಕದ ಲೈಂಗಿಕ ತಜ್ಞರಾದ ಮಾಸ್ಟರ್ಸ್ ಮತ್ತು ಜಾನ್ಸನ್ (Masters and Johnson) ಎಂಬುವರು ಲೈಂಗಿಕತೆ ಕುರಿತು ಕೃತಿ ರಚಿಸಿದಾಗ ನಮ್ಮವರೂ ಸೇರಿದಂತೆ ವಿಶ್ವದ ಅನೇಕ ಮನಃಶಾಸ್ತ್ರಜ್ಞರು, ಮನೋವೈದ್ಯರು ಅವರನ್ನು ಹಾಡಿ ಹೊಗಳಿದರು. ಆದರೆ ಎರಡನೇ ಶತಮಾನದಲ್ಲಿ ಕಾಮಸೂತ್ರ ಬರೆದ ನಮ್ಮ ದೇಶದ ತತ್ವಜ್ಞಾನಿಯಾದ ವಾತ್ಸಾಯನರ ಕುರಿತು ಯಾರೂ ಹೆಚ್ಚಿನ ಗಮನವೀಯಲಿಲ್ಲ ಎಂಬುದು ವಿಪರ್ಯಾಸ. ಇನ್ನೊಂದು ಹೆಮ್ಮೆಯ ಸಂಗತಿಯನ್ನು ಓದುಗರೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಡಾ. ಟಿ.ಎಸ್. ಸತ್ಯನಾರಾಯಣ್ ರಾವ್‌ರವರು ಹೆಸರಾಂತ ಮನೋವೈದ್ಯರು. ಪ್ರಸ್ತುತ ಡಾ.ಟಿ.ಎಸ್.ಎಸ್.ರಾವ್‌ರವರು ಮೈಸೂರಿನ ಜೆ.ಎಸ್.ಎಸ್.ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ 'ಪ್ರೊಫೆಸರ್ ಎಮಿರೆಟಸ್' ಆಗಿ ಕರ್ತವ್ಯ ನಿರತರಾಗಿದ್ದಾರೆ. ಡಾ|| ರಾವ್‌ರವರು ಭಾರತೀಯ ಮನೋವೈದ್ಯಕೀಯ ಸಂಘ (IPS)ದ ಗೌರವಾಧ್ಯಕ್ಷರೂ ಆಗಿದ್ದಾರೆ. ಇವರು ಲೈಂಗಿಕ ವಿಜ್ಞಾನ ಕುರಿತು ಆಳವಾದ ಸಂಶೋಧನೆ ಕೈಗೊಂಡು ಸಮಗ್ರ ಆರೋಗ್ಯವನ್ನು ಕಾಪಾಡಿಕೊಳ್ಳಲು ಲೈಂಗಿಕ ಜ್ಞಾನವು ಎಷ್ಟು ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ಎಳೆ ಎಳೆಯಾಗಿ ವಿವರಿಸಿದ್ದಾರೆ. 'ದಾಂಪತ್ಯ ವೈದ್ಯಶಾಸ್ತ್ರ' ಎಂಬ ಕೃತಿಯು ಸೇರಿದಂತೆ ಆರೆಂಟು ಕೃತಿಗಳನ್ನು ರಚಿಸಿದ್ದಾರೆ ಎಂಬುದು ಹೆಮ್ಮೆಯ ವಿಷಯ.

(ಮುಂದುವರೆಯುವುದು....)

ಅಲಾರಾಂ ನಾಮ!

ವಾರದ ವರಸೆ

ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಸುಮ್ಮನೆ ಹೀಗೊಮ್ಮೆ ಊಹಿಸಿಕೊಳ್ಳಿ. ಬೆಳ್ಳಂಬೆಳಗ್ಗೆ ಯಾರಾದರೂ ನಿಮ್ಮ ತಲೆಗೊಮ್ಮೆ ಮೊಟಕಿದರೆ ನಿಮ್ಮ ಪ್ರತಿಕ್ರಿಯೆ ಹೇಗಿರಬಹುದು? ಅದರಲ್ಲೂ ನೀವು ಯಾರಿಗೋಸ್ಕರ ಕೆಲಸ ಮಾಡಿದಿರೋ ಅವರೇ ಮೊಟಕಿದರೆ, ಅಷ್ಟೇ ಏಕೆ, ಹೀಗೆ ಹೀಗೆ ಮಾಡು ಎಂದು ಕೆಲಸ ಹಚ್ಚಿ, ಕೊನೆಗೆ ಆ ಕೆಲಸವನ್ನು ಅಂತೆಯೇ ಬದ್ಧತೆಯಿಂದ ಮಾಡಿ ಮುಗಿಸಿದ ನಂತರವೂ, ಕೆಲಸ ಹಚ್ಚಿದವರೇ ತಲೆಗೆ ಮೊಟಕಿದರೆ...? ಯಾರದ್ದೇ ಆದರೂ ಪಿತ್ತ ನೆತ್ತಿಗೇರದೇ ಇರದಲ್ಲವೇ? ಎಷ್ಟೇ ತಾಳ್ಮೆ, ಸಂಯಮ, ಸಮಾಧಾನ ಎಂದೆಲ್ಲ ಹೇಳಿದರೂ ಇದನ್ನು ಸಹಿಸಿಕೊಂಡು, ಏನೂ ಪ್ರತಿಕ್ರಿಯೆ ನೀಡದೇ, ಮೌನವಾಗಿ ಇರುವುದು ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ. ಆದರೆ ನೂರಾರು ವರ್ಷಗಳ ಕಾಲ ಹೀಗೊಂದು ದೌರ್ಜನ್ಯವನ್ನು, ಅನ್ಯಾಯವನ್ನು ನುಂಗಿಕೊಂಡು, ತನ್ನ ಕೆಲಸವನ್ನು ತಾನು ಪರಮ ನಿಯತ್ತಿನಿಂದ, ನಿರಂತರವಾಗಿ ಮುಂದುವರಿಸಿಕೊಂಡು ಬಂದಿರುವುದಕ್ಕೆ ಉದಾಹರಣೆ ಅಂತ ಇದ್ದರೆ ಅದು ಅಲಾರಾಂ ಕ್ಲಾಕ್. ತಲೆಯ ಈ ಭಾಗಕ್ಕೆ ಮೊಟಕಿದರೆ, ಇನ್ನೊಂದು ದಿವಸ ತಲೆಯ ಆ ಭಾಗಕ್ಕೆ ಮೊಟಕಲು ಅವಕಾಶ ಕೊಡುವಷ್ಟು ಅದರದ್ದು ಸಾಧು ಸ್ವಭಾವವೇ ಸರಿ. ಅದೂ ಕೂಡಾ 'ಒಂದು ಕೆನ್ನೆಗೆ ಬಾರಿಸಿದರೆ, ಇನ್ನೊಂದನ್ನು ತೋರಿಸು' ನೀತಿಯನ್ನು ಅನುಸರಿಸುತ್ತಿದೆಯೇ ಎಂಬ ಅನುಮಾನ ಮೂಡುತ್ತದೆ.

ಮನುಷ್ಯರು ಶತ ಶತಮಾನಗಳಿಂದಲೂ ಬೆಳಿಗ್ಗೆ ಒಂದು ನಿಗದಿತ ಅಥವಾ ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ನಿದ್ರೆಯಿಂದ ಎದ್ದೇಳಲು ಕೋಳಿಯ ಕೂಗು, ದೇವಸ್ಥಾನದ ಗಂಟೆ, ಚರ್ಚ್‌ನ ಬೆಲ್, ಸೂರ್ಯೋದಯ ಇನ್ನಿತ್ಯಾದಿಗಳನ್ನು ಅವಲಂಭಿಸುತ್ತಲೇ ಬಂದಿದ್ದಾರೆ. ಈಗಿನ ಈ ಎಲ್ಲಾ ಆಧುನಿಕ ಅಲಾರಾಂ ಸಾಧನಗಳ ಪರಿಕಲ್ಪನೆ ಇನ್ನೂ ಹರಳುಗಟ್ಟುವ ಮೊದಲು, ಬೆಳಿಗ್ಗೆ ಬೇಗ ಎಬ್ಬಿಸಲೆಂದೇ ಸಹಾಯಕರಂತೆ ಕೆಲವರು ಇರುತ್ತಿದ್ದರು. ಅವರದು ಬಡಿದು-ಎಬ್ಬಿಸುವ ಕೆಲಸ. ಆ ಕಾಯಕವನ್ನು ನಿಭಾಯಿಸುವ ವ್ಯಕ್ತಿಗಳು ಬೀದಿಯಲ್ಲಿ ತಿರುಗಾಡುತ್ತಾ, ಯಾರನ್ನೆಲ್ಲಾ ಎಬ್ಬಿಸಬೇಕೋ ಆಯಾ ವ್ಯಕ್ತಿಗಳ ಮನೆಯ ಹತ್ತಿರಕ್ಕೆ ಹೋಗಿ, ಅವರು ಮಲಗಿರುವ ಕೊಠಡಿಯ ಕಿಟಕಿ ಬಾಗಿಲುಗಳನ್ನು ಬಡಿಯುವ ಮೂಲಕ ಎಬ್ಬಿಸಬೇಕಾಗಿತ್ತು. ಕಿಟಕಿಯನ್ನು ಬಡಿಯಲು, ಉದ್ದನೆಯ ಕೋಲು, ನಳಿಕೆ ಇತ್ಯಾದಿ ಬಳಸಲಾಗುತ್ತಿತ್ತು. ಕೊಂಚ ದೂರದಿಂದ ಆ ನಳಿಕೆಯ ಮೂಲಕ ಒಣ ಬಟಾಣಿ ಕಾಳನ್ನು ತೂರಿಸಿ ಜೋರಾಗಿ ಊದಿ, ಅದು ನೇರ ಕಿಟಕಿಯ ಬಾಗಿಲ ಮೇಲೆ ಹೋಗಿ ಬಿದ್ದು ಸದ್ದು ಬರುವಂತೆ ಮಾಡುವ ಮೂಲಕವೂ ಬಡಿದು-ಎಬ್ಬಿಸುವ ಕೆಲಸ ನಡೆಯುತ್ತಿತ್ತು. ಆ ಕಿಟಕಿ ಮೇಲೆ ಬಿದ್ದ ಕಾಳಿನ ಸದ್ದಿಗೇ ಅವರು ಎಚ್ಚರಾಗುತ್ತಿದ್ದರು ಎಂದರೆ ಬಹುಶಃ ಅಂದಿನ ವ್ಯಕ್ತಿಗಳು ಸಣ್ಣ ಸದ್ದಿಗೂ ಎದ್ದು ಕೂರುವವರಾಗಿದ್ದರು ಎಂದೆನಿಸುತ್ತದೆ. ಆದ್ದರಿಂದ ಆ ಅಲಾರಾಂ ಮ್ಯಾನ್‌ಗಳ ಕೆಲಸ ಕೊಂಚ ಸುಲಭವೇ ಆಗಿತ್ತು ಎಂದೆನ್ನಬಹುದು. ಈಗ ಅದೇ ಕೆಲಸವನ್ನು ಮಾಡಲು ಮನುಷ್ಯರನ್ನು ನಿಯೋಜಿಸಿದ್ದರೆ ಅವರು ಆ ನಳಿಕೆಯ ಮೂಲಕ ಇನ್ನು ಅದೇನೇನನ್ನು ತೂರಬೇಕಿತ್ತೋ ಕಾಣೆ! ಈ ಅಕ್ಷರಶಃ ಬಡಿದು - ಎಬ್ಬಿಸುವವರು (ಹ್ಞಾಂ, ಮಲಗಿದವರನ್ನಲ್ಲ, ಅವರ ಕೊಠಡಿಯ ಕಿಟಕಿ ಬಾಗಿಲನ್ನು ನೆನಪಿರಲಿ) ಒಂದು ರೀತಿಯಲ್ಲಿ 'ನಡೆದಾಡುವ ಅಲಾರಾಂ' ಎಂಬ ಬಿರುದಿಗೆ ಭಾಜನರಾಗಲು ಅರ್ಹರೇ ಸರಿ.

ನಾವು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಈಗಿನ ಅಲಾರಾಂಗಳು ಒಂದೇ ಸಮನೆ ಕೂಗುವ ಮೂಲಕ, ಮಲಗಿದವರನ್ನು ಎಬ್ಬಿಸುವ ಪ್ರಯತ್ನ ಮಾಡುತ್ತವೆ. ಅದನ್ನು ಪ್ರಯತ್ನ ಅನ್ನುವುದಕ್ಕಿಂತಲೂ ಎಷ್ಟೋ ಸಲ ವಿಫಲ ಪ್ರಯತ್ನ ಅನ್ನುವುದೇ ಸೂಕ್ತವೇನೋ ಎಂದೆನಿಸುತ್ತದೆ. ಏಕೆಂದರೆ ಆ ಮಟ್ಟಿಗೆ ಜನ ಅಲಾರಾಂನ ಕೂಗನ್ನು ತಾತ್ಸಾರ ಭಾವದಿಂದ ಕಾಣುವುದು, ಅಲ್ಲಲ್ಲ ಕೇಳುವುದಿದೆ. ಆದರೆ ತುಂಬಾ ಹಿಂದೆ ಜನರಿಗೆ ಅಲಾರಾಂನ ವಿಷಯದಲ್ಲಿ ಹೀಗೊಂದು ಆಯ್ಕೆಯೇ ಇರಲಿಲ್ಲವಂತೆ. ಆರಂಭದಲ್ಲಿ ಅಂದರೆ ಇಂಥದ್ದೊಂದು ಸಾಧನವನ್ನು ಕಂಡುಹಿಡಿದ ಮೊದ ಮೊದಲ ದಿನಗಳಲ್ಲಿ, ಅಲಾರಾಂನ್ನು ಸಿದ್ಧಪಡಿಸುವಾಗ ಯಾವ ಸಮಯವನ್ನು ನಿಗದಿಪಡಿಸಲಾಗಿತ್ತೋ ಆ ಸಮಯಕ್ಕೆ ಸರಿಯಾಗಿ ಅದು ಹೊಡೆದುಕೊಳ್ಳುತ್ತಿತ್ತು, ಜನರು ಅದನ್ನು ಕೇಳಿ ಎದ್ದೇಳಬೇಕಾಗಿತ್ತೇ ಹೊರತು ಅವರಿಗೆ ತಮ್ಮಿಚ್ಛೆಯಂತೆ, ಬೇಕಾದ ಸಮಯಕ್ಕೆ ಅಲಾರಾಂನ್ನು ಸೆಟ್ ಮಾಡುವ ಅವಕಾಶವೇ ಇರಲಿಲ್ಲವಂತೆ. ಅಂದರೆ ಆ ಕಾಲದಲ್ಲಿ ಅಲಾರಾಂ ಹೇಳಿದಂತೆ ಜನರು ಕೇಳಬೇಕಾಗಿತ್ತು. ಆದರೆ ಈಗ ಜನರು ಹೇಳಿದಂತೆ, ಅವರ ನಿಶ್ಚಯಕ್ಕೆ ತಕ್ಕಂತೆ, ಅವರ ಮನಸ್ಸಿಗೆ ತೋಚಿದ ಸಮಯದ ಪರಿವೆಗೆ ಅನುಗುಣವಾಗಿ ಅಲಾರಾಂಗಳು ವರ್ತಿಸಬೇಕಾದ ಅನಿವಾರ್ಯತೆ ಅವುಗಳದ್ದು. ಆಗ ''ನೋಡಿ ನಾನು ಹೇಗೆ ಇವರನ್ನೆಲ್ಲಾ ಆಡಿಸುತ್ತೇನೆ'' ಎಂದು ಬೀಗುತ್ತಿದ್ದ ಅದೇ ಅಲಾರಾಂಗಳು ಈಗ, ''ಅಯ್ಯೋ ಇವರ ತಾಳಕ್ಕೆ ತಕ್ಕಂತೆ ಕುಣಿದು ನನಗಂತೂ ಸಾಕು ಸಾಕಾಗಿ ಹೋಗಿದೆಯಪ್ಪ'' ಎಂದು ಅದೆಷ್ಟು ರೋಸಿ ಹೋಗಿವೆಯೋ?

ಈಗಿನ ಅಲಾರಾಂಗಳಿಗೆ ಹಿಂದಿನ ಕಾಲದಲ್ಲಿ ಇದ್ದಂತೆ ಒಂದು ಸ್ವತಂತ್ರ ಅಸ್ತಿತ್ವ ಇರುವುದು ಬಹಳ ಕಡಿಮೆ. ಅವುಗಳು ತಮ್ಮ ಭೌತಿಕ ರೂಪವನ್ನು ಕಳೆದುಕೊಂಡು, ಸ್ಮಾರ್ಟ್ ರೂಪಕ್ಕೆ ತಿರುಗಿ, 'ಆ್ಯಪ್'ನ ಮಾರುವೇಷದಲ್ಲಿ ಮೊಬೈಲ್‌ನಲ್ಲಿ ಆಶ್ರಯ ಪಡೆದು ಕುಳಿತಿವೆ. ಹಾಗೆ ನೋಡಿದರೆ ಈ ಬದಲಾವಣೆಯಿಂದ ಅವುಗಳಿಗೂ ಕೆಲವೊಂದಷ್ಟು ಪ್ರಯೋಜನಗಳಿವೆ. ಈಗ ಅವು ಬೆಳ್ಳಂಬೆಳಗ್ಗೆ ದನಿ ಹೊರಡಿಸಿದ್ದಕ್ಕೆ ಪ್ರತಿಯಾಗಿ ಮೊದಲಿನಂತೆ ಪದೆ ಪದೆ ತಲೆಗೆ ಮೊಟಕಿಸಿಕೊಳ್ಳಬೇಕಿಲ್ಲ. ಇಡೀ ಮೊಬೈಲ್‌ನ ಮೇಲೆಯೇ ಆ ಏಟಿನ ಬಿರುಸು ಬೀಳುವ ಸಂಭವವೇ ಹೆಚ್ಚಾದರೂ, ಈಗ ಅದು ಒಂದು ನಯವಾದ ಟಚ್, ಕ್ಲಿಕ್‌ನಿಂದಲೂ ಸಾಧ್ಯವಾಗುವುದರಿಂದ ಮೊಟಕಿಸಿಕೊಳ್ಳಬೇಕಾದ ಅನಿವಾರ್ಯತೆ ಏನಿಲ್ಲ. ಪ್ರತ್ಯೇಕವಾಗಿ ಬ್ಯಾಟರಿ, ಕೀ ತಿರುಪಿಸಿಕೊಳ್ಳಬೇಕಾದ ಅಗತ್ಯವೂ ಈಗಿಲ್ಲ. ಕೊಂಚ ಪರಾವಲಂಬಿ ಅನಿಸಿಕೊಳ್ಳುವುದು ಹೌದಾದರೂ ಮೊಬೈಲ್‌ನ ಚಾರ್ಜ್‌ನ್ನೇ ಇದೂ ತಿಂದುಂಡು ಸುಖವಾಗಿ ಇರುವುದು ಸಾಧ್ಯವಾಗುತ್ತಿದೆ. ಅದಕ್ಕೆ ಪೂರಕವೆಂಬಂತೆ ಈಗಿನ ಅದರ ಕೆಲಸ ಕೇವಲ ಎಬ್ಬಿಸುವುದಕ್ಕಷ್ಟೇ ಸೀಮಿತವಾಗಿರದೇ ಸಮಯ ನಿಗದಿಪಡಿಸುವುದು, ಟಿಕ್ ಟಿಕ್ ಸ್ಟಾಪ್ ವಾಚ್ ಆಗಿ ಕರ್ತವ್ಯ ನಿರ್ವಹಿಸುವುದು, ಸರದಿಯಂತೆ ಐದು-ಹತ್ತು ನಿಮಿಷ ಬಿಟ್ಟು ಎಬ್ಬಿಸುವುದು (ಸ್ನೂಝ್), ನಿಗದಿಯಾದ ಶೆಡ್ಯೂಲ್‌ಗಳ ಸೂಚನೆಗೆ ಅನುಗುಣವಾಗಿ ಬಳಕೆದಾರರನ್ನು ಎಚ್ಚರಿಸುವ ಕೆಲಸ, ಬೇರೆ ಬೇರೆ ಸ್ವರದಲ್ಲಿ ಸುಶ್ರಾವ್ಯವಾಗಿ ರಿಂಗಣ ಮೂಡಿಸುವ ಕಲೆ - ಇವೆಲ್ಲವನ್ನೂ ಕರಗತ ಮಾಡಿಕೊಳ್ಳಬೇಕಾಗಿದೆ.


ಹೊತ್ತು ಗೊತ್ತಿನ ಪರಿವೆಯೇ ಇಲ್ಲದೆ ತಡ ರಾತ್ರಿಯವರೆಗೂ ಹಾಗೂ ಬೆಳಗ್ಗಿನ ಸೂರ್ಯ ಇನ್ನೂ ಕಣ್ಣು ಬಿಡಲೇ ಬಹಳ ಹೊತ್ತು ಬಾಕಿ ಇರುವಾಗಲೇ ಕೆಲವರು ಮೊಬೈಲ್ ಪರದೆಯ ತೆರೆ ಮರೆಯಲ್ಲಿ ಜಾರಿ ಹೋಗಿರುತ್ತಾರೆ ಎಂದರೆ ಅದಕ್ಕೆ ಈ ಅಲಾರಾಂ ಕೂಡಾ ಕಾರಣವಾಗಿರುತ್ತದೆ. ರಾತ್ರಿ ಮಲಗುವ ಮುನ್ನಾ ಅಲಾರಾಂ ಸೆಟ್ ಮಾಡಲೆಂದು, ಬೆಳಗ್ಗೆ ಒಂದೇ ಸಮನೆ ಬಡಿದುಕೊಳ್ಳುವ ಅಲಾರಾಂನ ಬಾಯಿ ಮುಚ್ಚಿಸಲೆಂದು ಕೈಗೆತ್ತಿಕೊಳ್ಳುವ ಮೊಬೈಲ್ ಎಂದಿಗೂ ಅದಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಅಲಾರಾಂನಿಂದ ವಾಟ್ಸಾಪ್‌ಗೆ ಜಿಗಿದು, ಅಲ್ಲಿಂದ ಮೇಲ್ ಬಾಕ್ಸ್ ಮೇಲೆ ಕಣ್ಣಾಡಿಸಿ, ಫೇಸ್‌ಬುಕ್‌ನಲ್ಲಿ ಮುಖ ತೂರಿಸಿ, ಅಲ್ಲಿಂದ ಇನ್ಸ್ಟಾಗ್ರಾಮ್(ಮ)ದಲ್ಲಿ ಸುತ್ತಾಡಿ, ರೀಲ್ಸ್-ವೀಡಿಯೋ-ಪೋಸ್ಟ್‌ಗಳ ನಡುವೆ ಜೀಕುತ್ತಾ ಸಾಕಷ್ಟು ಕಾಲ ಅದರಲ್ಲೇ ವ್ಯರ್ಥಾ ಕಳೆದು, ಇನ್ನು ಸಾಕು ಎಂದು ಮೊಬೈಲ್‌ನ್ನು ಬದಿಗಿಡುವ ಹೊತ್ತಿಗೆ 'ಅಲಾರಾಂ'ನ ಕಾರಣಕ್ಕೆ ಮೊಬೈಲ್‌ನ್ನು ಕೈಗೆತ್ತಿಕೊಂಡ ವಿಷಯ ನೆನಪಾಗಿ ಅದು ಅಕ್ಷರಶಃ ಅಣಕಿಸುತ್ತಿರುತ್ತದೆ.

ಈಗಿನ ಆಧುನಿಕ ಮೊಬೈಲ್‌ಗಳಲ್ಲಿ ಇರಿಸಿರುವ 'snooze' ಆಯ್ಕೆ ಇದೆಯಲ್ಲ ಅದು ಮನುಷ್ಯ ದಿನ ದಿನವೂ ಅನುಭವಿಸುವ, ಮನಸ್ಸಿಗೆ ಪರಮ ನೆಮ್ಮದಿಯನ್ನು ಉಂಟು ಮಾಡುವ ಮಹತ್ವದ 'ಶಾಂತಿ ಒಪ್ಪಂದ'ವೇ ಸರಿ. ಅದೊಂದು ಇಲ್ಲದೇ ಹೋಗಿದ್ದರೆ ಈ ಮನುಷ್ಯ ಮಾತ್ರರು ಈ ಅಲಾರಾಂಗಳನ್ನು ಇನ್ನು ಅದೆಷ್ಟು ದೂಷಿಸುತ್ತಿದ್ದರೋ, ದ್ವೇಷಿಸುತ್ತಿದ್ದರೋ ಹೇಳಲಸಾಧ್ಯ. ತನ್ನ ಯಾವುದೇ ಕೆಲಸವನ್ನು ಸಾಧ್ಯವಾದಷ್ಟೂ ಮುಂದೂಡುವುದೇ ಮನುಷ್ಯನ ಚಾಳಿ ಎಂಬ ಮಾತಿಗೆ ಬಲವಾದ ಸಾಕ್ಷ್ಯವೆಂಬಂತೆ ಅಲಾರಾಂನ ಈ 'snooze' ಆಯ್ಕೆಯನ್ನು ನೋಡಬಹುದು. ಹಾಗೆಯೇ ಅದು ದಿನ ದಿನವೂ ಪಾಲನೆಯಾಗುತ್ತದೆ ಎನ್ನುವುದಕ್ಕೆ ಅಲಾರಾಂಗಳ ಅಂತರ್ಯದಲ್ಲಿ ಬೇಕಾದಷ್ಟು ಪುರಾವೆಗಳಿವೆ. ಬಹಳ ಆಧುನಿಕವೆನಿಸುವ ಅದೆಷ್ಟೇ ಅಲಾರಾಂಗಳು ಬಂದರೂ, ''ಹೇಯ್ ಎದ್ದೇಳೋ'' ಎಂದು ಕಿರುಚುವುದು, ಬೆಡ್‌ಶೀಟ್‌ನ್ನು ಎಳೆದು ಬದಿಗೆ ಹಾಕುವುದು, ಫ್ಯಾನ್ ಆರಿಸುವುದು, ಲೈಟ್ ಆನ್ ಮಾಡುವುದು, ಬೆಳ್ಳಂಬೆಳಗ್ಗೆ ಜೋರಾಗಿ ಹಾಡು ಹಾಕುವುದು, ಪಾತ್ರೆ ಪಗಡೆಗಳಿಂದ ಭಾರೀ ಸದ್ದುಂಟು ಮಾಡುವುದು ಇತ್ಯಾದಿ ಮನೆ ಮನೆಯ ಪರ್ಯಾಯ ಅಲಾರಾಂಗಳಿವೆಯಲ್ಲ, ಅವುಗಳನ್ನು ಮೀರಿಸಲು ಎಂದಿಗೂ ಸಾಧ್ಯವಿಲ್ಲ!

ಓವರ್‌ಡೋಸ್: ಬೆಳ್ಳಂಬೆಳಗ್ಗೆ ಅಲಾರಾಂ ಹೊಡೆದಾಗ 'ಒಂದೈದು ನಿಮಿಷ' ಬಿಟ್ಟು ಎದ್ದೇಳ್ತೀನಿ ಅಂತಾರಲ್ಲ ಅದನ್ನು ಮನುಷ್ಯರ ಪಾಲಿನ ಅತ್ಯಂತ ಸುದೀರ್ಘವಾದ 'ಕಿರು ಅವಧಿ' ಎಂದು ಪರಿಗಣಿಸಬಹುದು!

26 ಕೋಟಿ ಮಂದಿಯಿಂದ ಯೋಗಾಭ್ಯಾಸ

ದೇಶವ್ಯಾಪಿ ನಡೆದ ಯೋಗ ಪ್ರದರ್ಶನ



ವಿಶ್ವವಿಖ್ಯಾತ ಪ್ಯಾರಿಸ್‌ನ ಐಫೆಲ್ ಟವರ್ ಮುಂಭಾಗದಲ್ಲಿ ಯೋಗಾಭ್ಯಾಸ.

• **ಹೊಸದಿಲ್ಲಿ:** ದೇಶದೆಲ್ಲೆಡೆ ಭಾರೀ ಸಂಖ್ಯೆಯಲ್ಲಿ ಸ್ವಯಂಪ್ರೇರಿತವಾಗಿ ಸೇರಿದ 26 ಕೋಟಿ ಯೋಗಾಸಕ್ತ ಸಾಮಾನ್ಯ ಜನರು 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಬೃಹತ್ ಯಶಸ್ವಿಗೊಳಿಸಿದರು. ಆರೋಗ್ಯಕರ ವಯೋವೃದ್ಧಿಗಾಗಿ ಯೋಗ ಎಂಬ ಧ್ಯೇಯದೊಂದಿಗೆ ಭಾನುವಾರ ವಿಶ್ವದೆಲ್ಲೆಡೆ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ದೇಶ ವಿದೇಶದಲ್ಲಿ ಬೃಹತ್ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಯೋಗಾಭ್ಯಾಸ ನಡೆಸಲಾಯಿತು. ಕೋಲ್ಕತ್ತಾದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ 35,000 ಜನರು ಪಾಲ್ಗೊಂಡರು. ಜಬಲ್‌ಪುರದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಾಣಾಯಾಮ, ಆಸನಗಳನ್ನು ಪ್ರದರ್ಶಿಸಿದರು. ಇದೇ ರೀತಿ ದೇಶಾದ್ಯಂತ ಹಲವು ಯೋಗ ಸಂಗಮಗಳು ನಡೆದಿವೆ. ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಹಾಗೂ ರಾಜ್ಯಪಾಲರು ಪಾಲ್ಗೊಂಡು ಯೋಗಾಭ್ಯಾಸ ನಡೆಸಿದರು.

ಜಗತ್ತಿಗೆ ಭಾರತದ ಅಮೂಲ್ಯ ಕೊಡುಗೆ: ಮಧ್ಯಪ್ರದೇಶದ ಜಬಲ್‌ಪುರದ ಗ್ಯಾರಿಸನ್ ಮೈದಾನದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ಭಾಗವಹಿಸಿದ್ದರು. ಶ್ವೇತ ವರ್ಣದ ಸಲ್ವಾರ್ ಮತ್ತು ಕುರ್ತಾ ಧರಿಸಿದ್ದ ರಾಷ್ಟ್ರಪತಿ ಮುರ್ಮು ನೀಲಿ ಬಣ್ಣದ ಯೋಗ ಮ್ಯಾಟ್‌ನಲ್ಲಿ ತಮ್ಮ ಯೋಗ ಕೌಶಲವನ್ನು ತೋರಿಸಿದರು.

ಯೋಗವೆಂಬುದು ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆ ಜಾಗತಿಕ ಸಮುದಾಯಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆ. ಇದು ಸಾವಿರಾರು ವರ್ಷಗಳಿಂದ ನಮ್ಮ ಋಷಿಗಳು ಮತ್ತು ಯೋಗಿಗಳು ನಡೆಸಿದ ತಪಸ್ಸಿನ ಫಲ. ಹಲವು ಜಾಗತಿಕ ಸವಾಲುಗಳ ಮಧ್ಯೆ ಮಾನವ ಜನಾಂಗಕ್ಕೆ ಶಾಂತಿ ಮತ್ತು ಸಾಮರಸ್ಯದ ಮಾರ್ಗವನ್ನು ತೋರಿಸುವಲ್ಲಿ ಯೋಗ ಪ್ರಮುಖ ಪಾತ್ರ ವಹಿಸಿದೆ. ಆರೋಗ್ಯ, ಸಮತೋಲನ ಮತ್ತು ಅರ್ಥಪೂರ್ಣ ಜೀವನ ನಡೆಸುವಲ್ಲಿ ಯೋಗ ಹೇಳಿಕೊಟ್ಟಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಲಡಾಖ್‌ನಲ್ಲಿ ಉಪರಾಷ್ಟ್ರಪತಿ ಯೋಗ: ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಲಡಾಖ್‌ನಲ್ಲಿ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ನೂರಾರು ಜನರೊಂದಿಗೆ ಯೋಗಾಭ್ಯಾಸ ನಡೆಸಿದರು. ಹಿಮಾಲಯ ಪರ್ವತ ತಪ್ಪಲಿನ ಮುಂಭಾಗ ಆಸ್ಟ್ರೋ ಟರ್ಫ್ ಸ್ಟೇಡಿಯಂನಲ್ಲಿ ಉಪರಾಷ್ಟ್ರಪತಿ ರಾಧಾಕೃಷ್ಣನ್ ವಿವಿಧ ಆಸನಗಳನ್ನು ಪ್ರದರ್ಶಿಸಿದರು.

ಶಿಲ್ಲಾಂಗ್‌ನಲ್ಲಿ ರಾಜನಾಥ್ ಯೋಗಾಭ್ಯಾಸ: ಮೇಘಾಲಯದ ಶಿಲ್ಲಾಂಗ್‌ನಲ್ಲಿರುವ ಭಾರತೀಯ ವಾಯುಪಡೆ(ಐಎಎಫ್) ಮೈದಾನದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಜನರಿಗೆ ಯೋಗ ದಿನದ ಶುಭಾಶಯಗಳನ್ನು ತಿಳಿಸಿದರು. ಪ್ರಾಣಾಯಾಮ, ಆಸನಗಳನ್ನು ಮಾಡಿದ ರಾಜನಾಥ್ ಮಾತನಾಡಿ, ಆರೋಗ್ಯಕರ ದೇಹಕ್ಕಾಗಿ ಅಷ್ಟೇ ಅಲ್ಲದೆ ಯೋಗವು ಸಮತೋಲನ ಮತ್ತು ಶಿಸ್ತಿನ ಜೀವನದ ದಾರಿದೀಪವಾಗುತ್ತದೆ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿಯವರ ದೂರದೃಷ್ಟಿಯ ನಾಯಕತ್ವ ಮತ್ತು ನಿರಂತರ ಪ್ರಯತ್ನಗಳಿಂದಾಗಿ ಭಾರತದ ಸಾಂಸ್ಕೃತಿಕ ಪರಂಪರೆಯಾದ ಯೋಗವು ಜಾಗತಿಕ ಮಟ್ಟದಲ್ಲಿ ಚಳುವಳಿಯಾಗಿ ಬದಲಾಗಿದೆ ಎಂದು ರಾಜನಾಥ್ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ಗಣ್ಯರಿಂದ ವಿವಿಧೆಡೆ ಯೋಗ: ಅಸ್ಸಾಂನ ಗುವಾಹಟಿಯ ಬ್ರಹ್ಮಪುತ್ರಾ ನದಿ ದಡದಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಆಯೋಜಿಸಿದ್ದ ಯೋಗ ದಿನಾಚರಣೆಯಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮುಖ್ಯ ಅತಿಥಿಯಾಗಿದ್ದರು. ಝಾನ್ಸಿ ಕೋಟೆಯ ಬಳಿ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆಸನಗಳನ್ನು ಮಾಡಿ ಧ್ಯಾನಸ್ಥರಾಗಿ ಗಮನಸೆಳೆದರು. ದೇಶದೆಲ್ಲೆಡೆ ಮುಖ್ಯಮಂತ್ರಿಗಳು, ರಾಜ್ಯಪಾಲರು ಮತ್ತು ಸಚಿವರು ಸಾರ್ವಜನಿಕ ಯೋಗಾಭ್ಯಾಸ ನಡೆಸಿದರು.

ಸಶಸ್ತ್ರಪಡೆ, ಸೈನಿಕರಿಂದ ಯೋಗ: ಸೇನಾಪಡೆ, ವಾಯುಪಡೆ ಮತ್ತು ನೌಕಾಪಡೆಯ ವಿವಿಧ ವಿಭಾಗಗಳ ಯೋಧರು ಯೋಗಾಭ್ಯಾಸವನ್ನು ನಡೆಸಿದರು. ಹಿಮಾಲಯದ ತಪ್ಪಲಿನಲ್ಲಾಗಲಿ, ಅಂಡಮಾನ್ ನಿಕೋಬಾರ್ ದ್ವೀಪದಲ್ಲಾಗಲಿ ಅಥವಾ ಐಎನ್‌ಎಸ್ ಯುದ್ಧನೌಕೆಗಳಲ್ಲಾಗಲಿ ಯೋಧರು ಯೋಗ ಅಭ್ಯಾಸವನ್ನು ನಡೆಸಿದರು.

ಯೋಗದಿಂದ ಮಾನಸಿಕ ದೃಢತೆ: ದ್ವಿವೇದಿ: ಅಸ್ಸಾಂನ ತೇಜ್‌ಪುರ ಮಿಲಿಟರಿ ಸ್ಟೇಷನ್‌ನಲ್ಲಿ ಯೋಗಾಭ್ಯಾಸದಲ್ಲಿ ಪಾಲ್ಗೊಂಡ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ಯೋಗ ಕೇವಲವೊಂದು ದೈಹಿಕ ಅಭ್ಯಾಸವಲ್ಲ, ಯೋಗದಿಂದ ಮಾನಸಿಕ ಮತ್ತು ಭಾವನಾತ್ಮಕ ದೃಢತೆಯನ್ನು ವಿಸ್ತರಿಸಲು ಸಾಧ್ಯ ಎಂದು ಹೇಳಿದ್ದಾರೆ.

ಮದರಸಾದಲ್ಲೂ ಯೋಗ!

ಉತ್ತರಪ್ರದೇಶದ ಲಖಿಮ್‌ಪುರ ಖೇರಿ ಮತ್ತು ಈಟಾ ಜಿಲ್ಲೆಗಳ ಮದರಸಾಗಳಲ್ಲಿ ನೂರಾರು ಮುಸ್ಲಿಮ್ ವಿದ್ಯಾರ್ಥಿಗಳು ಭಾನುವಾರ ಯೋಗಾಸನಗಳನ್ನು ಮಾಡಿ ಸಾಮರಸ್ಯ ತೋರಿದರು. ಯೋಗ ಅಧ್ಯಾಪಕ ಕುಲದೀಪ್ ವರ್ಮಾ ಮದರಸಾ ವಿದ್ಯಾರ್ಥಿಗಳಿಗೆ ಯೋಗ ಹೇಳಿಕೊಟ್ಟರು.


ವಯಸ್ಸಿಗೂ ಬಲ ಮನಸ್ಸಿಗೂ ಛಲ



ವಿಶಾಖಪಟ್ಟಣಂನಲ್ಲಿ ಐಎನ್‌ಎಸ್ ಸಾತವಾಹನ ಯುದ್ಧನೌಕೆಯಲ್ಲಿ ಯೋಗಾಭ್ಯಾಸ ನಡೆಸಿದ ಪೂರ್ವ ನೌಕಾಸೇನಾ ವಿಭಾಗದ ಸಿಬ್ಬಂದಿ

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಧ್ಯೇಯದೊಂದಿಗೆ ಭಾನುವಾರ ಒಟ್ಟು 193 ರಾಷ್ಟ್ರಗಳಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಈ ಧ್ಯೇಯವು ಎಲ್ಲಾ ವಯೋಮಾನದ ಜನರ, ವಿಶೇಷವಾಗಿ ಹಿರಿಯ ನಾಗರಿಕರ ದೈಹಿಕ ಕ್ಷಮತೆ, ಮಾನಸಿಕ ಆರೋಗ್ಯ, ಚಲನಶೀಲತೆ, ದೇಹದ ಸಮತೋಲನ ಹಾಗೂ ಜೀವನಮಟ್ಟ ಸುಧಾರಿಸುವ ಯೋಗದ ಮಹತ್ವವನ್ನು ಹೇಳುತ್ತದೆ. ದೇಶದೆಲ್ಲೆಡೆ 6 ಲಕ್ಷಕ್ಕೂ ಅಧಿಕ ಯೋಗ ಸಂಗಮ ಕಾರ್ಯಕ್ರಮಗಳು ಯಶಸ್ವಿಯಾದವು. ವಿವಿಧ ರಾಷ್ಟ್ರಗಳ ಸರ್ಕಾರಗಳು, ರಾಯಭಾರ ಕಚೇರಿಗಳು, ಯೋಗ ಸಂಸ್ಥೆಗಳು, ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಸೇನಾ ಸಂಸ್ಥೆಗಳು, ವಿವಿಧ ಸಮುದಾಯದ ಸಂಘಟನೆಗಳು ಹಾಗೂ ಸಂಘ ಸಂಸ್ಥೆಗಳು ಯೋಗ ದಿನ ಕಾರ್ಯಕ್ರಮಗಳನ್ನು ಆಯೋಜಿಸಿವೆ. ಈ ಕಾರ್ಯಕ್ರಮಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಯೋಗಾಸಕ್ತರು ಭಾಗವಹಿಸಿದರು. ಯೋಗವನ್ನು ಆರೋಗ್ಯ ಮತ್ತು ಜೀವನಶೈಲಿಯ ಪ್ರಮುಖ ಸಾಧನವನ್ನಾಗಿ ಅಳವಡಿಸಿಕೊಳ್ಳುವ ಸಂದೇಶ ನೀಡಿದರು.



ಝಾನ್ಸಿಯಲ್ಲಿ ಉತ್ತರಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಯೋಗ.



ಕೋಲ್ಕತಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಜತೆ ಯೋಗನಿರತ ಜನರು.



ಸಿಯಾಚಿನ್ ಗ್ಲೇಸಿಯರ್‌ನಲ್ಲಿ ಸೈನಿಕರೊಂದಿಗೆ ಯೋಗ ಪ್ರದರ್ಶನ ನೀಡಿದ ಸೇನೆಯ ಸ್ನಿಫರ್ ಶ್ವಾನ.



ಅಂಡಮಾನ್ ನಿಕೋಬಾರ್ ದ್ವೀಪದಲ್ಲಿ ಯೋಗನಿರತ ಕರಾವಳಿ ಪಡೆ ಸಿಬ್ಬಂದಿ.



ಲಡಾಖ್‌ನಲ್ಲಿ ಭಾರತೀಯ ಯೋಧರಿಂದ ಯೋಗಾಭ್ಯಾಸ.



ಯೋಗ ದಿನದಂದು ದಿಲ್ಲಿಯ ಸಂಸತ್ ಭವನ ಕಂಡಿದ್ದು ಹೀಗೆ.



ಗುರುಗ್ರಾಮದ ಯೋಗ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ.

193 ರಾಷ್ಟ್ರಗಳಲ್ಲಿ ಯೋಗಾಭ್ಯಾಸ!

ಯುನೈಟೆಡ್ ಅರಬ್ ಎಮಿರೇಟ್ಸ್‌ನ ದುಬೈ ಪೊಲೀಸ್ ಆಫಿಸರ್ಸ್ ಕ್ಲಬ್‌ನಲ್ಲಿ ಭಾನುವಾರ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ 1,600ಕ್ಕೂ ಹೆಚ್ಚು ಯೋಗಾಸಕ್ತರು ಪಾಲ್ಗೊಂಡರು. ದುಬೈ ನಿವಾಸಿಗಳು ಬೆಳಗ್ಗೆ 2.30ರ ವೇಳೆಗೆ ಎದ್ದು ಯೋಗ ದಿನ ಆಚರಿಸಿದ್ದಾರೆಂದು ಖಲೀಜ್ ಟೈಮ್ಸ್ ವರದಿ ಮಾಡಿದೆ. ಸೌದಿ ಅರೇಬಿಯಾ, ನೇಪಾಳ, ಪಾಕಿಸ್ತಾನ, ಚೀನಾ, ರಷ್ಯಾ, ಅಮೆರಿಕ, ಕೆನಡಾ, ಜಪಾನ್, ಮ್ಯಾನ್ಮಾರ್ ಸೇರಿದಂತೆ 193 ರಾಷ್ಟ್ರಗಳಲ್ಲಿ ನೂರಾರು ಸಂಖ್ಯೆಯಲ್ಲಿ ಜನರು ಯೋಗಾಭ್ಯಾಸ ನಡೆಸಿದರು.

ಪಾರಂಪರಿಕ ಸ್ಥಳಗಳಲ್ಲಿ ಯೋಗ

ಆಗ್ರಾದ ತಾಜ್ ಮಹಲ್‌ನಿಂದ ತೆಲಂಗಾಣದ ವಾರಂಗಲ್ ಕೋಟೆಯವರೆಗೆ ಎಲ್ಲಾ ಭಾರತೀಯ ಪುರಾತತ್ವ ಇಲಾಖೆ(ಎಎಸ್‌ಐ) ಸ್ಥಳಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಉತ್ತರಪ್ರದೇಶದ ತಾಜ್ ಮಹಲ್ ಮತ್ತು ಫತೇಪುರ್ ಸಿಕ್ರಿ, ರಾಜಸ್ಥಾನದ ದೀಗ್ ಅರಮನೆ, ತೆಲಂಗಾಣದ ವಾರಂಗಲ್ ಕೋಟೆ, ಕರ್ನಾಟಕದ ಬೀದರ್ ಕೋಟೆ, ಕೇರಳದ ಬೇಕಲ ಕೋಟೆ ಸೇರಿ ದೇಶದೆಲ್ಲೆಡೆ ಒಟ್ಟು 3,686 ಪಾರಂಪರಿಕ ಸ್ಥಳಗಳಲ್ಲಿ ಯೋಗ ದಿನ ಆಯೋಜಿಸಲಾಯಿತು.

ಕಿರುಸುದ್ದಿ

ಆನೆಗಳೊಂದಿಗೆ ಅರಣ್ಯ ಸಿಬ್ಬಂದಿ ಯೋಗಾಭ್ಯಾಸ



• **ಕೋಲ್ಕತ್ತಾ:** ಅಂತಾರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಪಶ್ಚಿಮ ಬಂಗಾಳದ ಜಲ್ದಾಪುರ ನ್ಯಾಷನಲ್ ಪಾರ್ಕ್‌ನಲ್ಲಿ ಅರಣ್ಯ ಸಿಬ್ಬಂದಿ ನದಿ ತೀರದಲ್ಲಿ ಆನೆಗಳ ಜತೆ ಯೋಗಾಭ್ಯಾಸ ನಡೆಸುವ ಮೂಲಕ ದೇಶದ ಗಮನಸೆಳೆದಿದ್ದಾರೆ. ದಟ್ಟ ಅರಣ್ಯ ಪ್ರದೇಶದಲ್ಲಿ ಆನೆಗಳೊಂದಿಗೆ ಯೋಗಾಸನ ಮಾಡಿ ಅರಣ್ಯ ಸಿಬ್ಬಂದಿ, ಮಾನವ ಮತ್ತು ಪ್ರಕೃತಿಯ ನಡುವಿನ ಬಾಂಧವ್ಯದ ಸಂದೇಶ ನೀಡಿದರು.

ಬ್ರಿಟನ್ ಪ್ರಧಾನಿ ಸ್ಟಾರ್ಮರ್ ರಾಜೀನಾಮೆ ಸಾಧ್ಯತೆ: ಟ್ರಂಪ್

• **ವಾಷಿಂಗ್ಟನ್:** ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ವಲಸೆ ಹಾಗೂ ಇಂಧನ ನೀತಿಗಳಲ್ಲಿ ವಿಫಲರಾಗಿರುವ ಕಾರಣ ಶೀಘ್ರದಲ್ಲೇ ರಾಜೀನಾಮೆ ನೀಡಲಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣದಲ್ಲಿ ಟ್ರಂಪ್, ಸ್ಟಾರ್ಮರ್ ವಲಸೆ ಮತ್ತು ಇಂಧನ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಉತ್ತರ ಸಮುದ್ರದ ತೈಲ ಉತ್ಪಾದನೆಗೆ ಅವಕಾಶ ನೀಡಬೇಕಿತ್ತು ಎಂದು ಟೀಕಿಸಿದ್ದಾರೆ. ಬ್ರಿಟಿಷ್ ಮಾಧ್ಯಮ ವರದಿಗಳ ಪ್ರಕಾರ, ಸ್ಟಾರ್ಮರ್ ಸೋಮವಾರವೇ ರಾಜೀನಾಮೆ ಕುರಿತು ಘೋಷಣೆ ಮಾಡುವ ಸಾಧ್ಯತೆ ಇದೆ. ಆದರೆ, ಸರ್ಕಾರದ ಮೂಲಗಳು ಈ ವರದಿಗಳನ್ನು ತಳ್ಳಿಹಾಕಿದ್ದು, ಸ್ಟಾರ್ಮರ್ ಆಡಳಿತದ ಕೆಲಸಗಳ ಮೇಲೆಯೇ ಗಮನಹರಿಸಿದ್ದಾರೆ ಎಂದು ತಿಳಿಸಿವೆ. ಇತ್ತೀಚೆಗೆ ಲೇಬರ್ ಪಕ್ಷದೊಳಗಿನ ಅಸಮಾಧಾನ ಹೆಚ್ಚಾಗಿದ್ದು, 100ಕ್ಕೂ ಹೆಚ್ಚು ಸಂಸದರು ನಾಯಕತ್ವ ಬದಲಾವಣೆಗೆ ಒತ್ತಾಯಿಸಿದ್ದಾರೆ ಎನ್ನಲಾಗಿದೆ.

ವನ್ಯಜೀವಿ ಕಳ್ಳಸಾಗಣೆ ಪತ್ತೆ: ಬಾಂಗ್ಲಾ ಪ್ರಜೆ ಸೇರಿ 9 ಸೆರೆ

• **ಗುವಾಹಟಿ:** ಅಸ್ಸಾಂನಲ್ಲಿ ವನ್ಯಜೀವಿಗಳ ಕಳ್ಳಸಾಗಣೆಕೆಯ ಅಂತಾರಾಷ್ಟ್ರೀಯ ಜಾಲವೊಂದನ್ನು ಭೇದಿಸಿದ ಭದ್ರತಾ ಸಿಬ್ಬಂದಿ, ಒಬ್ಬ ಬಾಂಗ್ಲಾದೇಶಿ ಪ್ರಜೆ ಸಹಿತ 9 ಮಂದಿಯನ್ನು ಸೆರೆಹಿಡಿದಿದ್ದಾರೆ. ಗೋಲ್ಡನ್ ಲಂಗೂರ್ ಮಂಗಗಳನ್ನು ಸೆರೆಹಿಡಿದು ಕಳ್ಳಸಾಗಣೆ ಮಾಡುತ್ತಿದ್ದ 9 ಮಂದಿಯ ತಂಡವೊಂದನ್ನು ಪೊಲೀಸ್ ಮತ್ತು ಅರಣ್ಯ ಸಿಬ್ಬಂದಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಸಾಕ್ಷಿಸಮೇತ ಸಿಕ್ಕಿಬಿದ್ದಿದ್ದಾರೆ. ಇವರ ಬಳಿಯಿದ್ದ 8 ಗೋಲ್ಡನ್ ಲಂಗೂರ್‌ಗಳನ್ನು ವಶಪಡಿಸಿದ್ದು, ಒಂದು ಮೃತಪಟ್ಟಿತ್ತು.

ಯುಎಇ, ರಷ್ಯಾದಿಂದ ತೈಲ ಆಮದು ಹೆಚ್ಚಳ

• **ಹೊಸದಿಲ್ಲಿ:** ಹಾರ್ಮುಜ್ ಬಿಕ್ಕಟ್ಟು ಮತ್ತು ಗಲ್ಫ್ ರಾಷ್ಟ್ರಗಳ ಪೂರೈಕೆ ಸಂಪೂರ್ಣ ಸಹಜ ಸ್ಥಿತಿಗೆ ಬರುವ ಮುನ್ನವೇ ಭಾರತದ ತೈಲ ಶುದ್ಧೀಕರಣ ಸಂಸ್ಥೆಗಳು, ರಷ್ಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್‌ನಿಂದ(ಯುಎಇ) ಕಚ್ಚಾ ತೈಲ ಆಮದನ್ನು ಹೆಚ್ಚಿಸಿಕೊಂಡಿವೆ. ಭಾರತ ಜೂ.19ರವರೆಗೆ ರಷ್ಯಾದಿಂದ ದಿನಂಪ್ರತಿ ಸರಾಸರಿ 2.66 ಮಿಲಿಯನ್ ಬ್ಯಾರೆಲ್ ಕಚ್ಚಾತೈಲವನ್ನು ಆಮದು ಮಾಡಿಕೊಂಡಿದ್ದು, ಮೇ ತಿಂಗಳಿನ 1.91 ಮಿಲಿಯನ್ ಬ್ಯಾರೆಲ್‌ಗೆ ಹೋಲಿಸಿದರೆ ಇದು ಗಣನೀಯ ಹೆಚ್ಚಳವೆನಿಸಿದೆ. ಈ ಮೂಲಕ ಮಾಸ್ಕೋ ಭಾರತದ ಅತಿ ದೊಡ್ಡ ತೈಲ ಪೂರೈಕೆದಾರ ರಾಷ್ಟ್ರವಾಗಿ ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದೆ. ಇನ್ನು ಯುಎಇನಿಂದ ಆಮದು ಪ್ರಮಾಣ ದಿನಕ್ಕೆ 6,36,000 ಬ್ಯಾರೆಲ್‌ಗಳಷ್ಟಿದ್ದು, ಇದು ಮೇ ತಿಂಗಳಿನ ದಾಖಲೆಯ 6,44,000 ಬ್ಯಾರೆಲ್‌ಗಿಂತ ಸ್ವಲ್ಪ ಕಡಿಮೆಯಾಗಿದೆ. ವೆನೆಜುವೆಲಾ ದಿನಕ್ಕೆ 2,09,000 ಬ್ಯಾರೆಲ್ ಪೂರೈಕೆಯೊಂದಿಗೆ ಭಾರತದ ನಾಲ್ಕನೇ ದೊಡ್ಡ ಕಚ್ಚಾ ತೈಲ ಪೂರೈಕೆದಾರ ರಾಷ್ಟ್ರವಾಗಿ ಹೊರಹೊಮ್ಮಿದ್ದು, ಸೌದಿ ಅರೇಬಿಯಾ(384,000 ಬ್ಯಾರೆಲ್) ಮೂರನೇ ಸ್ಥಾನದಲ್ಲಿದೆ. ಇದೇ ವೇಳೆ, ಅಮೆರಿಕದಿಂದ ಆಮದಾಗುತ್ತಿದ್ದ ತೈಲ ಪ್ರಮಾಣ ಮೇ ತಿಂಗಳಿನ 2,52,000 ಬ್ಯಾರೆಲ್‌ನಿಂದ ಜೂನ್‌ನಲ್ಲಿ 91,000 ಬ್ಯಾರೆಲ್‌ಗೆ ತೀವ್ರವಾಗಿ ಕುಸಿದಿದೆ.

ಅಮೆರಿಕ ಮತ್ತು ಇಸ್ರೇಲ್ ನಡುವೆ ಕದನ ವಿರಾಮ ಒಪ್ಪಂದದ ಬಳಿಕ, ತೈಲ ಹೊತ್ತ ಭಾರತದ 3 ಟ್ಯಾಂಕರ್‌ಗಳು ಮತ್ತು ಎಲ್‌ಎನ್‌ಜಿ ನೌಕೆ ಸಂಚಾರ ಪುನಾರಂಭಿಸಿವೆ.

ಅನಿಲ ಸೋರಿಕೆ: 7 ಬಲಿ, 67 ಜನರ ಸ್ಥಿತಿ ಗಂಭೀರ

• **ತಿರುವಳ್ಳೂರು:** ತಮಿಳುನಾಡಿನ ತಿರುವಳ್ಳೂರಿನ ಸೀಫುಡ್ ರಫ್ತು ಕಾರ್ಖಾನೆಯಲ್ಲಿ ಸಂಭವಿಸಿದ ಅಮೋನಿಯಾ ಅನಿಲ ಸೋರಿಕೆಯಿಂದಾಗಿ 7 ಮಂದಿ ಸಾವನ್ನಪ್ಪಿದ್ದು, 67ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರವಾಗಿದೆ. ಶನಿವಾರ ಮಧ್ಯಾಹ್ನ 1 ಗಂಟೆಗೆ ಈ ದುರಂತ, ಸೇಂಟ್ ಪೀಟರ್ ಆಂಡ್ ಪಾಲ್ ಸೀಫುಡ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸಂಭವಿಸಿದೆ. ಕಣ್ಣಿಗೈಪೇರ್ ಗ್ರಾಮದಲ್ಲಿರುವ ಈ ಖಾಸಗಿ ಸಂಸ್ಕರಣಾ ಮತ್ತು ರಫ್ತು ಕಂಪನಿಯಲ್ಲಿ ಅನಿಲ ಸೋರಿಕೆಯಾಗಿದ್ದು, ಸಿಬ್ಬಂದಿ ಕೆಲವೇ ನಿಮಿಷಗಳಲ್ಲಿ ಒಬ್ಬರ ಹಿಂದೆ ಒಬ್ಬರಂತೆ ಕುಸಿದು ಬಿದ್ದಿದ್ದಾರೆ. ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ತನಿಖೆಗೆ ಆದೇಶಿಸಿದ್ದಾರೆ.

ರಕ್ಷಣಾಕಾರ್ಯಾಚರಣೆ: ಅರಕ್ಕೋಣಂನಲ್ಲಿರುವ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ(ಎನ್‌ಡಿಆರ್‌ಎಫ್) 4ನೇ ಬೆಟಾಲಿಯನ್, ರಾಸಾಯನಿಕ, ಜೈವಿಕ, ವಿಕಿರಣ ಮತ್ತು ಪರಮಾಣು(ಸಿಬಿಆರ್‌ಎನ್) ತುರ್ತು ಸ್ಪಂದನಾ ತಂಡವನ್ನು ನಿಯೋಜಿಸಿದೆ. ಚೆನ್ನೈನಿಂದ ಬಂದ 30 ಎನ್‌ಡಿಆರ್‌ಎಫ್ ಸಿಬ್ಬಂದಿಯನ್ನೊಳಗೊಂಡ ತಂಡ ಸ್ಥಳಕ್ಕೆ ಧಾವಿಸಿದೆ. ಸೀನಿಯರ್ ಕಮಾಂಡೆಂಟ್ ಅಖಿಲೇಶ್ ಕುಮಾರ್ ನಿರ್ದೇಶನದ ಮೇರೆಗೆ ತಂಡ ಅಪಾಯಕಾರಿ ವಲಯವನ್ನು ಪ್ರತ್ಯೇಕಿಸಿ, ಬಾಧಿತ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದೆ. ರಕ್ಷಣಾ ಸಿಬ್ಬಂದಿ ಅನಿಲ ಸೋರಿಕೆಯ ತೀವ್ರತೆಯನ್ನು ಪರಿಶೀಲಿಸುತ್ತಿದ್ದು, ಹೆಚ್ಚಿನ ಅಪಾಯ ತಡೆಯಲು ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸಿದ್ದಾರೆ. ತಮಿಳುನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ತೀವ್ರ ಆತಂಕ ವ್ಯಕ್ತಪಡಿಸಿದ್ದು, ಗಂಭೀರ ಸ್ಥಿತಿಯಲ್ಲಿರುವವರು ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸಿದ್ದಾರೆ.

ಇರಾನ್-ಅಮೆರಿಕ ಶಾಂತಿ ಮಾತುಕತೆ ಸ್ವಿಸ್‌ನಲ್ಲಿ ಶುರು

• **ಜ್ಯೂರಿಚ್:** ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ನಿಟ್ಟಿನಲ್ಲಿ, ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಭಾನುವಾರ ಸ್ವಿಜರ್ಲೆಂಡ್‌ನ ಬರ್ಗೆನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಶಾಂತಿ ಮಾತುಕತೆ ಆರಂಭಿಸಿದ್ದಾರೆ. ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ಖತಾರ್‌ನ ಹಿರಿಯ ನಾಯಕರು ಮಧ್ಯವರ್ತಿಗಳಾಗಿ ಪಾಲ್ಗೊಂಡಿದ್ದಾರೆ.

ಕಳೆದ ವಾರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇರಾನ್ ಅಧ್ಯಕ್ಷ ಮಸೌದ್ ಪೆಝೆಶ್ಕಿಯನ್ ಸಹಿ ಹಾಕಿರುವ, ಮಧ್ಯಂತರ ಶಾಂತಿ ಒಪ್ಪಂದದಲ್ಲಿರುವ ಪ್ರಮುಖ ನಿಯಮಾವಳಿಗಳ ಜಾರಿಯನ್ನು ಕೇಂದ್ರೀಕರಿಸಿ ಮಾತುಕತೆ ನಡೆಯಲಿದೆ. ಒಪ್ಪಂದಕ್ಕೆ ಶರೀಫ್ ಖಾತ್ರಿದಾರನಾಗಿ ಸಹಿ ಹಾಕಿದ್ದರು. ಪ.ಏಷ್ಯಾದಲ್ಲಿ ಶಾಂತಿ ಮರುಸ್ಥಾಪನೆ ನಿಟ್ಟಿನಲ್ಲಿ ನಡೆಯಬೇಕಿರುವ ಮಾತುಕತೆಯ ಆರಂಭಕ್ಕೆ ಶಾಂತಿ ಒಪ್ಪಂದ ಹಾದಿ ತೆರೆದಿದೆ. ಮುಖ್ಯವಾಗಿ ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮ, ಇರಾನ್ ಮೇಲೆ ವಿಧಿಸಿರುವ ನಿರ್ಬಂಧಗಳು ಮತ್ತು ಲೆಬನಾನ್ ಮೇಲೆ ಇಸ್ರೇಲ್ ದಾಳಿ ಇತ್ಯಾದಿ ವಿಚಾರಗಳು ಮಾತುಕತೆಯಲ್ಲಿ ಪ್ರಧಾನವಾಗಿ ಪ್ರಸ್ತಾಪವಾಗಲಿವೆ.

ಕಳೆದ ಹತ್ತು ವಾರಗಳಲ್ಲಿ ಮೊದಲ ಬಾರಿ ಅಮೆರಿಕ ಮತ್ತು ಇರಾನ್‌ನ ಹಿರಿಯ ಅಧಿಕಾರಿಗಳು ಭಾನುವಾರ ಒಂದೇ ಕೊಠಡಿಯಲ್ಲಿ ನೇರ ಮಾತುಕತೆಗಳಿಗೆ ಮುಂದಾಗಿದ್ದಾರೆ. ಏಪ್ರಿಲ್‌ನಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆ ಮುರಿದುಬಿದ್ದಿತ್ತು . ಮಾತುಕತೆಗೆ ಸಂಬಂಧಿತ ತಾಂತ್ರಿಕ ವಿಚಾರಗಳ ಕುರಿತು ಶುಕ್ರವಾರ ಮಾತುಕತೆ ನಡೆಯಬೇಕಿತ್ತು. ಆದರೆ ಇರಾನ್ ಬೆಂಬಲಿತ ಹಿಜ್ಬುಲ್ಲಾ ಹಾಗೂ ಇಸ್ರೇಲ್ ಮಧ್ಯೆ ಮತ್ತೆ ಗುಂಡಿನ ದಾಳಿ ಶುರುವಾದ್ದರಿಂದ ಮಾತುಕತೆ ವಿಳಂಬವಾಗಿದೆ.

ಉದ್ಧವ್ ಬಣದ 6 ಸಂಸದರು ಶಿಂಧೆ ಬಣಕ್ಕೆ ಸೇರ್ಪಡೆ?

ಪುಣೆ: ಉದ್ಧವ್ ಠಾಕ್ರೆ ನೇತೃತ್ವದ ಶಿವ ಸೇನೆ(ಯುಬಿಟಿ)ಯ ಓಂಪ್ರಕಾಶ್ ರಾಜೆ ನಿಂಬಾಳ್ಕರ್ ಹಾಗೂ ನಾಗೇಶ್ ಪಾಟೀಲ್ ಅಷ್ಟಿಕರ್ ಸೇರಿ 6 ಸಂಸದರು ಏಕನಾಥ್ ಶಿಂಧೆ ನೇತೃತ್ವದ ಬಣ ಸೇರುವುದನ್ನು ದೃಢೀಕರಿಸಿದ್ದಾರೆ. ಭಾನುವಾರ ತಮ್ಮ ಬೆಂಬಲಿಗರೊಂದಿಗೆ ನಿಂಬಾಳ್ಕರ್ ಸಭೆ ಸೇರಿ ಚರ್ಚಿಸಿದ್ದಾರೆ. ಸಭೆಯಲ್ಲಿ ನಿಂಬಾಳ್ಕರ್ ತಮ್ಮ ಬೆಂಬಲಿಗರೊಂದಿಗೆ ಚರ್ಚೆ ನಡೆಸಿದ್ದು, ನಿಂಬಾಳ್ಕರ್ ಅವರು ಶಿಂಧೆ ಅವರೊಂದಿಗೆ ಕೈಜೋಡಿಸಬೇಕು ಎಂದು ನಿಂಬಾಳ್ಕರ್ ಬೆಂಬಲಿಗರೊಬ್ಬರು ಹೇಳಿದ್ದಾರೆ. ಪುಣೆಯ ಧಾರಾಶಿವ್‌ನಲ್ಲಿನ ತಮ್ಮ ನಿವಾಸಕ್ಕೆ ವೈ ಪ್ಲಸ್ ಭದ್ರತೆಯೊಂದಿಗೆ ಆಗಮಿಸಿದ ನಿಂಬಾಳ್ಕರ್, ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಬೆಂಬಲಿಗರನ್ನು ಭೇಟಿಯಾಗಲ್ಲ, ನನ್ನ ಮನೆಯಲ್ಲೇ ಬೆಂಬಲಿಗರನ್ನು ಕರೆಸಿಕೊಳ್ಳುತ್ತೇನೆ. ದನ ಮೇಯಿಸುವವರ ಬಳಿಯೂ ನನ್ನ ದೂರವಾಣಿ ಸಂಖ್ಯೆ ಇದೆಯೆಂದು ಹೇಳಿ ತಳಮಟ್ಟದವರೆಗೂ ಬೆಂಬಲಿಗರಿದ್ದಾರೆ ಎಂಬ ಸಂದೇಶ ನೀಡಿದ್ದಾರೆ.

ನೌಕಾಪಡೆಗೆ ಸ್ವದೇಶಿ ನಿರ್ಮಿತ ಮೂರು ಹಡಗು ಸೇರ್ಪಡೆಗೊಳಿಸಿದ ಮೋದಿ

ಕಾರ್ಯತಂತ್ರಕ್ಕೆ ಸಮುದ್ರ ಸಾಮರ್ಥ್ಯ ನಿರ್ಣಾಯಕ

• **ಕೋಲ್ಕತ್ತಾ:** ಬಲಿಷ್ಠ ಸಮುದ್ರ ಸಾಮರ್ಥ್ಯ, ದೇಶದ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವವನ್ನು ನಿರ್ಧರಿಸುವ ಪ್ರಮುಖ ಅಂಶ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಶ್ಯಾಮ ಪ್ರಸಾದ್ ಮುಖರ್ಜಿ ಬಂದರಿನಲ್ಲಿ ನೌಕಾಪಡೆಗೆ ಸ್ವದೇಶಿ ನಿರ್ಮಿತ ಮೂರು ಹಡಗುಗಳನ್ನು ಸೇರ್ಪಡೆಗೊಳಿಸಿದ ಬಳಿಕ ಮಾತನಾಡಿದ ಅವರು, ಭಾರತ ಈ ವಾಸ್ತವವನ್ನು ಅರಿತು ಅದಕ್ಕೆ ತಕ್ಕ ಸಿದ್ಧತೆ ನಡೆಸುತ್ತಿದೆ ಎಂದರು.

ಮೋದಿ ಸ್ವದೇಶಿ ನಿರ್ಮಿತ ಸ್ಟೆಲ್ತ್ ಫ್ರಿಗೇಟ್ ದುನಗಿರಿ, ಸರ್ವೇ ಹಡಗು ಸಂಶೋಧಕ್ ಹಾಗೂ ಜಲಾಂತರ್ಗಾಮಿ ವಿರೋಧಿ ಯುದ್ಧನೌಕೆ ಅಗ್ರಯ್ ಅನ್ನು ನೌಕಾಪಡೆಗೆ ಸೇರ್ಪಡೆಗೊಳಿಸಿದರು. ಈ ವೇದಿಕೆಗಳು ಸಮುದ್ರ ಯುದ್ಧ, ಹೈಡ್ರೋಗ್ರಾಫಿಕ್ ಸರ್ವೇ ಮತ್ತು ಜಲಾಂತರ್ಗಾಮಿ ವಿರೋಧಿ ಕಾರ್ಯಾಚರಣೆಗಳಲ್ಲಿ ಪ್ರಮುಖ ಸಾಮರ್ಥ್ಯ ಹೊಂದಿವೆ ಎಂದು ಹೇಳಿದರು.

ಯಾವುದೇ ರಾಷ್ಟ್ರ ಸಮುದ್ರ ಸಾಮರ್ಥ್ಯವಿಲ್ಲದೆ ದೊಡ್ಡ ಶಕ್ತಿಯಾಗಲು ಸಾಧ್ಯವಿಲ್ಲ, ಅಭಿವೃದ್ಧಿ,



ಭದ್ರತೆ ಮತ್ತು ಸಮೃದ್ಧಿ ಸಮುದ್ರಗಳಿಗೆ ಸಂಬಂಧಿಸಿವೆ ಎಂದು ಮೋದಿ ಹೇಳಿದರು. ಭಾರತ ರಕ್ಷಣಾ ಕ್ಷೇತ್ರದಲ್ಲಿ ಕೇವಲ ಖರೀದಿದಾರ ರಾಷ್ಟ್ರವಾಗಿ ಉಳಿಯದೆ ನಿರ್ಮಾಣ ರಾಷ್ಟ್ರವಾಗುವತ್ತ ಸಾಗುತ್ತಿದೆ ಎಂದರು.

ಆತ್ಮನಿರ್ಭರತೆಗೆ ಒತ್ತು: 2022ರಲ್ಲಿ ಐಎನ್‌ಎಸ್ ವಿಕ್ರಾಂತ್ ಸೇರ್ಪಡೆಯನ್ನು ಉಲ್ಲೇಖಿಸಿದ ಮೋದಿ, ಐಎನ್‌ಎಸ್ ಅಗ್ರಯ್, ಐಎನ್‌ಎಸ್ ದುನಗಿರಿ ಮತ್ತು ಐಎನ್‌ಎಸ್ ಸಂಶೋಧಕ್ ಸೇರ್ಪಡೆ, ಆತ್ಮನಿರ್ಭರ ಭಾರತದ ಪಯಣಕ್ಕೆ ವೇಗ ನೀಡಿದೆ ಎಂದರು. ಕಳೆದ ಕೆಲವು ವರ್ಷಗಳಲ್ಲಿ 40ಕ್ಕೂ ಹೆಚ್ಚು ಯುದ್ಧನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ಸೇರ್ಪಡೆಗೊಳಿಸಲಾಗಿದ್ದು, 45 ದೊಡ್ಡ ನೌಕಾ ವೇದಿಕೆಗಳ ನಿರ್ಮಾಣ ನಡೆಯುತ್ತಿದೆ ಎಂದು ಹೇಳಿದರು.

ಈ ಹಡಗುಗಳನ್ನು ಭಾರತೀಯ ನೌಕಾಪಡೆಯ ವಾರ್ಷಿಪ್ ಡಿಸೈನ್ ಬ್ಯೂರೋ ವಿನ್ಯಾಸಗೊಳಿಸಿದ್ದು, ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಆಂಡ್ ಎಂಜಿನಿಯರ್ಸ್ ಲಿಮಿಟೆಡ್ ನಿರ್ಮಿಸಿದೆ. ಇವುಗಳಲ್ಲಿ ಶೇ.75ಕ್ಕಿಂತ ಹೆಚ್ಚು ಸ್ವದೇಶಿ ಅಂಶಗಳಿದ್ದು, 200ಕ್ಕೂ ಹೆಚ್ಚು ಎಂಎಸ್‌ಎಂಇ ಗಳು ಪಾಲ್ಗೊಂಡಿವೆ.

ಸಮುದ್ರ ವಲಯ ಲಕ್ಷಾಂತರ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ ಎಂದು ಮೋದಿ ಹೇಳಿದರು. ಕಾರ್ಯಕ್ರಮದಲ್ಲಿ ಪಶ್ಚಿಮ ಬಂಗಾಳ ರಾಜ್ಯಪಾಲ ಆರ್.ಎನ್. ರವಿ, ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹಾಗೂ ಭಾರತೀಯ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಉಪಸ್ಥಿತರಿದ್ದರು.

ಮೋದಿಗೆ ಶ್ಲಾಘನೆ: ಕೈ ಅಸಹನೆಗೆ ಶಶಿ ತರೂರ್ ಖಡಕ್ ತಿರುಗೇಟು

• **ಹೊಸದಿಲ್ಲಿ:** ಭಾರತೀಯರ ಜೀವದ ಬಗೆಗೆ ಇರುವ ಕಾಳಜಿ ನಮ್ಮನ್ನು ಒಗ್ಗೂಡಿಸಬೇಕೇ ವಿನಾ ವಿಭಜಿಸಬಾರದು ಎಂಬುದಾಗಿ ಹೇಳುವ ಮೂಲಕ ಕಾಂಗ್ರೆಸ್ ಮುತ್ಸದ್ದಿ ಶಶಿ ತರೂರ್, ಪ್ರಧಾನಿ ನರೇಂದ್ರ ಮೋದಿಯವರನ್ನು ಟೀಕಿಸಿದ ಕಾಂಗ್ರೆಸ್ ನಾಯಕ ಪವನ್ ಖೇರಾಗೆ ಮಾರ್ಮಿಕವಾಗಿ ಬುದ್ಧಿ ಹೇಳಿದ್ದಾರೆ.


ಮಧ್ಯಪ್ರಾಚ್ಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಭಾರತೀಯ ನಾವಿಕರ ರಕ್ಷಣೆಗೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿಯವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೆದುರೇ ಖಡಕ್ ನಿಲುವು ವ್ಯಕ್ತಪಡಿಸಿದ್ದನ್ನು ಶಶಿ ತರೂರ್ ಅವರು ಶ್ಲಾಘಿಸಿದ್ದರು. ಆದರೆ, ಮೋದಿ ವಿರುದ್ಧ ನಿರಂತರ ಟೀಕಿಸುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಿಲುವಿಗೆ ವ್ಯತಿರಿಕ್ತ ನಿಲುವು ತಾಳಿದ ಶಶಿ ತರೂರ್ ವಿರುದ್ಧ ಕೆಂಡಕಾರಿದ್ದ ಕಾಂಗ್ರೆಸ್ ವಕ್ತಾರ ಪವನ್ ಖೇರಾ ಅವರು , 'ಪ್ರಧಾನಿ ಹೇಳದೇ ಇದ್ದ ಮಾತನ್ನೂ ಇವರು ಕೇಳಬಲ್ಲರು. 'ಮಹಾಮಾನವಮೋದಿ' ಭಕ್ತರಿಗೆ ಅವರು ಎಷ್ಟು ಕಡಿಮೆ ಮಾತನಾಡುತ್ತಾರೋ, ಅಷ್ಟೇ ಹೆಚ್ಚು ಕೇಳಿಸುತ್ತದೆ ಎಂದು ವ್ಯಂಗ್ಯವಾಡಿ ಅಸಹನೆ ತೋರಿದ್ದರು.

ಆದರೆ, ಭಾರತೀಯ ನಾಗರಿಕ ನಾವಿಕರ ರಕ್ಷಣೆಗೆ ಸಂಬಂಧಿಸಿದ ಹೇಳಿಕೆಯನ್ನು ಪಕ್ಷಪಾತದ ರಾಜಕೀಯ ವಿವಾದವನ್ನಾಗಿ ಮಾಡಿರುವುದು ಆಶ್ಚರ್ಯಕರ ಎನ್ನುವ ಮೂಲಕ ರಾಷ್ಟ್ರೀಯ ಹಿತಾಸಕ್ತಿಯ ವಿಷಯದಲ್ಲಿ ರಾಜಕೀಯ ಮಾಡುವ ಕಾಂಗ್ರೆಸ್ ನಿಲುವಿಗೆ ಶಶಿ ತರೂರ್ ಮತ್ತೊಮ್ಮೆ ತಮ್ಮ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮೂವರು ಭಾರತೀಯರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ನನ್ನ ಹೇಳಿಕೆಗಳು ನಮ್ಮ ನಾಗರಿಕರ ಸುರಕ್ಷತೆ ಹಾಗೂ ನಾಗರಿಕ ನಾವಿಕರು ಎಂದಿಗೂ ಯುದ್ಧದ ಗುರಿಯಾಗಬಾರದು ಎಂಬ ತತ್ವಕ್ಕೆ ಸಂಬಂಧಿಸಿದ್ದಾಗಿತ್ತು ಎಂದು ಸರಣಿ ಪೋಸ್ಟ್‌ಗಳ ಮೂಲಕ ಸ್ಪಷ್ಟಪಡಿಸಿದರು.

ಕೆಲವರು ಈ ವಿಷಯವನ್ನು ಪರಿಹರಿಸುವ ಬದಲು ರಾಜಕೀಯ ಅಂಕ ಗಳಿಸಲು ಹೆಚ್ಚು ಆಸಕ್ತಿ ತೋರಿಸುತ್ತಿದ್ದರೆ, ಅದು ಅವರ ಬಗ್ಗೆ ಹೆಚ್ಚು ಹೇಳುತ್ತದೆ; ನನ್ನ ಬಗ್ಗೆ ಅಲ್ಲ ಎಂದು ಅವರು ಖೇರಾಗೆ ಕುಟುಕಿದ್ದಾರೆ.

ಕಿರುಸುದ್ದಿ

ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ



ವಿಜಯಪುರ: ಇಲ್ಲಿನ ಕೋರ್ಟ್ ಕಾಲೋನಿಯ ಸಿದ್ದೇಶ್ವರ ಸಂಸ್ಥೆಯ ಎಬಿವಿ (ಸಿಬಿಎಸ್‌ಇ) ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಸಿದ್ದೇಶ್ವರ ಸಂಸ್ಥೆಯ ಗೌರವಾನ್ವಿತ ಕಾರ್ಯದರ್ಶಿಗಳು, ಎಬಿವಿ (ಸಿಬಿಎಸ್‌ಇ) ಶಾಲೆಯ ನಾಮನಿರ್ದೇಶಿತ ಚೇರ್ಮನ್ ಬಸವರಾಜ ಸುಗೂರ, ಶಾಲೆಯ ಪ್ರಾಚಾರ್ಯೆ ಐಶ್ವರ್ಯ ಸಂಗಮ್, ಉಪ ಮುಖ್ಯಗುರು ರವಿಕಾಂತ ಮೆಂಡೆಗಾರ ಇದ್ದರು.

ಬೆಳೆ ವಿಮೆಗೆ ಅರ್ಜಿ ಸಲ್ಲಿಸಿ: ಸಾಣಿ



ಸಿಂದಗಿ: ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳ ವಿಮೆಗಾಗಿ ಅರ್ಜಿ ಸಲ್ಲಿಸಲು ಕೃಷಿ ಸಹಾಯಕ ನಿರ್ದೇಶಕ ಪ್ರಶಾಂತ ಸಾಣಿ ತಿಳಿಸಿದ್ದಾರೆ.

ಈ ಯೋಜನೆಯ ಸೌಲಭ್ಯ ಪಡೆಯಲು ರೈತರು ಉದ್ದ ಮತ್ತು ಹೆಸರಿನ ಬೆಳೆಗಳಿಗೆ ಜು. 15, ಸೂರ್ಯಕಾಂತಿ, ಮುಸುಕಿನ ಜೋಳ, ಸಜ್ಜೆ, ತೊಗರಿ, ಶೇಂಗಾ ಬೆಳೆಗಳಿಗೆ ಜು.31, ಮತ್ತು ನೀರಾವರಿ ಸೂರ್ಯಕಾಂತಿ ಬೆಳೆಗೆ ಆ. 14 ಕೊನೆಯ ದಿನವಾಗಿರುತ್ತದೆ. ಆಸಕ್ತ ರೈತರು ನಿಗದಿತ ಅವಧಿಯೊಳಗೆ ಅರ್ಜಿಗಳನ್ನು ಸಲ್ಲಿಸಬೇಕು ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಶಾಂತ ಸಾಣಿ ಮನವಿ ಮಾಡಿದ್ದಾರೆ.

ಅಪ್ರಾಪ್ತ ಬಾಲಕನಿಂದ ವಾಹನ ಚಾಲನೆ: ದಂಡ

ಕೊಲ್ಹಾರ: ರಾಷ್ಟ್ರೀಯ ಹೆದ್ದಾರಿ 52ರ ಮೇ 8ರಂದು ಪಟ್ಟಣದ ಹೊರವಲಯದಲ್ಲಿರುವ ಗಾಣಾದೇವಿ ಸರ್ಕಲ್‌ನಲ್ಲಿ ಪೊಲೀಸ್ ಠಾಣೆಯ ಪಿಎಸ್‌ಐ ಅಶೋಕ ನಾಯಕ ಹಾಗೂ ಸಿಬ್ಬಂದಿ ವಾಹನ ತಪಾಸಣೆ ನಡೆಸುತ್ತಿದ್ದ ವೇಳೆ, ಅಪ್ರಾಪ್ತ ವಯಸ್ಸಿನ ಬಾಲಕನೊಬ್ಬ ದ್ವಿಚಕ್ರ ವಾಹನ ಚಲಾಯಿಸುತ್ತಿರುವುದು ಪತ್ತೆಯಾಯಿತು.

ಪೊಲೀಸರು ವಾಹನವನ್ನು ತಡೆದು ವಿಚಾರಣೆ ನಡೆಸಿದಾಗ, ಬಾಲಕನ ತಂದೆ ಅಲ್ಲಾಭಕ್ಷ ಗುಡುಸಾಬ್ ಮುಳವಾಡ, ಸಾ .ಕಾರಜೋಳ, ತಾ. ಬಬಲೇಶ್ವರ ಎಂದು ತಿಳಿದುಬಂದಿದೆ. ಬಳಿಕ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದು, ತಂದೆಯ ವಿರುದ್ಧ ಮೋಟಾರು ವಾಹನ ಕಾಯ್ದೆ ಕಲಂ 199(ಎ) ಅಡಿಯಲ್ಲಿ ಪ್ರಕರಣ ದಾಖಲಿಸಲಾಯಿತು. ಪ್ರಕರಣದ ವಿಚಾರಣೆ ನಡೆಸಿದ ಸಿ.ಜೆ.ಎಂ.ಎಫ್.ಸಿ ನ್ಯಾಯಾಲಯ, ಬಸವನ ಬಾಗೇವಾಡಿ, 2026 ಜೂ.20ರಂದು ತೀರ್ಪು ನೀಡಿ, ಅಪ್ರಾಪ್ತ ಬಾಲಕನಿಗೆ ವಾಹನ ಚಾಲನೆ ಮಾಡಲು ಅವಕಾಶ ನೀಡಿದ ತಂದೆಗೆ 25,000 ರೂ. ದಂಡ ವಿಧಿಸಿದೆ. ಜೊತೆಗೆ ಸಂಬಂಧಿತ ದ್ವಿಚಕ್ರ ವಾಹನದ ನೋಂದಣಿಯನ್ನು 6 ತಿಂಗಳ ಅವಧಿಗೆ ಅಮಾನತುಗೊಳಿಸುವಂತೆ ವಿಜಯಪುರ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ (ಆರ್‌ಟಿಒ) ಆದೇಶ ನೀಡಿದೆ. ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಾಹನ ಚಾಲನೆ ಮಾಡಲು ಅವಕಾಶ ನೀಡುವುದು ಕಾನೂನುಬಾಹಿರವಾಗಿದ್ದು, ಪೋಷಕರು ಈ ಕುರಿತು ಜಾಗೃತಿ ವಹಿಸಿ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಕೊಲ್ಹಾರ ಪೊಲಿಸ ಠಾಣೆಯ ಪಿಎಸ್‌ಐ ಅಶೋಕ ನಾಯಕ ಮನವಿ ಮಾಡಿದ್ದಾರೆ.

ನೀಟ್–2026 ಮರು ಪರೀಕ್ಷೆ | 753 ವಿದ್ಯಾರ್ಥಿಗಳು ಗೈರು

ಪರೀಕ್ಷಾ ಕೇಂದ್ರಗಳಿಗೆ ಡಿಸಿ, ಎಸ್‌ಪಿ, ಸಿಇಒ ಭೇಟಿ: ಪರಿಶೀಲನೆ

ಬಾಗಲಕೋಟೆ: ಜಿಲ್ಲೆಯಲ್ಲಿ ಭಾನುವಾರ ನಡೆದ ನೀಟ್–2026 ಮರು ಪರೀಕ್ಷೆ ಹಿನ್ನೆಲೆಯಲ್ಲಿ ನಗರದಲ್ಲಿ ಸ್ಥಾಪಿಸಲಾದ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಹಾಗೂ ಜಿ.ಪಂ ಸಿಇಒ ಗಜಾನನ ಬಾಲೆ ಜಂಟಿಯಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಾಗಲಕೋಟೆ ನಗರದಲ್ಲಿ ಸ್ಥಾಪಿಸಲಾದ 11 ಪರೀಕ್ಷಾ ಕೇಂದ್ರಗಳ ಪೈಕಿ ಬಸವೇಶ್ವರ ವಿದ್ಯಾವರ್ಧಕ ಸಂಘದ ಪಾಲಿಟೆಕ್ನಿಕ್ ಕಾಲೇಜ, ವಿಜ್ಞಾನ ಮಹಾವಿದ್ಯಾಲಯ, ವಾಣಿಜ್ಯ ಮಹಾವಿದ್ಯಾಲಯ, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ನವನಗರದ ಸರ್ಕಾರಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜ, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಜಿಲ್ಲಾಧಿಕಾರಿಗಳು ಭೇಟಿ ನೀಟಿ ಪರಿಶೀಲನೆ ನಡೆಸಿದರು.

ಭೇಟಿ ಸಮಯದಲ್ಲಿ ಪರೀಕ್ಷಾರ್ಥಿಗಳಿಗೆ ಸುಗಮವಾಗಿ ಪರೀಕ್ಷೆಗೆ ಹಾಜರಾಗುವಂತೆ ಕೇಂದ್ರಗಳಲ್ಲಿ ಕೈಗೊಂಡಿರುವ ವ್ಯವಸ್ಥೆಗಳ ಕುರಿತು ಜಿಲ್ಲಾಧಿಕಾರಿಗಳು ಮಾಹಿತಿ ಪಡೆದುಕೊಂಡರು. ಪ್ರವೇಶ ದ್ವಾರಗಳಲ್ಲಿ ಭದ್ರತಾ ತಪಾಸಣೆ, ಫ್ರಿಸ್ಕಿಂಗ್ ವ್ಯವಸ್ಥೆ ಪರಿಶೀಲನೆ ಸೇರಿದಂತೆ ನಿಯಮಾನುಸಾರ ಕ್ರಮಗಳನ್ನು ಅನುಸರಿಸಲಾಗುತ್ತಿದೆ ಎಂಬುದನ್ನು ವೀಕ್ಷಿಸಿದರು. ಪರೀಕ್ಷಾ ಕೊಠಡಿಗಳಲ್ಲಿ ಕುಳಿತುಕೊಳ್ಳುವ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೇರಿದಂತೆ ಅಗತ್ಯ ಸೌಲಭ್ಯಗಳ ಸಮರ್ಪಕವಾಗಿರುವದನ್ನು ಖಚಿತಪಡಿಸಿಕೊಂಡರು.



ನೀಟ್–2026 ಮರು ಪರೀಕ್ಷೆಗೆ ಒಟ್ಟು 3967 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಈ ಪೈಕಿ 3214 ವಿದ್ಯಾರ್ಥಿಗಳು ಹಾಜರಾಗಿ ಉಳಿದ 753 ವಿದ್ಯಾರ್ಥಿಗಳು ಗೈರು ಹಾಜರಾಗಿರುತ್ತಾರೆ ಎಂದು ಸರಕಾರಿ ಪಾಲಿಟೆಕ್ನಿಕ್ ಕಾಲೇಜನ ಪ್ರಾಚಾರ್ಯ ಪ್ರಭಾಕರ ಪಾಟೀಲ ತಿಳಿಸಿದರು. ಭೇಟಿ ಸಮಯದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ ಸೇರಿದಂತೆ ಇತರರು ಇದ್ದರು.

ವಿಶ್ವಕ್ಕೆ ಯೋಗ ಅಮೂಲ್ಯ ಕೊಡುಗೆ

ಇಂಡಿ: ಯೋಗವು ಭಾರತದ ಪ್ರಾಚೀನ ಋಷಿ-ಮುನಿಗಳು ಇಡೀ ವಿಶ್ವಕ್ಕೆ ನೀಡಿರುವ ಅಮೂಲ್ಯ ಕೊಡುಗೆಯಾಗಿದ್ದು, ಜೀವನ ನಿತ್ಯೋತ್ಸವವಾಗಲು ಪ್ರತಿಯೊಬ್ಬರೂ ಯೋಗ ಅಳವಡಿಸಿಕೊಳ್ಳಬೇಕು ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ರವಿವಾರ ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ಹಮ್ಮಿಕೊಂಡ 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ದೇಶಿಸಿ ಅವರು ಮಾತನಾಡಿದರು.

ಭಾರತೀಯ ಸಂಸ್ಕೃತಿಯಲ್ಲಿ ಯೋಗವು ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದು, ಇದು ಮನುಷ್ಯನ ಮನಸ್ಸು, ದೇಹ, ಉಸಿರಾಟವನ್ನು ನಿಯಂತ್ರಿಸಿ, ಆಂತರಿಕ ಶಾಂತಿ ಕಾಪಾಡಲು ಸಹಕಾರಿಯಾಗಿದೆ ಎಂದು ಹೇಳಿದರು. ಶಿಕ್ಷಕ ಶ್ರೀಧರ ಹಿಪ್ಪರಗಿ ಮಾತನಾಡಿ, ಇಂದಿನ ವಿದ್ಯಾರ್ಥಿಗಳಲ್ಲಿ ಒತ್ತಡ-ಆತಂಕ ನಿವಾರಿಸಿ, ಏಕಾಗ್ರತೆ, ನೆನಪಿನ ಶಕ್ತಿಯನ್ನು ವೃದ್ಧಿಸಲು ಯೋಗವು ಪರಿಪೂರ್ಣ ಅಭ್ಯಾಸವಾಗಿದೆ ಎಂದು ಹೇಳಿದರು.

ಕೆಬಿಎಸ್ ಮುಖ್ಯ ಶಿಕ್ಷಕ ಎಸ್. ಎಸ್. ಬಡಿಗೇರ ಅಧ್ಯಕ್ಷತೆ ವಹಿಸಿ ಮಾತನಾಡಿ, ಮನುಷ್ಯ ತನ್ನ ಜೀವನವನ್ನು ಯೋಗ ಜೀವನವನ್ನಾಗಿ ಬದಲಾಯಿಸಿಕೊಳ್ಳಬೇಕು. ಯೋಗವು ದೈಹಿಕ, ಮಾನಸಿಕ, ಆಧ್ಯಾತ್ಮಿಕ ಆರೋಗ್ಯವನ್ನು ಸಮತೋಲನದಲ್ಲಿಡುವ ಅದ್ಭುತ ಜೀವನ ಶೈಲಿಯಾಗಿದೆ ಎಂದು ಹೇಳಿದರು.

ದೈಹಿಕ ಶಿಕ್ಷಕ ಎಸ್.ಎಚ್. ತಳವಾರ ಯೋಗಾಭ್ಯಾಸ ಮಾಡಿಸುತ್ತಾ, ವಿವರಣೆ ನೀಡಿದರು. ಕೆಜಿಎಸ್ ಮುಖ್ಯ ಶಿಕ್ಷಕ ಎಸ್.ಬಿ. ಕೋಳಿ, ಯುಬಿಎಸ್ ಮುಖ್ಯ ಶಿಕ್ಷಕ ಕೆ.ಐ. ಮಕಾನದಾರ ಹಾಗೂ ಎಲ್ಲ ಶಿಕ್ಷಕ ಸಿಬ್ಬಂದಿ ವರ್ಗದವರು, ಮಕ್ಕಳು ಭಾಗವಹಿಸಿದ್ದರು.



ಯೋಗ ದಿನಾಚರಣೆ: ಪ್ರಧಾನಿ ಭಾಷಣದ ನೇರ ಪ್ರಸಾರ



ವಿಜಯಪುರ: ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಧಾರವಾಡ ವಲಯದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಶೀರ್ಷಿಕೆಯಡಿ ಐತಿಹಾಸಿಕ ಗೋಳಗುಮ್ಮಟ ಆವರಣದಲ್ಲಿ ಯೋಗ ದಿನ ಆಚರಿಸಲಾಯಿತು.

ಮಂತ್ರಾಲಯವು ಭಾರತೀಯ ಪುರಾತತ್ವ ಸರ್ವೇಕ್ಷಣ ಅಧೀನದಲ್ಲಿರುವ ದೇಶದ 100 ಐತಿಹಾಸಿಕ ತಾಣಗಳಲ್ಲಿ ವಿಶೇಷ ಯೋಗ ಕಾರ್ಯಕ್ರಮಗಳು ಹಾಗೂ ಸಾಂಸ್ಕೃತಿಕ ಪರಂಪರೆ ಸಂಯೋಜಿತ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಬಾದಾಮಿ ಗುಹೆಗಳು, ಐಹೊಳೆ ದುರ್ಗಾ ದೇವಾಲಯ ಮತ್ತು ಪಟ್ಟದಕಲ್ಲಿನ ದೇವಾಲಯಗಳ ಸಮೂಹಗಳಲ್ಲಿ ಯೋಗ ಕಾರ್ಯಕ್ರಮಗಳು ಏಕಕಾಲಕ್ಕೆ ನಡೆದವು. ಈ ವರ್ಷದ ಆಚರಣೆಯ ಮುಖ್ಯ ಉದ್ದೇಶವು ಯೋಗದ ಮೂಲಕ ದೀರ್ಘಾಯುಷ್ಯ, ಸಕ್ರಿಯ ಜೀವನಶೈಲಿ ಹಾಗೂ ಎಲ್ಲಾ ತಲೆಮಾರುಗಳ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತೇಜಿಸುವುದಾಗಿದೆ.

ವಿಜಯಪುರದ ಗೋಳಗುಮ್ಮಟದಲ್ಲಿ ಬೆಳಗ್ಗೆ 6.20 ರಿಂದ 7ರವರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಯೋಗ ದಿನಾಚರಣೆಯ ಕುರಿತು ಮಾತನಾಡುವ ನೇರಪ್ರಸಾರದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ವಿಜಯಪುರ ಉಪವಿಭಾಗದ ಸಹಾಯಕ ಆಯುಕ್ತರು ಗುರುನಾಥ ದಡ್ಡೆ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಯೋಗಗುರು ಸುರೇಶ್ ಆನಂದಿ, ವಿವಿಧ ಯೋಗಾಸನಗಳನ್ನು ಪ್ರದರ್ಶಿಸಿ ತರಬೇತಿ ನೀಡಿದರು.

ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯದ ಉಪ ಅಧೀಕ್ಷಕ ಪುರಾತತ್ವ ಅಭಿಯಂತರ ಎನ್. ಬಿ. ಡಿ. ಕೆಂಪಗೌಡ ಅವರು ವಿಜಯಪುರದ ಯೋಗ ದಿನಾಚರಣೆಯ ನೋಡಲ್ ಅಧಿಕಾರಿಯಾಗಿದ್ದರು. ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತರ ರಾಷ್ಟ್ರೀಯ ಅಧ್ಯಕ್ಷ ಡಾ. ಜಾವಿದ್ ಜಮಾದಾರ್, ಬಿಎಲ್ ಡಿಇ ಸಂಸ್ಥೆಯ ಶ್ರೀಮಂತಿ ಬಂಗಾರಮ್ಮ ಸಜ್ಜನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ವೈ. ತಮ್ಮಣ್ಣ, ಹಾಗೂ ಅಣು ವಿಜ್ಞಾನ ಮತ್ತು ಶಾಂತಿ ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಲಿರುವ ಶಿಫಾ ಜಮಾದಾರ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಶ್ರೀಮತಿ ಬಂಗಾರಮ್ಮ ಸಜ್ಜನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಡಾ. ಬಿ.ಆರ್. ಅಂಬೇಡ್ಕರ್ ಮಹಿಳಾ ವಸತಿನಿಲಯ, ಸಮಾಜ ಕಲ್ಯಾಣ ಇಲಾಖೆ ಹಾಗೂ ವಿಕಾಸ್ ಹೈಸ್ಕೂಲ್ ಹಾಗೂ ವಿವಿಧ ಶಾಲೆಯ ಸುಮಾರು 500 ಹೆಚ್ಚು ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದರು.

ನೀಟ್ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಭೇಟಿ

ವಿಜಯಪುರ: ಜಿಲ್ಲೆಯಾದ್ಯಂತ ಭಾನುವಾರ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ (ನೀಟ್) ಪರೀಕ್ಷೆಯನ್ನು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಪರಿಶೀಲಿಸಿದರು.

ನಗರದ 19 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ನೀಟ್ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಧಿಕಾರಿಗಳು, ನಗರದ ಅಥಣಿ ರಸ್ತೆಯಲ್ಲಿರುವ ಕಾಳಿದಾಸ ವಿಜ್ಞಾನ ಪದವಿ ಪೂರ್ವ ಕಾಲೇಜ್ ಹಾಗೂ ಟಕ್ಕೆಯಲ್ಲಿರುವ ಕೇಂದ್ರೀಯ ವಿದ್ಯಾಲಯದಲ್ಲಿ ನಡೆದ ನೀಟ್ ಪರೀಕ್ಷಾ ಕೇಂದ್ರಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಕೈಗೊಂಡಿರುವ ಸಿದ್ಧತೆಗಳು, ಭದ್ರತಾ ವ್ಯವಸ್ಥೆಗಳು ಹಾಗೂ ವಿದ್ಯಾರ್ಥಿಗಳಿಗೆ ಕಲ್ಪಿಸಲಾಗಿರುವ ಮೂಲಸೌಕರ್ಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಪರೀಕ್ಷೆಗೆ ಆಗಮಿಸುವ ವಿದ್ಯಾರ್ಥಿಗಳು ಯಾವುದೇ ರೀತಿಯ ಗೊಂದಲ ಅಥವಾ ತೊಂದರೆಗೆ ಒಳಗಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಂಡಿರುವುದನ್ನು ಖಚಿತಪಡಿಸಿಕೊಂಡ ಅವರು, ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಆಸನ ವ್ಯವಸ್ಥೆ, ವಿದ್ಯುತ್ ಪೂರೈಕೆ ಸೇರಿದಂತೆ ಎಲ್ಲ ಅಗತ್ಯ ಸೌಲಭ್ಯಗಳು ಸಮರ್ಪಕವಾಗಿ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳುವಂತೆ ತಿಳಿಸಿದರು.



ಪರೀಕ್ಷೆ ಬರೆಯಲು ಆಗಮಿಸಿರುವ ವಿದ್ಯಾರ್ಥಿಗಳು ನೆಮ್ಮದಿಯ ಹಾಗೂ ಅನುಕೂಲಕರ ವಾತಾವರಣದಲ್ಲಿ ಪರೀಕ್ಷೆ ಎದುರಿಸಲು ಅವಕಾಶ ಕಲ್ಪಿಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಸಿಬ್ಬಂದಿ ಹಾಗೂ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಬೇಕು ಎಂದು ಹೇಳಿದರು.

ನೀಟ್ ಪರೀಕ್ಷೆಯು ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಮಹತ್ವದ ಘಟ್ಟವಾಗಿರುವುದರಿಂದ ಪರೀಕ್ಷಾ ಪ್ರಕ್ರಿಯೆಯನ್ನು ಸಂಪೂರ್ಣ ಪಾರದರ್ಶಕತೆ ಹಾಗೂ ಶಿಸ್ತುಬದ್ಧವಾಗಿ ನಡೆಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಭದ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಪರೀಕ್ಷಾ ನಿಯಮಾವಳಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಪರೀಕ್ಷಾ ಕೇಂದ್ರಗಳ ಆವರಣದಲ್ಲಿ ಅನಗತ್ಯ ಜನಸಂದಣಿ ಉಂಟಾಗದಂತೆ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳು ಪರೀಕ್ಷೆ ಮುಗಿಯುವವರೆಗೆ ಯಾವುದೇ ರೀತಿಯ ಅಡಚಣೆ ಎದುರಿಸದಂತೆ ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಪರೀಕ್ಷಾಧಿಕಾರಿಗಳಿಗೆ ಅವರು ಸೂಚಿಸಿದರು.

ಪರಿಶೀಲನೆ ವೇಳೆ ಪರೀಕ್ಷಾ ಕೇಂದ್ರಗಳ ಕೊಠಡಿಗಳು, ಪ್ರವೇಶ ದ್ವಾರಗಳು, ಭದ್ರತಾ ತಪಾಸಣಾ ವ್ಯವಸ್ಥೆಗಳು ಹಾಗೂ ವಿದ್ಯಾರ್ಥಿಗಳಿಗೆ ಕಲ್ಪಿಸಲಾಗಿದ್ದ ಸೌಲಭ್ಯಗಳನ್ನು ವೀಕ್ಷಿಸಿದ ಜಿಲ್ಲಾಧಿಕಾರಿಗಳು, ಪರೀಕ್ಷೆಯನ್ನು ಯಶಸ್ವಿಯಾಗಿ ಹಾಗೂ ಸುಗಮವಾಗಿ ನಡೆಸಲು ಸೂಚಿಸಿದರು. ಈ ಸಂದರ್ಭದಲ್ಲಿ ಪರೀಕ್ಷೆಗೆ ನಿಯೋಜಿತ ಅಧಿಕಾರಿ,ಸಿಬ್ಬಂದಿ ಹಾಗೂ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಇದ್ದರು.

ಯೋಗ ಬಲ್ಲವನಿಗೆ ರೋಗವಿಲ್ಲ: ಡಾ. ಹಂಚಿನಾಳ

ಮಹಾಲಿಂಗಪುರ: ಯೋಗ ಆರೋಗ್ಯದ ಮಹದ್ವಾರ. ಯೋಗ ಬಲ್ಲವನಿಗೆ ರೋಗವಿಲ್ಲ, ಯೋಗ ಎಂದರೆ ಕೇವಲ ದೈಹಿಕ ಸದೃಢತೆಯಲ್ಲ, ಅದು ಮಾನಸಿಕ, ಶಾರೀರಿಕ, ಆಂತರಿಕ ಮತ್ತು ಆತ್ಮದ ಸದೃಢತೆ. ದೇಹ ಮತ್ತು ಮನಸ್ಸನ್ನು ಆತ್ಮದೊಂದಿಗೆ ಒಗ್ಗೂಡಿಸುವ ಶಕ್ತಿ. ಯೋಗ ಮಾಡುವುದರಿಂದ ದೇಹದಲ್ಲಿ ಎಂಡಾರ್ಫಿನ್ ಎಂಬ ರಾಸಾಯನಿಕ ಉತ್ಪತ್ತಿಯಾಗಿ ದೇಹದ ಅಸಮತೋಲತೆಯನ್ನು ನಿಯಂತ್ರಿಸುತ್ತದೆ ಹಾಗಾಗಿ ಯೋಗ ಜೀವನಶೈಲಿಯಾಗಬೇಕು ಎಂದು ವೈದ್ಯ ಡಾ. ವಿಜಯ ಹಂಚಿನಾಳ ಹೇಳಿದರು.



ಸ್ಥಳೀಯ ಎಪಿಎಂಸಿಯಲ್ಲಿ ಎಪಿಎಂಸಿ ವಾಯು ವಿಹಾರ ಮಂಡಳಿ ವತಿಯಿಂದ ಜರುಗಿದ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಯೋಗ ಕೇವಲ ಒಂದು ದಿನಕ್ಕೆ ಸೀಮಿತವಾಗದೆ ನಿತ್ಯವೂ ಜೀವನದಲ್ಲಿ ಕನಿಷ್ಠ ಒಂದು ಗಂಟೆ ಯೋಗ ಮಾಡಬೇಕು ಎಂದರು.

ಪುರಸಭೆ ಮುಖ್ಯಾಧಿಕಾರಿ ನಾಮದೇವ ಲಮಾಣಿ ಮತ್ತು ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ ಮಾತನಾಡಿ, ಆರೋಗ್ಯವೇ ಮಹಾ ಭಾಗ್ಯ. ಜೀವನದ ಸುಭದ್ರತೆಗೆ ಆರೋಗ್ಯ, ಉದ್ಯೋಗ, ಕುಟುಂಬ ಎಂಬ ಮೂರು ಸೂತ್ರಗಳು ಅತ್ಯಗತ್ಯ, ಇದಕ್ಕೆ ಯೋಗ ಪೂರಕ ಎಂದರು. ವೈದ್ಯ ಡಾ.ಶಂಕರ ಹುಕ್ಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಪಿಎಂಸಿ ವಾಯು ವಿಹಾರ ಮಿತ್ರ ಮಂಡಳಿಯ ಅಧ್ಯಕ್ಷ ಶಂಕರ ಕೋಳಿಗುಡ್ಡ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶೈಕ್ಷಣಿಕ ಪ್ರತಿಭೆ ಅನ್ವಿತಾ ಅಶೋಕ ಕಲ್ಯಾಣಿ ಹಾಗೂ ಯೋಗ ಗಾಂಧಾರಿ ವಿದ್ಯಾಪ್ರವೀಣೆ ಮನ್ವಿತಾ ಆನಂದ ಪಟ್ಟಣಶೆಟ್ಟಿ ಇವರನ್ನು ಗೌರವಿಸಲಾಯಿತು.

ಮುಖಂಡರಾದ ಬಿ.ಜಿ.ಹೊಸೂರ, ಆನಂದ ಪಟ್ಟಣಶೆಟ್ಟಿ, ಶಶಿಧರ ನಕಾತಿ, ಪಿ.ಜಿ.ಅಂಗಡಿ, ಸುರೇಶ ಮಡಿವಾಳ, ಸಂಗಣ್ಣವರ ವಕೀಲ, ನಾಗಪ್ಪ ಹುಣಶ್ಯಾಳ, ಬಾಲಕೃಷ್ಣ ಮಾಳವಾದೆ ಇತರರಿದ್ದರು. ಪತ್ರಕರ್ತ ನಾರನಗೌಡ ಉತ್ತಂಗಿ ನಿರೂಪಿಸಿದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ತಾಳಿಕೋಟೆ: ಇಲ್ಲಿನ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಐ ಕ್ಯು ಎ ಸಿ ಪ್ರಾಯೋಜಿತ ಎನ್‌ಎಸ್‌ಎಸ್ ಘಟಕದ ಆಶ್ರಯದಲ್ಲಿ ಜೂ. 21ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಆರ್. ಎಂ. ಬಂಟನೂರ ಅವರು ಮಾತನಾಡಿ, ಯೋಗವು ನಮ್ಮ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಆರೋಗ್ಯವನ್ನು ಕಾಪಾಡುವ ಅತ್ಯುತ್ತಮ ಸಾಧನವಾಗಿದೆ. ಇಂದಿನ ಒತ್ತಡದ ಜೀವನದಲ್ಲಿ ಮನಸ್ಸಿಗೆ ಶಾಂತಿ ಮತ್ತು ದೇಹಕ್ಕೆ ಚೈತನ್ಯ ನೀಡಲು ಯೋಗ ಅಗತ್ಯ ಎಂದು ತಿಳಿಸಿದರು. ಉಪನ್ಯಾಸಕರು ಯೋಗದ ವಿವಿಧ ಆಯಾಮಗಳ ಕುರಿತು ಮಾಹಿತಿ ನೀಡಿ, ವಿದ್ಯಾರ್ಥಿಗಳು ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕೆಲವು ಪ್ರಶಿಕ್ಷಣಾರ್ಥಿಗಳು ಯೋಗದ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ನಂತರ ಕಾಲೇಜಿನ ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಉತ್ಸಾಹದಿಂದ ಸಮೂಹ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡರು. ಪ್ರಶಿಕ್ಷಣಾರ್ಥಿ ಸಂತೋಷ್ ಕುಮಾರ ನೇತೃತ್ವದಲ್ಲಿ ನಡೆದ ವಿವಿಧ ಆಸನ ಹಾಗೂ ಪ್ರಾಣಾಯಾಮಗಳ ಪ್ರದರ್ಶನವು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು.



ಕಾರ್ಯಕ್ರಮದ ಕೊನೆಯಲ್ಲಿ ಪ್ರಾಂಶುಪಾಲರು, ಐ ಕ್ಯೂ ಎ ಸಿ ಸಂಯೋಜಕರಾದ ಯು. ಎನ್. ಮಂಗೊಂಡ ಹಾಗೂ ವಿಜ್ಞಾನ ವಿಭಾಗದ ಉಪನ್ಯಾಸಕರಾದ ಸುರೇಶ ಬಡಿಗೇರ ಅವರು ಎಲ್ಲರಿಗೂ ಯೋಗ ದಿನಾಚರಣೆಯ ಶುಭಾಶಯ ಕೋರಿ, ನಿತ್ಯ ಯೋಗಾಭ್ಯಾಸದ ಸಂಕಲ್ಪ ಮಾಡುವಂತೆ ಪ್ರೇರೇಪಿಸಿದರು. ಮಹಾವಿದ್ಯಾಲಯದ ಸರ್ವ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯಿಂದ ಕಾರ್ಯಕ್ರಮ ಯಶಸ್ವಿಯಾಯಿತು.

ಡಿಜಿಐ ಸಂಸ್ಥೆಗೆ ಚಿನ್ನದ ಕಿರೀಟ

ತೇರದಾಳ: ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಎಸ್.ಡಿ.ಎಂ. ಟ್ರಸ್ಟ್‌ನ ದಾನಿಗೊಂಡ ಕಾಲೇಜ ಆಫ್ ಫಾರ್ಮಸಿಯ ಉಪನ್ಯಾಸಕಿಯಾಗಿರುವ ಸೌಮ್ಯಾ ಎಂ.ಜಮಖಂಡಿ ಅವರು ಎಂ.ಫಾರ್ಮ ವಿಭಾಗದಲ್ಲಿ ಅತ್ಯುನ್ನತ ಶೈಕ್ಷಣಿಕ ಸಾಧನೆಗೈದು ಚಿನ್ನದ ಪದಕ ಪಡೆದು ಸಂಸ್ಥೆಯ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಎತ್ತಿ ಹಿಡಿದಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಕೇಂದ್ರದಲ್ಲಿ ನಡೆದ ಆರ್.ಜಿ.ಯು.ಹೆಚ್.ಎಸ್.ನ 28 ನೇ ಘಟಿಕೋತ್ಸವ ಸಮಾರಂಭದಲ್ಲಿ ಕರ್ನಾಟಕ ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಥಾವರಚಂದ್ ಗೆಹ್ಲೋಟ್ ಹಾಗೂ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ ಪದವಿ ಹಾಗೂ ಪದಕಗಳನ್ನು ಪ್ರದಾನ ಮಾಡಿದರು.

ಸೌಮ್ಯ ಜಮಖಂಡಿ ಅವರ ಈ ಅಪೂರ್ವ ಸಾಧನೆಗೆ ಎಸ್.ಡಿ.ಎಂ. ಟ್ರಸ್ಟ್‌ನ ಅಧ್ಯಕ್ಷರು ಹಾಗೂ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಗಳ ಚೇರಮನ್‌ರಾದ ಡಾ.ಮಹಾವೀರ ಎಸ್.ದಾನಿಗೊಂಡ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಪುಷ್ಪದಂತ ದಾನಿಗೊಂಡ, ಡೀನ್ ಡಾ. ಪ್ರಭಾಕರ ಅಪರಾಜ ಹಾಗೂ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ಸಮಸ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿ ಅವರ ಮುಂದಿನ ಶೈಕ್ಷಣಿಕ ಹಾಗೂ ವೃತ್ತಿಜೀವನವು ಯಶಸ್ವಿಯಾಗಲಿ ಎಂದು ಶುಭಹಾರೈಸಿದರು. ವಿದ್ಯಾರ್ಥಿ ಜೀವನದಲ್ಲಿ ತೋರಿದ ಪರಿಶ್ರಮ ಅಧ್ಯಯನ ಹಾಗೂ ಸಂಶೋಧನಾ ಮನೋಭಾವದ ಪ್ರತಿಫಲವಾಗಿ ಲಭಿಸಿದ ಈ ಚಿನ್ನದ ಪದಕವು ಸಂಸ್ಥೆಯ ಶೈಕ್ಷಣಿಕ ಗುಣಮಟ್ಟಕ್ಕೆ ಸಾಕ್ಷಿಯಾಗಿದ್ದು ದಾನಿಗೊಂಡ ಕಾಲೇಜ ಆಫ್.ಫಾರ್ಮಸಿಯ ಹೆಗ್ಗಳಿಕೆಯನ್ನು ಮತ್ತಷ್ಟು ಹೆಚ್ಚಿಸಿದಂತಾಗಿದೆ ಎಂದರು.



ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಿ

ಸಿಂದಗಿ: ಪ್ರತಿನಿತ್ಯ ಎಲ್ಲರೂ ಯೋಗಾಭ್ಯಾಸ ಮಾಡುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಶಿಕ್ಷಕ ಸಿದ್ದು ಚಿಂಚೋಳಿ ಹೇಳಿದರು. ಸಿಂದಗಿ ತಾಲೂಕಿನ ಬ್ಯಾಲಿಹಾಳ-ಬಂಕಲಗಿ ಸರ್ಕಾರಿ ಶಾಲಾ ಆವರಣದಲ್ಲಿ ಹಮ್ಮಿಕೊಂಡ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಯೋಗವು ಕೇವಲ ವ್ಯಾಯಾಮವಲ್ಲ.

ಅದು ಆರೋಗ್ಯಕರ, ಸಂತೋಷಕರ ಮತ್ತು ಸಮತೋಲಿತ ಜೀವನದ ಮಾರ್ಗವಾಗಿದೆ. ಯೋಗವು ದೈಹಿಕ ಆರೋಗ್ಯವನ್ನು ವೃದ್ಧಿಸುವುದರ ಜೊತೆಗೆ ಮಾನಸಿಕ ಒತ್ತಡವನ್ನು ಕಡಿಮೆ ಮಾಡಿ ಏಕಾಗ್ರತೆ, ಆತ್ಮವಿಶ್ವಾಸ ಹಾಗೂ ಸಕಾರಾತ್ಮಕ ಚಿಂತನೆಯನ್ನು ಬೆಳೆಸುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಅತಿಥಿಗಳಾಗಿ ಆಗಮಿಸಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಹಾಂತೇಶ ನೂಲಾನವರ, ವರದಿಗಾರ ಶಿವಾನಂದ ಆಲಮೇಲ ಮಾತನಾಡಿ, ಯೋಗವು ದೇಹ, ಮನಸ್ಸು ಮತ್ತು ಆತ್ಮದ ಸಮತೋಲನವನ್ನು ಕಾಪಾಡುವುದಲ್ಲದೆ ದೇಹಕ್ಕೆ ಚೈತನ್ಯ ಮತ್ತು ಶಕ್ತಿಯನ್ನು ನೀಡುತ್ತದೆ. ಇಂದಿನ ಒತ್ತಡದ ಜೀವನ ಶೈಲಿಯಲ್ಲಿ ಯೋಗದ ಮಹತ್ವ ಇನ್ನಷ್ಟು ಹೆಚ್ಚಾಗಿದೆ.

ವಿದ್ಯಾರ್ಥಿಗಳು ಬಾಲ್ಯದಿಂದಲೇ ಯೋಗಾಭ್ಯಾಸವನ್ನು ರೂಢಿಸಿಕೊಂಡರೆ ದೈಹಿಕ ಹಾಗೂ ಮಾನಸಿಕ ಆರೋಗ್ಯ ಉತ್ತಮವಾಗಿರುತ್ತದೆ ಎಂದು ಹೇಳಿದರು. ಈ ವೇಳೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಆನಂದ ಶಾಬಾದಿ, ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ ಭಜಂತ್ರಿ, ಮುಖ್ಯೋಪಾಧ್ಯಾಯರಾದ ವಿ.ಎಸ್.ಪಾಟೀಲ, ಎಸ್.ಬಿ.ಪಾಟೀಲ, ಸುಖದೇವ ಹಿರೇಕುರುಬರ, ಶಿಕ್ಷಕರಾದ ಹಮೀದ್ ಅವಟಿ, ರೋಹಿತ ತಳಗೇರಿ, ರಮೇಶ ಪಾಳೇದ, ಶೈಲಾ ಪತ್ತಾರ ಸೇರಿದಂತೆ ಹಲವರು ವೇದಿಕೆ ಮೇಲಿದ್ದರು.



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ವಿವಿಧ ಯೋಗಾಸನಗಳು, ಪ್ರಾಣಾಯಾಮ ಹಾಗೂ ಸೂರ್ಯ ನಮಸ್ಕಾರದ ಪ್ರದರ್ಶನ ನೀಡಿದರು. ಯೋಗ ಶಿಕ್ಷಕ ಸಿದ್ದಲಿಂಗ ಚೌಧರಿ ಅವರ ಮಾರ್ಗದರ್ಶನದಲ್ಲಿ ಸಾಮೂಹಿಕ ಯೋಗಾಭ್ಯಾಸ ನಡೆಸಲಾಯಿತು. ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪೋಷಕರು ಹಾಗೂ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯೋಗದ ಮಹತ್ವದ ಕುರಿತು ಅರಿವು ಪಡೆದರು. ಕೊನೆಯಲ್ಲಿ ಎಲ್ಲರೂ ಪ್ರತಿದಿನ ಯೋಗಾಭ್ಯಾಸ ಮಾಡುವ ಸಂಕಲ್ಪ ಕೈಗೊಂಡರು.

ಕರೇಜ್ ಪ್ರವಾಸಿ ತಾಣ ಪರಿಶೀಲಿಸಿದ ಜಿಲ್ಲಾಧಿಕಾರಿ

ವಿಜಯಪುರ: ನಗರದ ಐತಿಹಾಸಿಕ ಕರೇಜ್ (ನೀರು ಸರಬರಾಜು ಸುರಂಗ ಮಾರ್ಗ) ವ್ಯವಸ್ಥೆಯನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಇಂಡಿಯನ್ ಹೆರಿಟೇಜ್ ಸಿಟಿ ನೆಟ್ ವರ್ಕ್ ಫೌಂಡೇಶನ್ ಸಂಸ್ಥೆ (ಡಿಪಿಆರ್) ಕ್ರಿಯಾ ಯೋಜನೆ ಸಿದ್ದಪಡಿಸಲು ಜೂ.24 ಹಾಗು 25ರಂದು ನಗರಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಇಟಗಿ ಪೆಟ್ರೋಲ್ ಪಂಪ್ ಬಳಿ ಇರುವ ವೆಂಟ್ ಸ್ವಚ್ಛಗೊಳಿಸುವಂತೆ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿರುವ ಐತಿಹಾಸಿಕ ಕರೇಜ್ ವ್ಯವಸ್ಥೆಯನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಬೇಕೆಂಬ ಹಿನ್ನೆಲೆಯಲ್ಲಿ ಕರೇಜ್ ಮಾರ್ಗದಲ್ಲಿ ಕೈಗೊಳ್ಳಬೇಕಾಗಿರುವ ಸುರಕ್ಷತಾ ಕ್ರಮಗಳ ಕುರಿತು ಇಟಗಿ ಪೆಟ್ರೋಲ್ ಬಂಕ್ ಹತ್ತಿರ ಕರೇಜ್ ವೆಂಟ್ಸ್ ಹಾಗೂ ಮಾರ್ಗ ಪರಿಶೀಲಿಸಿ ಅವರು ಮಾತನಾಡಿದರು. ಚರಂಡಿ ನೀರು ವೆಂಟ್‌ನಲ್ಲಿ ಹರಿಯುವುದನ್ನು ತಡೆಗಟ್ಟಲು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.



2024–25ನೇ ಸಾಲಿನ ಆಯವ್ಯಯದಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ನಗರ ಪ್ರದೇಶದಲ್ಲಿರುವ ಐತಿಹಾಸಿಕ ಕರೇಜ್ -ನೀರು ಸರಬರಾಜು ಸುರಂಗ ಮಾರ್ಗ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ವಿಜಯಪುರ ಕರೇಜ್ ಪುನಶ್ಚೇತನ ಮತ್ತು ಅಭಿವೃದ್ಧಿಗೊಳಿಸಲು ಡಿಪಿಆರ್ ತಯಾರಿಸುವ ಕಾರ್ಯದಲ್ಲಿ ನೈಪುಣ್ಯತೆ ಹೊಂದಿರುವ ಐಎಚ್ ಸಿಎನ್ ಎಫ್ ಸಂಸ್ಥೆಯವರಿಂದ ವಿಸ್ತೃತ ಡಿಪಿಆರ್ ಯೋಜನಾ ವರದಿ ಸಿದ್ದಪಡಿಸಲು ನೇಮಕ ಮಾಡಿದೆ ಎಂದರು.

ಆ ನುರಿತ ತಂಡ ಜೂ.24 ಮತ್ತು 25 ರಂದು ಸ್ಥಳ ಪರಿಶೀಲನೆ ಮಾಡಿ ವರದಿ ಮಾಡುವುದಕ್ಕೆ ನಗರಕ್ಕೆ ಆಗಮಿಸುತ್ತಿದ್ದು, ಈ ಕರೇಜ್ ವ್ಯವಸ್ಥೆಯನ್ನು ಪರಿಶೀಲನೆ ಮಾಡಲು ಸೂಕ್ತವಾದ ಸ್ಥಳ ಗುರುತಿಸಿ ಸುರಂಗ ಮಾರ್ಗದಲ್ಲಿ ತಂಡದ ವೀಕ್ಷಣೆಗೆ ವ್ಯವಸ್ಥೆ ಕೈಗೊಳ್ಳಬೇಕಿದೆ. ಪ್ರವಾಸೋದ್ಯಮ ಇಲಾಖೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಮಹಾನಗರ ಪಾಲಿಕೆ, ಅಗ್ನಿಶಾಮಕ ಇಲಾಖೆ, ನಗರ ಕುಡಿಯುವ ನೀರು ಸರಬರಾಜು ಮತ್ತು ಚರಂಡಿ ಇಲಾಖೆ ನೇತೃತ್ವದಲ್ಲಿ ತಂಡ ನೇಮಕ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರೊಬೇಷನರಿ ಐಎಎಸ್ ಅಧಿಕಾರಿ ಅಭಿಷೇಕ ಸೆಹರಾ, ಪಾಲಿಕೆಯ ಎಸ್.ಇ. ತಿಮ್ಮಪ್ಪ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಶಶಿಧರ ನಲಿಗಾರ್, ಪರಿಸರ ಅಭಿಯಂತರ ಹಳ್ಳಿ ಅಬಿಷೇಕ, ಪ್ರವಾಸಿ ಅಧಿಕಾರಿ ಬಿ.ಎಚ್.ಕುಡಪಲಿ, ಅನಿಲಕುಮಾರ, ಪೀಟರ್ ಅಲೆಕ್ಸಾಂಡರ್, ಡಾ. ಅಮೀನ ಹುಲ್ಲೂರ, ಧರ್ಮೇಂದ್ರ ಜಾಧವ ಇದ್ದರು.

ಕಿರುಸುದ್ದಿ

ನೀಟ್ ಪರೀಕ್ಷೆಗೆ ಅವಕಾಶ ನಿರಾಕರಣೆ



7 ನಿಮಿಷ ತಡವಾಗಿ ಬಂದ ವಿದ್ಯಾರ್ಥಿನಿ

• **ಕೊಪ್ಪಳ:** ನೀಟ್ ಮರುಪರೀಕ್ಷೆ ಬರೆಯಲು ವಿದ್ಯಾರ್ಥಿನಿ ಏಳು ನಿಮಿಷ ತಡವಾಗಿ ಬಂದ ಕಾರಣ ಪರೀಕ್ಷೆಗೆ ಅವಕಾಶ ನಿರಾಕರಿಸಲಾಗಿದೆ. ಗಂಗಾವತಿ ಮೂಲದ ಪಾತಿಮಾ ಎಂಬ ವಿದ್ಯಾರ್ಥಿನಿ ನೀಟ್ ಮರುಪರೀಕ್ಷೆ ಬರೆಯಲು ಕೊಪ್ಪಳದ ಪ್ರಥಮ ದರ್ಜೆ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಬಂದಿದ್ದರು. ಮಧ್ಯಾಹ್ನ 1.53ಕ್ಕೆ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿದ್ದ ಪಾತಿಮಾಗೆ ಪ್ರವೇಶ ನಿರಾಕರಿಸಲಾಯಿತು. ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ಮಧ್ಯಾಹ್ನ 1.30 ಪರೀಕ್ಷಾ ಕೇಂದ್ರಕ್ಕೆ ಹಾಜರಿರಬೇಕಿತ್ತು. ಪರೀಕ್ಷೆ 2ಕ್ಕೆ ನಿಗದಿಯಾಗಿತ್ತು. ವಿದ್ಯಾರ್ಥಿನಿ ಗಂಗಾವತಿ ನಗರದಿಂದ ಕೊಪ್ಪಳದ ಪರೀಕ್ಷಾ ಕೇಂದ್ರಕ್ಕೆ ಬರುವಾಗ ವಾಹನ ಕೆಟ್ಟು ಹೋಗಿದೆ, ಇದರಿಂದ ವಿದ್ಯಾರ್ಥಿನಿ ಪರೀಕ್ಷಾ ಕೇಂದ್ರಕ್ಕೆ ತಲುಪುವಷ್ಟರಲ್ಲಿ ಮಧ್ಯಾಹ್ನ 1.53 ಆಗಿತ್ತು. ಪರೀಕ್ಷಾ ಕೇಂದ್ರಕ್ಕೆ ಬಂದ ವಿದ್ಯಾರ್ಥಿನಿಯನ್ನು ಪೊಲೀಸರು ಗೇಟ್ ನಿಂದ ಒಳಗೆ ಕಳುಹಿದ್ದಾರೆ. ಆದರೆ, ಪರೀಕ್ಷಾ ಸಿಬ್ಬಂದಿ ಪರೀಕ್ಷೆ ಬರೆಯಲು ಅವಕಾಶ ಕೊಟ್ಟಿಲ್ಲ. ಇದರಿಂದ ವಿದ್ಯಾರ್ಥಿನಿ ಪರಿಪರಿಯಾಗಿ ಬೇಡಿಕೊಂಡರೂ ಅವಕಾಶ ನೀಡಲಿಲ್ಲ.

ಯುವಕನ ಕತ್ತು ಸೀಳಿ ಭೀಕರ ಹತ್ಯೆ

• **ರಾಯಚೂರು:** ನಗರದ ಕುಲಸುಂಬಿ ಕಾಲೊನಿಯಲ್ಲಿ ಯುವಕನ ಕತ್ತು ಸೀಳಿ ಭೀಕರ ಹತ್ಯೆ ಮಾಡಿದ ಘಟನೆ ಜರುಗಿದೆ. ಹತ್ಯೆಯಾದ ಯುವಕನನ್ನು ಕಟ್ಟಡ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ ತಿರುಪತಿ (34) ಎಂದು ಗುರುತಿಸಲಾಗಿದೆ. ಶುಕ್ರವಾರ ಹತ್ಯೆಯಾಗಿದ್ದು ಹತ್ಯೆಗೆ ನಿಖರ ಮಾಹಿತಿ ತಿಳಿದುಬಂದಿಲ್ಲ, ಹತ್ಯೆ ಮಾಡಿದ ಬಳಿಕ ಆರೋಪಿಗಳು ಮನೆಗೆ ಬೀಗ ಹಾಕಿ ಹೋಗಿದ್ದು, ಸುತ್ತಮುತ್ತಲಿನ ನಿವಾಸಿಗಳಿಗೆ ಶವದ ವಾಸನೆ ಬರುತ್ತಿದ್ದ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಪೊಲೀಸರು ಮನೆಯ ಬೀಗ ಮುರಿದು ನೋಡಿದ್ದು ಮೃತದೇಹವನ್ನು ಪರಿಶೀಲಿಸಿ ತನಿಖೆ ಆರಂಭಿಸಿದ್ದಾರೆ. ಕೊಲೆಗೆ ನಿಖರ ಮಾಹಿತಿ ಗೊತ್ತಾಗಿಲ್ಲ, ಈ ಬಗ್ಗೆ ಪೊಲೀಸರು ಮಾಧ್ಯಮಗಳಿಗೆ ಯಾವುದೇ ಮಾಹಿತಿ ನೀಡುತ್ತಿಲ್ಲ ತನಿಖೆಯು ಬಳಿಕವೇ ಹೇಳಲಾಗುವುದು ಎನ್ನುತ್ತಿದ್ದಾರೆ. ಕುಟುಂಬಸ್ಥರು ಯಾವುದೇ ದೂರು ನೀಡಿಲ್ಲ ಎನ್ನಲಾಗುತ್ತಿದೆ. ಭೀಕರ ಹತ್ಯೆಯಿಂದ ಸುತ್ತಮುತ್ತಲಿನ ನಿವಾಸಿಗಳು ಬೆಚ್ಚಿಬಿದ್ದಿದ್ದಾರೆ. ಸ್ಥಳೀಯರ ಪ್ರಕಾರ ಹತ್ಯೆಯಾದ ತಿರುಪತಿಯ ಸಹೋದರಿಗೂ ಬೆಂಕಿ ಹಚ್ಚಿ ಕೊಲೆ ಮಾಡಲಾಗಿತ್ತು, ಈಗ ಅವನ ಸಹೋದರನೂ ಕತ್ತು ಸೀಳಿದ ಸ್ಥಿತಿಯಲ್ಲಿ, ರುಂಡದಿಂದ ತಲೆ ಬೇರ್ಪಟ್ಟ ಸ್ಥಿತಿಯಲ್ಲಿ ಶವ ಪತ್ತೆಯಾಗಿದ್ದು ಸಾಕಷ್ಟು ಅನುಮಾನಕ್ಕೆ ಕಾರಣವಾಗಿದೆ. ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಗಾಂಜಾ ಮಾರಾಟ: ಮೂವರ ಬಂಧನ

• **ರಾಯಚೂರು:** ಜಿಲ್ಲೆಯ ಪೊಲೀಸರು ಗಾಂಜಾ ಮಾರಾಟ ಜಾಲವನ್ನು ಭೇದಿಸಿ ಮೂವರನ್ನು ಬಂಧಿಸಿ ಅವರಿಂದ 5,12,900 ಮೌಲ್ಯದ 5ಕೆಜಿ 210 ಗ್ರಾಂ ಒಣ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಜಿಲ್ಲೆಯ ಸಿಂಧನೂರು ತಾಲೂಕಿನ ಆರ್‌ಹೆಚ್ ಕ್ಯಾಂಪನ ಹನುಮೇಶ ಸರ್ಕಾರ್, ಸ್ವಾಗತ್ ಸರ್ಕಾರ್ ಹಾಗೂ ಮಣಿಶಂಕರ ಸರ್ಕಾರ್ ಬಂಧಿತರಾಗಿದ್ದಾರೆ. ಇತ್ತೀಚೆಗೆ ಜಿಲ್ಲೆಯಲ್ಲಿ ಗಾಂಜಾ ಮಾರಾಟ ಅದರಲ್ಲೂ ವಿಶೇಷವಾಗಿ ಸಿಂಧನೂರು, ದೇವದುರ್ಗ ತಾಲೂಕ ಸೇರಿದಂತೆ ಇತರೆಡೆಗಳಲ್ಲಿ ಅತ್ಯಧಿಕವಾಗಿ ಮಾರಾಟವಾಗುತ್ತಿರುವ ಬಗ್ಗೆ ದೂರುಗಳಿದ್ದವು.

ಇದರಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಅವರು ಸಿಂಧನೂರು ಗ್ರಾಮೀಣ ಸಿಪಿಐ ವಿನಾಯಕ ನೇತೃತ್ವದಲ್ಲಿ ತಂಡ ರಚಿಸಿ ಕಾರ್ಯಾಚರಣೆ ಮಾಡಿ ಇವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹನುಮೇಶ ಸರ್ಕಾರ್ ಹಾಗೂ ಸ್ವಾಗತ್ ಸರ್ಕಾರ್ ಅವರಿಂದ ಮೂರು ಕೆಜಿ 900ಗ್ರಾಂ ವಶಪಡಿಸಿಕೊಂಡಿದ್ದು ಇದು 30,9000 ಮೌಲ್ಯದ್ದಾಗಿದ್ದರೆ ಮಣಿಶಂಕರ ಸರ್ಕಾರ್‌ನಿಂದ 2ಕೆಜಿ 120ಗ್ರಾಂ ಒಣ ಗಾಂಜಾವನ್ನು ಭಾನುವಾರ ನಡೆಸಿದ ಎರಡು ಪ್ರತ್ಯೇಕ ಕಾರ್ಯಾಚರಣೆಯಲ್ಲಿ ವಶಪಡಿಸಿಕೊಂಡಿದ್ದು ಇದರ ಮೌಲ್ಯ ಅಂದಾಜು 21,2000 ಮೌಲ್ಯದ್ದಾಗಿದೆ. ಹನುಮೇಶ ಸರ್ಕಾರ್, ಸ್ವಾಗತ್ ಸರ್ಕಾರ್, ಮಣಿಶಂಕರ ಸರ್ಕಾರ್ ಹಾಗೂ ಶಿವಕುಮಾ ಮಂಡಲ್ ನಾಲ್ವರು ಸೇರಿ ಬೇರೆಡೆಯಿಂದ ಗಾಂಜಾ ತಂದು ಕ್ಯಾಂಪ್‌ನಲ್ಲಿ ಮಾರಾಟ ಮಾಡುತ್ತಿದ್ದರು. ಹನುಮೇಶ ಸರ್ಕಾರ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ವಾಗ್ದಾಳಿ

ಪಟ್ಟಾಭಿಷೇಕದ ಗುಂಗಿನಿಂದ ಹೊರ ಬನ್ನಿ



• **ಬೆಳಗಾವಿ:** ರಾಜ್ಯದಲ್ಲಿ ಮಳೆ ಅಭಾವ ಎದುರಾಗಿದೆ. ಚುನಾವಣೆ ಹಾಗೂ ಪಟ್ಟಾಭಿಷೇಕದ ಗುಂಗಿನಿಂದ ಹೊರ ಬಂದು ಆಡಳಿತದತ್ತ ಗಮನಹರಿಸುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತೀವ್ರ ವಾಗ್ದಾಳಿ ನಡೆಸಿದರು.

ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಹಿನ್ನೆಲೆಯಲ್ಲಿ ಬೆಳಗಾವಿಗೆ ಆಗಮಿಸಿದ ಸಂದರ್ಭದಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ತಾವು ಈ ಬಾರಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಕಳೆದ ಬಾರಿ ಐಹೊಳೆ ಮತ್ತು ಪಟ್ಟದಕಲ್ಲಿನಲ್ಲಿ ಪಾಲ್ಗೊಂಡಿದ್ದನ್ನು ಸ್ಮರಿಸಿದ ಅವರು, ಬೆಳಗಾವಿ ಜಿಲ್ಲಾಡಳಿತ ಅತ್ಯುತ್ತಮವಾಗಿ ಕಾರ್ಯಕ್ರಮ ಆಯೋಜಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್ ಕಾರ್ಯಕ್ರಮದ ಬಗ್ಗೆ ಸ್ಪಷ್ಟನೆ ನೀಡಿದ ಅವರು, ಅದು ಕೇವಲ ಆರ್‌ಎಸ್‌ಎಸ್ ಕಾರ್ಯಕ್ರಮವಲ್ಲ, ರಾಜ್ಯ ಮತ್ತು ದೇಶ ಕಂಡ ಜನಸಂಘ ಹಾಗೂ ಜನತಾ ಪಾರ್ಟಿಯ ಅಪ್ರತಿಮ ನಾಯಕ, ಅದ್ಭುತ ವಾಗ್ಮಿ ಜಗನ್ನಾಥ್ ಜೋಶಿಯವರಸ್ಮರಣಾರ್ಥ ನಿರ್ಮಿಸಿರುವ ಭವನದ ಉದ್ಘಾಟನಾ ಕಾರ್ಯಕ್ರಮವಾಗಿದೆ. ಸಂಘದ ಹಿರಿಯ ಮುಖಂಡರಾದ ದತ್ತಾತ್ರೇಯ ಹೊಸಬಾಳೆಯವರು ಇದನ್ನು ಉದ್ಘಾಟಿಸುತ್ತಿದ್ದು, ನಾನೂ ಕೂಡ ಆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ ಎಂದರು.

ರಾಜ್ಯದಲ್ಲಿನ ಮಳೆ ಕೊರತೆ ಇದೆ. ಈ ಬಾರಿ 'ಸೂಪರ್ ಎಲ್ನಿನೋ' ಪ್ರಭಾವದಿಂದ ದೇಶಾದ್ಯಂತ ಶೇ.40ರಷ್ಟು ಮಳೆ ಕೊರತೆಯಾಗುವ ಸಾಧ್ಯತೆಯಿದೆ. ರಾಜ್ಯದ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಚುನಾವಣೆ ಹಾಗೂ ಪಟ್ಟಾಭಿಷೇಕ ಎಲ್ಲವೂ ಮುಗಿದಿದೆ. ದೊಡ್ಡ ಕಾರ್ಯಕ್ರಮಗಳು ಮತ್ತು ಭ್ರಷ್ಟಾಚಾರದ ಹಣವನ್ನು ಹೇಗೆ ಖರ್ಚು ಮಾಡುವುದು ಎಂಬುದರ ಮೇಲೆಯೇ ನಿಮ್ಮ ಗಮನವಿದ್ದಂತಿದೆ. ಇದನ್ನು ಬಿಟ್ಟು ಆಡಳಿತದ ಕಡೆ ಗಮನಹರಿಸಿ ಎಂದು ತೀಕ್ಷ್ಣವಾಗಿ ಟೀಕಿಸಿದರು.

ಮಳೆ ಕೊರತೆಯಿಂದ ದೊಡ್ಡ ವಿಪತ್ತು ಎದುರಾಗಲಿದ್ದು, ಮೇವು ಮತ್ತು ಕುಡಿಯುವ ನೀರಿನ ಅಭಾವ ಸೃಷ್ಟಿಯಾಗಲಿದೆ. ಕೂಡಲೇ ಕೃಷಿ ಮಂತ್ರಿಯನ್ನು ನೇಮಿಸಿ, ಕಂದಾಯ ಸಚಿವರಿಗೆ ಜವಾಬ್ದಾರಿ ನೀಡಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರವು ನಮ್ಮ ಇಲಾಖೆಯ ಮೂಲಕ ಆಹಾರ ಪೂರೈಕೆ ನಿರ್ವಹಣೆ ಮಾಡುತ್ತಿದ್ದು, ದೊಡ್ಡ ಪ್ರಮಾಣದಲ್ಲಿ ಆಹಾರ ಸಂಗ್ರಹಿಸಿಟ್ಟುಕೊಂಡಿದ್ದೇವೆ ಎಂದು ಭರವಸೆ ನೀಡಿದರು.

ರಾಜ್ಯ ಬಿಜೆಪಿಯಲ್ಲಿ ನಾಯಕತ್ವದ ಕೊರತೆ ಇದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಪರಿಷತ್ ಚುನಾವಣೆಯ ಅಡ್ಡ ಮತದಾನವನ್ನು ಕೇಂದ್ರದ ನಾಯಕರು ಗಂಭೀರವಾಗಿ ಪರಿಗಣಿಸಿರುವುದು ನಿಜ. ಆದರೆ, ಯಾವುದೋ ಒಂದು ಘಟನೆಯ ಆಧಾರದ ಮೇಲೆ ನಾಯಕತ್ವದ ಕೊರತೆ ಬಗ್ಗೆ ತೀರ್ಮಾನ ಮಾಡಲು ಸಾಧ್ಯವಿಲ್ಲ. ಪಕ್ಷವು ಅನೇಕ ಅಡೆತಡೆ, ಏಳು-ಬೀಳುಗಳನ್ನು ಎದುರಿಸಿ ದೇಶಾದ್ಯಂತ ಗಟ್ಟಿಯಾಗಿ ನಿಂತಿದೆ. ಅಡ್ಡಮತದಾನದ ಘಟನೆಯೊಂದು ಅತ್ಯಂತ ಗಂಭೀರವಾಗಿದ್ದು, ರಾಷ್ಟ್ರೀಯ ನಾಯಕರು ಅದನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. 2028ಕ್ಕೆ ರಾಜ್ಯದಲ್ಲಿ ಮರಳಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಅಗತ್ಯ ಕೆಲಸ ಮಾಡುತ್ತೇವೆ ಎಂದರು.

ತಾವು ಮುಂದಿನ ರಾಜ್ಯಾಧ್ಯಕ್ಷರಾಗುವ ಬಗ್ಗೆ ರಾಷ್ಟ್ರೀಯ ನಾಯಕರಾಗಲಿ, ರಾಜ್ಯ ನಾಯಕರಾಗಲಿ ಅಥವಾ ಸ್ವತಃ ತಾವಾಗಲಿ ಎಲ್ಲಿಯೂ ಹೇಳಿಲ್ಲ. ಇದು ಕೇವಲ ಮಾಧ್ಯಮಗಳಲ್ಲಿ ಬರುತ್ತಿರುವ ಸುದ್ದಿಯಾಗಿದ್ದು, ಇದಕ್ಕೆ ಪ್ರತಿಕ್ರಿಯಿಸುವುದಿಲ್ಲ ಎಂದ ಅವರು, ಆರ್‌ಎಸ್‌ಎಸ್ ವಿಚಾರವಾಗಿ ಪ್ರಿಯಾಂಕ್ ಖರ್ಗೆ ಏನು ಬೇಕಾದರೂ ಮಾತನಾಡಲಿ, ನಾವು ಅದಕ್ಕೆ ಉತ್ತರ ಕೊಡುವುದಿಲ್ಲ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಪ್ರವಾಸ ದಿಢೀರ್ ರದ್ದಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಿನ್ನೆ ಸುರಿದ ಭಾರೀ ಮಳೆಯಿಂದಾಗಿ ಅವರ ವಿಮಾನಯಾನ ರದ್ದಾಗಿದೆ. ಆ ಕಾರಣಕ್ಕಾಗಿ ಅವರು ಬರುತ್ತಿಲ್ಲ ಎನ್ನುವ ಪ್ರಾಥಮಿಕ ಮಾಹಿತಿ ಇದೆ ಎಂದರು.

ಅಡ್ಡ ಮತದಾನ ಮಾಡಿದವರ ವಿರುದ್ಧ ಕ್ರಮ: ಆರ್.ಅಶೋಕ



• **ಬೆಳಗಾವಿ:** ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರನ್ನು ಶೀಘ್ರದಲ್ಲೇ ಗುರುತಿಸಿ, ಅವರ ರಾಜಕೀಯ ಭವಿಷ್ಯಕ್ಕೆ ತಕ್ಕ ಉತ್ತರ ನೀಡಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಎಚ್ಚರಿಕೆ ನೀಡಿದರು.

ಭಾನುವಾರ ನಗರದಲ್ಲಿ ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಉದ್ಘಾಟನಾ ಕಾರ್ಯಕ್ರಮದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರದ ದುರ್ಬಳಕೆ ಮಾಡಿಕೊಂಡು ವಿರೋಧ ಪಕ್ಷದ ಶಾಸಕರನ್ನು ಹೆದರಿಸಿ ಕುದುರೆ ವ್ಯಾಪಾರ ನಡೆಸುತ್ತಿದೆ ಎಂದು ಆರೋಪಿಸಿದರು.

ನೈತಿಕತೆಯ ಬಗ್ಗೆ ಬಿಜೆಪಿಯನ್ನು ಪ್ರಶ್ನಿಸುವ ಕಾಂಗ್ರೆಸ್ ಮೊದಲು ತನ್ನ ನಡೆ-ನುಡಿಗಳನ್ನು ಪರಿಶೀಲಿಸಿಕೊಳ್ಳಬೇಕು. ಅಡ್ಡ ಮತದಾನದ ಕುರಿತಂತೆ ಸಂಪೂರ್ಣ ಮಾಹಿತಿಯನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಸಲ್ಲಿಸಲು ಈಗಾಗಲೇ ಭೇಟಿಗೆ ಸಮಯ ಕೋರಲಾಗಿದೆ. ಸಮಯ ದೊರೆತ ಬಳಿಕ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರೊಂದಿಗೆ ದೆಹಲಿಗೆ ತೆರಳಿ ಸಮಗ್ರ ವರದಿ ನೀಡಲಾಗುವುದು. ಅಡ್ಡ ಮತದಾನ ಮಾಡಿದ ಶಾಸಕರನ್ನು ಯಾವುದೇ ಕಾರಣಕ್ಕೂ ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರನ್ನು 'ಕರ್ನಾಟಕದ ಚಾಣಕ್ಯ' ಎಂದು ಬಿಂಬಿಸಲಾಗುತ್ತಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅಶೋಕ, ಡಿ.ಕೆ.ಶಿವಕುಮಾರ ಯಾವ ಚಾಣಕ್ಯನೂ ಅಲ್ಲ. ಕುದುರೆ ವ್ಯಾಪಾರ ಮಾಡುವವರು ಚಾಣಕ್ಯರಾಗಲು ಸಾಧ್ಯವಿಲ್ಲ. ಕಳೆದ ಬಾರಿ ಅವರು ಸಚಿವರಾಗಿದ್ದಾಗಲೇ 17 ಶಾಸಕರು ರಾಜೀನಾಮೆ ನೀಡಿದ್ದರು. ಆಗ ಅವರ ಚಾಣಕ್ಯ ನೀತಿ ಎಲ್ಲಿತ್ತು ಎಂದು ಪ್ರಶ್ನಿಸಿದರು.

ಸಂತ್ರಸ್ತ ಕುಟುಂಬಕ್ಕೆ ಜೋಶಿ ಸಾಂತ್ವನ | ಪಿಎಸ್‌ಐ-ಡಿವೈಎಸ್ಪಿ ಅಮಾನತುಗೊಳಿಸಿ

ಆರೋಪಿತರಿಗೆ ಗಲ್ಲು ಶಿಕ್ಷೆ ವಿಧಿಸಲಿ



• **ಧಾರವಾಡ:** ಮತಾಂಧರ ಪ್ರೀತಿಗೆ ಒಳಗಾಗಿ ಕಿರುಕುಳ ತಾಳದೆ ಆತ್ಮಹತ್ಯೆಗೆ ಶರಣಾದ ತಾಲೂಕಿನ ಗರಗ ಗ್ರಾಮದ ಪೂರ್ಣಿಮಾ ವಡ್ಡರ ಮನೆಗೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಭಾನುವಾರ ಭೇಟಿ ನೀಡಿ, ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಪೂರ್ಣಿಮಾ ವಡ್ಡರ ಆತ್ಮಹತ್ಯೆ ಪ್ರಕರಣದಲ್ಲಿ ಅರ್ಜಿ ಕೊಟ್ಟರೂ ಕ್ರಮಕೈಗೊಳ್ಳದ ಪೊಲೀಸರೇ, ಲಕ್ಷ ರೂಪಾಯಿಗೆ ಸಂದಾನ ಮಾಡಿಸುವುದೇ? ಪೊಲೀಸ್ ಠಾಣೆಗಳು ದಲ್ಲಾಳಿ ಕೇಂದ್ರಗಳಾ? ಎಂದು ಪ್ರಶ್ನಿಸಿದರು.

ಬೇಕಾಬಿಟ್ಟಿ ದೂರು ದಾಖಲು: ಯುವತಿಯ ತಂದೆ-ತಾಯಿ ಅನಕ್ಷರಸ್ಥರು ಎಂದು ಅರಿತೇ ಪೊಲೀಸರು ತಮಗೆ ಬೇಕಾದಂತೆ ಎಫ್‌ಐಆರ್ (ಅಸ್ವಾಭಾವಿಕ ಸಾವು) ಎಫ್‌ಐಆರ್ ದಾಖಲಿಸಿದ್ದಾರೆ. ಅಲ್ಲದೇ, ಪ್ರಶ್ನಿಸಿದ ಹಿಂದು ನಾಯಕರ ವಿರುದ್ಧವೂ ಎಫ್‌ಐಆರ್ ದಾಖಲು ತೀವ್ರ ಖಂಡಿಸಿದರು.

ಕೆಲವು ಕಾಂಗ್ರೆಸ್ ನಾಯಕರು, ಬಿಜೆಪಿ ಮುಖಂಡರಿಗೆ ಬೆದರಿಕೆ ಹಾಕಿದ್ದಾರೆ. ಈ ಪ್ರಕರಣದಲ್ಲಿ ಬಿಜೆಪಿ-ಕಾಂಗ್ರೆಸ್ ಅಂತ ರಾಜಕಾರಣ ಮಾಡದೆ, ಓರ್ವ ಬಾಲಕಿ ಸಾವಾಗಿದೆ. ಈ ಸಂತ್ರಸ್ತ ಕುಟುಂಬಕ್ಕೆ ನ್ಯಾಯವನ್ನು ಒದಗಿಸಿಕೊಡಬೇಕು ಎಂದು ಹೇಳಿದರು.

ಪಿಎಸ್‌ಐ-ಡಿವೈಎಸ್ಪಿ ವಜಾ ಮಾಡಿ: ಅಪ್ರಾಪ್ತ ಯುವತಿ ಲೈಂಗಿಕವಾಗಿ ಬಳಸಿಕೊಂಡು, ಆಕೆ ಆತ್ಮಹತ್ಯೆಗೆ ಕಾರಣರಾದ ಇಬ್ಬರು ಯುವಕರಿಗೆ ಗಲ್ಲು ಶಿಕ್ಷೆ ವಿಧಿಸಬೇಕು. ಪ್ರಕರಣದಲ್ಲಿ ಸಿಪಿಐ ಅಮಾನತು ಮಾಡಿದರೆ ಸಾಲದು, ಪಿಎಸ್‌ಐ ಹಾಗೂ ಡಿವೈಎಸ್ ಅಮಾನತು ಮಾಡುವಂತೆ ಒತ್ತಾಯಿಸಿದರು.

ಪರಿಹಾರ ನೀಡಲು ಆಗ್ರಹ: ಅಲ್ಲದೇ, ಉಭಯ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಸ್ಥಳಕ್ಕೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ತನಿಖೆ ಮಾಡಿಸಬೇಕು. ಸಂತ್ರಸ್ತ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ಸೂಕ್ತ ಪರಿಹಾರ ನೀಡಲು ಒತ್ತಾಯ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಅಮೃತ ದೇಸಾಯಿ, ಕೆಎಂಎಫ್ ಅಧ್ಯಕ್ಷ ಶಂಕರ ಮುಗದ, ಮುಖಂಡ ದೇವರಾಜ ಶಹಪೂರ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಶಂಕರ ಕೋಮಾರದೇಸಾಯಿ, ಸವಿತಾ ಅಮರಶೆಟ್ಟಿ ಸೇರಿ ಅನೇಕರು ಇದ್ದರು.

ಸಂಬಂಧಿಕರ ಮನೆಯಲ್ಲಿ ಕಳ್ಳತನ | ಆರೋಪಿ ಬಂಧನ

25.35 ಲಕ್ಷ ರೂ.ಮೌಲ್ಯದ ಚಿನ್ನಾಭರಣ ವಶ



• **ಬೆಳಗಾವಿ:** ಮನೆಯಲ್ಲಿ ಯಾರು ಇಲ್ಲದ ವೇಳೆ ಸಂಬಂಧಿಕರ ಮನೆಗೆ ಕನ್ನ ಹಾಕಿ ಬಂಗಾರದ ಆಭರಣಗಳನ್ನು ಕಳುವು ಮಾಡಿದ್ದ ಆರೋಪಿಯನ್ನು ಬೆಳಗಾವಿ ನಗರದ ಮಾಳಮಾರುತಿ ಪೊಲೀಸರು ಬಂಧಿಸಿ, ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಳಗಾವಿ ನಗರದ ಅಮನ ನಗರ ಹಾಗೂ ನ್ಯೂ ಗಾಂಧಿ ನಗರ ಪ್ರದೇಶಗಳಲ್ಲಿರುವ ತಮ್ಮ ಸಂಬಂಧಿಕರ ಮನೆಗಳಲ್ಲಿ ಇಡಲಾಗಿದ್ದ ಬಂಗಾರದ ಆಭರಣಗಳನ್ನು ಕಳುವು ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಶ್ಫಾಕ್ ಶಾಜಾಸಾಬ ಸಾರಿ (42) ಎಂಬ ಆರೋಪಿಯನ್ನು ಬಂಧಿಸಿದ್ದು, ಬಂಧಿತನಿಂದ ಸುಮಾರು ರೂ.25.35 ಲಕ್ಷ ಮೌಲ್ಯದ 169 ಗ್ರಾಂ ತೂಕದ ಬಂಗಾರದ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣದ ತನಿಖೆ ಮತ್ತು ಕಾರ್ಯಾಚರಣೆಯನ್ನು ಸಿಪಿಐ ಬಿ.ಆರ್.ಗಡ್ಡೇಕರ ಅವರ ಮಾರ್ಗದರ್ಶನದಲ್ಲಿ ಪಿಎಸ್‌ಐ ಆನಂದ ಆದಗೊಂಡ, ಶ್ರೀಶೈಲ್ ಹುಳಗೇರಿ, ಉದಯ ಪಾಟೀಲ, ಪಿ.ಎಂ.ಮೊಹಿತೆ ಹಾಗೂ ಪ್ರೊಬೇಷನರಿ ಪಿಎಸ್‌ಐಗಳಾದ ಪ್ರಸನ್ನಕುಮಾರ ಮತ್ತು ಸಿದ್ಧಾರ್ಥ ನೇತೃತ್ವದಲ್ಲಿ ನಡೆಸಲಾಯಿತು.

ಇದೇ ವೇಳೆ ಮಾಳಮಾರುತಿ ಪೊಲೀಸ್ ಠಾಣೆಯ ಸಿಬ್ಬಂದಿ ಬಸವರಾಜ ಬಸ್ತವಾಡ, ಅರುಣ ಕಾಂಬಳೆ, ಎಂ.ಜೆ.ಕುರೇರ, ಜಗನ್ನಾಥ ಭೋಸಲೆ, ಬಿ.ಎಂ.ಕಲ್ಲಪ್ಪನವರ, ಸಿ.ಜೆ. ಚಿನ್ನಪ್ಪಗೋಳ, ಸಿ.ಐ.ಚಿಗರಿ, ಕೆ.ಬಿ.ಗೌರಾಣಿ, ಮಹೇಶ್ ಒಡೆಯರ, ಮಲ್ಲಿಕಾರ್ಜುನಗಾಡವಿ ಹಾಗೂ ತಾಂತ್ರಿಕ ವಿಭಾಗದ ಸಿಬ್ಬಂದಿ ರಮೇಶ್ ಅಕ್ಕಿ, ಮಹಾದೇವ ಕಾಸೀದ ಮತ್ತು ದೀಪಕ್ ದೊಡಗೋಣಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಹಂದಿ ಜ್ವರಕ್ಕೆ ಚವತ್ತಿ ಗ್ರಾಮದ ವ್ಯಕ್ತಿ ಬಲಿ

• **ಯಲ್ಲಾಪುರ:** ತಾಲೂಕಿನ ಚವತ್ತಿ ಗ್ರಾಮದಲ್ಲಿ ಇನ್‌ಫ್ಲುಯೆಂಜಾ-ಎ (ಹಂದಿ ಜ್ವರ) ಸೋಂಕಿಗೆ ತುತ್ತಾಗಿ ವ್ಯಕ್ತಿ ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ.

ತಾಲೂಕಿನ ಚವತ್ತಿ ಗ್ರಾಮದ ನಿವಾಸಿ ರಾಜು ಮಂಜಾ ಗೌಡ (41) ಅವರು ಇನ್‌ಫ್ಲುಯೆಂಜಾ-ಎ (Influenza A) ವೈರಲ್ ಜ್ವರಕ್ಕೆ ತುತ್ತಾಗಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ರಾಜು ಮಂಜಾ ಗೌಡ ಅವರಿಗೆ ಜೂನ್ 10ರಂದು ಜ್ವರ ಕಾಣಿಸಿಕೊಂಡ ಹಿನ್ನೆಲೆ ಉಮ್ಮಚಗಿಯ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯಲಾಗಿತ್ತು. ಬಳಿಕ ಜೂನ್ 12ರಂದು ಮತ್ತೆ ಜ್ವರ ಕಾಣಿಸಿಕೊಂಡ ಕಾರಣ ಮಂಚಿಕೇರಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಆದರೂ ಆರೋಗ್ಯದಲ್ಲಿ ಚೇತರಿಕೆ ಕಾಣದ ಹಿನ್ನೆಲೆಯಲ್ಲಿ ಜೂನ್ 16ರಂದು ಜ್ವರ ಹಾಗೂ ಸುಸ್ತಿನ ಲಕ್ಷಣಗಳು ಹೆಚ್ಚಾದ ಕಾರಣ ಶಿರಸಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗೆ ಜೂನ್ 17ರಂದು ಮಂಗಳೂರಿನ ಕೆ.ಎಸ್.ಹೆಗಡೆ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪರೀಕ್ಷೆಯಲ್ಲಿ ಇನ್‌ಫ್ಲುಯೆಂಜಾ-ಎ ಸೋಂಕು ದೃಢಪಟ್ಟಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಜೂನ್ 21ರಂದು ಅವರು ಮೃತಪಟ್ಟಿದ್ದಾರೆ.

ಸೋಂಕಿಗೆ ತುತ್ತಾಗಿ ಮೃತ ಪಟ್ಟ ರಾಜು ಗೌಡ ಅವರ ಕುಟುಂಬ ಸದಸ್ಯರನ್ನು ತಾಲೂಕು ಯಲ್ಲಾಪುರ ಆಸ್ಪತ್ರೆಗೆ ಕರೆದೊಯ್ದು ಅವರನ್ನು ತಪಾಸಣೆಗೆ ಒಳಪಡಿಸಲಾಗಿತ್ತು. ಅವರಲ್ಲಿ ಯಾರಿಗೂ ಸೋಂಕು ಕಂಡು ಬಂದಿಲ್ಲ. ಇದರಿಂದಾಗಿ ಗ್ರಾಮದಲ್ಲಿ ರೋಗ ಬೇರೆಯವರಿಗೆ ಹರಡುವ ಅಪಾಯ ತಪ್ಪಿದೆ.

ಹಂದಿ ಜ್ವರ ಲಕ್ಷಣ

ಇನ್‌ಫ್ಲುಯೆಂಜಾ-ಎ ವೈರಲ್ ಸೋಂಕು ತಗಲಿರುವ ಜ್ವರವು ಮೂಗು, ಗಂಟಲು ಹಾಗೂ ಶ್ವಾಸಕೋಶವನ್ನು ಬಾಧಿಸುವ ಸಾಂಕ್ರಾಮಿಕ ಉಸಿರಾಟದ ಕಾಯಿಲೆಯಾಗಿದೆ. ತೀವ್ರ ಜ್ವರ, ಮೈ ಕೈ ನೋವು, ಕೆಮ್ಮು, ನೆಗಡಿ, ತಲೆನೋವು, ಗಂಟಲು ನೋವು ಹಾಗೂ ಸುಸ್ತು ಇದರ ಪ್ರಮುಖ ಲಕ್ಷಣಗಳಾಗಿವೆ. ಸೋಂಕಿತರು ಕೆಮ್ಮಿದಾಗ ಅಥವಾ ಸೀನಿದಾಗ ಗಾಳಿಯ ಮೂಲಕ ಇತರರಿಗೆ ಹರಡುವ ಸಾಧ್ಯತೆ ಇರುತ್ತದೆ.
ಈ ಘಟನೆ ಯಲ್ಲಾಪುರ ಭಾಗದಲ್ಲಿ ಆತಂಕಕ್ಕೆ ಕಾರಣವಾಗಿದ್ದು, ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ. ಸಾರ್ವಜನಿಕರು ಜ್ವರ, ಕೆಮ್ಮು, ನೆಗಡಿ, ಮೈಕೈ ನೋವು, ಗಂಟಲು ನೋವು, ಉಸಿರಾಟದ ತೊಂದರೆ ಅಥವಾ ಅತಿಯಾದ ಸುಸ್ತು ಕಂಡುಬಂದಲ್ಲಿ ಕೂಡಲೇ ಹತ್ತಿರದ ಸರ್ಕಾರಿ ಅಥವಾ ತಾಲೂಕು ಆಸ್ಪತ್ರೆಗೆ ಭೇಟಿ ನೀಡಿ ತಪಾಸಣೆ ಹಾಗೂ ಚಿಕಿತ್ಸೆ ಪಡೆಯುವಂತೆ ಆರೋಗ್ಯ ಇಲಾಖೆ ವೈದ್ಯಾಧಿಕಾರಿ ಡಾ. ನರೇಂದ್ರ ಪವಾರ ತಿಳಿಸಿದ್ದಾರೆ.
ತೀವ್ರ ಉಸಿರಾಟದ ತೊಂದರೆ, ಎದೆನೋವು, ನಿರ್ಜಲೀಕರಣ ಅಥವಾ ಗೊಂದಲದ ಲಕ್ಷಣಗಳು ಕಂಡುಬಂದರೆ ತುರ್ತು ಚಿಕಿತ್ಸೆ ಪಡೆಯುವುದು ಅಗತ್ಯ ಎಂದು ವೈದ್ಯರು ತಿಳಿಸಿದ್ದಾರೆ.

ಇನ್‌ಸ್ಪೈರ್ ಅವಾರ್ಡ್‌ಗೆ ಆಯ್ಕೆ



• **ಮಸ್ಕಿ:** 2025-26ನೇ ಸಾಲಿನ ಇನ್‌ಸ್ಪೈರ್ ಅವಾರ್ಡ್ ಯೋಜನೆಯಡಿ ಪ್ರಾಯೋಗಿಕ ವಿಜ್ಞಾನ ಮಾದರಿ ತಯಾರಿಸಿ ಮೆದಿಕಿನಾಳ ಗ್ರಾಮದ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಮೇಘಾ (ತಂದೆ ತಿಪ್ಪಣ್ಣ) ಆಯ್ಕೆಯಾಗಿದ್ದಾಳೆ. ವಿದ್ಯಾರ್ಥಿನಿಯ ನವೀನ ವಿಜ್ಞಾನ ಮಾದರಿಯನ್ನು ಪರಿಗಣಿಸಿ ಕೇಂದ್ರ ಸರ್ಕಾರದಿಂದ 10,000 ಪ್ರೋತ್ಸಾಹಧನ ಮಂಜೂರಾಗಿದ್ದು, ಮುಂದಿನ ಹಂತದ ಸ್ಪರ್ಧೆಗಳಿಗೆ ಭಾಗವಹಿಸುವ ಅವಕಾಶ ಲಭಿಸಿದೆ. ಈ ಸಾಧನೆಗೆ ಶಾಲೆಯ ಅತಿಥಿ ಶಿಕ್ಷಕರು ಸೇರಿದಂತೆ ಎಲ್ಲ ಶಿಕ್ಷಕರ ಉತ್ತಮ ಮಾರ್ಗದರ್ಶನದಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಬಾಲಕಿಯ ತಂದೆ ತಿಪ್ಪಣ್ಣ ಅವರು ಹೇಳಿದರು. ವಿದ್ಯಾರ್ಥಿನಿಯ ಈ ಸಾಧನೆಗೆ ಮೆದಿಕಿನಾಳ ಸರ್ಕಾರಿ ಮಾದರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹರ್ಷ ವ್ಯಕ್ತಪಡಿಸಿದ್ದು, ಮೇಘಾಳಿಗೆ ಅಭಿನಂದನೆ ಸಲ್ಲಿಸಿದ್ದಾರೆ. ವಿದ್ಯಾರ್ಥಿನಿಯ ಸಾಧನೆಯು ಶಾಲೆಗೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಿದೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.

ಬೈಕ್ ಸವಾರ ಸಜೀವ ದಹನ

• **ರನ್ನ ಬೆಳಗಲಿ:** ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮುಗಳಖೋಡ ಕ್ರಾಸ್ ಬಳಿ ಮಹಾಲಿಂಗಪುರದ ಮಾರ್ಗವಾಗಿ ಮುಧೋಳಕ್ಕೆ ಹೊರಡುತ್ತಿರುವ ಸಂದರ್ಭದಲ್ಲಿ ಮುಧೋಳದಿಂದ ಬರುತ್ತಿರುವ ಬಸ್ಸಿಗೆ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್‌ಗೆ ಬೆಂಕಿ ಹತ್ತಿಕೊಂಡು ಸ್ಥಳದಲ್ಲೇ ಬೈಕ್ ಸವಾರ ಸಜೀವ ದಹನವಾದ ಘಟನೆ ಭಾನುವಾರ ನಡೆದಿದೆ. ಮುಧೋಳ ನಗರದ ಜನತಾ ಪ್ಲಾಟದ ಪವನಚುಕ್ಕಿ ನಿವಾಸಿ ನವೀನ ಹನಮಂತ ಗೋರ್ಖಾ (20) ಯುವಕ ಎಂದು ಗುರುತಿಸಲಾಗಿದೆ. ಸ್ಥಳಕ್ಕೆ ಮುಧೋಳ ಪೊಲೀಸ್ ಠಾಣೆಯ ಅಧಿಕಾರಿಗಳು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

CHANGE OF NAME
I, **BASAVARAJ TALAVAI** (Old Name) Resident of Goudar Oni, Saidapur, Dharwad, State: Karnataka, Pin Code: 580008 have changed my name as **BASAVARAJ TALAWAI** (New Name) henceforth I will be called and recognized by new name for all future purposes, dated: 21/06/2026.

CHANGE OF NAME
I, **FAYSAL** (Old Name) R/o: H No. 79, Danish Compound, Po Yelwadikavoor, Bhatkal - 581320, Uttara Kannada, Karnataka have changed my name as **FAYSAL HUSEN S/O: HUSEN** (New Name) henceforth I will be called and recognized by new name for all future purposes, dated: 21/06/2026.

CHANGE OF NAME
I, **SABIHA SHILEDAR** (Old Name) Resident of No: 873 Tashildar Galli, Ullagaddi Khanapur, Belagavi - 591221 have changed my name as **SABIHA ASHIF PANARI** (New Name) henceforth I will be called and recognized by new name for all future purposes, dated: 20/06/2026.

CHANGE OF NAME
I, **SUJAN SHETTY** (Old Name) Resident of H. No. 60. Near Mayur Park Yalakki Shettar Colony Dharwad 580004 Karnataka have changed my name as **SUJANKUMAR SHETTY** (New Name) henceforth I will be called and recognized by new name for all future purposes, dated: 21/06/2026.

CHANGE OF NAME
I, **SHENAZ JALEEL KHAN** (Old Name) Resident of 74/A, Jyoti Colony, Sai Nagar, Unkal, Hubballi - Dharwad City - 580031, Karnataka, India have changed my name as **SHENAZ MOHAMMEDSUHAIL SOUDAGAR** (New Name) henceforth I will be called and recognized by new name for all future purposes, dated: 19/06/2026.

CHANGE OF NAME
I, **FATIMA NIDHA SHAIKH** (Old Name) R/o: H No.14, Puravarga, Bhatkal - 581320, Uttara Kannada, Karnataka have changed my name as **SHAIKH FATIMA NIDA W/O: FAYSAL HUSEN** (New Name) henceforth I will be called and recognized by new name for all future purposes, dated: 21/06/2026.

ಅಸಲ ದಾವಾ ನಂ: 127/2024
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಕುಂದಗೋಳ ಇವರ ನ್ಯಾಯಾಲಯದಲ್ಲಿ
ವಾದಿಯರು : 1) ಶ್ರೀಮತಿ ಪಾರ್ವತಿ ಪಾಟೀಲ ವಗೈರೆ
ವಿರುದ್ಧ
ಪ್ರತಿವಾದಿಯರು : 1) ಶ್ರೀಮತಿ ಜ್ಯೋತಿ ಬಾಲರೆಡ್ಡಿ ಹಾಗೂ ವಗೈರೆ
ಆದೇಶ 5 ನಿಯಮ 20(1ಎ) ರ ಅಡಿ ನೋಟಿಸು
ಪ್ರತಿವಾದಿ 2 (2)- ಶ್ರೀಮತಿ ಪ್ರೇಮವ್ವ ತಂದೆ ಈರಪ್ಪ ಸುಂಕದ ವಯ: 52 ವರ್ಷ ಉದ್ಯೋಗ : ಒಕ್ಕಲುತನ ಸಾ॥ ಉಮಚಗಿ ತಾ॥ ಹುಬ್ಬಳ್ಳಿ ಜಿ॥ ಧಾರವಾಡ
ಪ್ರತಿವಾದಿ 2 (3)- ಶ್ರೀಮತಿ ಮಂಜವ್ವ ತಂದೆ ಈರಪ್ಪ ಸುಂಕದ ವಯ: 49 ವರ್ಷ ಉದ್ಯೋಗ : ಒಕ್ಕಲುತನ ಸಾ॥ ಉಮಚಗಿ ತಾ॥ ಹುಬ್ಬಳ್ಳಿ ಜಿ॥ ಧಾರವಾಡ
ಪ್ರತಿವಾದಿ 2 (4)- ಶ್ರೀಮತಿ ಸುವರ್ಣ ತಂದೆ ಈರಪ್ಪ ಸುಂಕದ ವಯ: 45 ವರ್ಷ ಉದ್ಯೋಗ : ಒಕ್ಕಲುತನ ಸಾ॥ ಉಮಚಗಿ ತಾ॥ ಹುಬ್ಬಳ್ಳಿ ಜಿ॥ ಧಾರವಾಡ
ಈ ದಾವೆಯನ್ನು ಮೇಲ್ಕಂಡ ವಾದಿಯರು ನಿಮ್ಮ ಮೇಲೆ ಮತ್ತು ಇನ್ನಿತರರ ವಿರುದ್ಧ ದಾವಾ ಆಸ್ತಿಗಳಲ್ಲಿ ತಮ್ಮ ಪಾಲಿನ ಹಿಸ್ಸಾ ಪ್ರಥಃಕ್ಕರಿಸಿ ಪ್ರತ್ಯೇಕಿಸಿ ಕೊಡಲು ಮೇಲ್ಕಂಡ ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿದ್ದು, ಸದರಿ ದಾವೆದ ವಿಚಾರಣೆಯು ದಿ: 27/07/2026 ರಂದು ಮುದ್ದತ್ತು ಇರುತ್ತದೆ. ತಾವು ಅಂದು ಮುಂಜಾನೆ 10:30 ಕ್ಕೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ನಿಮ್ಮ ತಕರಾರು ಅಹವಾಲು ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.
ಈ ಹೊತ್ತು ದಿನಾಂಕ: 19/06/2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೊಹರು ಹಾಕಿ ಕೊಡಲ್ಪಟ್ಟಿತು.
ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/- ಶಿರಸ್ತೆದಾರ
ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಕುಂದಗೋಳ
ಸಹಿ/- ಶ್ರೀ ಸಿ. ಎಮ್. ಕಾಳೆ
ವಾದಿಯರ ಪರ ವಕೀಲರು

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

ಕ್ರಿ. ಮಿ. ನಂ : 618/2026
ರಾಣೇಬೆನ್ನೂರು 2ನೇ ಹೆಚ್ಚುವರಿ ಸೀನಿಯರ್ ಸಿವಿಲ್ ಜಡ್ಜ ವ ಜೆ.ಎಂ.ಎಫ್.ಸಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರ :- ರಮೇಶ ತಂದೆ ಹನುಮಂತಪ್ಪ ದಾಸಪ್ಪನವರ ವಯಸ್ಸು : 50 ವರ್ಷ ಉ : ಕೂಲಿ ಸಾ : ಹರಳಯ್ಯನಗರ, ರಾಣೇಬೆನ್ನೂರು ವ ಇತರರು
ವಿರುದ್ಧ
ಎದುರುಗಾರ :- ಜನನ ಮರಣ ನೊಂದಣಾಧಿಕಾರಿಗಳು, ಸಿ.ಎಂ.ಸಿ. ರಾಣೇಬೆನ್ನೂರ.
ಇಸ್ತಿಯಾರ್ ನಾಮೆ
ಮೇಲ್ಕಾಣಿಸಿದ ಅರ್ಜಿಯನ್ನು ಎದುರುಗಾರ ವಿರುದ್ಧ ಅರ್ಜಿದಾರ ತಾಯಿಯಾದ ಮೈಲವ್ವ ಹೊನ್ನಪ್ಪ ದಾಸಪ್ಪನವರ ಇವರು ದಿನಾಂಕ 03-10-2007 ರಂದು ರಾಣೇಬೆನ್ನೂರ ಶಹರದಲ್ಲಿ ಮರಣ ಹೊಂದಿದ್ದು ಅವರ ಮರಣ ದಿನಾಂಕವನ್ನು ಎಂಟ್ರಿ ಇರದೆ ಇದ್ದುದ್ದರಿಂದ, ಸದರಿ ಪೋತಿಯ ಹೆಸರು ಮತ್ತು ಮರಣ ದಿನಾಂಕವನ್ನು ಎದುರುಗಾರರು ತಮ್ಮ ನೋಂದಣೆ ಪುಸ್ತಕದಲ್ಲಿ ಎಂಟ್ರಿ ಮಾಡಿಕೊಳ್ಳಲು ಹುಕುಂ ಪಡೆಯುವ ಕುರಿತು ಅರ್ಜಿ ದಾಖಲಿಸಿದೆ.
ಇದಕ್ಕೆ ಯಾರಾದರೂ ತಕರಾರು ಇದ್ದಲ್ಲಿ 1-8-2026 ರಂದು ಮುಂಜಾನೆ 11-00 ಘಂಟೆಗೆ ಸದರಿ ನ್ಯಾಯಾಲಯದಲ್ಲಿ ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ತಕರಾರು ಸಲ್ಲಿಸಬೇಕು. ಇಲ್ಲವಾದಲ್ಲಿ ಯಾರೂ ಯಾವುದೇ ರೀತಿಯ ತಕರಾರು ಇಲ್ಲ ಅಂತಾ ನ್ಯಾಯಾಲಯದವರು ಮುಂದಿನ ಆದೇಶ ಮಾಡುವರು ತಿಳಿಯಿರಿ ಅಂತಾ ಈ ದಿವಸ ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ಕೊಡಲ್ಪಟ್ಟ ಇಸ್ತಿಯಾರ ನಾಮೆ.
ಈ ಹೊತ್ತು ಕೋರ್ಟಿನ ಶೀಲು ವ ಮೊಹರು ಹಾಕಿ 19-6-2026 ರಂದು ಕೊಡಲ್ಪಟ್ಟಿದೆ.
ಸ್ಥಳ: ರಾಣೇಬೆನ್ನೂರ
ದಿನಾಂಕ: 19-6-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- (ಶ್ರೀ ಹೆಚ್. ಆರ್ . ಹನುಮಂತಪ್ಪ)
ಶಿರಸ್ತೇದಾರರು
ರಾಣೇಬೆನ್ನೂರ 2ನೇ ಹೆಚ್ಚುವರಿ ಸೀನಿಯರ್ ಸಿವಿಲ್ ಜಡ್ಜ್ ನ್ಯಾಯಾಲಯ.
ಸಹಿ/- ಶ್ರೀ ಕುಮಾರ ಡಿ. ಮಡಿವಾಳರ
ವಕೀಲರು & ನೋಟರಿ (ಭಾರತ ಸರ್ಕಾರ)
ರಾಣೇಬೆನ್ನೂರ

ಪಿ.ಆ್ಯಂಡ ಎಸ್.ಸಿ. ನಂ. 04/2026
ಮಾನ್ಯ 3ನೇ ಅಧಿಕ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ಹುಬ್ಬಳ್ಳಿ
ಅರ್ಜಿದಾರರು : 1) ಶ್ರೀಮತಿ ಕವಿತಾ ಕೋಂ. ಶಿವನಗೌಡ ಪಾಟೀಲ ಮತ್ತು ಇತರರು.
ವಿರುದ್ಧ
ಎದುರುಗಾರರು : ಯಾರೂ ಇಲ್ಲಾ.
ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 (ಎ) (1-ಎ)
ಅನ್ವಯ
ಈ ಪ್ರಕರಣದಲ್ಲಿಯ ಅರ್ಜಿದಾರರು ತಮ್ಮ ತಂದೆಯಾದ ಶ್ರೀ ಮಲ್ಲಪ್ಪ ತಂದೆ ಚನ್ನಪ್ಪ ಹಳ್ಳಿ ಇವರು ಎಂಪ್ಲಾಯೀಸ್ ಪ್ರಾವಿಡೆಂಡ್ ಫಂಡ್ ಯೋಜನೆ ಪಿ.ಪಿ.ಓ ಖಾತೆ ನಂ: 42388 ರ ಅಡಿಯಲ್ಲಿ ಹಣ ರೂ. 1,61,100/-ಗಳನ್ನು ಹಣವನ್ನು ಪಡೆದುಕೊಳ್ಳುವ ಕುರಿತು ಮಾನ್ಯ ನ್ಯಾಯಾಲಯಕ್ಕೆ ಸಕ್ಸೇಶನ್ ಸರ್ಟಿಫಿಕೇಟ ಪಡೆದುಕೊಳ್ಳುವ ಸಲುವಾಗಿ ಈ ಪ್ರಕರಣವನ್ನು ಮಾನ್ಯ ನ್ಯಾಯಾಲಯಕ್ಕೆ ದಾಖಲು ಮಾಡಿದ್ದು ಇರುತ್ತದೆ.
ಈ ಪ್ರಕರಣವು ತಾ: 20-07-2026 ರಂದು ಮುದ್ದತ್ತು ನೇಮಿಸಿದ್ದು ಆ ದಿವಸ ಯಾರದಾದರೂ ತಂಟೆ ತಕರಾರು ವಗೈರೆ ಇದ್ದಲ್ಲಿ ತಾವಾಗಲಿ ತಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು ಹಾಜರಾಗದೇ ಇದ್ದಲ್ಲಿ ಪ್ರಕರಣ ನಿರ್ಣಯಿಸಲಾಗುವದು.
ಈ ಹೊತ್ತು ದಿ:20-06-2026 ರಂದು ನನ್ನ ಸಹಿ ಮತ್ತು ಕೋರ್ಟಿನ ಮೋಹರಿನೊಂದಿಗೆ ಕೊಡ ಮಾಡಲ್ಪಟ್ಟಿತು.
ಕೋರ್ಟಿನ ಆಜ್ಞೆಯ ಮೇರೆಗೆ
ಹುಬ್ಬಳ್ಳಿ (ಕೋರ್ಟ ಮೊಹರು) ಸಹಿ/-ಶಿರಸ್ತೇದಾರರು
ದಿ:20-06-2026 ಮಾನ್ಯ 3ನೇ ಅಧಿಕ ದಿವಾಣಿ
(ಹೇಮಂತ ಸಿ. ತಳ್ವಾರ). ನ್ಯಾಯಾಧೀಶರ ನ್ಯಾಯಾಲಯ ಹಾಗೂ
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ ಜೆ.ಎಮ್.ಎಫ್.ಸಿ.ಹುಬ್ಬಳ್ಳಿ



ಮಾನ್ಯ ಪ್ರಧಾನ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಮುಧೋಳ ಇವರ ನ್ಯಾಯಾಲಯದಲ್ಲಿ
ಪಿ & ಎಸ್.ಸಿ. ಸಂಖ್ಯೆ: 2/2026
1) ಉದ್ದವ್ವ ಬಸಪ್ಪ ಮಾದರ, ವ : 64 ವರ್ಷ ಉ : ಮನೆಗೆಲಸ, ಸಾ: ಬುದ್ನಿ ಬಿ.ಕೆ. ತಾ: ಮುಧೋಳ .....ಅರ್ಜಿದಾರಳು
ವಿರುದ್ಧ
1) ದಿ ಮ್ಯಾನೇಜರ, ಜ್ಞಾನದೀಪ ಕೋ-ಆಪರೇಟಿವ ಕ್ರೆಡಿಟ್ ಸೊಸೈಟಿ ಲಿಮಿಟೆಡ್ ಬ್ಯಾಂಚ 55-ಕರಾಡ ತಾ: ಕರಾಡ ಜಿ: ಸಾತಾರ ರಾಜ್ಯ : ಮಹಾರಾಷ್ಟ್ರ .....ಎದುರುದಾರರು
ಜಾಹೀರನಾಮೆ
ಪ್ರಸ್ತುತ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರಳು ಇವರು ತಮ್ಮ ಮಗಳಾದ ಮೃತ ರೇಣುಕಾ @ ದುರ್ಗವ್ವ ತಂದೆ. ಬಸಪ್ಪ ಮೇತ್ರಿ @ ಮಾದರ ಇವರು ದಿನಾಂಕ: 19-01-2014 ರಂದು ಮುಧೋಳ ತಾಲೂಕಿನ ಬುದ್ನಿ ಬಿ.ಕೆ. ಗ್ರಾಮದಲ್ಲಿ ಮರಣ ಹೊಂದಿದ್ದು ಇರುತ್ತದೆ. ಸದರಿಯವಳು ಎದುರುದಾರರ ಬ್ಯಾಂಕನಲ್ಲಿ ಹಣವನ್ನು ಜಮೆ ಮಾಡಿದ್ದು ಇದ್ದು ಅದನ್ನು ತೆಗೆದುಕೊಳ್ಳುವ ಸಂಬಂಧಿ ಅರ್ಜಿದಾರಳು ಮುಧೋಳದ ಹೆಚ್ಚುವರಿ ದಿವಾಣಿ ನ್ಯಾಯಾಲಯದಲ್ಲಿ ಕೇಸನ್ನು ದಾಖಲು ಮಾಡಿದ್ದು ಇರತ್ತದೆ.
ಕಾರಣ ಈ ಮೂಲಕ ಸಾರ್ವಜನಿಕರಿಗೆ ಹಾಗೂ ಅವರ ವಾರಸದಾರರು ಯಾರಾದರು ಇದ್ದರೆ ಅವರಿಗೆ ತಿಳಿಯಪಡಿಸುವುದೇನೆಂದರೆ, ಹಾಗೂ ಹಕ್ಕು ವ ಹಿತಾಸಕ್ತಿ ಇದ್ದಲ್ಲಿ ಪ್ರಸ್ತುತ ಕೇಸಿನಲ್ಲಿ ದಿನಾಂಕ : 04-08-2026 ರಂದು ಮುಂಜಾನೆ 10:30 ಗಂಟೆಗೆ ನ್ಯಾಯಾಲಯದಲ್ಲಿ ಹಾಜರ ಇದ್ದು, ತಮ್ಮ ತಕರಾರು ವಗೈರೆ ಸಲ್ಲಿಸಬಹುದು. ಒಂದು ವೇಳೆ ಯಾವುದೇ ತಕರಾರ ಬಾರದಿದ್ದಲ್ಲಿ ಅರ್ಜಿದಾರರ ಮಾಂಗಣಿ ಪ್ರಕಾರ ಆದೇಶ ಮಾಡಲಾಗುವುದು ತಿಳಿಯಿರಿ ಅಂತಾ ಕೊಟ್ಟ ಜಾಹೀರನಾಮೆ.
ಸ್ಥಳ: ಮುಧೋಳ,
ದಿನಾಂಕ: 18-06-2026
ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/- ಶಿರಸ್ತೆದಾರರು,
ಮಾನ್ಯ ಪ್ರಧಾನ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಮುಧೋಳ ಇವರ ನ್ಯಾಯಾಲಯ
ಸಹಿ/- ಎಚ್.ಡಿ. ದೊಡಮನಿ
ಅರ್ಜಿದಾರಳ ಪರ ವಕೀಲರು

ಕ್ರಿಮಿನಲ್ ಮಿಸಲೇನಿಯಸ್ ನಂ. 107/2025
ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಕಿತ್ತೂರ ಇವರ ನ್ಯಾಯಾಲಯದಲ್ಲಿ
1) ಶ್ರೀ ಶಂಕರ ತಂದೆ ನಾಗಪ್ಪ ಸೊಟ್ಟೆನ್ನವರ .....ಅರ್ಜಿದಾರರು
ವಿರುದ್ಧ
1) ಮಾನ್ಯ ತಹಶೀಲ್ದಾರರು ಬೈಲಹೊಂಗಲ ಹಾಗೂ ಇನ್ನೊಬ್ಬರು .....ಎದುರುಗಾರರು
ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಮೇರೆಗೆ ನೋಟಿಸು
ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರ ಪರ ವಕೀಲರು ಕೊಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ,
ಅರ್ಜಿದಾರನು ಮಾನ್ಯ ನ್ಯಾಯಾಲಯದಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲ ಮಾಡಿಕೊಂಡು ಅರ್ಜಿದಾರರ ತಂದೆಯವರಾದ ಶ್ರೀ ನಾಗಪ್ಪ ತಂದೆ ಯಲ್ಲಪ್ಪ ಸೊಟ್ಟನವರ ಇವರು ದಿ: 19/06/1969 ರಂದು ಕಿತ್ತೂರ(ಬೈಲಹೊಂಗಲ) ತಾಲೂಕಿನ ಎಮ್.ಕೆ.ಹುಬ್ಬಳ್ಳಿ ಗ್ರಾಮದಲ್ಲಿ ಮೃತರಾಗಿರುತ್ತಾರೆ. ಕಾರಣ ಅರ್ಜಿದಾರರು ಮೃತರ ಮರಣ ಪ್ರಮಾಣ ಪತ್ರವನ್ನು ಪೂರೈಸುವ ಸಲುವಾಗಿ ಈ ಅರ್ಜಿಯನ್ನು ಮಾಡಿಕೊಂಡಿದ್ದು, ಸದರಿ ಮೃತರ ಮರಣದ ಬಗ್ಗೆ ಎದುರುಗಾರರ ಮರಣ ರಜಿಸ್ಟರದಲ್ಲಿ ದಾಖಲಿಸಿಕೊಳ್ಳುವ ಕುರಿತು ಕನ್ನಡ ದಿನಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆ ಮಾಡುವುದಕ್ಕೆ ಪ್ರಸ್ತುತ ಅರ್ಜಿಯನ್ನು ದಾಖಲಮಾಡಿಕೊಂಡಿರುತ್ತಾರೆ.
ಈ ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ಮುಂದೆ ದಿನಾಂಕ: 5-6-2026 ರಂದು ನಿಗದಿಯಾಗಿರುತ್ತದೆ. ಕಾರಣ ಸದರಿ ಪ್ರಸ್ತುತ ಪ್ರಕರಣದಲ್ಲಿ ಯಾರಾದರೂ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಇದ್ದರೆ ದಿನಾಂಕ: 4-7-2026 ರಂದು ಮುಂಜಾನೆ 11-00ಕ್ಕೆ ಮಾನ್ಯ ನ್ಯಾಯಾಲಯದ ಮುಂದೆ ಸ್ವತಃ ಆಗಲೀ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರ ಆಗಲಿ ಹಾಜರಾಗಬೇಕು. ಇಲ್ಲದಿದ್ದರೆ ಅರ್ಜಿದಾರರ ಮಾಗಣಿಯ ಪ್ರಕಾರ ಪ್ರಸ್ತುತ ಅರ್ಜಿಯನ್ನು ಕಾನೂನು ರೀತ್ಯ ನಿರ್ಣಯಿಸಲಾಗುವದು ಅಂತಾ ಕೊಟ್ಟ ಸಾರ್ವಜನಿಕ ನೋಟಿಸ್.
ಈ ದಿನಾಂಕ: 11-6-2026 ರಂದು ನ್ಯಾಯಾಲಯದ ಮುದ್ರೆ ಮತ್ತು ನನ್ನ ಸಹಿಯೊಂದಿಗೆ ನೀಡಲಾಯಿತು.
ಸ್ಥಳ: ಕಿತ್ತೂರ
ದಿನಾಂಖ : 08/06/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರ
ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಕಿತ್ತೂರ
ಸಹಿ/- ಶ್ರೀ ಎಮ್.ಎಸ್. ಪಾಟೀಲ (ಬೆಂಚ್ ಕ್ಲರ್ಕ)
ಸಹಿ/- ಎಮ್.ಎಸ್. ಸಾಣಿಕೊಪ್ಪ
(ಅರ್ಜಿದಾರ ಪರ ವಕೀಲರು)

ಕ್ರಿಮಿನಲ್ ಮಿಸಲೇನಿಯಸ್ ನಂ. 105/2025
ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಕಿತ್ತೂರ ಇವರ ನ್ಯಾಯಾಲಯದಲ್ಲಿ
1) ಶ್ರೀ ನಾಗಪ್ಪ ತಂದೆ ಗಂಗಪ್ಪ ಸೊಟ್ಟೆನ್ನವರ .....ಅರ್ಜಿದಾರರು
ವಿರುದ್ಧ
1) ಮಾನ್ಯ ತಹಶೀಲ್ದಾರರು ಬೈಲಹೊಂಗಲ ಹಾಗೂ ಇನ್ನೊಬ್ಬರು .....ಎದುರುಗಾರರು
ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಮೇರೆಗೆ ನೋಟಿಸು
ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರ ಪರ ವಕೀಲರು ಕೊಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ,
ಅರ್ಜಿದಾರನು ಮಾನ್ಯ ನ್ಯಾಯಾಲಯದಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲ ಮಾಡಿಕೊಂಡು ಅರ್ಜಿದಾರರ ತಂದೆಯವರಾದ ಶ್ರೀ ಗಂಗಪ್ಪ ತಂದೆ ಯಲ್ಲಪ್ಪ ಸೊಟ್ಟನವರ ಇವರು ದಿ: 28/09/1971 ರಂದು ಕಿತ್ತೂರ(ಬೈಲಹೊಂಗಲ) ತಾಲೂಕಿನ ಎಮ್.ಕೆ.ಹುಬ್ಬಳ್ಳಿ ಗ್ರಾಮದಲ್ಲಿ ಮೃತರಾಗಿರುತ್ತಾರೆ. ಕಾರಣ ಅರ್ಜಿದಾರರು ಮೃತರ ಮರಣ ಪ್ರಮಾಣ ಪತ್ರವನ್ನು ಪೂರೈಸುವ ಸಲುವಾಗಿ ಈ ಅರ್ಜಿಯನ್ನು ಮಾಡಿಕೊಂಡಿದ್ದು, ಸದರಿ ಮೃತರ ಮರಣದ ಬಗ್ಗೆ ಎದುರುಗಾರರ ಮರಣ ರಜಿಸ್ಟರದಲ್ಲಿ ದಾಖಲಿಸಿಕೊಳ್ಳುವ ಕುರಿತು ಕನ್ನಡ ದಿನಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆ ಮಾಡುವುದಕ್ಕೆ ಪ್ರಸ್ತುತ ಅರ್ಜಿಯನ್ನು ದಾಖಲಮಾಡಿಕೊಂಡಿರುತ್ತಾರೆ.
ಈ ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ಮುಂದೆ ದಿನಾಂಕ: 5-6-2026 ರಂದು ನಿಗದಿಯಾಗಿರುತ್ತದೆ. ಕಾರಣ ಸದರಿ ಪ್ರಸ್ತುತ ಪ್ರಕರಣದಲ್ಲಿ ಯಾರಾದರೂ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಇದ್ದರೆ ದಿನಾಂಕ: 4-7-2026 ರಂದು ಮುಂಜಾನೆ 11-00ಕ್ಕೆ ಮಾನ್ಯ ನ್ಯಾಯಾಲಯದ ಮುಂದೆ ಸ್ವತಃ ಆಗಲೀ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರ ಆಗಲಿ ಹಾಜರಾಗಬೇಕು. ಇಲ್ಲದಿದ್ದರೆ ಅರ್ಜಿದಾರರ ಮಾಗಣಿಯ ಪ್ರಕಾರ ಪ್ರಸ್ತುತ ಅರ್ಜಿಯನ್ನು ಕಾನೂನು ರೀತ್ಯ ನಿರ್ಣಯಿಸಲಾಗುವದು ಅಂತಾ ಕೊಟ್ಟ ಸಾರ್ವಜನಿಕ ನೋಟಿಸ್.
ಈ ದಿನಾಂಕ: 11-6-2026 ರಂದು ನ್ಯಾಯಾಲಯದ ಮುದ್ರೆ ಮತ್ತು ನನ್ನ ಸಹಿಯೊಂದಿಗೆ ನೀಡಲಾಯಿತು.
ಸ್ಥಳ: ಕಿತ್ತೂರ
ದಿನಾಂಖ : 08/06/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರ
ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಕಿತ್ತೂರ
ಸಹಿ/- ಶ್ರೀ ಎಮ್.ಎಸ್. ಪಾಟೀಲ (ಬೆಂಚ್ ಕ್ಲರ್ಕ)
ಸಹಿ/- ಎಮ್.ಎಸ್. ಸಾಣಿಕೊಪ್ಪ
(ಅರ್ಜಿದಾರ ಪರ ವಕೀಲರು)

ಕಾಲ್ಚೆಂಡಿನ ಸಮರ


ಫಿಫಾ ವಿಶ್ವಕಪ್ | ಯುಎಸ್ಎ, ಮೆಕ್ಸಿಕೋ, ಕೆನಡಾ | ಜೂನ್ 11-ಜುಲೈ 19

ಸೋಮವಾರದ ಪಂದ್ಯಗಳು

ನಾರ್ವೆ-ಸೆನೆಗಲ್ (ಬೆಳಗ್ಗೆ 5:30)
ಜಾರ್ಡನ್-ಅಲ್ಜೇರಿಯಾ (ಬೆಳಗ್ಗೆ 8:30)
ಇಂಗ್ಲೆಂಡ್-ಘಾನಾ (ಮಧ್ಯರಾತ್ರಿ 1:30)

ಸ್ವೀಡನ್‌ಗೆ ಡಚ್ಚರ ಡಿಚ್ಚಿ!

• **ಹ್ಯೂಸ್ಟನ್:** ಬ್ರಿಯಾನ್ ಬ್ರಾಬಿ ಹಾಗೂ ಕೋಡಿ ಗಾಕ್‌ಪೋ ತಲಾ ಎರಡು ಗೋಲುಗಳನ್ನು ದಾಖಲಿಸಿದ ಪರಿಣಾಮ ನೆದರ್ಲೆಂಡ್ಸ್ ತಂಡ ಸ್ವೀಡನ್ ವಿರುದ್ಧ 5-1 ಅಂತರದ ಭರ್ಜರಿ ಜಯ ಸಾಧಿಸಿದೆ. ಮೊದಲ ಪಂದ್ಯದಲ್ಲಿ ಜಪಾನ್ ವಿರುದ್ಧ 2-2 ಡ್ರಾ ಸಾಧಿಸಿ ನಿರಾಸೆ ಅನುಭವಿಸಿದ್ದ ಡಚ್ ಪಡೆ, ಈ ತನ್ನ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿದೆ. ಪಂದ್ಯದ 5ನೇ ನಿಮಿಷದಲ್ಲೇ ಕೋಡಿ ಗಾಕ್‌ಪೋ ನೀಡಿದ ಕ್ರಾಸ್‌ನ್ನು ಬ್ರಿಯಾನ್ ಬ್ರಾಬಿ ಗೋಲಾಗಿ ಪರಿವರ್ತಿಸಿ ತಂಡಕ್ಕೆ ಮುನ್ನಡೆ ತಂದರು. 17ನೇ ನಿಮಿಷದಲ್ಲಿ ಡೆಂಜೆಲ್ ಡಮ್‌ಫ್ರಿಸ್ ಅವರ ಕ್ರಾಸ್‌ಗೆ ಮತ್ತೊಮ್ಮೆ ಸ್ಪಂದಿಸಿದ ಬ್ರಾಬಿ, ಎರಡನೇ ಗೋಲು ದಾಖಲಿಸಿ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಎರಡನೇ ಅರ್ಧ ಆರಂಭವಾಗುತ್ತಿದ್ದಂತೆಯೇ ಗಾಕ್‌ಪೋ ಮಿಂಚಿದರು. 47ನೇ ನಿಮಿಷದಲ್ಲಿ ಡಮ್‌ಫ್ರಿಸ್ ಕ್ರಾಸ್‌ನಿಂದ ಗೋಲು ಬಾರಿಸಿದ ಅವರು, 54ನೇ ನಿಮಿಷದಲ್ಲಿ ಮತ್ತೊಂದು ಅದ್ಭುತ ಶಾಟ್ ಮೂಲಕ ಸ್ಕೋರ್ ಅನ್ನು 4-0ಕ್ಕೆ ಏರಿಸಿದರು. 59ನೇ ನಿಮಿಷದಲ್ಲಿ ಆಂಥನಿ ಎಲಾಂಗಾ ಸ್ವೀಡನ್ ಪರ ಏಕೈಕ ಗೋಲು ದಾಖಲಿಸಿ ಅಂತರ ಕಡಿಮೆ ಮಾಡಿದರೂ, ಅದು ಕೇವಲ ಸಮಾಧಾನದ ಗೋಲಾಗಿ ಉಳಿಯಿತು. ಪಂದ್ಯದ ಕೊನೆಯ ಕ್ಷಣದಲ್ಲಿ ಕ್ರಿಸೆನ್ಸಿಯೊ ಸಮ್ಮರ್‌ವಿಲ್ ಮತ್ತೊಂದು ಗೋಲು ದಾಖಲಿಸಿ ನೆದರ್ಲೆಂಡ್ಸ್ ಗೆಲುವಿಗೆ ಮೆರುಗು ತಂದರು.



ಗೋಲುಗಳ ವಿವರ

- 5ನೇ ನಿಮಿಷ: ಬ್ರಿಯಾನ್ ಬ್ರಾಬಿ (ನೆದರ್ಲೆಂಡ್ಸ್)
- 17ನೇ ನಿಮಿಷ: ಬ್ರಿಯಾನ್ ಬ್ರಾಬಿ (ನೆದರ್ಲೆಂಡ್ಸ್)
- 47ನೇ ನಿಮಿಷ: ಕೋಡಿ ಗಾಕ್‌ಪೋ (ನೆದರ್ಲೆಂಡ್ಸ್)
- 54ನೇ ನಿಮಿಷ: ಕೋಡಿ ಗಾಕ್‌ಪೋ (ನೆದರ್ಲೆಂಡ್ಸ್)
- 59ನೇ ನಿಮಿಷ: ಆಂಥನಿ ಎಲಾಂಗಾ (ಸ್ವೀಡನ್)
- 89ನೇ ನಿ : ಕ್ರಿಸೆನ್ಸಿಯೊ ಸಮ್ಮರ್‌ವಿಲ್ (ನೆದರ್ಲೆಂಡ್ಸ್)

ಜಪಾನ್‌ಗೆ ಜಯ

• **ಮಾಂಟೆರ್ರಿ (ಮೆಕ್ಸಿಕೊ):** ಅಯಾಶಾ ಉಯೆಡಾ ಅವರ ಎರಡು ಗೋಲುಗಳ ನೆರವಿನಿಂದ ಜಪಾನ್ ತಂಡ ಟುನೀಶಿಯಾವನ್ನು 4-0 ಅಂತರದಿಂದ ಮಣಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತದತ್ತ ಮತ್ತೊಂದು ಬಲಿಷ್ಠ ಹೆಜ್ಜೆ ಇಟ್ಟಿದೆ. ಈ ಗೆಲುವಿನೊಂದಿಗೆ ಜಪಾನ್ ನಾಲ್ಕು ಅಂಕಗಳೊಂದಿಗೆ ಗ್ರೂಪ್ ಎಫ್‌ನಲ್ಲಿ ನೆದರ್ ಲ್ಯಾಂಡ್ಸ್‌ಗೆ ಸಮವಾಗಿದೆ. ಆದರೆ ಗೋಲುಗಳ ಅಂತರದಲ್ಲಿ ಡಚ್ ಪಡೆ ಅಗ್ರಸ್ಥಾನದಲ್ಲಿದೆ. ಇನ್ನೊಂದೆಡೆ ಸತತ ಎರಡನೇ ಸೋಲು ಕಂಡ ಟುನೀಶಿಯಾ ಟೂರ್ನಿಯಿಂದ ಅಧಿಕೃತವಾಗಿ ಹೊರಬಿದ್ದಿದೆ. ಜಪಾನ್ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿತು. ಪಂದ್ಯ ಆರಂಭವಾಗಿ ಕೇವಲ ನಾಲ್ಕು ನಿಮಿಷಗಳಲ್ಲೇ ಡೈಚಿ ಕಾಮಡಾ ಗೋಲು ದಾಖಲಿಸಿ ತಂಡಕ್ಕೆ ಮುನ್ನಡೆ ತಂದರು. ಕೈಟೋ ನಕಮುರಾ ನೀಡಿದ ಅದ್ಭುತ ಕ್ರಾಸ್ ಅನ್ನು ಕಾಮಡಾ ಸುಲಭವಾಗಿ ಗೋಲಾಗಿ ಪರಿವರ್ತಿಸಿದರು.

ಗೋಲುಗಳ ವಿವರ

- 4ನೇ ನಿಮಿಷ: ಡೈಚಿ ಕಾಮಡಾ (ಜಪಾನ್)
- 1ನೇ ನಿಮಿಷ: ಉಯೆಡಾ (ಜಪಾನ್)
- 69ನೇ ನಿಮಿಷ: ಜುನ್ಯಾ ಇಟೋ (ಜಪಾನ್)
- 83ನೇ ನಿಮಿಷ: ಉಯೆಡಾ (ಜಪಾನ್)

31ನೇ ನಿಮಿಷದಲ್ಲಿ ಅಯಾಸೆ ಉಯೆಡಾ ಮಧ್ಯಭಾಗದಿಂದ ಚೆಂಡನ್ನು ಮುನ್ನಡೆಸಿಕೊಂಡು ಬಂದು ಬಾಕ್ಸ್ ಹೊರಗಿನಿಂದ ಸಿಡಿಸಿದ ಅದ್ಭುತ ಶಾಟ್ ನೇರವಾಗಿ ಗೋಲಿನ ಎಡ ಮೂಲೆಗೆ ಸೇರಿತು. ಇದರಿಂದ ಜಪಾನ್ 2-0 ಮುನ್ನಡೆ ಪಡೆಯಿತು. 69ನೇ ನಿಮಿಷದಲ್ಲಿ ಉಯೆಡಾ ನೀಡಿದ ಫ್ಲಿಕ್ ಪಾಸ್‌ನ್ನು ಜುನ್ಯಾ ಇಟೋ ಗೋಲಾಗಿ ಪರಿವರ್ತಿಸಿ ಸ್ಕೋರ್ 3-0ಕ್ಕೆ ಏರಿಸಿದರು. 83ನೇ ನಿಮಿಷದಲ್ಲಿ ಉಯೆಡಾ ಅದ್ಭುತ ಹೆಡರ್ ಮೂಲಕ ತಮ್ಮ ಎರಡನೇ, ತಂಡದ ನಾಲ್ಕನೇ ಗೋಲು ದಾಖಲಿಸಿ ಜಪಾನ್‌ನ ಭರ್ಜರಿ ಗೆಲುವು ಖಚಿತ ಪಡಿಸಿದರು.

- ಕುರಕಾವೊ 0-0 ಇಕ್ವೆಡಾರ್
- ಎಲೋಯ್ ರೂಮ್‌ನಿಂದ 15 ಸೇವ್‌ಗಳು
- ಕುರಕಾವೊಗೆ ಮೊದಲ ವಿಶ್ವಕಪ್ ಅಂಕ

ಇಕ್ವೆಡಾರ್ ವಿರುದ್ಧ ಡ್ರಾ, ಗೋಲ್‌ಕೀಪರ್ ರೂಮ್ ಮಿಂಚು

ಕುರಕಾವೊ ಐತಿಹಾಸಿಕ ಸಾಧನೆ

• **ಕ್ಯಾನ್ಸಾಸ್ ಸಿಟಿ:** ಮೊದಲ ಬಾರಿಗೆ ಆಡುತ್ತಿರುವ ಕುರಕಾವೊ ತಂಡ ತನ್ನ ಇತಿಹಾಸದ ಮೊದಲ ವಿಶ್ವಕಪ್ ಅಂಕವನ್ನು ಸಂಪಾದಿಸಿದೆ. ಗೋಲ್‌ಕೀಪರ್ ಎಲೋಯ್ ರೂಮ್ ಅವರ ಅಸಾಧಾರಣ ಪ್ರದರ್ಶನದ ನೆರವಿನಿಂದ ಬಲಿಷ್ಠ ಇಕ್ವೆಡಾರ್ ವಿರುದ್ಧ 0-0 ಗೋಲುರಹಿತ ಡ್ರಾ ಸಾಧಿಸಿತು. 37 ವರ್ಷದ ರೂಮ್ ಇಡೀ ಪಂದ್ಯದಲ್ಲಿ ಇಕ್ವೆಡಾರ್‌ನ ನಿರಂತರ ದಾಳಿಗಳನ್ನು ತಡೆಯುತ್ತಾ ಬರೋಬ್ಬರಿ 15 ಸೇವ್‌ಗಳನ್ನು ಮಾಡಿ ವಿಶ್ವಕಪ್ ಇತಿಹಾಸದ ಶ್ರೇಷ್ಠ ಗೋಲ್‌ಕೀಪಿಂಗ್ ಪ್ರದರ್ಶನಗಳಲ್ಲಿ ಒಂದನ್ನು ದಾಖಲಿಸಿದರು. 2014ರಲ್ಲಿ ಅಮೆರಿಕದ ಟಿಮ್ ಹೋವರ್ಡ್ ಮಾಡಿದ್ದ 16 ಸೇವ್‌ಗಳ ದಾಖಲೆಗೆ ಕೇವಲ ಒಂದು ಸೇವ್ ಕಡಿಮೆಯಾಯಿತು.



ಐವರಿ ಕೋಸ್ಟ್‌ಗೆ ಆಘಾತ, ನಾಕೌಟ್‌ಗೆ ಜರ್ಮನಿ

• **ಟೊರೊಂಟೊ:** ಬದಲಿ ಆಟಗಾರ ಡೆನಿಸ್ ಉಂಡಾವ್ ಅವರ ಎರಡು ಗೋಲುಗಳ ನೆರವಿನಿಂದ ಜರ್ಮನಿ ತಂಡ ಐವರಿ ಕೋಸ್ಟ್ ವಿರುದ್ಧ 2-1 ಅಂತರದ ರೋಚಕ ಗೆಲುವು ದಾಖಲಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ.

ಮೊದಲಾರ್ಧದಲ್ಲಿ ಐವರಿ ಕೋಸ್ಟ್ ಮೇಲುಗೈ ಸಾಧಿಸಿತು. 30ನೇ ನಿಮಿಷದಲ್ಲಿ ನಾಯಕ ಫ್ರಾಂಕ್ ಕೆಸ್ಸಿಯೆ ಗೋಲು ಬಾರಿಸಿ ತಂಡಕ್ಕೆ 1-0 ಮುನ್ನಡೆ ತಂದುಕೊಟ್ಟರು. ಅಮಾದ್ ಡಿಯಾಲೊ ಅವರ ಪ್ರಯತ್ನವನ್ನು ಜರ್ಮನಿಯ ರಕ್ಷಣಾಪಡೆ ತಡೆದರೂ, ರೀಬೌಂಡ್ ಆದ ಚೆಂಡನ್ನು ಕೆಸ್ಸಿಯೆ ಖಾಲಿ ಗೋಲಿನೊಳಗೆ ತಳ್ಳಿದರು. ಜರ್ಮನಿಗೆ ಮೊದಲಾರ್ಧದಲ್ಲಿ ಎರಡು ಬಾರಿ ಗೋಲು ಸಿಕ್ಕರೂ ಎರಡನ್ನೂ ರೆಫರಿ ಅಮಾನ್ಯಗೊಳಿಸಿದರು. ಇದರಿಂದ ತಂಡ ಒತ್ತಡಕ್ಕೆ ಸಿಲುಕಿತು. ದ್ವಿತೀಯಾರ್ಧದಲ್ಲಿ ಕೋಚ್ ಮಾಡಿದ ಬದಲಾವಣೆ ಫಲ ನೀಡಿತು. 60ನೇ ನಿಮಿಷದಲ್ಲಿ ಮೈದಾನಕ್ಕಿಳಿದ ಡೆನಿಸ್ ಉಂಡಾವ್ 68ನೇ ನಿಮಿಷದಲ್ಲಿ ನಾಡಿಯಂ ಅಮಿರಿ ಅವರ ದೀರ್ಘ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿ ಸಮಬಲ ಸಾಧಿಸಿದರು. ಪಂದ್ಯ ಡ್ರಾಗೆ ಸಾಗುತ್ತಿದೆ ಎನ್ನುವಾಗ, ಹೆಚ್ಚುವರಿ ಸಮಯದ ನಾಲ್ಕನೇ ನಿಮಿಷದಲ್ಲಿ ಫೆಲಿಕ್ಸ್ ನೆಮ್ಚಾ ಅವರ ಪಾಸ್ ಸ್ವೀಕರಿಸಿದ ಉಂಡಾವ್ ಅದ್ಭುತ ಶಾಟ್ ಮೂಲಕ ಗೋಲು ಬಾರಿಸಿ ಜರ್ಮನಿಗೆ 2-1ರ ಗೆಲುವು ತಂದುಕೊಟ್ಟರು.

- ಜರ್ಮನಿ 2-1 ಐವರಿ ಕೋಸ್ಟ್
- ಡೆನಿಸ್ ಉಂಡಾವ್: 2 ಗೋಲು (68ನೇ ನಿ., 90+4ನೇ ನಿ.)
- ಫ್ರಾಂಕ್ ಕೆಸ್ಸಿಯೆ: (30ನೇ ನಿ.)

ಕಿರುಸುದ್ದಿ

ಅಭಯ್-ವೆಲವನ್‌ಗೆ ಪ್ರಶಸ್ತಿ

• **ಹೊಸದಿಲ್ಲಿ:** ಭಾರತದ ಅಗ್ರ ಶ್ರೇಯಾಂಕಿತ ಜೋಡಿ ಅಭಯ್ ಸಿಂಗ್ ಮತ್ತು ವೆಲವನ್ ಸೆಂಥಿಲ್‌ಕುಮಾರ್, ಭಾನುವಾರ ಮಲೇಷ್ಯಾದ ಸರವಾಕ್‌ನಲ್ಲಿ ನಡೆದ ಏಷ್ಯನ್ ಡಬಲ್ಸ್ ಸ್ಕ್ವ್ಯಾಷ್ ಚಾಂಪಿಯನ್‌ಶಿಪ್‌ನಲ್ಲಿ ಸತತ ಮೂರನೇ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಕಾಂಟಿನೆಂಟಲ್ ಗೇಮ್ಸ್‌ನಲ್ಲಿ ತಮ್ಮ ಪ್ರಾಬಲ್ಯವನ್ನು ವಿಸ್ತರಿಸಿದರು. ಒಂದು ಪಂದ್ಯದಲ್ಲಿ ಹಿನ್ನಡೆ ಅನುಭವಿಸಿದ ಭಾರತೀಯ ಜೋಡಿ, ಪಾಕಿಸ್ತಾನದ ಎರಡನೇ ಶ್ರೇಯಾಂಕದ ನಾಸಿರ್ ಇಕ್ಬಾಲ್ ಮತ್ತು ನೂರ್ ಜಮಾನ್ ಜೋಡಿಯನ್ನು 47 ನಿಮಿಷಗಳಲ್ಲಿ 7-11, 11-7, 11-2 ಸೆಟ್‌ಗಳಿಂದ ಸೋಲಿಸಿ ಪರಾಕ್ರಮ ಮೆರೆಯಿತು. ಈ ಗೆಲುವು ಅಭಯ್ ಮತ್ತು ವೆಲವನ್ ಅವರ ಪುರುಷರ ಡಬಲ್ಸ್ ಪ್ರಶಸ್ತಿಗಳ ಹ್ಯಾಟ್ರಿಕ್ ಅನ್ನು ಪೂರ್ಣಗೊಳಿಸಿತು.

300 ಮಂದಿಯಿಂದ 21 ಆಸನ: ಗಿನ್ನಿಸ್ ದಾಖಲೆ



• **ಬೆಂಗಳೂರು:** 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ದ್ರಾವಿಡ್-ಪಡುಕೋಣೆ ಅಕಾಡೆಮಿಯಲ್ಲಿ ಅಕ್ಷರ್ ಯೋಗ ಕೇಂದ್ರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗಿನ್ನಿಸ್ ದಾಖಲೆಯೊಂದು ಆಯಿತು. ಒಟ್ಟು 21 ಆಸನಗಳನ್ನು ಸುಮಾರು 300 ಮಂದಿ ಸ್ಪರ್ಧಾಳುಗಳು ನಿರ್ವಹಿಸಿದ್ದು, ಒಂದೇ ದಿನ 21 ಆಸನಗಳು ಕೂಡ ಗಿನ್ನಿಸ್ ದಾಖಲೆಗೆ ಒಳಗಾಗಿವೆ. ಹಿಮಾಲಯನ್ ಸಿದ್ಧ ಅಕ್ಷರ್ ಗುರೂಜಿ ಸಾರಥ್ಯದಲ್ಲಿ ಯೋಗಾಸನ ಹಾಗೂ ತಾರಕ್ ಮೆಡಿಟೇಷನ್ ಮಾಡಲಾಗಿದ್ದು, ಅಧಿಕೃತ ಗಿನ್ನಿಸ್ ಸಂಸ್ಥೆಯ ಅಧಿಕಾರಿಗಳು ಈ ದಾಖಲೆಯನ್ನು ಅಧಿಕೃತವಾಗಿ ಪುಸ್ತಕದಲ್ಲಿ ಸೇರ್ಪಡೆಗೊಳಿಸಿದ್ದಾರೆ.

ಜೂ. ಜಿಮ್ನಾಸ್ಟಿಕ್ಸ್: ಭಾರತಕ್ಕೆ 2 ಪದಕ

• **ಹೊಸದಿಲ್ಲಿ:** ಚೀನಾದ ಜುನಿಯಲ್ಲಿ ಭಾನುವಾರ ನಡೆದ ಏಷ್ಯನ್ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಚಾಂಪಿಯನ್‌ಶಿಪ್‌ನ ಜೂನಿಯರ್ ಪುರುಷರ ವಾಲ್ಟ್ ಸ್ಪರ್ಧೆಯಲ್ಲಿ ಭಾರತೀಯ ಜಿಮ್ನಾಸ್ಟ್‌ಗಳಾದ ಹರ್ಷಿತ್ ದಾಮೋದರನ್ ಮತ್ತು ಅಕ್ಷತ್ ಬಜಾಜ್ ಚಿನ್ನ-ಬೆಳ್ಳಿ ಪದಕ ಗಳಿಸುವ ಮೂಲಕ ಇತಿಹಾಸ ಬರೆದರು. ಹರ್ಷಿತ್ 13.649 ಅಂಕಗಳೊಂದಿಗೆ ವೇದಿಕೆಯನ್ನು ಅಗ್ರಸ್ಥಾನದಲ್ಲಿಟ್ಟರೆ, ಅಕ್ಷತ್ 13.433 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. ಹರ್ಷಿತ್ ಎರಡು ಸ್ಥಿರ ವಾಲ್ಟ್‌ಗಳನ್ನು ಪ್ರದರ್ಶಿಸಿದರು, ಅವರ ಮೊದಲ ಪ್ರಯತ್ನದಲ್ಲಿ 13.866 ಅಂಕಗಳನ್ನು ಗಳಿಸಿದರು, ಇದು 4.8 ರ ಕಷ್ಟದ (ಡಿ) ಸ್ಕೋರ್ ಮತ್ತು ಅವರ ಎರಡನೇ ವಾಲ್ಟ್‌ನಲ್ಲಿ 13.433 ಅಂಕಗಳನ್ನು ಗಳಿಸಿತು. ಅವರ ಪ್ರಯತ್ನವು ದೇಶವಾಸಿ ಅಕ್ಷತ್‌ಗಿಂತ ಮೊದಲು ಅಗ್ರ ಸ್ಥಾನವನ್ನು ಗಳಿಸಿತು.

ಬಾಕ್ಸಿಂಗ್: ಭಾರತಕ್ಕೆ 12 ಪದಕ

• **ಹೊಸದಿಲ್ಲಿ:** ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವ ಭಾರತದ ಬಾಕ್ಸರ್‌ಗಳು ಎಂಟು ಚಿನ್ನ ಸೇರಿದಂತೆ 12 ಪದಕಗಳನ್ನು ಗೆದ್ದು, ಜೆಕಿಯಾದಲ್ಲಿ ನಡೆದ ಆಹ್ವಾನಿತ 56 ನೇ ಗ್ರ್ಯಾಂಡ್ ಪ್ರಿಕ್ಸ್ ಉಸ್ತಿ ನಾಡ್ ಲ್ಯಾಬೆಮ್‌ನಲ್ಲಿ ವಿಶ್ವಾಸ ಹೆಚ್ಚಿಸಿಕೊಂಡರು. ಐದು ಸದಸ್ಯರ ಮಹಿಳಾ ತಂಡವು ನಾಲ್ಕು ಚಿನ್ನದ ಪದಕಗಳು ಮತ್ತು ಒಂದು ಬೆಳ್ಳಿಯನ್ನು ಗೆಲ್ಲುವ ಮೂಲಕ ಮುನ್ನಡೆ ಸಾಧಿಸಿತು. ಒಲಿಂಪಿಕ್ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ (75 ಕೆಜಿ), ಹಾಲಿ ಏಷ್ಯನ್ ಚಾಂಪಿಯನ್ ಪ್ರೀತಿ ಪವಾರ್ (54 ಕೆಜಿ), ಸಾಕ್ಷಿ ಚೌಧರಿ (51 ಕೆಜಿ) ಮತ್ತು ಪ್ರಿಯಾ ಘಂಘಾಸ್ (60 ಕೆಜಿ) ಎಲ್ಲರೂ ತಮ್ಮ ಫೈನಲ್‌ಗಳಲ್ಲಿ ಸರ್ವಾನುಮತದ ಗೆಲುವು ಸಾಧಿಸುವ ಮೂಲಕ ಚಿನ್ನ ಗೆದ್ದರು. ಪರ್ವೀನ್ ಹೂಡಾ (65 ಕೆಜಿ) ಬೆಳ್ಳಿ ಪದಕವನ್ನು ಸೇರಿಸಿ ಮಹಿಳಾ ತಂಡದ ಪ್ರಭಾವಶಾಲಿ ಪ್ರದರ್ಶನವನ್ನು ಪೂರ್ಣಗೊಳಿಸಿದರು.

ಪುರುಷರ ತಂಡವು ನಾಲ್ಕು ಚಿನ್ನದ ಪದಕಗಳೊಂದಿಗೆ ಮಹಿಳೆಯರ ಯಶಸ್ಸನ್ನು ಸರಿಗಟ್ಟಿತು. ಜಾದುಮಣಿ ಸಿಂಗ್ (55 ಕೆಜಿ), ಸಚಿನ್ (60 ಕೆಜಿ), ಅಂಕುಶ್ (80 ಕೆಜಿ) ಮತ್ತು ನರೇಂದರ್ (+90 ಕೆಜಿ) ಆಯಾ ವಿಭಾಗಗಳಲ್ಲಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಮಹಿಳೆಯರ ಎಫ್‌ಐಎಚ್ ನೇಷನ್ಸ್ ಕಪ್!

ಭಾರತ ಚಾಂಪಿಯನ್



• **ಆಕ್ಲೆಂಡ್:** ಹಾಕಿ ಕ್ಷೇತ್ರದಲ್ಲಿ ಭಾರತ ಮತ್ತೊಮ್ಮೆ ಇತಿಹಾಸ ಬರೆಯಿತು. ವಿಶ್ವ ಹಾಕಿ ಸಂಸ್ಥೆ(ಎಫ್‌ಐಎಚ್) ನಡೆಸುವ ಪ್ರೊ ಲೀಗ್ ನೇಷನ್ಸ್ ಕಪ್ ಪಂದ್ಯಾವಳಿಯನ್ನು ಬಾಚಿಕೊಂಡ ಭಾರತ ಮಹಿಳಾ ಹಾಕಿ ತಂಡವು ದೇಶವೇ ಸಂಭ್ರಮ ಪಡುವಂತೆ ಮಾಡಿದೆ.

ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಭಾರತ ಭರ್ಜರಿ ಪ್ರದರ್ಶನ ನೀಡಿತು. ಆತಿಥೇಯರ ವಿರುದ್ಧವೇ ನಡೆದ ಪಂದ್ಯದಲ್ಲಿ 2-0ರಿಂದ ಪ್ರಾಬಲ್ಯ ಸಾಧಿಸಿತು. ನವನೀತ್ ಕೌರ್ 4ನೇ ನಿಮಿಷ, ಸುನೇಲಿತಾ 15ನೇ ನಿಮಿಷದ ವೇಳೆ ಗೋಲು ಮಾಡಿದರು.

ಪಂದ್ಯದಲ್ಲಿ ಮೊದಲಿನಿಂದಲೂ ಎದುರಾಳಿಗಳು ಬಾಲ್ ಮೇಲೆ ಹಿಡಿತ ಸಾಧಿಸಿದ್ದವು. ಆದರೆ ಮೊದಲ ಗೋಲು ಗಳಿಸಲು ಭಾರತಕ್ಕೆ ಕೇವಲ ಒಂದು ಅವಕಾಶ ಸಾಕಿತ್ತು. ಅದು ನಾಲ್ಕನೇ ನಿಮಿಷದ ವೇಳೆ ನವನೀತ್ ಕೌರ್‌ಗೆ ಸಿಕ್ಕೇಬಿಡ್ತು. ಮುಂದುವರಿಸುತ್ತಾ ಭಾರತ 15ನೇ ನಿಮಿಷದಲ್ಲಿ ಮುನ್ನಡೆಯನ್ನು ವಿಸ್ತರಿಸಿತು. ಪಂದ್ಯವಿಡೀ ಗೋಲು ಬಿಟ್ಟುಕೊಡದ ರಕ್ಷಣಾ ವಿಭಾಗ ಪಂದ್ಯದ ಗೆಲುವನ್ನು ಖಚಿತಪಡಿಸಿತು. ಲಾಲ್ರೆಮ್‌ಸಿಯಾಮಿ ಪಂದ್ಯಶ್ರೇಷ್ಠ ಆಟಗಾರ್ತಿ ಗೆದ್ದುಕೊಂಡರು. ದೀಪಿಕಾ ಪಂದ್ಯಾವಳಿಯ ಬೆಸ್ಟ್ ಸ್ಕೋರರ್‌ಗಳಲ್ಲಿ ಒಬ್ಬರಾದರು. 6 ಗೋಲಿನೊಂದಿಗೆ ಗಮನ ಸೆಳೆದರು. 2022ರಲ್ಲೇ ಶುರುವಾಗಿರುವ ಈ ನೇಷನ್ಸ್ ಕಪ್ ಪಂದ್ಯಾವಳಿಯಲ್ಲಿ ಭಾರತ ಎರಡನೇ ಬಾರಿ ಗೆದ್ದುಕೊಂಡಿದೆ. ಪಂದ್ಯಾವಳಿಯುದ್ದಕ್ಕೂ ಭಾರತ ಮಿಂಚುತ್ತಲೇ ಪ್ರದರ್ಶನ ನೀಡಿತು. ಮೊದಲಿಗೆ ಅಮೆರಿಕ ವಿರುದ್ಧ ಆಡಿದ್ದ ಸಲೀಮಾ ಬಳಗ, 3-2ರಿಂದ ಗೆದ್ದುಕೊಂಡಿತು. ನಂತರ ಜಪಾನ್ ತಂಡವನ್ನು ಎದುರಿಸಿತ್ತು. 2-1ರಿಂದ ಅವರನ್ನೂ ಮಣಿಸಿದ ಭಾರತ ನಂತರ ಉರುಗ್ವೆ 3-2ರಿಂದ ಗೆದ್ದುಕೊಂಡಿತ್ತು. ಎಲ್ಲದಕ್ಕೂ ಹೆಚ್ಚಾಗಿ ಭಾರತ ಸೆಮಿಫೈನಲ್ ಪಂದ್ಯದಲ್ಲಿ ಚಿಲೆ ತಂಡವನ್ನು 6-0ರಿಂದ ಸೋಲಿಸಿ ಆತ್ಮವಿಶ್ವಾಸ ಗಳಿಸಿತ್ತು. ಈ ಗೆಲುವಿನ ಬಳಿಕ ಭಾರತ ಹಾಕಿ ಸಂಸ್ಥೆಯು ತಂಡದ ಪ್ರತಿಯೊಬ್ಬರಿಗೂ ತಲಾ 3 ಲಕ್ಷ ರೂ. ಬಹುಮಾನ ಘೋಷಿಸಿದೆ. ಅಲ್ಲದೆ ಸಪೋರ್ಟಿಂಗ್ ಸ್ಟಾಫ್‌ಗೆ 1.5 ಲಕ್ಷ ರೂ. ನೀಡಲಿದೆ.

ಪ್ರಧಾನಿ ಮೋದಿ ಶ್ಲಾಘನೆ

ಗೆಲುವಿನ ಬಗ್ಗೆ ಖುಷಿ ವ್ಯಕ್ತ ಪಡಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ತಮ್ಮ ಎಕ್ಸ್ ಖಾತೆಯಲ್ಲಿ, ನೇಷನ್ಸ್ ಕಪ್ ಗೆದ್ದ ಭಾರತ ತಂಡಕ್ಕೆ ಅಭಿನಂದನೆಗಳು. ಪಂದ್ಯಾವಳಿಯುದ್ದಕ್ಕೂ ನೀಡಿದ ಅತ್ಯುತ್ತಮ ಪ್ರದರ್ಶನವೇ ಗೆಲುವಿಗೆ ಕಾರಣ. ತಂಡಕ್ಕೆ ಶುಭಹಾರೈಸುತ್ತೇನೆ. ಈ ಗೆಲುವು ಭಾರತದ ಹಾಕಿ ಆಟಗಾರರಿಗೆ ಪ್ರೇರಣೆ ನೀಡಲಿ ಎಂದು ಬರೆದುಕೊಂಡಿದ್ದಾರೆ.

ಕಾಪ್ ಅಬ್ಬರ, ಭಾರತಕ್ಕೆ ಸೋಲು

• **ಮ್ಯಾಂಚೆಸ್ಟರ್:** ಮಹಿಳೆಯರ ಟಿ20 ವಿಶ್ವಕಪ್‌ನಲ್ಲಿನ ಭಾರತ ಗೆಲುವಿನ ಅಭಿಯಾನಕ್ಕೆ ದಕ್ಷಿಣ ಆಫ್ರಿಕಾ ತಡೆಯೊಡ್ಡಿದೆ. ಮಾರಿಝುನ್ ಕಾಪ್ ಅವರ 81★ ರನ್‌ಗಳ ಬ್ಯಾಟಿಂಗ್ ನೊಂದಿಗೆ ಹರಿಣರು ಹ್ಯಾಟ್ರಿಕ್ ಗೆಲುವಿನ ಗುರಿಯೊಂದಿಗೆ ಆಡಿದ ಭಾರತವನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ಬೌಲಿಂಗ್ ಪಿಚ್‌ನಲ್ಲಿ ಹರಿಣರೇ ಪ್ರಾಬಲ್ಯ ಸಾಧಿಸಿದರು. ಬ್ಯಾಟಿಂಗ್ ಆಹ್ವಾನ ಕೊಟ್ಟು 158 ರನ್‌ಗಳಿಗೆ ತಡೆಯೊಡ್ಡಿತು. ಶೆಫಾಲಿ ವರ್ಮಾ 31, ದೀಪ್ತಿ ಶರ್ಮ 27 ಮತ್ತು ಕೌರ್ 24 ರನ್ ಗಳಿಸಿದರು. ರಿಚಾ ಘೋಷ್ 15, ಸ್ಮೃತಿ ಮಂಧಾನ 17 ಗಣನೀಯ ಕೊಡುಗೆ ನೀಡಿ ಸ್ಕೋರ್ ಹಿಗ್ಗಿಸಿದರು. ಗುರಿ ಬೆನ್ನತ್ತಿದ ದ.ಆಫ್ರಿಕಾ ಆರಂಭಿಕ ಆಘಾತ ಎದುರಿಸಿತು. ಶ್ರೀ ಚಾರಣಿ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದರೂ, ಮಾರಿಝುನ್ ಕಾಪ್, ಬ್ರಿಟ್ಸ್ ಅವರ ಸಮಯೋಚಿತ ಬ್ಯಾಟಿಂಗ್‌ನೊಂದಿಗೆ ಮಿಂಚಿತು. ಗುರಿ ಬೆನ್ನತ್ತಿದ ದ.ಆಫ್ರಿಕಾ ಪಡೆಗೆ ಆರಂಭಿಕ ಆಘಾತವಾದರೂ ಮಾರಿಝುನ್ ಕಾಪ್ ತಾಳ್ಮೆಯುತ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಬ್ರಿಟ್ಸ್ ಸಾಥ್ ಪಡೆದು ಕೊನೆಯವರೆಗೂ ಕೊಂಡೊಯ್ದ ಅವರು, ಅಜೇಯ 81 ರನ್‌ನೊಂದಿಗೆ ಪಂದ್ಯ ಗೆಲ್ಲಿಸಿದರು. ದ.ಆಫ್ರಿಕಾ 19.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿ ಪಂದ್ಯ ಗೆದ್ದಿದೆ.

ಸಂಕ್ಷಿಪ್ತ ಸ್ಕೋರ್

ಭಾರತ 20 ಓವರ್‌ಗಳಲ್ಲಿ 158/7: ಶೆಫಾಲಿ 31, ದೀಪ್ತಿ 29; ಕಾಪ್ 27/2, ಇಸ್ಮೈಲ್ 28/2
ದ.ಆಫ್ರಿಕಾ 19.1 ಓವರ್‌ಗಳಲ್ಲಿ 161/4: ಕಾಪ್ 81★, ಬ್ರಿಟ್ಸ್ 40; ಚಾರಣಿ 24/3

ಮಳೆಯಿಂದ ಹುಬ್ಬಳ್ಳಿ-ಮಂಗಳೂರು ಪಂದ್ಯ ರದ್ದು

• **ಮೈಸೂರು:** ಭಾನುವಾರ ಮಧ್ಯಾಹ್ನ ನಡೆಯಬೇಕಿದ್ದ ಹುಬ್ಬಳ್ಳಿ ಟೈಗರ್ಸ್ ಮತ್ತು ಕೋಸ್ಟಲ್ ಕಿಂಗ್ಸ್ ಮಂಗಳೂರು ನಡುವಿನ ಪಂದ್ಯವು ಒಂದೂ ಬಾಲ್ ಆಗದೇ ರದ್ದಾಯಿತು. ಮೈಸೂರಿನ ಶ್ರೀಕಂಠದತ್ತ ಒಡಿಯರ್ ಕ್ರೀಡಾಂಗಣದಲ್ಲಿ ಬಿಟ್ಟೂ ಬಿಡದೆ ಸುರಿದ ಮಳೆಯಿಂದಾಗಿ ಪಂದ್ಯ ರದ್ದಾಗಿದೆ. ಅಲ್ಲದೆ, ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಶಿವಮೊಗ್ಗ ನಡುವೆ ನಡೆಬೇಕಿದ್ದ ಪಂದ್ಯವೂ 14 ಓವರ್‌ಗೆ ಇಳಿಸಲಾಗಿತ್ತು. ಮತ್ತೊಂದೆಡೆ ಮೈಸೂರು ವಾರಿಯರ್ಸ್ ತಂಡವನ್ನು 100 ರನ್ ಮಾತ್ರಕ್ಕೆ ಆಲೌಟ್ ಮಾಡಿದ ಶಿವಮೊಗ್ಗ ತಂಡವು ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿತು. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಲವನೀತ್ ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 190 ರನ್ ಗಳಿಸಿದ್ದ ಯೋಧಾಸ್ 14.5 ಓವರ್‌ಗಳಲ್ಲಿ 100 ರನ್‌ಗೆ ಮೈಸೂರು ವಾರಿಯರ್ಸ್ ಅನ್ನು ಆಲೌಟ್ ಮಾಡಿದೆ. ಯಶ್ ರಾಜ್ ಪೂಂಜಾ 30 ರನ್ ನೀಡಿ 4 ವಿಕೆಟ್ ಕಿತ್ತು ಪಂದ್ಯದ ಹೀರೋ ಅನಿಸಿಕೊಂಡರು.

ವೈಭವ್ ವಿಕ್ರಮ, ಭಾರತ ತ್ರಿವಿಕ್ರಮ!

• **ಡಂಬುಲ್ಲಾ:** ವೈಭವ್ ಸೂರ್ಯವಂಶಿ ಅವರ ಬಗ್ಗೆ ನಡೆಯುವ ಚರ್ಚೆಗೆ ಇನ್ನಷ್ಟು ವಿಷಯ ಸಿಕ್ಕಾಗಿದೆ. ಭಾರತ ತಂಡಕ್ಕೆ ಆಯ್ಕೆಯಾಗಿದ್ದ 15 ವರ್ಷದ ವೈಭವ್ ತ್ರಿಕೋನ ಸರಣಿಯ ಫೈನಲ್‌ನಲ್ಲಿ ಹೊಸ ಕತೆ ಬರೆದರು. ಇದರೊಂದಿಗೆ ಭಾರತವು ಅಫ್ಘಾನಿಸ್ತಾನ ಮತ್ತು ಶ್ರೀಲಂಕಾ ಜತೆಗೆ ಆಡಿದ ಏಕದಿನ ತ್ರಿಕೋನ ಸರಣಿ ಬಾಚಿಕೊಂಡಿತು.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ಎ ತಂಡವನ್ನು 66 ರನ್‌ಗಳಿಂದ ಮಣಿಸಿದ ಯುವ ಭಾರತ, ಭವಿಷ್ಯದ ಭರವಸೆ ಮೂಡಿಸಿತು. ಮೊದಲು ಬ್ಯಾಟಿಂಗ್ ಮಾಡಿ 377 ರನ್ ಗಳಿಸಿದ ಭಾರತ ಎ ಶ್ರೀಲಂಕಾ ತಂಡವನ್ನು 311 ರನ್‌ಗಳಿಗೆ ಆಲೌಟ್ ಮಾಡಿ ಮೆರೆದಾಡಿತು.

ಪ್ರಮುಖ ಸುದ್ದಿಯಾದವರೆ ವೈಭವ್. ಆಡಿದ ಕೇವಲ 29 ಎಸೆತದಲ್ಲಿ 94ರನ್ ಬಾರಿಸಿ ಕ್ರಿಕೆಟ್ ಅಭಿಮಾನಿಗಳ ಹುಬ್ಬೇರುವಂತೆ ಮಾಡಿದರು. ಉತ್ತಮ ಬ್ಯಾಟಿಂಗ್ ಮಾಡಿದ ತಿಲಕ್(67), ರುತುರಾಜ್(40), ಕುಮಾರ್ (36) ಸ್ಕೋರ್ ಹಿಗ್ಗಿಸಿದರೆ, 15 ಬಾಲ್‌ಗಳಲ್ಲೇ 39 ರನ್ ದಂಡಿಸಿದ ಅನುಕುಲ್ ರಾಯ್ ಕಟ್ಟಿದ್ದ ಇನ್ನಿಂಗ್ಸ್ ಕಳಶ ಇಟ್ಟರು. ಶ್ರೀಲಂಕಾ ಪರ ವನುಜ ಶಹನ್ 62 ರನ್ ಗಳಿಸಿ ಹೋರಾಡಿದರು.

ವೈಭವ್ ವಿಸ್ಮಯ: ಸೂರ್ಯವಂಶಿಯ ಹವಾ ವಿಶ್ವದಲ್ಲೆಡೆ ಹರಡುತ್ತಿರುವಾಗಲೇ ಮತ್ತೊಂದು ಮಾಸ್ಟರ್‌ಕ್ಲಾಸ್ ಪ್ರದರ್ಶಿಸಿದ ವೈಭವ್ ಅಭಿಮಾನಿಗಳ ಮಧ್ಯೆ ಮತ್ತೆ ಮಿಂಚಿದರು. ಭಾರತ ಬ್ಯಾಟಿಂಗ್ ಆಯ್ದುಕೊಂಡರೆ ವೈಭವ್ ದಂಡಿಸುವ ತಂತ್ರ ಆರಿಸಿಕೊಂಡರು. ಮೊದಲನೇ ಬಾಲ್ ನಿಂದಲೂ ದಂಡಿಸಲಾರಂಭಿಸಿ 10 ಬೌಂಡರಿ, 8 ಸಿಕ್ಸರ್ ಬಾರಿಸಿಬಿಟ್ಟರು. ಮುಖ್ಯವಾಗಿ 11 ಎಸೆತದಲ್ಲೇ ಅರ್ಧಶತಕ ಬಾರಿಸಿದರು. 29 ಬಾಲ್‌ಗಳಲ್ಲಿ 94 ರನ್ ಗಳಿಸಿ, ಎ ತಂಡಗಳ ಮಧ್ಯೆ ನಡೆಯುವ ಕ್ರಿಕೆಟ್‌ನ ಸರದಾರ ಅನಿಸಿದ್ದಲ್ಲದೆ ವಿಶ್ವ ದಾಖಲೆಗಳನ್ನೂ ಮಾಡಿದರು.

ಸಂಕ್ಷಿಪ್ತ ಸ್ಕೋರ್

ಭಾರತ ಎ 50 ಓವರ್‌ಗಳಲ್ಲಿ 377/9: ವೈಭವ್ 94, ತಿಲಕ್ 67, ಗಾಯಕ್ವಾಡ್ 40; ರವಿಂದು ಫರ್ನಾಂಡೊ 72/2
ಶ್ರೀಲಂಕಾ ಎ 47.1 ಓವರ್‌ಗಳಲ್ಲಿ 311/10: ವನುಜ 62, ಸದೀರ 52; ಯಶ್ 45/3, ವಿಪ್ರಾಜ್ 60/3

ಏಕದಿನ ತಂಡಕ್ಕೆ ಮರಳಿದ ಕಿಂಗ್ ಕೊಹ್ಲಿ

• **ಮುಂಬೈ:** ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಏಕದಿನ ಸರಣಿಗೆ ತಂಡದ ಪ್ರಮುಖ ಆಟಗಾರ ಕಿಂಗ್ ವಿರಾಟ್ ಕೊಹ್ಲಿ ಮರಳಿದ್ದು, ಶನಿವಾರವಷ್ಟೇ ಅಫ್ಘಾನಿಸ್ತಾನ ವಿರುದ್ಧ ನಡೆದ ಸರಣಿಯ ಕೊನೆಯ ಪಂದ್ಯದಲ್ಲಿ ಶತಕ ಬಾರಿಸಿದ್ದ ಯಶಸ್ವಿ ಜೈಸ್ವಾಲ್ ಅವರಿಗೆ ಗೇಟ್‌ಪಾಸ್ ನೀಡಲಾಗಿದೆ.

ಮುಂದಿನ ತಿಂಗಳು ನಡೆಯಲಿರುವ ಏಕದಿನ ಸರಣಿ, ಏಕದಿನ ವಿಶ್ವಕಪ್ ತಯಾರಿಗಾಗಿ ತಂಡವನ್ನು ಪ್ರಕಟಿ ಸಲಾಗಿದ್ದು, ಅಭಿಮಾನಿಗಳ ಕಾಯುವಿಕೆಗೆ ತೆರೆ ಬಿದ್ದಿದೆ. ಯಾವ ಜನರನ್ನು ಮೈದಾನಕ್ಕೆ ತರುವ ವಿರಾಟ್ ಕೊಹ್ಲಿ ಅವರು ಫಿಟ್ ಆಗಿದ್ದು ತಂಡಕ್ಕೆ ಮರಳಿದ್ದಾರೆ. ಆದರೆ ಮತ್ತೊಂದು ಪ್ರಮುಖ ಸುದ್ದಿಯಲ್ಲಿ ಆರಂಭಿಕ ಜೈಸ್ವಾಲ್ ತಂಡದಿಂದ ಹೊರಬಿದ್ದಿದ್ದಾರೆ.

ವಿರಾಟ್ ಕೊಹ್ಲಿ ಅವರ ಆಗಮನದೊಂದಿಗೆ ಅಭಿಮಾನಿಗಳು ಹುಮ್ಮಸ್ಸಿನಲ್ಲಿದ್ದರೂ ತಂಡದಲ್ಲಿ ಅಚ್ಚರಿ ಆಯ್ಕೆಗಳ ಗಂಟುಗಳೇ ಹೆಚ್ಚಿವೆ. ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಮೊಹಮ್ಮದ್ ಶಮಿ ಅವರಿಗೆ ಕೊಕ್ ನೀಡಲಾಗಿದೆ. ಏಕದಿನ ತಂಡದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದ ಮೊಹಮ್ಮದ್ ಸಿರಾಜ್ ಅವರನ್ನೂ ಹೊರಗಿಡಲಾಗಿದೆ. ಅಫ್ಘಾನಿಸ್ತಾನ ವಿರುದ್ಧದ ಪಂದ್ಯಗಳಲ್ಲಿ ಉತ್ತಮ



ಪ್ರದರ್ಶನ ನೀಡಿದ್ದ ಗುರ್ನೂರ್ ಬ್ರಾರ್ ಅವರಿಗೆ ಮತ್ತೊಂದು ಅವಕಾಶ ನೀಡಲಾಗಿದ್ದು, ತಂಡಕ್ಕೆ ಹರ್ಷಿತ್ ರಾಣಾ ಕಂಬ್ಯಾಕ್ ಮಾಡಿದ್ದಾರೆ.

ತಂಡದಿಂದಲೇ ಹೊರಬಿದ್ದ ಜಡ್ಡು?: ಕಳೆದ ಕೆಲವು ಸರಣಿಗಳಲ್ಲಿ ಭಾರತ ತಂಡದಿಂದಲೇ ಹೊರಬಿದ್ದಿರುವ ಹಿರಿಯ ಆಲ್‌ರೌಂಡರ್ ರವೀಂದ್ರ ಜಡೇಜಾಗೆ ಮತ್ತೆ ಕೊಕ್ ಕೊಡಲಾಗಿದ್ದು, ಆಯ್ಕೆಯಲ್ಲಿ ಪರಿಗಣಿಸಲಾಗಿಲ್ಲ. ಟೆಸ್ಟ್ ತಂಡದಿಂದಲೂ ಅವರನ್ನು ಹೊರಗಡಿಲಾಗಿದೆ. ಹಿಂದೆನಡೆದಿರುವ ಏಕದಿನ ಪಂದ್ಯಗಳಲ್ಲಿ ಕೊನೆಯ ಬಾರಿ ಕಾಣಿಸಿಕೊಂಡಿದ್ದು ಜನವರಿಯಲ್ಲಿ. ನಂತರ ಐಪಿಎಲ್ ಶುರುವಾದರೂ ಅಫ್ಘಾನಿಸ್ತಾನ ವಿರುದ್ಧದ ಪಂದ್ಯಕ್ಕೆ ಅವರನ್ನು ಆಯ್ಕೆ ಮಾಡಿರಲೇ ಇಲ್ಲ, ಇಂಗ್ಲೆಂಡ್ ಪಂದ್ಯಗಳಿಗೂ ಅವರನ್ನು ಆಯ್ಕೆಯಲ್ಲಿ ಪರಿಗಣಿಸಲಾಗಿಲ್ಲ. ಪರಿಣಾಮ ಅವರನ್ನು ತಂಡದಿಂದಲೇ ಹೊರಗಿಟ್ಟರೆ ಎಂಬ ಪ್ರಶ್ನೆ ಸಹಜವಾಗಿ ಬರುತ್ತಿದೆ.

ಭಾರತ ತಂಡ


ಶುಭಮನ್ ಗಿಲ್(ನಾಯಕ), ಶ್ರೇಯಸ್ ಅಯ್ಯರ್(ಉಪನಾಯಕ), ರೋಹಿತ್ ಶರ್ಮ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ಇಶಾನ್ ಕಿಶನ್(ವಿ.ಕೀ), ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ನಿತಿಶ್‌ಕುಮಾರ್ ರೆಡ್ಡಿ, ಕುಲ್ದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಪ್ರಸಿದ್ಧ ಕೃಷ್ಣ, ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಗುರ್ನೂರ್ ಬ್ರಾರ್.

- ಸಿರಾಜ್‌ಗೆ ಕೊಕ್
- ಹೊರಬಿದ್ದ ಪಂತ್
- ಅಕ್ಷರ್ ಪಟೇಲ್‌ಗೆ ಅವಕಾಶ
- ಬೂಮ್ರಾ ಕಂಬ್ಯಾಕ್

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ

6022



ಎಡದಿಂದ ಬಲಕ್ಕೆ
1.ಕೈ-ಕಾಲಿಗೆ ಧರಿಸುವ ಗಟ್ಟಿಮುಟ್ಟಾದ ಆಭರಣ (3)
6.ದ್ವಾರಕೀಶ್-ವಿಷ್ಣುವರ್ಧನ್-ಮಂಜುಳಾ ಅಭಿನಯದ ಹಾಸ್ಯಚಿತ್ರ (5)
7.ಡೇಗೆ ಜಾತಿಯ ಬೇಟೆಯಾಡುವ ಹಕ್ಕಿ (3)
8.ಕರುವಿನ ನಡುವೆ ಒಪ್ಪಂದದ ಷರತ್ತುಗಳಿವೆ (3)
9.ಕಹಿ-ಒಗರು ರುಚಿಯುಳ್ಳದ್ದು (2)
10.ಒಳ್ಳೆಯ ಬಣ್ಣದ ಬಂಗಾರ (2)
11.ಮೂರು ಮೈಯುಳ್ಳ ಪಾರದರ್ಶಕ ಘನಾಕೃತಿ (3)
12.ಭರಣಿಯನ್ನು ಉಲ್ಟಾ ಇಟ್ಟಿದ್ದಾರೆ (3)
15. ಒಂದೇ ಕಾಲಘಟ್ಟಕ್ಕೆ ಸೇರಿದ ವ್ಯಕ್ತಿ (5)
17. ಬಣ್ಣದ ತಗಡು ಉಲ್ಟಾ ಕಾಣುತ್ತಿದೆ (3)

ಮೇಲಿನಿಂದ ಕೆಳಕ್ಕೆ
1.ಚಿನ್ನದ ಮೈ ಬಣ್ಣವುಳ್ಳವಳು (4)
2.ಹಿಂದಿನಂತೆ ನಡೆಯುವುದು-ಸಂಪ್ರದಾಯ ಪಾಲನೆ (6)
3.ಒಂದು ಇಂಚು ಅಳತೆಯ ಬೆರಳು (3)
4.ವಾರಣಾಶಿಯ ಮತ್ತೊಂದು ಹೆಸರು (2)
5.ಗಡಿಮೂಲಿಕೆಯನ್ನು ಹೀಗೂ ಹೇಳಬಹುದು (4)
8.ನಮ್ಮ ಭಾಷೆಯ ಘಮವನ್ನು ಸೂಚಿಸುವ ಶಬ್ದ (6)
11.ನಮ್ಮ ಉಸಿರಾದ ನಮ್ಮ ಸುತ್ತಲಿನ ವಾತಾವರಣ (4)
13. ಕಸುವಿನ ನಡುವೆ ತುಂಡು ಮಾಡುವಿಕೆಯಿದೆ (4)
14. ಮಿಥಿಲೆಯ ರಾಜ-ಸೀತೆಯ ತಂದೆ (3)
16. ಶಬ್ದ ಮತ್ತು ಅರ್ಥಗಳ ಸುಂದರ ಜೋಡಣೆಯ ಸಾಹಿತ್ಯ (2)

6021 ಉತ್ತರ

ಎಡದಿಂದ ಬಲಕ್ಕೆ:
:1.ಮಣಿಗಾರ
3.ಸಮದರ್ಶಿ 5.ಹಿಮ್ಮುಖ
6.ನವಜಾತ 8.ಸರದಿ
9.ಕಾಂತಾರ 11.ಗಣಪತಿ
13.ಸುಂದರ 14.ನಳಪಾಕ
15.ಗತಿಗೇಡಿ

ಮೇಲಿನಿಂದ ಕೆಳಕ್ಕೆ :
1.ಮಜ್ಜನ 2.ರಹಿತ 3.ಸಖ
4.ದಡ್ಡಕ್ಷರ 7.ಜಾಲಗಾರ
8.ಸಮರ್ಪಣ
10.ತಾಳಮೇಳ 11.ಗರಗ
12.ತಿಕಡಿ 13.ಸುಂಕ

ಕಿರುಸುದ್ದಿ

ದೇಶ ಸೇವೆ ಪವಿತ್ರ ಕಾರ್ಯ



• **ಶಿರಹಟ್ಟಿ:** ಗಂಧದಗುಡಿ ಬಳಗ ಹಾಗೂ ಕರ್ನಾಟಕ ಪ್ರಜಾಪರ ವೇದಿಕೆ ಶಿರಹಟ್ಟಿ ಘಟಕದ ವತಿಯಿಂದ ಪಟ್ಟಣದ ಶಿಕ್ಷಕರ ಸಮುದಾಯ ಭವನದಲ್ಲಿ ಭಾನುವಾರ ಅಗ್ನಿಪಥ ಯೋಜನೆಯಡಿ ಅಗ್ನಿವೀರರಾಗಿ ಆಯ್ಕೆಯಾಗಿ ಭಾರತದ ಸೈನ್ಯಕ್ಕೆ ಆಯ್ಕೆಯಾದ ನೀಲಪ್ಪ ಕರಡಿ, ಅನ್ನದಾನಿ ಮಂಜಲಾಪೂರ, ನಾಗರಾಜ ಬಾರವಾರ, ಚನ್ನವೀರ ಮರಿಗೌಡ ಅವರಿಗೆ ಸನ್ಮಾನಿಸಲಾಯಿತು. ಗಂಧದ ಗುಡಿ ಬಳಗ ರಾಜ್ಯ ಕಾರ್ಯಕಾರಿ ಸಮಿತಿ ಅಧ್ಯಕ್ಷ ಹಸನ ಎನ್. ತಹಸೀಲ್ದಾರ ಮಾತನಾಡಿ, ದೇಶ ಸೇವೆ ಎನ್ನುವುದು ಕೇವಲ ಒಂದು ವೃತ್ತಿಯಲ್ಲ, ಅದೊಂದು ಪವಿತ್ರವಾದ ಕಾರ್ಯ. ಭಾರತೀಯ ಸೈನಿಕರ ದೇಶ ಸೇವಾ ಕಾರ್ಯಕ್ಕೆ ನಾವುಗಳು ಸದಾ ಕಾಲ ಚಿರ ಋಣಿಯಾಗಿರುತ್ತೇವೆ ಎಂದರು. ಶಂಕ್ರ ಗುಡಿಸಾನಿ, ಬಿ.ಎಚ್.ಪಠಾಣ, ಸಲ್ಮಾನ ಕುಂದಾಪುರ, ಸುನೀಲಗೌಡ ಪಾಟೀಲ, ಮಾಂತೇಶ, ಬಡೇಣ್ಣವರ ಇದ್ದರು.

ಸ್ಕೂಲ್ ಬ್ಯಾಗ್ ಕೊಡುಗೆ



• **ಗದಗ:** ಸರ್ಕಾರಿ ಶಾಲೆಗಳು ಸಬಲೀಕರಣವಾಗಲು ಸಮುದಾಯದ ಸಹಭಾಗಿತ್ವ ಅವಶ್ಯ. ಸಂಘ ಸಂಸ್ಥೆಗಳು ಸರ್ಕಾರಿ ಶಾಲೆಗಳ ಪ್ರಗತಿಗೆ ಕೈಜೋಡಿಸಬೇಕೆಂದು ಹಿರಿಯ ಕರ ಸಲಹೆಗಾರ ಮುಕುಂದ ಪೋತ್ನೀಸ್ ಹೇಳಿದರು. ಗದಗಿನ ಶತಮಾನೋತ್ಸವದ ಶಾಲೆ ಸರ್ಕಾರಿ ಗಂಡು ಮಕ್ಕಳ ಶಾಲೆ ನಂ.1 ರಲ್ಲಿ ದಾನಿಗಳಿಂದ ಶಾಲಾ ಮಕ್ಕಳಿಗೆ ಸ್ಕೂಲ್ ಬ್ಯಾಗ್ ವಿತರಣಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ದಾನಿಗಳಾದ ಶಿಕ್ಷಣಪ್ರೇಮಿ ಜಯಂತಿಲಾಲ ಕವಾಡ , ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ.ಮುಂದಿನಮನಿ, ಸಮನ್ವಯ ಅಧಿಕಾರಿ ಎಸ್.ಪಿ.ಪ್ರಭಯ್ಯನಮಠ, ಶಿಕ್ಷಣ ಸಂಯೋಜಕ ಮುರಳಿ ಸೊಲ್ಲಾಪೂರ, ಸಂಪನ್ಮೂಲ ವ್ಯಕ್ತಿ ಕವಿತಾ ಬೇಲೇರಿ, ಹೇಮಾದೇವಿ ಕವಾಡ ಹಾಗೂ ಪ್ರಥ್ವಿರಾಜ್ ಬಾಫಣಾ, ಬಾವೇಶ, ಪ್ರಿಯಲ್ ಕವಾಡ, ಶೈಲೇಶ್ ಬಾಗಮಾರ, ಪರವೀನ್ ಸಂಕಲೇಚಾ, ಮೋಹಿತ್, ಅಕ್ಷತಾ ಕವಾಡ, ಮುಖ್ಯೋಪಾಧ್ಯಾಯರುಗಳಾದ ಆರ್.ಬಿ.ಹೊಸಮನಿ, ಹೇಮಲತಾ ಆಸಂಗಿ ಇತರರಿದ್ದರು. ಮುಖ್ಯೋಪಾಧ್ಯಾಯನಿ ವಿಜಯಾ ಜಕರಡ್ಡಿ ಸ್ವಾಗತಿಸಿದರು. ಕಾವ್ಯಾ ದಂಡಿನ ನಿರೂಪಿಸಿದರು. ಶಿಕ್ಷಕಿ ಸುನಂದಾ ಕುಂಟೋಜಿ ವಂದಿಸಿದರು.

ದುರ್ಘಟನೆಗೆ ಅವಕಾಶ ಸಲ್ಲ



• **ನರೇಗಲ್ಲ:** ಪಟ್ಟಣ ಮತ್ತು ಸ್ಟೇಷನ್ ವ್ಯಾಪ್ತಿ ಬರುವ ಎಲ್ಲಾ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಮೊಹರಂ ಹಬ್ಬವನ್ನು ಶಾಂತಿಯುತವಾಗಿ ಆಚರಿಸಬೇಕು. ಯಾವುದೇ ಕಾರಣಕ್ಕೂ ದುರ್ಘಟನೆಗಳಿಗೆ ಅವಕಾಶ ನೀಡಬಾರದು. ಅಹಿತಕರ ಘಟನೆಗಳು ನಡೆದರೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಿಪಿಐ ವಿಜಯಕುಮಾರ ಎಚ್ಚರಿಕೆ ನೀಡಿದರು. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಮೊಹರಂ ಹಬ್ಬದ ಅಂಗವಾಗಿ ಆಯೋಜಿಸಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಹಬ್ಬಗಳ ಆಚರಣೆ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆದರೆ ಹಬ್ಬಗಳ ಮೇಲೆಯೇ ನಿರ್ಬಂಧ ಹೇರುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದರು. ನರೇಗಲ್ಲ ಪಿಎಸ್ಐ ಐಶ್ವರ್ಯ ನಾಗರಾಳ ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಶಾಂತಿಗೆ ಭಂಗ ತರುವ ಸಂದೇಶ ಕಳಿಸುವುದು ಹಾಗೂ ಹಬ್ಬದ ನೆಪದಲ್ಲಿ ಜೂಜಾಟ, ಅಕ್ರಮ ಮದ್ಯ ಮಾರಾಟ, ಯಾವುದೇ ಕಾನೂನುಬಾಹಿರ ಚಟುವಟಿಕೆಗಳು ಕಂಡುಬಂದರೆ ಮುಲಾಜಿಲ್ಲದೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಕನಕದಾಸ ಶಿಕ್ಷಣ ಸಂಸ್ಥೆಯ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಶಿವಾನಂದ ಗೋಗೇರಿ ಮಾತನಾಡಿ, ಹಬ್ಬಗಳ ಸಂದರ್ಭದಲ್ಲಿ ಹಾಡುವ ಜನಪದ ಹಾಗೂ ಸಾಂಸ್ಕೃತಿಕ ಹಾಡುಗಳಲ್ಲಿ ಬದುಕಿನ ಮೌಲ್ಯಗಳು ಅಡಕವಾಗಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಇಂತಹ ಹಾಡುಗಳನ್ನು ಹಾಡುವವರ ಸಂಖ್ಯೆ ಕಡಿಮೆಯಾಗುತ್ತಿರುವುದು ಹಾಗೂ ಇತ್ತೀಚಿನ ಯುವಕರು ಪಾಶ್ಚಿಮಾತ್ಯ ಸಂಸ್ಕೃತಿಗೆ ಒಳಪಟ್ಟಿರುವುದು ವಿಷಾದನೀಯ ಎಂದರು. ನಿವೃತ್ತ ಶಿಕ್ಷಕ ಎಂ.ಎಸ್. ಧಡೇಸೂರಮಠ, ಎ.ಎ. ನವಲಗುಂದ, ಮರಿಯಪ್ಪ ಈಟಿ ಮಾತನಾಡಿದರು. ರೆಹಮಾನಸಾಬ ಹೊಸಮನಿ, ರಹೆಮಾನಸಾಬ ಫಕ್ರುಸಾಬ ರೇವಡಿಗಾರ, ಡಿ.ಎಂ. ಬಾಗವಾನ, ಕಾಶೀಮಸಾಬ ಗಡಾದ, ಅಬ್ದುಲ್ ಅತ್ತಾರ, ಮಾಬುಸಾಬ ಬೆಟಗೇರಿ, ಜಾಕೀರಬುಡ್ಡಾ, ಸೋಮಪ್ಪ ಹನುಮಸಾಗರ, ಉಮೇಶ ಪಾದಗಟ್ಟಿ, ಮಹಮ್ಮದ್ ರಫೀಕ್ ಹಿರೇಮನಿ ಇತರರಿದ್ದರು.



ನರಗುಂದ: ಪಟ್ಟಣದ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಭಾನುವಾರ ಯೋಗ ದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಿ.ಕೆ. ಪ್ರಭಕ್ಕ, ವಿ.ಎನ್. ಕೊಳ್ಳಿಯವರ, ಡಾ.ವೀರನಗೌಡ, ಅಡಿವೆಪ್ಪ ಬಾಳೆಕಾಯಿ, ಶಂಕ್ರಣ್ಣ ಇಂಗಳಳ್ಳಿ, ಪುಂಡಲೀಕ, ಶೇಖಪ್ಪ ವಾಣಿ ಇಂಗಳಳ್ಳಿ, ರತ್ನಾ ವಾಳದ, ಜಯಶ್ರೀ ಸಾಲೂಟಗಿಮಠ, ಡಾ.ಸುಮಂಗಲಾ ಸವದತ್ತಿ, ಪೂಜಾ ವಸ್ತ್ರದ ಹಾಗೂ ಈಶ್ವರೀಯ ಪರಿವಾರದವರು ಭಾಗವಹಿಸಿದ್ದರು.

ಗಾನ ಮುಂಗಾರು- ಸಂಗೀತದ ತುಂತುರು ಕಾರ್ಯಕ್ರಮ

• **ಲಕ್ಷ್ಮೇಶ್ವರ:** ಭಾರತೀಯರಿಗೆ ಮುಂಗಾರು ಎನ್ನುವುದು ಕೇವಲ ಮಳೆಯಲ್ಲ, ಅದೊಂದು ಹಬ್ಬ, ಅದೊಂದು ಉತ್ಸವ, ಸಂಭ್ರಮ. ಮತ್ತು ಇಡೀ ದೇಶದ ಜೀವನಾಡಿ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಲಕ್ಷ್ಮೇಶ್ವರ ತಾಲೂಕು ಘಟಕದ ಅಧ್ಯಕ್ಷ ಗುರುರಾಜ ಹವಳದ ಅಭಿಪ್ರಾಯಪಟ್ಟರು. ಅವರು ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಡಿ.ಎಲ್. ಪಾಟೀಲ ಅವರ ಸ್ವಗೃಹದಲ್ಲಿ ಹಮ್ಮಿಕೊಂಡ ಮಾಸದ ಮಾತು ಕಾರ್ಯಕ್ರಮ ಸರಣಿಯ 36ನೇ ಕಾರ್ಯಕ್ರಮ ಗಾನ ಮುಂಗಾರು-ಸಂಗೀತದ ತುಂತುರು ಉದ್ಘಾಟಿಸಿ ಮಾತನಾಡಿದರು. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಎಂ.ಎನ್. ಬರಮಗೌಡ್ರ, ಹಿರಿಯ ಚಿಂತಕ ಬಸವರಾಜ, ವಿಶ್ರಾಂತ ಮುಖ್ಯೋಪಾಧ್ಯಾಯ ಬಿ.ಎಸ್ ಹರ್ಲಾಪೂರ, ಮುಖ್ಯೋಪಾಧ್ಯಾಯ ಜಿ.ಎಂ. ಪೂಜಾರ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಈಶ್ವರ ಮೆಡ್ಲೇರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಧರಣೇಂದ್ರಗೌಡ ಪಾಟೀಲ, ಬೀನಾ ಧರಣೇಂದ್ರಗೌಡ ಪಾಟೀಲ, ಅನ್ನಪೂರ್ಣ ಹರ್ಲಾಪೂರ, ಶಂಕರ ಶೆಳಕೆ ಉಪಸ್ಥಿತರಿದ್ದರು. ನಂತರ ಜರುಗಿದ ಗಾನ ಮುಂಗಾರು ಸಂಗೀತ ಕಾರ್ಯಕ್ರಮದಲ್ಲಿ ಡಾ.ಎಸ್.ಸಿ.ನೇಕಾರ, ಮಂಜುನಾಥ ಉಮಚಗಿ, ಮಂಜುನಾಥ ಕೊಡ್ಲಿ, ನವೀನ ಅಂಗಡಿ, ರವಿರಾಜ ಶಿಗ್ಲಿ, ಅಜೋಳ ಹರಕುಣಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ರಾಜ್ಯಮಟ್ಟದ ಹೆಮ್ಮೆಯ ಕನ್ನಡಿಗ 2026 ರಾಜ್ಯಪ್ರಶಸ್ತಿಗೆ ಭಾಜನರಾದ ಸಾಹಿತ್ಯ ಪರಿಷತ್ತಿನ ಪದಾಧಿಕಾರಿ ಶಂಕರ ಶೀಳಿನವರನ್ನು ಗೌರವಿಸಲಾಯಿತು. ಈರಣ್ಣ ಗಾಣಿಗೇರ ಸ್ವಾಗತಿಸಿದರು. ಬಿ.ಮಂಜುನಾಥ ಚಾಕಲಬ್ಬಿ ನಿರೂಪಿಸಿದರು. ನಾಗರಾಜ ಮಜ್ಜಿಗುಡ್ಡ ವಂದಿಸಿದರು. ಎಚ್.ಎಂ.ಸಜ್ಜನ, ಡಿ.ಎಚ್.ಪಾಟೀಲ, ಅರವಿಂದ ದೇಶಪಾಂಡೆ ಸನ್ಮಾನ ಕಾರ್ಯಕ್ರಮ ನಡೆಸಿಕೊಟ್ಟರು.



ಶಿರಹಟ್ಟಿ: ತಾಲೂಕಿನ ಮಜ್ಜೂರು ಗ್ರಾಮದ ಬಾಲಕಿಯರ ವಿದ್ಯಾಸಂಸ್ಥೆಯಾದ ಶ್ರೀ ಸತ್ಯಸಾಯಿ ವಾಣಿನಿಕೇತನ ಗುರುಕುಲದಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಯೋಗ ಮಾರ್ಗದರ್ಶಕ ಬಿ.ಎಸ್. ಗೋಣಿ, ವಿದ್ಯಾರ್ಥಿನಿಯರು ಹಾಗೂ ಶಿಕ್ಷಕರು ಯೋಗಾಸನ ಮತ್ತು ಪ್ರಾಣಾಯಾಮ ಅಭ್ಯಾಸದಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷೆ ಡಾ. ಸೀಮಾ ಇದ್ದರು.

ಉತ್ತಮ ಆರೋಗ್ಯಕ್ಕೆ ಯೋಗ ಅವಶ್ಯ

• **ಗದಗ:** ಯೋಗ ಮಾಡುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ವಿಧಾನ ಪರಿಷತ್ ಶಾಸಕ ಎಸ್.ವಿ. ಸಂಕನೂರ ಹೇಳಿದರು.

ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಬೆಟಗೇರಿ ನಗರಸಭೆ, ವಿವಿಧ ಇಲಾಖೆಗಳು ಮತ್ತು ಸರ್ವಯೋಗ ಸಂಸ್ಥೆ ಸಹಯೋಗದಲ್ಲಿ ಆರೋಗ್ಯ ಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಹಮ್ಮಿಕೊಳ್ಳಲಾಗಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಮಾತನಾಡಿ, ಆರೋಗ್ಯವೇ ಭಾಗ್ಯ ಎಂಬ ನಾಣ್ಣುಡಿಯಿದೆ. ದೈಹಿಕವಾಗಿ ಸದೃಢರಾದಾಗ ಮಾನಸಿಕವಾಗಿ ಸದೃಢರಾಗಲು ಸಾಧ್ಯ. ರೋಗಗಳು ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ ರೋಗಗಳು ಬಾರದಂತೆ ಮುಂಜಾಗ್ರತರ ವಹಿಸುವುದೇ ಸೂಕ್ತವಾಗಿದೆ. ಯೋಗವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಹುಲಕೋಟಿ ಕೆ.ಎಚ್.ಪಾಟೀಲ ಪ್ರಾಕೃತಿಕ ಚಿಕಿತ್ಸಾ ಕೇಂದ್ರದ ಡಾ.ಸತೀಶ ಹೊಂಬಾಳಿ ಯೋಗಾಸನ ಪ್ರಾಣಾಯಮಗಳನ್ನು ನಡೆಸಿಕೊಟ್ಟರು. ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆಯ ರೇಖಾ ಅಕ್ಕ ಅವರು ಧ್ಯಾನ ಅಭ್ಯಾಸ ನಡೆಸಿಕೊಟ್ಟರು. ನಿತ್ಯ ಯೋಗ ಕೇಂದ್ರದವರಿಂದ ನೃತ್ಯ ಕಾರ್ಯಕ್ರಮ ಜರುಗಿತು. ಅಪರಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಡಿವೈಎಸ್‌ಪಿ ಮಹಾಂತೇಶ್ ಸಜ್ಜನರ, ಜಿಪಂ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಉಪವಿಭಾಗಾದಿಕಾರಿ ಗಂಗಪ್ಪ ಎಂ., ಜಿಪಂ ಅಧಿಕಾರಿ ಎಂ.ವಿ.ಚಳಗೇರಿ, ಡಿಡಿಪಿಐ ಆರ್.ಎಸ್. ಬುರುಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ರಾದಾ ಮಣ್ಣೂರ ಇದ್ದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಶರಣು ಗೋಗೇರಿ ಸ್ವಾಗತಿಸಿದರು. ಡಾ.ಅಶೋಕ ಮತ್ತಿಗಟ್ಟಿ ಪತಂಜಲಿ ಪ್ರಾರ್ಥನೆ ಮಾಡಿದರು. ಆಯುಷ್ ಅಧಿಕಾರಿ ಜುಬೇದಾ ತಿಗಳೇರ ಮಾತನಾಡಿದರು. ಡಾ.ಸಂಜೀವ್ ನಾರಪ್ಪನವರ ನಿರೂಪಿಸಿದರು.

ಎಲ್ಲೆಲ್ಲೂ ಯೋಗಾ ಯೋಗಾ..



ಲಕ್ಷ್ಮೇಶ್ವರ: ಪಟ್ಟಣದ ಸಿಬಿಎಸ್‌ಇ ಸ್ಕೂಲ್ ಚಂದನ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳು 12ನೇ ಅಂತಾರಾಷ್ಟ್ರಿಯ ಯೋಗ ದಿನಾಚರಣೆಯಂದು ಚಂದನದ ವಿದ್ಯಾರ್ಥಿಗಳು ಯೋಗ ಮಾಡುವುದರ ಮುಖಾಂತರ ಆರೋಗ್ಯಕರ ಬದುಕಿಗಾಗಿ ಯೋಗ ಎಂಬ ಘೋಷವಾಕ್ಯದಡಿ ವಿವಿಧ ಬಗೆಯ ಆಸನ ಮಾಡಿದರು.



ನರಗುಂದ: ತಾಲೂಕಿನ ಬನಹಟ್ಟಿ ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಸ್.ವೈ. ಪಾಟೀಲ ಅವರು ಯೋಗಾಸನದಿಂದ ಆಗುವ ಪ್ರಯೋಜನಗಳ ಬಗ್ಗೆ ತಿಳಿ ಹೇಳಿದರು. ಹಣಮಂತ ತಳವಾರ, ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯ ಶಿವನಗೌಡ ಪಾಟೀಲ, ಅನಿತಾ ನಾಯ್ಕ, ಅನ್ನಪೂರ್ಣ ಹೊಸಗಾಣಿಗೇರ, ಜ್ಯೋತಿ ದಾನಪ್ಪಗೌಡ್ರ ಹಾಗೂ ಇತರರಿದ್ದರು.



ಬರ ಎದುರಿಸಲು ಸಜ್ಜಾಗಿ: ಸ್ಫೂರ್ತಿ ಜಿ.ಎಸ್.

• **ಶಿರಹಟ್ಟಿ:** ಅತಿಯಾದ ರಸಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ಸಂಪೂರ್ಣ ಹಾಳಾಗುತ್ತದೆ. ಸಾವಯವ ಗೊಬ್ಬರದಿಂದ ಭೂಮಿಯ ಶಕ್ತಿ ವೃದ್ಧಿ, ತೇವಾಂಶ ರಕ್ಷಣೆ, ಸಮೃದ್ಧ ಬೆಳೆ, ಮಿತವ್ಯಯದಲ್ಲಿ ಅಧಿಕ ಆದಾಯ ಪಡೆಯಬಹುದು ಎಂದು ಗದಗ ಉಪ ಕೃಷಿ ನಿರ್ದೇಶಕಿ ಸ್ಫೂರ್ತಿ ಜಿ.ಎಸ್. ಹೇಳಿದರು.

ತಾಲೂಕಿನ ಬೆಳ್ಳಟ್ಟಿ ಗ್ರಾಮದ ಎಪಿಎಂಸಿ ಸಭಾಭವನದಲ್ಲಿ ಆಯೋಜಿಸಲಾಗಿದ್ದ ಖೇತ್ ಬಚಾವೋ ಅಭಿಯಾನದ ಆತ್ಮ ಯೋಜನೆಯಡಿ ಕಿಸಾನ ಗೋಷ್ಠಿ ಮತ್ತು ಮರುಭೂಮಿಕರಣ ಹಾಗೂ ಬರ ತಡೆಗಟ್ಟುವಿಕೆ ವಿಶ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ರೈತರಿಗೆ ತಮ್ಮ ಜಮೀನಿನಲ್ಲಿ ನೀರು ಮತ್ತು ಮಣ್ಣು ಸಂರಕ್ಷಣೆ ಮಾಡಿಕೊಂಡು ಮುಂದಿನ ದಿನಗಳಲ್ಲಿ ಬರ ಎದುರಿಸಲು ಸಜ್ಜಾಗಬೇಕೆಂದು ಹೇಳಿದರು.

ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಮಾತನಾಡಿ, ರೈತರು ಸಾಧ್ಯವಾದಷ್ಟು ಸಾವಯವ ಕೃಷಿಯತ್ತ ಆಸಕ್ತಿ ತೋರಿಸುವುದು ಇಂದು ಅತೀ ಅವಶ್ಯವಾಗಿದೆ. ರಾಸಾಯನಿಕ ಗೊಬ್ಬರ ಅತಿಯಾದ ಬಳಕೆಯಿಂದ ಭೂಮಿಯ ಫಲವತ್ತತೆಯು ಹಾಳಾಗುತ್ತಿದ್ದು, ಇದನ್ನು ತಡೆಯುವುದು ನಮ್ಮೆಲ್ಲರ ಜವಾಬ್ದಾರಿ. ರೈತರು ಕಡ್ಡಾಯವಾಗಿ ಎಫ್‌ಐಡಿ ಮಾಡಿಸಿಕೊಂಡು ಇಲಾಖೆಯೊಂದಿಗೆ ಸಹಕರಿಸಿ. ಅಗತ್ಯಕ್ಕೆ ಅನುಗುಣವಾಗಿ ತಮಗೆ ಬೇಕಾಗಿರುವ ಯೂರಿಯಾ ರಸಗೊಬ್ಬರ ಎಫ್‌ಐಡಿ ಮೂಲಕವೇ ಪಡೆಯಬೇಕು ಎಂದರು. ಹುಲಕೋಟಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಎನ್.ಎಚ್. ಬಂಡಿ ಮಾತನಾಡಿ, ಸಾವಯವ ಪದ್ಧತಿಯಲ್ಲಿ ಕೃಷಿಯಲ್ಲಿ ಅಳವಡಿಸಿಕೊಳ್ಳುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ ಮತ್ತು ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣ ಹೆಚ್ಚಾಗಿ ಮಣ್ಣು ರಾಸಾಯನಿಕಗಳಿಂದ ಮುಕ್ತಗೊಳ್ಳಲು ಸಹಕಾರಿಯಾಗುತ್ತದೆ, ರೈತರು ನೇರ ರಸಗೊಬ್ಬರ ಬಳಸುವ ಬದಲಾಗಿ ಕಾಂಪೋಸ್ಟ್ ರಸಗೊಬ್ಬರ ಬಳಸುವುದರಿಂದ ಬೆಳೆಗೆ ಬೇಕಾದ ಅವಶ್ಯಕ ಪ್ರಾಥಮಿಕ ಪೋಷಕಾಂಶ ಒದಗಿಸಿದಂತಾಗುತ್ತದೆ ಎಂದರು. ಸಾವಯವ ಕೃಷಿಕ ಬಸವರಾಜ ನಾಪ್ಪಿ, ಮುಖಂಡ ಮೋಹನ ಗುತ್ತೆಮ್ಮನವರ ಮಾತನಾಡಿದರು. 2025-26 ನೇ ಸಾಲಿನ ಆತ್ಮ ಯೋಜನೆಯಡಿಯಲ್ಲಿ ತಾಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ ಪಡೆದ ರೈತರನ್ನು ಸನ್ಮಾನಿಸಲಾಯಿತು. ಸಹಾಯಕ ಕೃಷಿ ನಿರ್ದೇಶಕ ಶಿವಕುಮಾರ ಕಾಶಪ್ಪನವರ, ಕೃಷಿ ಅಧಿಕಾರಿ ಚಂದ್ರಶೇಖರಗೌಡ, ಮಂಜುನಾಥ ಭರಮಗೌಡ್ರ, ಆರ್.ಸಿ.ಚಾಕಲಬ್ಬಿ, ಎಂ.ಎಸ್.ಪೂಜಾರ್, ಬಿ.ಟಿ.ಎಂ ಆತ್ಮ, ಡಿ.ಕೆ.ಅಚಲಕರ್, ಎ.ಟಿ.ಎಂ ಆತ್ಮ ಹಾಗೂ ಶಿರಹಟ್ಟಿ ತಾಲೂಕಿನ ಕೃಷಿಕ ಸಮಾಜ ಅಧ್ಯಕ್ಷ ನೀಲನಗೌಡ ಪಾಟೀಲ, ಶ್ರೀನಿವಾಸ ಅಳವಂಡಿ, ಅಶೋಕ ಕಪ್ಲಿ, ಮಹೇಶ ಬಡ್ನಿ ಇದ್ದರು.



ಸಾಹಿತಿಗಳಿಗೆ ಸಮಾಜದಲ್ಲಿ ಸದಾ ಗೌರವ: ಪಾಟೀಲ

• **ಮುಂಡರಗಿ:** ತಾಲೂಕಿನ ಸಾಹಿತಿಗಳ ಕೃತಿಗಳನ್ನು ಅವಲೋಕನ ಮಾಡುವ ಕಾರ್ಯಕ್ರಮವನ್ನು ತಾಲೂಕು ಕಸಾಪ ಹಮ್ಮಿಕೊಂಡಿದ್ದು ರಾಜ್ಯದಲ್ಲಿಯೇ ಪ್ರಥಮ. ಇಂತಹ ಕಾರ್ಯಕ್ರಮಗಳಿಂದ ಎಲೆಯಮರೆಯ ಕಾಯಿಯಂತಿರುವ ಸಾಹಿತಿಗಳು ಬೆಳಕಿಗೆ ಬರುವಂತಾಗುತ್ತದೆ. ಸಾಹಿತಿಗಳ ಮತ್ತು ಕವಿಗಳ ಆರ್ಥಿಕ ಸ್ಥಿತಿ-ಗತಿ ಚೆನ್ನಾಗಿರದಿದ್ದರೂ ಸಹ ಸಾಹಿತಿಗಳಿಗೆ ಇರುವ ಗೌರವ ಕಡಿಮೆಯಾಗುವುದಿಲ್ಲ ಎಂದು ಗದಗ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಹೇಳಿದರು.

ಅವರು ಇಲ್ಲಿಯ ಕಸಾಪ ಶ್ರೀ ಜಗದ್ಗುರು ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ಮುಂಡರಗಿ ತಾಲೂಕಿನ ಸಾಹಿತಿಗಳ ಕೃತಿ ಅವಲೋಕನಾ ಕಾರ್ಯಕ್ರಮ, ದತ್ತಿ ಉಪನ್ಯಾಸ ಹಾಗೂ ಅನ್ನದಾನೀಶ್ವರರ ಕುರಿತಾದ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದರು.

ದತ್ತಿ ಉಪನ್ಯಾಸದಲ್ಲಿ ಶ್ರೀ ಜಗದ್ಗುರು ಅನ್ನದಾನೀಶ್ವರರ ಶಿವಮಯ ಜೀವನ ಕುರಿತು ಕಸಾಪದ ಗೌರವಧ್ಯಕ್ಷ ಆರ್.ಎಲ್.ಪೊಲೀಸಪಾಟೀಲ ಮಾತನಾಡಿ, 10ನೇ ಪೀಠಾಧಿಪತಿಗಳಾಗಿ ಶ್ರೀಮಠದ ಚುಕ್ಕಾಣಿ ಹಿಡಿದು ಬರದ ನಾಡಿನಲ್ಲಿ ಅಮೋಘ ಸಾಧನೆ ಮಾಡಿದ ಪುಣ್ಯಪುರುಷರು ಶ್ರೀಗಳು ಎಂದರು. ಆರ್.ಬಿ.ಡಂಬಳಮಠ ಅವರ ದತ್ತಿ ಉಪನ್ಯಾಸದಲ್ಲಿ ಪೂಜ್ಯರು ವಚನ ಸಾಹಿತ್ಯ ಕುರಿತು ಉಪನ್ಯಾಸವನ್ನು ನಿವೃತ್ತ ಪ್ರಾ. ಎಸ್.ಬಿ.ಕೆ.ಗೌಡರ ನೀಡಿ ಸಾವಿರಾರು ವಚನಗಳನ್ನು ರಚಿಸಿದ ಪೂಜ್ಯರು ತಮ್ಮ ವಚನಗಳ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದಲ್ಲದೇ ಸಮಾಜದ ಡೊಂಕನ್ನು ಎತ್ತಿತೋರಿಸಿ ಅವುಗಳಿಗೆ ಸೂಕ್ತ ದಾರಿ ತೋರಿಸಿದ್ದಾರೆ ಎಂದರು. ಅಧ್ಯಕ್ಷತೆಯನ್ನು ತಾಲೂಕು ಕಸಾಪ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ವಹಿಸಿದ್ದರು. ವೀರಣ್ಣ ಮಡಿವಾಳರ, ಬಸವರಾಜ ಹಟಲಿ ಮುಂತಾದವರಿದ್ದರು. ಎನ್.ಎಂ.ಕಲಕೇರಿ ಸ್ವಾಗತಿಸಿದರು. ಮಂಜುನಾಥ ಮುಧೋಳ ಪ್ರಾಸ್ತಾವಿಕಿಸಿದರು. ರಾಮನಗೌಡ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಮಹೇಶ ಮೇಟಿ ಕವಿಗೋಷ್ಠಿ ನಿರೂಪಿಸಿ, ವಂದಿಸಿದರು.

> ತಾಲೂಕು ಕಸಾಪ ಮಾದರಿ ಆಗುವ ಕೆಲಸ ಮಾಡುತ್ತಿದೆ. ಈ ಘಟಕಕ್ಕೆ ಎಲ್ಲರೂ ಸಹಾಯ-ಸಹಕಾರ ನೀಡಬೇಕು.
> ■ ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು

▸▸ ಗಿರಿಜಾ ಕಡ್ಡಿ,ಸಿ.ಕೆ. ಗಣಪ್ಪನವರ, ಕೊಟ್ರೇಶ ಜವಳಿ, ಶಂಭುಲಿಂಗ ಚೆಗರಿ, ವೀಣಾ ಪಾಟೀಲ, ಹೊನ್ನಕಿರಣ ಎಂ.ಎನ್, ರವಿಗೌಡ ಪಾಟೀಲ, ಅಕ್ಕಮ್ಮ ಕೊಟ್ಟೂರಶೆಟ್ಟರ, ಮಂಜುನಾಥ ಮುಧೋಳ, ಶೋಭಾ ಮೇಟಿ, ಗಿರಿಜಾ ಸೂಡಿ, ವಿರೇಶ ಬಾಗೋಡಿ ಮುಂತಾದವರು ಸ್ವರಚಿತ ಕವನ ವಾಚಿಸಿದರು.



ಮೊಳಕೆಯೊಡೆದ ಫಸಲಿಗೆ ಜೀವಕಳೆ ನೀಡದ ಮೃಗಶಿರ ಮಳೆ: ರೈತರಲ್ಲಿ ಆತಂಕ

▸ ಶಿವಾನಂದ ಕುಳಗೇರಿ

• **ಶಿರಹಟ್ಟಿ:** ರೋಹಿಣಿ ಮಳೆ ಸಮೃದ್ಧವಾಗಿ ಸುರಿದಿದ್ದರಿಂದ ರೈತರು ಹುಮ್ಮಸ್ಸಿನಿಂದ ಮುಂಗಾರು ಬಿತ್ತನೆ ಕಾರ್ಯವನ್ನು ಭರದಿಂದ ನಡೆಸಿದ್ದರು. ಆದರೆ ಮೊಳಕೆಯೊಡೆದ ಫಸಲಿಗೆ ಮೃಗಶಿರ ಮಳೆ ಜೀವಕಳೆ ನೀಡದೆ ಬೆಳೆ ಹಾಳಾಗುವಂತೆ ಮಾಡುತ್ತಿದ್ದು, ಮಳೆರಾಯನನ್ನು ನೆನೆದು ಸ್ಥಳೀಯ ಕುರುಬರ ಓಣಿ ಮತ್ತು ನವ ನಗರದ ರೈತರು ದೇವರ ಪೂಜೆ ಹಾಗೂ ಗುರ್ಜಿ ಪೂಜೆಯ ಮೊರೆ ಹೋಗುತ್ತಿದ್ದಾರೆ.

ಮುಂಗಾರಿನಲ್ಲಿ ರೋಹಿಣಿ ಮಳೆ ಮೇ ಅಂತ್ಯದಲ್ಲಿ ಮತ್ತು ಜೂನ್ ಮೊದಲ ವಾರ ಸಮೃದ್ಧವಾಗಿ ಸುರಿದಿತ್ತು. ರೈತರು ಮೆಕ್ಕೆಜೋಳ, ಗೆಜ್ಜೆಶೇಂಗಾ, ಹೆಸರು, ನವಣೆ, ತೊಗರಿ, ಎಳ್ಳು, ಉದ್ದಿನ ಬೆಳೆಗಳನ್ನು ಭರದಿಂದ ಬಿತ್ತನೆ ಮಾಡಿದ್ದರು. ಮೃಗಶಿರ ಮಳೆ ಬಾರದಿರುವ ಹಿನ್ನೆಲೆ ತೇವಾಂಶ ಕೊರತೆ ಉಂಟಾಗಿ ಬೆಳೆ ಹಾಳಾಗುತ್ತಿವೆ. ರೈತ ಮಹಿಳೆಯರು ಮತ್ತು ಮಕ್ಕಳಿಂದ ಗುರ್ಜಿ ಪೂಜೆ ಮಾಡಿ ಮಳೆರಾಯನ ಕರೆಯುತ್ತಿದ್ದಾರೆ.



ಮುನಿಸು ಬಿಡಲಿ

ಮಳೆಯಿಲ್ಲದೆ ಬೆಳೆಯಿಲ್ಲ, ಬೆಳೆಯಿಲ್ಲದೆ ತುತ್ತಿನ ಚೀಲ ತುಂಬಿಸಿಕೊಳ್ಳಲು ಸಾಧ್ಯವಿಲ್ಲ, ರೈತ ಕುಟುಂಬದವರು ಮನರಂಜನೆ ಮೂಲಕ ಮಳೆಯನ್ನು ಕರಿಯುತ್ತೇವೆ. ಆದರೆ ಮೃಗಶಿರ ಮಾತ್ರ ಮುನಿಸಿನಿಂದ ಹೊರಬಂದಂತೆ ಕಾಣುತ್ತಿಲ್ಲ. ಆರಿದ್ರ ಮಳೆಯಾದರೂ ಮುನಿಸು ಬಿಟ್ಟು ಧರೆಗಿಳಿಯಲಿ ಎಂದು ಕಾಶಮ್ಮ ಗೊರವರ, ಮಾಳಮ್ಮ ಆಳಿಯನಿಂಗಣ್ಣವರ, ದ್ಯಾಮವ್ವ ಮೀಶಿ, ಅಕ್ಕಮ್ಮ ಕಟ್ಟೇಕಾರ, ದ್ಯಾಮಕ್ಕ ಪರಸಾಪೂರ, ರೇಣವ್ವ ಡೊಂಕಬಳ್ಳಿ, ಲಲಿತವ್ವ ಪೂಜಾರ ಹೇಳಿದರು.

ಕಣ್ಮನ ಸೆಳೆಯುತ್ತಿವೆ ವಿದ್ಯುತ್ ದೀಪಗಳು: ಮೊಹರಂ ಹಬ್ಬಕ್ಕೆ ಮಾರನಬಸರಿ ಗ್ರಾಮ ಸಜ್ಜು

▸ ಮೆಹಬೂಬ ಎಚ್ ಮೋತೆಖಾನ್

• **ರೋಣ:** ಮಾರನಬಸರಿ ಗ್ರಾಮ ಐತಿಹಾಸಿಕ ಮೊಹರಂ ಹಬ್ಬಕ್ಕೆ ಸಜ್ಜಾಗಿದ್ದು, ಹಬ್ಬಕ್ಕೆ ಗ್ರಾಮದ ಪ್ರತಿ ಕುಟುಂಬಗಳು ಮನೆಗಳನ್ನು ಶೃಂಗರಿಸಿದ್ದು ಮೊಹರಂ ಹಬ್ಬಕ್ಕೆ ಮತ್ತಷ್ಟು ಮೆರುಗು ನೀಡಿದಂತಾಗಿದೆ. ಮಾರನಬಸರಿ ಗ್ರಾಮದಲ್ಲಿ ಹಬ್ಬ ಹಾಗೂ ಜಾತ್ರೆಗಳನ್ನು ಏಕತೆಯಿಂದ ಆಚರಿಸಲಾಗುತ್ತಿದೆ. ಮಾರನಬಸರಿ ಮೊಹರಂ ಹಬ್ಬ ಗತವೈಭವ ಹೊಂದಿದ್ದು, ಸಾವಿರಾರು ಭಕ್ತರು ಅಲೈದೇವರುಗಳ ದರ್ಶನ ಪಡೆಯುವ ಮೂಲಕ ಸಾಕ್ಷೀಕರಿಸುತ್ತಾರೆ. ಎರಡು ಮಸೂತಿಗಳಿದ್ದು, ಎರಡು ಮಸೂತಿಗಳು ಪವಾಡ ಸೃಷ್ಟಿಸುವ ದೇವರುಗಳು ಎಂದು ಭಕ್ತರು ನಂಬುತ್ತಾರೆ. ಇಡೀ ಗ್ರಾಮ ಆಕರ್ಷಕ ವಿದ್ಯುತ್ ದೀಪಾಲಂಕರಗಳಿಂದ ಶೃಂಗಾರ ಮಾಡಲಾಗಿದೆ.



ಮಾರನಬಸರಿ ಗ್ರಾಮದ ಏಕತೆ ನಾಡಿಗೆ ಮಾದರಿ

ಮಾರನಬಸರಿ ಗ್ರಾಮ ಪುಣ್ಯಕ್ಷೇತ್ರವಾಗಿದೆ. ಅಲ್ಲಿನ ಜನರ ಏಕತೆ ಮತ್ತು ಸಹೋದರತೆ ಶ್ಲಾಘನೀಯ. ಎಲ್ಲ ಹಬ್ಬಗಳನ್ನು ಎಲ್ಲರೂ ಕೂಡಿಕೊಂಡು ಆಚರಣೆ ಮಾಡುವುದು ನಾಡಿಗೆ ಮಾದರಿ. ನಾನು ಕೂಡಾ ಪ್ರತಿ ವರ್ಷ ಗ್ರಾಮಕ್ಕೆ ತೆರಳಿ ದೇವರುಗಳ ದರ್ಶನ ಪಡೆದುಕೊಳ್ಳುತ್ತೇನೆ ಎಂದು ಶಾಸಕ ಜಿ.ಎಸ್.ಪಾಟೀಲ ಹೇಳಿದ್ದಾರೆ.

ಜೂ.22ರಿಂದ ಮೊಹರಂ ಹಬ್ಬಕ್ಕೆ ಚಾಲನೆ ನೀಡಲಾಗುತ್ತದೆ. ದೊಡ್ಡ ಮಸೂತಿ ಹಾಗೂ ಸಣ್ಣ ಮಸೂತಿಗಳಲ್ಲಿ ಅಲೈ ದೇವರುಗಳನ್ನು ಪ್ರತಿಷ್ಠಾನ ಮಾಡಲಾಗುತ್ತದೆ. ಜೂ.24ರಂದು ಸಂಧಲ್ ರಾತ್ರಿ. ದೊಡ್ಡ ಮಸೂತಿ ಮುಜಾವರ ಮನೆಯಲ್ಲಿ ಬಿತ್ತನೆ ಬೀಜಗಳ ಬಿತ್ತನೆ ಕಾರ್ಯ ನಡೆಯುತ್ತದೆ. ಬಿತ್ತಿದ ಬೀಜಗಳು ಒಂದು ಗಂಟೆಯಲ್ಲಿ ಮೊಳಕೆಯೊಡೆಯುತ್ತವೆ ಎನ್ನುವ ಪ್ರತೀತಿಯಿದೆ. ದೊಡ್ಡ ಮಸೂತಿಯ ಅಲೈದೇವರ ಸವಾರಿ ಕೂಡ ನಡೆಯುತ್ತದೆ. ಜೂ.25ರಂದು ಕತ್ತಲ್ ರಾತ್ರಿ. ಬೆಳಗಿನ ಜಾವಾ ಎರಡು ಮಸೂತಿಗಳ ದೇವರುಗಳು ಸವಾರಿ ನಡೆಸುವ ಮೂಲಕ ನೆರೆದ ಭಕ್ತರಿಗೆ ಆಶೀರ್ವದಿಸುತ್ತಾರೆ. ಜೂ 26ರಂದು ದೇವರು ಹೊಳೆಗೆ ಹೊಗುವ ದಿನವಾಗಿದ್ದು, ಅಂದು ದೊಡ್ಡ ದೇವರುಗಳು ರಾಜಕೀಯ ಭವಿಷ್ಯವನ್ನು ತಿಳಿಸುತ್ತವೆ. ರಾಜಕೀಯ ಭವಿಷ್ಯವನ್ನು ಅರಿಯಲು ರಾಜಕೀಯ ಗಣ್ಯರುಗಳು ಸಹ ಆಗಮಿಸಿ ದೇವರ ದರ್ಶನ ಪಡೆಯುವುದು ವಿಶೇಷತೆಯಾಗಿದೆ. ಮಾರನಬಸರಿ ಗ್ರಾಮಕ್ಕೆ ಬರಲು ರೋಣದಿಂದ ಬೆಳಗ್ಗೆ 7.15, 8.15, 10.15, ಸಂಜೆ 4 ಮತ್ತು 5,30ಕ್ಕೆ, ಗಜೇಂದ್ರಗಡದಿಂದ ಬೆಳಗ್ಗೆ 7.15, ಸೂಡಿಯಿಂದ 8.30, ಗಜೇಂದ್ರಗಡಿಂದ 11.30ಕ್ಕೆ ನರೇಗಲ್ಲ ಪಟ್ಟಣದಿಂದ ಬೆಳಗ್ಗೆ 8.35, 10ಕ್ಕೆ, ಮಧ್ಯಾಹ್ನ 2, ಸಂಜೆ 5.30, ರಾತ್ರಿ 7.45 ಕ್ಕೆ, ಗದಗದಿಂದ ಮಧ್ಯಾಹ್ನ 2.45.ಕ್ಕೆ ಹಾಗೂ ರಾತ್ರಿ 8ಕ್ಕೆ ಬಸ್ಸಿನ ವ್ಯವಸ್ಥೆಯಿದ್ದು, ಗದಗ ಗಜೇಂದ್ರಗಡ ಮುಖ್ಯ ರಸ್ತೆ ಕೊಪ್ಪದ ಕ್ರಾಸ್‌ನಿಂದ 2 ಕಿ.ಮೀಅಂತರವಿದ್ದು ಖಾಸಗಿ ವಾಹನ ಸೇರಿದಂತೆ ಬಸ್‌ಗಳ ವ್ಯವಸ್ಥೆಯಿದೆ.

ಜಿಲ್ಲೆಯಾದ್ಯಂತ 12ನೇ ಅಂತಾರಾಷ್ಟ್ರೀಯ ಯೋಗಾ ದಿನಾಚರಣೆ ಸಂಭ್ರಮ

ಮುಂಡರಗಿ




• **ಮುಂಡರಗಿ:** ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರಬೇಕು. ಇದಕ್ಕೆಲ್ಲ ಯೋಗ ಸಹಕಾರಿಯಗುತ್ತದೆ. ಯೋಗ ಸಮಗ್ರ ಆರೋಗ್ಯವನ್ನು ಒದಗಿಸಬಲ್ಲ ಸಾಧನ. ಪತಂಜಲಿ ಯೋಗ ಮಹರ್ಷಿ ಮನುಷ್ಯನ ಸಂಪೂರ್ಣ ಜೀವನ ಸಾಧನಕ್ಕೆ ಯೋಗವನ್ನು ಪರಿಚಯಿಸಿದರು ಎಂದು ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಹೇಳಿದರು. ಅವರು ತಾಲೂಕು ಆಡಳಿತ, ಶ್ರೀ ಜ.ಅ.ವಿ.ಸಮಿತಿ, ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಅನ್ಮೋಲ್ ಯೋಗ ಕೇಂದ್ರ, ಪತಂಜಲಿ ಯೋಗ ಸಮಿತಿ, ಹಿಮಾಲಯ ಯೋಗ ಕೇಂದ್ರ, ಚೈತನ್ಯ ಶಿಕ್ಷಣ ಸಮಿತಿ ಹಾಗೂ ವಿವಿಧ ಸಂಘಗಳ ಆಶ್ರಯದಲ್ಲಿ ಅನ್ನದಾನೀಶ್ವರ ಸಂಸ್ಥಾನಮಠದ ಆವರಣದಲ್ಲಿ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಆಶೀರ್ವಚನ ನೀಡಿದರು. ಬಿಇಒ ಗಂಗಾಧರ ಅಣ್ಣಿಗೇರಿ, ಬಿಜೆಪಿ ಮಂಡಳ ಅಧ್ಯಕ್ಷ ಡಾ.ಕುಮಾರಸ್ವಾಮಿ ಹಿರೇಮಠ, ಮಂಜುನಾಥ ಮುಧೋಳ, ಪ್ರಶಾಂತ ಗುಡದಪ್ಪನವರ, ಜಗದೀಶ ಸೋನಿ, ರೇಖಾ ಅಳವಂಡಿ, ಡಾ.ಚಂದ್ರಕಾಂತ ಇಟಗಿ, ಅನ್ಮೋಲ್ ಯೋಗ ಕೇಂದ್ರದ ನಿರ್ದೇಶಕಿ ಮಂಗಳಾ ಇಟಗಿ ಮುಂತಾದವರಿದರು. ಪತಂಜಲಿ ಯೋಗ ಸಮಿತಿ ಸಂಚಾಲಕ ಮಂಜುನಾಥ ಅಳವಂಡಿ ಯೋಗ ಪ್ರಾತ್ಯಕ್ಷತೆ ನಡೆಸಿಕೊಟ್ಟರು. ಅನ್ಮೋಲ ಯೋಗ ಕೇಂದ್ರದ ಮಕ್ಕಳಿಂದ ಯೋಗ ಪ್ರದರ್ಶನ ನಡೆಯಿತು. ಪತಂಜಲಿ ಯೋಗ ಸಮಿತಿಯ ಬಳಗದವರಿಂದ ಯೋಗ ನೃತ್ಯ ಜರುಗಿತು. ಮಂಗಳಾ ಇಟಗಿ ಸ್ವಾಗತಿಸಿದರು. ಡಾ.ಬಿ.ಜಿ.ಜವಳಿ ಪ್ರಾಸ್ತಾವಿಸಿದರು. ಮಂಜುಳಾ ಇಟಗಿ ವಂದಿಸಿದರು.

ಲಕ್ಷ್ಮೇಶ್ವರ

• **ಲಕ್ಷ್ಮೇಶ್ವರ:** ಯೋಗವು ಭಾರತ ವಿಶ್ವಕ್ಕೆ ಕೊಟ್ಟ ಕೊಡುಗೆ. ದಿನನಿತ್ಯ ಯೋಗಭ್ಯಾಸವನ್ನು ಮಾಡುವುದನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು ಎಂದು ಹಿರಿಯ ದಿವಾಣಿ ನ್ಯಾಯಾಧೀಶ ಭರತ ಯೋಗೀಶ ಕರಗುದರಿ ಹೇಳಿದರು. ಅವರು ಪಟ್ಟಣದ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ ಲಕ್ಷ್ಮೇಶ್ವರರಿಂದ ಹಮ್ಮಿಕೊಳ್ಳಲಾಗಿದ್ದ ಯೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಯೋಗದಿಂದ ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯಗಳು ಸುಧಾರಿಸುತ್ತವೆ. ಮನಸ್ಸು ಮತ್ತು ದೇಹ ಗಟ್ಟಿ ಇದ್ದರೆ ಮಾನವನ ಯೋಚನೆಗಳು ಉತ್ತಮವಾಗಿರುತ್ತವೆ ಎಂದರು. ಯೋಗ ಅಭ್ಯಾಸದ ತರಬೇತಿಯನ್ನು ಯಶವಂತ ಯಲಿವಿಗಿ ನಡೆಸಿಕೊಟ್ಟರು. ಯೋಗಭ್ಯಾಸದಲ್ಲಿ ಪರಿಣಿತಿ ಹೊಂದಿದ ಬಸವರಾಜ ಸಂಗಪ್ಪ ಶೆಟ್ಟರ ಯೋಗ ಪ್ರದರ್ಶನ ನೀಡಿದರು. ನ್ಯಾಯಾಧೀಶರು ಯೋಗ ತರಬೇತಿ ನೀಡಿದ ಯಶವಂತ ಯಲಿವಿಗಿ ಹಾಗೂ ಬಸವರಾಜ ಸಂಗಪ್ಪಶೆಟ್ಟರ ಅವರನ್ನು ಸನ್ಮಾನಿಸಿದರು. ದಿವಾಣಿ ನ್ಯಾಯಾಧೀಶ ಸತೀಶ ಎಂ., ವಕೀಲರ ಸಂಘದ ಅಧ್ಯಕ್ಷ ಬಿ.ವಿ. ನೇಕಾರ, ವಕೀಲರ ಸಂಘದ ಕಾರ್ಯದರ್ಶಿ ವಿ.ಎಸ್. ಪಶುಪತಿಹಾಳ, ಸಹಾಯಕ ಸರ್ಕಾರಿ ಅಭಿಯೋಜಕ ಹೀನಾಕೌಸರ್ ಗಂಜಿಹಾಳ ಮುಂತಾದವರಿದ್ದರು.



ಗಜೇಂದ್ರಗಡ



• **ಗಜೇಂದ್ರಗಡ:** ನಗರದ ರೋಣ ರಸ್ತೆಯಲ್ಲಿನ ಶ್ರೀ ತುಳಜಾಭವಾನಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಸರ್ವೋದಯ ಮಹಿಳಾ ಕಾಲೇಜಿನ ಅಧ್ಯಕ್ಷ ಲೋಕಪ್ಪ ರಾಠೋಡ ಮಾತನಾಡಿ, ಆಧುನಿಕ ಒತ್ತಡದ ಜೀವನದಲ್ಲಿ ಮಾನಸಿಕ ಶಾಂತಿ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗ ಅತ್ಯಗತ್ಯ. ಪ್ರತಿಯೊಬ್ಬರೂ ದಿನಕ್ಕೆ ಕನಿಷ್ಠ 20 ನಿಮಿಷ ಯೋಗಾಸನ ಮತ್ತು ಧ್ಯಾನವನ್ನು ಮಾಡುವುದನ್ನು ರೂಢಿಸಿಕೊಳ್ಳಬೇಕು ಎಂದರು. ಶಾಲೆಯ ಮುಖ್ಯೋಪಾಧ್ಯಾಯಿನಿ ರೇಖಾ ಮಾನೆ ಮಾತನಾಡಿ, ಪ್ರಸ್ತುತ ವರ್ಷವು ಆರೋಗ್ಯಕರ ವೃದ್ಧಿಗಾಗಿ ಯೋಗ ಎಂಬ ವಿಶೇಷ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದ್ದು, ವಯಸ್ಸಾದಂತೆ ಜನರು ಹೇಗೆ ಸಕ್ರಿಯ ಮತ್ತು ಸ್ವತಂತ್ರ ಜೀವನ ನಡೆಸಬಹುದು ಎಂಬುದರ ಕುರಿತು ಜಾಗೃತಿ ಮೂಡಿಸಲಾಯಿತು. ಹಿರಿಯ ಶಿಕ್ಷಕಿ ಮಂಜುಳಾ ಭಜೇಂತ್ರಿ, ವೈ.ಎಲ್.ನಧಾಫ್, ಸುನಿತಾ ಹವಾಲ್ದಾರ, ವೀರಮ್ಮ ಹೂಗಾರ, ದೀಪಾ ಗಜಕೋಶ, ಭಾಗ್ಯಾ ಆದಾಪೂರ, ಉಮಾ ಯಂಕಚಿ, ಲಕ್ಷ್ಮೀ ಗಣಾಚಾರಿ, ದಿವ್ಯಾ ಚವ್ಹಾಣ, ರುದ್ರಪ್ಪ ಚವ್ಹಾಣ, ಗೌಸಮೋದಿನಸಾಬ ನಧಾಫ ಇತರರಿದ್ದರು.

ನರಗುಂದ

• **ನರಗುಂದ:** ದೇಹ ಮತ್ತು ಮನಸ್ಸು ಆರೋಗ್ಯವಾಗಿರಲು ಯೋಗವನ್ನು ನಿತ್ಯ ರೂಢಿಸಿಕೊಳ್ಳಬೇಕು. ಜಗತ್ತೇ ಯೋಗಾಭ್ಯಾಸದಲ್ಲಿ ತೊಡಗಿದೆ. ಆರೋಗ್ಯಕ್ಕೆ ಮಹತ್ವ ನೀಡುತ್ತಿರುವುದು ಜನರು ಜಾಗೃತಿ ಹೊಂದುವುದಕ್ಕೆ ಸಾಕ್ಷಿಯಾಗಿದೆ ಎಂದು ಲಯನ್ಸ್ ಶಿಕ್ಷಣ ಸಂಸ್ಥೆ ವೈಸ್ ಚೇರಮನ್ ಉಮೇಶಗೌಡ ಪಾಟೀಲ ಹೇಳಿದರು. ಭಾನುವಾರ ಪಟ್ಟಣದ ಲಯನ್ಸ್ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆ ಹಾಗೂ ಲಯನ್ಸ್ ಕನ್ನಡ ಮಾಧ್ಯಮ ಪ್ರೌಢಶಾಲೆಗಳ ಆಶ್ರಯದಲ್ಲಿ ಆಚರಿಸಲಾದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಹಿರಿಯ ನಿರ್ದೇಶಕ ಜಿ.ಟಿ.ಗುಡಿಸಾಗರ ಮಾತನಾಡಿದರು. ಕಾರ್ಯದರ್ಶಿ ಡಾ.ಪ್ರಭು ನಂದಿ ಅವರು ವಿಶ್ವ ಯೋಗ ದಿನಾಚರಣೆಯ ಪ್ರತಿಜ್ಞಾ ವಿಧಿ ಬೋಧಿಸಿದರು. ಶಿಕ್ಷಕರಾದ ಶಿವಾನಂದ ಮಲ್ಲಾಪೂರ, ಪಿ.ಎಸ್. ಕವಲೂರು ಹಾಗೂ ವಿದ್ಯಾರ್ಥಿಗಳು ಆಕರ್ಷಕ ಯೋಗ ಪ್ರದರ್ಶನ ನೀಡಿದರು. ಜಂಟಿ ಕಾರ್ಯದರ್ಶಿ ವಿಜಯಕುಮಾರ ಬೇಲೇರಿ, ನಿರ್ದೇಶಕರಾದ ಸಿ.ಎಸ್.ಸಾಲೂಟಗಿಮಠ, ಟಿ.ಎಸ್.ರೋಖಡೆ, ಮುಖ್ಯೋಪಾಧ್ಯಾಯ ಜಿ.ಬಿ.ಹಿರೇಮಠ, ಪ್ರಾಚಾರ್ಯ ಎಸ್.ಜಿ.ಜಕ್ಕಲಿ ಇದ್ದರು. ಡಾ.ಬಸವರಾಜ ಹಲಕುರ್ಕಿ ನಿರೂಪಿಸಿ, ವಂದಿಸಿದರು.



ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮಾತು

ಸಂಸ್ಕಾರ, ಸೇವಾ ಚಟುವಟಿಕೆಗಳಿಗೆ ಭವನ ಪ್ರೇರಣೆ



ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆ

• ಬೆಳಗಾವಿ: ಸಮಾಜದ ಹಿತದೃಷ್ಟಿಯಿಂದ ಹಾಗೂ ನಿಸ್ವಾರ್ಥ ಸೇವಾ ಮನೋಭಾವದಿಂದ ಸಾರ್ವಜನಿಕರ ಸಹಯೋಗದೊಂದಿಗೆ ನಿರ್ಮಾಣವಾಗುವ ಪ್ರತಿಯೊಂದು ಭವನ ಅಥವಾ ಕಟ್ಟಡವು ಸಮಾಜ ದೇವತೆಯ ಆಭರಣದಂತಿದ್ದು, ಇಂತಹ ಭವನಗಳು ಸಮಾಜದ ಸಂಘಟನೆ, ಸಂಸ್ಕಾರ ಹಾಗೂ ಸೇವಾ ಚಟುವಟಿಕೆಗಳಿಗೆ ಪ್ರೇರಣೆಯಾಗುತ್ತವೆ ಎಂದು ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ಭಾನುವಾರ ನಗರದ ಸಂಘ ಸದನದ ನ್ಯೂ ಗೂಡ್ಸ್ ಶೆಡ್ ರಸ್ತೆಯಲ್ಲಿ ಜನ ಕಲ್ಯಾಣ ಟ್ರಸ್ಟ್ ವತಿಯಿಂದ ನಿರ್ಮಿಸಲಾದ ಶ್ರೀ ಜಗನ್ನಾಥರಾವ್ ಜೋಶಿ ಸ್ಮಾರಕ ಭವನದ ಲೋಕಾರ್ಪಣೆ ನೆರವೇರಿಸಿ ಅವರು ಮಾತನಾಡಿದ ಅವರು, ಸಮಾಜ ಸೇವೆ, ರಾಷ್ಟ್ರಭಕ್ತಿ ಮತ್ತು ಜನಕಲ್ಯಾಣದ ಮೌಲ್ಯಗಳನ್ನು ಮುಂದಿನ ಪೀಳಿಗೆಗಳಿಗೆ ತಲುಪಿಸುವ ಉದ್ದೇಶದಿಂದ ಈ ಭವನ ನಿರ್ಮಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಗುರುಸಿದ್ಧ ಮಹಾಸ್ವಾಮಿಗಳು, ಜಗನ್ನಾಥರಾವ್ ಜೋಶಿ ಅವರ ವ್ಯಕ್ತಿತ್ವ ಹಾಗೂ ರಾಷ್ಟ್ರಭಕ್ತಿಯನ್ನು ಸ್ಮರಿಸಿದರು. 1977ರ ಅವಧಿಯಲ್ಲಿ ದೇಶದ ರಾಜಕೀಯ ಹಾಗೂ ಸಾಮಾಜಿಕ ವಿಚಾರಗಳ ಕುರಿತು ಅವರು ನೀಡಿದ ಭಾಷಣಗಳು ಜನರಲ್ಲಿ ರಾಷ್ಟ್ರಪ್ರೇಮ ಜಾಗೃತಿಗೊಳಿಸಿದ್ದವು. ಅವರ ಮಾತುಗಳಲ್ಲಿ ಹಾಸ್ಯ, ಸರಳತೆ ಹಾಗೂ ಸಮಾಜದ ಬಗ್ಗೆ ಕಾಳಜಿ ಅಡಗಿರುತ್ತಿತ್ತು. ಇಂತಹ ವ್ಯಕ್ತಿಗಳನ್ನು ದೇವಮಾನವರು ಎಂದರೆ ತಪ್ಪಾಗಲಾರದು ಎಂದು ಅಭಿಪ್ರಾಯಪಟ್ಟರು.

ತಾವು ಸಹ ಸ್ವಯಂಸೇವಕ ಸಂಘದ ಕಾರ್ಯಕರ್ತರಾಗಿದ್ದು, ಇಂದು ಅದೇ ಸಂಘದ ವೇದಿಕೆಯಲ್ಲಿ ಮಾತನಾಡುತ್ತಿರುವುದು ಸಂತಸದ ಸಂಗತಿ ಎಂದು ತಿಳಿಸಿದ ಮಹಾಸ್ವಾಮಿಗಳು, ಇಂದಿನ ದಿನಗಳಲ್ಲಿ ದೇಶಭಕ್ತಿ ಮತ್ತು ರಾಷ್ಟ್ರೀಯ ಮೌಲ್ಯಗಳನ್ನು ಬಲಪಡಿಸುವ ಕಾರ್ಯಕ್ರಮಗಳು ಈ ಭವನದಲ್ಲಿ ನಿರಂತರವಾಗಿ ನಡೆಯಬೇಕು ಎಂದು ಆಶಿಸಿದರು. ಕಾರ್ಯಕ್ರಮದ ಅಂಗವಾಗಿ ಗುರುಸಿದ್ಧ ಮಹಾಸ್ವಾಮಿಗಳು, ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಸಂಘಚಾಲಕ ಬಸವರಾಜ ಡಂಬಳ ಸೇರಿದಂತೆ ಗಣ್ಯರು ದೀಪ ಬೆಳಗಿಸಿ ಭವ್ಯ ಸ್ಮಾರಕ ಭವನವನ್ನು ಅಧಿಕೃತವಾಗಿ ಲೋಕಾರ್ಪಣೆಗೊಳಿಸಿದರು.

> **ಬೆಳಗಾವಿ ಹಾಗೂ ಚಿಕ್ಕೋಡಿ ಭಾಗಗಳಲ್ಲಿ ಸಂಘದ ಕಾರ್ಯ ಆರಂಭಗೊಂಡ ಹಿನ್ನೆಲೆಯನ್ನು ಸ್ಮರಿಸಿದರು. ಜಗನ್ನಾಥರಾವ್ ಜೋಶಿ ಕಂಡಿದ್ದ ಕನಸು ಇಂದು ನನಸಾಗಿದ್ದು, ಅವರ ಜೀವನದ ಆದರ್ಶಗಳು ಮತ್ತು ಮಾರ್ಗದರ್ಶನವನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.**
> ■ **ಬಸವರಾಜ ಡಂಬಳ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಸಂಘಚಾಲಕ**

ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ ಸ್ವಾಗತಿಸಿದರು. ಜನಕಲ್ಯಾಣ ಟ್ರಸ್ಟ್‌ನ ನಿರ್ವಾಹಕ ವಿಶ್ವಸ್ಥ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಬೇಂಡೆ, ಆರ್‌ಎಸ್‌ಎಸ್ ಪ್ರಾಂತ ಕಾರ್ಯವಾಹ ರಾಘವೇಂದ್ರ ಕಾಗವಾಡ ಸೇರಿದಂತೆ ಹಲವು ಸಂಘದ ಗಣ್ಯರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ, ಗೋವಿಂದ ಕಾರಜೋಳ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಸಚಿವರಾದ ಸಿ.ಟಿ.ರವಿ, ಮುರುಗೇಶ ನಿರಾಣಿ, ಕೆ.ಎಸ್.ಈಶ್ವರಪ್ಪ, ಸಿ.ಸಿ.ಪಾಟೀಲ, ಶಶಿಕಲಾ ಜೊಲ್ಲೆ, ಕೋಟ ಶ್ರೀನಿವಾಸ ಪೂಜಾರಿ, ಜನಪ್ರತಿನಿಧಿಗಳು, ಸಂಘದ ಪ್ರಮುಖರು ಸೇರಿದಂತೆ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು. ಆರ್‌ಎಸ್‌ಎಸ್‌ನ ಪ್ರಾಂತ ಕಾರ್ಯವಾಹ ರಾಘವೇಂದ್ರ ಕಾಗವಾಡ ಅವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ನೀಡಿದರು. ಕೊನೆಯಲ್ಲಿ ''ವಂದೇ ಮಾತರಂ'' ಗೀತೆಯೊಂದಿಗೆ ಸಮಾರಂಭವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಪ್ರಮುಖ ನಾಗರಿಕರ ಗೋಷ್ಠಿ | ಅರುಣ್‌ಕುಮಾರ್ ಅಭಿಪ್ರಾಯ

ಸಮಾನತೆಯೇ ಹಿಂದೂಗಳ ಮೂಲ ಮಂತ್ರವಾಗಲಿ





• ವಿಜಯನಗರ: ಸನಾತನ ಹಿಂದೂ ಧರ್ಮದ ನಾಶಕ್ಕಾಗಿ ಸಾವಿರಾರು ವರ್ಷಗಳಿಂದ ನಿರಂತರ ದಾಳಿ, ಕುತಂತ್ರಗಳು ನಡೆಯುತ್ತಿದ್ದರೂ, ಅದು ಎಂದಿಗೂ ಸಾಧ್ಯವಿಲ್ಲ. ಆದರೆ, ಇತ್ತೀಚಿನ ಲವ್ ಜಿಹಾದ್, ಮತಾಂತರದ ಬೆಳವಣಿಗೆಗಳು ಹಿಂದೂಗಳ ಬದುಕಿಗೆ ಕಂಠಕವಾಗುತ್ತಿವೆ. ಹಿಂದೂ ನಾವೆಲ್ಲ ಒಂದು, ನಾವೆಲ್ಲ ಬಂಧು ಎಂಬ ಏಕಮಾತ್ರ ಧ್ಯೇಯ ನಮ್ಮನ್ನು ಭಾವನಾತ್ಮವಾಗಿ ಬೆಸೆಯುವ ಜೊತೆಗೆ ಹಿಂದೂ ಧರ್ಮವನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಚಾರ ವಿಭಾಗದ ಪ್ರಮುಖ ಅರುಣ್‌ಕುಮಾರ್ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ ಯಾತ್ರೆಯ 100 ವರ್ಷ ಪೂರೈಸಿದ್ದರಿಂದ ಹೊಸಪೇಟೆಯಲ್ಲಿ ಭಾನುವಾರ ಏರ್ಪಡಿಸಿದ್ದ ಪ್ರಮುಖ ನಾಗರಿಕರ ಗೋಷ್ಠಿಯಲ್ಲಿ ಮುಖ್ಯಭಾಷಣಕಾರರಾಗಿ ಮಾತನಾಡಿದ ಅವರು, ಕ್ರಿಶ್ಚಿಯನ್, ಮುಸ್ಲಿಂ ಧರ್ಮದ ವಿಸ್ತರಣಾ ನೀತಿ, ಸಿವಿಕ್ ದಾಳಿಯಿಂದ ವಿಶ್ವದ ಅನೇಕ ದೇಶಗಳಲ್ಲಿದ್ದ ಪ್ರಾಂತೀಯ ಭಾಷೆ, ಧರ್ಮಗಳು ನಾಶವಾಗಿವೆ. ಆದರೆ, ಸನಾತನದ ಮೇರು ಸಿದ್ಧಾಂತಗಳಿಂದಾಗಿ ಹಿಂದುತ್ವದ ನಾಶ ಯಾರಿಂದಲೂ ಸಾಧ್ಯವಿಲ್ಲ. ಆದರೆ, ನಮ್ಮಲ್ಲಿರುವ ಜಾತಿ ಭೇದಗಳು, ಮೇಲು- ಕೀಳಿನ ತಾರತಮ್ಯದ ಕಾರಣಕ್ಕೆ ಇತರೆ ಧರ್ಮಗಳಿಗೆ ವಲಸೆ ಹೋಗುತ್ತಿದ್ದಾರೆ. ನಮ್ಮ ಹೆಣ್ಣು ಮಕ್ಕಳು ಲವ್ ಜಿಹಾದ್‌ಗೆ ಬಲಿಯಾಗುತ್ತಿರುವುದು ಹಿಂದೂಗಳಿಗೆ ಎಚ್ಚರಿಕೆ ಗಂಟೆಯಾಗಿದೆ.

ಈ ಹಿನ್ನೆಲೆಯಲ್ಲಿ ಹಿಂದೂಗಳು ಜ್ಯಾತಿ, ವೃತ್ತಿ ಭೇದವಿಲ್ಲದೇ ಪರಸ್ಪರರನ್ನು ಒಪ್ಪಿಕೊಂಡು, ಅಪ್ಪಿಕೊಳ್ಳುವ ಕೆಲಸವಾಗಬೇಕು. ನಮ್ಮಲ್ಲಿರುವ ಅಸ್ಪೃಶ್ಯತೆಯನ್ನು ಬೇರುಸಹಿತ ಕಿತ್ತೆಸೆಯಬೇಕು. ಧೀನ, ದಲಿತ, ಬಡವ, ಶ್ರೀಮಂತ ಎಲ್ಲರೂ ಸಮಭಾವದಿಂದ ಗೌರವಿಸಬೇಕು. ಶಿಕ್ಷಣ, ವ್ಯಾಪಾರದ ದೃಷ್ಟಿಯಿಂದ ನೆರವಾಗಬೇಕು ಎಂದು ಕಿವಿಮಾತು ಹೇಳಿದರು.

ಸಂಘ ಯಾವತ್ತೂ ನೇರವಾಗಿ ರಾಜಕೀಯಕ್ಕೆ ಧುಮ್ಮುಕ್ಕುವುದಿಲ್ಲ. ಆದರೆ, ದೇಶಕ್ಕೆ ಇಬ್ಬರು ಪ್ರಧಾನಿಗಳನ್ನು ನೀಡಿದ ಕೀರ್ತಿ ಸಂಘಕ್ಕೆ ಸಲ್ಲುತ್ತದೆ. ಕಳೆದ 15 ವರ್ಷಗಳಲ್ಲಿ ಭಾರತ ಪ್ರಗತಿಯ ಗತಿ ಹೆಚ್ಚಿದೆ. ಜಾಗತಿಕ ಮಟ್ಟದಲ್ಲಿ ಭಾರತನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಎಲ್ಲ ರಾಷ್ಟ್ರಗಳಿಗೂ ಭಾರತದ ಸ್ನೇಹ ಹಿಂದೆಂದಿಗಿಂತಲೂ ಈಗ ಹೆಚ್ಚಿದೆ. ಅದಕ್ಕೆ ಕಾರಣ ಪ್ರಧಾನಿ ಮೋದಿ ಅವರ ಆಡಳಿತ ಮತ್ತು ವಿದೇಶಾಂಗ ನೀತಿ. ಇರಾನ್ ಹಾಗೂ ಅಮೆರಿಕ ನಡುವಿನ ಸಂಘರ್ಷವನ್ನು ನಿಲ್ಲಿಸುವಷ್ಟು ಶಕ್ತಿ ಭಾರತದ ಪ್ರಧಾನಿ ನರೇಂದ್ರ ಮೋದಿಗಿದೆ. ಆದರೆ, ಅದಕ್ಕಿನ್ನೂ ಕಾಲ ಪಕ್ವವಾಗಬೇಕು ಎಂದರು.

ಈ ಹಿಂದೆ ವಿಶ್ವಯೋಗ ದಿನವನ್ನಾಗಿ ಘೋಷಿಸುವ ಪ್ರಸ್ತಾಪಕ್ಕೆ ವಿಶ್ವ ಸಂಸ್ಥೆಯಲ್ಲಿ ಯೆಮೆನ್ ಹಾಗೂ ಪಾಕಿಸ್ತಾನ ಮಾತ್ರ ವಿರೋಧಿಸಿದ್ದವು. ಅನಂತರ ಯೆಮೆನ್ ಕೂಡಾ ಒಪ್ಪಿಕೊಂಡಿದ್ದು, ಇಸ್ಲಾಂ ದೇಶಗಳ ಮಸೀದಿಗಳಲ್ಲೂ ಯೋಗ ದಿನಾಚರಣೆ ನಡೆಯುತ್ತಿದೆ. ಇದು ಸನಾತನ ಧರ್ಮದ ಶಕ್ತಿ ಎಂದು ಹೇಳಿದರು.

ಜಿಲ್ಲಾ ಸಂಘಚಾಲಕ ಡಾ.ಶಾಂತಯ್ಯ, ಸಂಘದ ಪ್ರಮುಖರಾದ ಕೇಶವ ಜಿ ಉಪಸ್ಥಿತರಿದ್ದರು.

ಭಟ್ಕಳಕ್ಕೆ ಎಡಿಜಿಪಿ ಹಿತೇಂದ್ರ ಭೇಟಿ ಪೊಲೀಸ್ ಅಧಿಕಾರಿಗಳ ಜೊತೆ ಸಭೆ



• ಭಟ್ಕಳ: ಪಟ್ಟಣದಲ್ಲಿ ಇತ್ತೀಚಿನ ದಿನಗಳಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಹಲವು ಘಟನೆಗಳು ನಡೆದಿರುವ ಹಿನ್ನೆಲೆಯಲ್ಲಿ ರಾಜ್ಯ ಪೊಲೀಸ್ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ ಹಾಗೂ ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಅವರು ಭಟ್ಕಳ ನಗರ ಮತ್ತು ಗ್ರಾಮೀಣ ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದರು.

ಹಿರಿಯ ಪೊಲೀಸ್ ಅಧಿಕಾರಿಗಳು ಜಿಲ್ಲೆಯ ವಿವಿಧ ಠಾಣೆಗಳ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದ ಅವರು, ಇತ್ತೀಚೆಗೆ ನಡೆದ ಘಟನೆಗಳ ಕುರಿತು ಸಮಗ್ರ ಮಾಹಿತಿ ಪಡೆದರು. ಮೇ 24ರಂದು ಪೊಲೀಸರ ಸಮ್ಮುಖದಲ್ಲಿ ನಡೆದ ಪುನರ್‌ನಿರ್ಮಿತ ಮುರಿನಕಟ್ಟೆ ಧ್ವಂಸ ಪ್ರಕರಣ, ಬಳಿಕ ಕೆಲ ಸಂಘಟನೆಗಳ ಮುಖಂಡರಿಂದ ನೀಡಲಾದ ಕೋಮು ಪ್ರಚೋದನಾ ಹೇಳಿಕೆಗಳು, ಎರಡು ದಿನಗಳ ಹಿಂದೆ ವಿಭಿನ್ನ ಕೋಮಿನ ಯುವಕ-ಯುವತಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ನಡೆದ ನೈತಿಕ ಪೊಲೀಸ್‌ಗಿರಿ, ಯುವಕನ ಮೇಲಿನ ಹಲ್ಲೆ, ಯುವತಿಯ ಮೇಲೆ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ ಆರೋಪ ಹಾಗೂ ಪ್ರತಿಭಟನೆಯ ಹೆಸರಿನಲ್ಲಿ ಪೊಲೀಸ್ ಠಾಣೆಗೆ ತೆರಳಿ ಅಧಿಕಾರಿಗಳಿಗೆ ಅವಾಚ್ಯ ಶಬ್ದಗಳಿಂದ ನಿಂದನೆ ಮತ್ತು ಬೆದರಿಕೆ ಒಡ್ಡಿದ ಪ್ರಕರಣಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ಭಟ್ಕಳದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಎಲ್ಲಾ ಪೊಲೀಸ್ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ. ಪದೇಪದೆ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸುವ ಸಮಾಜಘಾತುಕ ಶಕ್ತಿಗಳನ್ನು ಗುರುತಿಸಿ ಕಾನೂನು ಕ್ರಮ ಜರುಗಿಸಬೇಕು. ಯಾವುದೇ ಒತ್ತಡಕ್ಕೂ ಮಣಿಯದೆ ಆರೋಪಿಗಳನ್ನು ಕಾನೂನಿನ ಮುಂದೆ ಹಾಜರುಪಡಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಕೋಮು ಪ್ರಚೋದಕ ಹೇಳಿಕೆಗಳನ್ನು ನೀಡುವ ಕಿಡಿಗೇಡಿಗಳು ಹಾಗೂ ಮುಖಂಡರ ಚಟುವಟಿಕೆಗಳ ಮೇಲೆ ನಿಗಾ ವಹಿಸುವಂತೆ ಸೂಚಿಸಲಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುಳ್ಳು ಸುದ್ದಿಗಳು ಮತ್ತು ಪ್ರಚೋದನಾತ್ಮಕ ಸಂದೇಶಗಳ ಬಗ್ಗೆ ವಿಶೇಷ ಎಚ್ಚರಿಕೆ ವಹಿಸುವಂತೆ ತಿಳಿಸಲಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ನಿರ್ಲಕ್ಷ್ಯ ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ ಎಂದು ತಿಳಿದುಬಂದಿದೆ.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿಲೀಪ್ ಎಂ.ಎನ್., ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೃಷ್ಣಮೂರ್ತಿ, ಭಟ್ಕಳ ಡಿವೈಎಸ್ಪಿ ಗಿರೀಶ್ ಬಿ.ಸೇರಿದಂತೆ ಉತ್ತರ ಕನ್ನಡ ಜಿಲ್ಲೆಯ ವಿವಿಧ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.



ಕೊಟ್ಟೂರಿನ ಕೊಟ್ಟೂರೇಶ್ವರ ಕಾಲೇಜ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಶಿವಭಕ್ತಿ ಮಹಿಳಾ ಯೋಗ ತಂಡದವರು ದೇವರಮನಿ ಮಂಗಳರವರ ಮಾರ್ಗದರ್ಶನದಲ್ಲಿ ಉತ್ತಮ ಯೋಗ ಪ್ರದರ್ಶನವನ್ನು ನೀಡಿದರು. ಭಾಗ್ಯಲಕ್ಷ್ಮಿ ಹ್ಯಾಳ್ಯಾ ಹಾಗೂ ಇತರೆ ಸದಸ್ಯೆಯರು ಇದ್ದರು.




ಹುಬ್ಬಳ್ಳಿ: ನಗರದ ಜಿಮ್‌ಖಾನ ಮೈದಾನದಲ್ಲಿ ಭಾನುವಾರ ಅಂತಾರಾಷ್ಟ್ರೀಯ ವಿಶ್ವ ಯೋಗ ದಿನಾಚರಣೆ ನಿಮಿತ್ತ ಸಾರ್ವಜನಿಕರು ಯೋಗಾಭ್ಯಾಸ ನಡೆಸಿದ ಕ್ಷಣ.



ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಬೆಳಗಾವಿ ಹಾಗೂ ಜಿಲ್ಲಾ ಆಯುಷ ಇಲಾಖೆ ಸಹಯೋಗದಲ್ಲಿ ಭಾನುವಾರ ಸುವರ್ಣ ವಿಧಾನ ಸೌಧದಲ್ಲಿ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ.

ಅಂತಾರಾಷ್ಟ್ರೀಯ ಯೋಗ ದಿನ



ವಿಜಯಪುರ: ನಗರ ಹೊವ ಲಯ ಇಟ್ಟಂಗಿಹಾಳದ ಶ್ರೀ ಅಸೋಸಿಯೇಷನ್ ವತಿಯಿಂದ ನಡೆಸಲ್ಪಡುವ ವೇದ ಇಂಟರ್ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ವಿಶೇಷವಾಗಿ ಹಮ್ಮಿಕೊಳ್ಳಲಾಯಿತು. ಸಂಸ್ಥೆಯ ಅಧ್ಯಕ್ಷ ಡಾ.ಶಿವಾನಂದ ಕೇಲೂರ, ನಿರ್ವಾಹಕಿ ಶಿವಲೀಲಾ ಕೇಲೂರ, ಪ್ರಾಂಶುಪಾಲ ತುಳಜಾರಾಮ ಸುಕ್ತೆ, ದೈಹಿಕ ಶಿಕ್ಷಣ ಶಿಕ್ಷಕ ಶಶಿಕಾಂತ, ಶಿಕ್ಷಕ ಆದಿತ್ಯ ಇತರರು ಇದ್ದರು.

ನಿದ್ರೆಯಲ್ಲಿ ಮುಳುಗಿದ ಕೈ ಸರ್ಕಾರ: ಸಚಿವ ಜೋಶಿ

• ಧಾರವಾಡ: ಪ್ರಸ್ತುತ ರಾಜ್ಯದಲ್ಲಿ ಮಳೆ ಕೊರತೆ ಉಂಟಾಗಿ, ಬರಗಾಲ ಆವರಿಸುವ ಲಕ್ಷಣಗಳಿವೆ. ಆದರೂ ಕಾಂಗ್ರೆಸ್ ಸರ್ಕಾರ ಎಚ್ಚೆತ್ತಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.



ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ನೂತನ ಮುಖ್ಯಮಂತ್ರಿ, ಕಂದಾಯ ಮತ್ತು ಕೃಷಿ ಇಲಾಖೆಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿವೆ ಎಂದು ಆರೋಪಿಸಿದರು.

ಶೇ.40ರಷ್ಟು ಮಳೆ ಅಭಾವ ವರದಿ: ಪ್ರಸಕ್ತ ಸಾಲಿನಲ್ಲಿ ದೇಶದಲ್ಲಿ ಶೇ.40ರಷ್ಟು ಮಳೆಯ ಅಭಾವ ಉಂಟಾಗಲಿದೆ ಎಂಬ ಆತಂಕಕಾರಿ ವರದಿ ಬಂದಿದೆ. ಇದು ಮುಂಬರುವ ದಿನಗಳಲ್ಲಿ ಭಾರೀ ಅಲ್ಲೋಲ-ಕಲ್ಲೋಲ ಸೃಷ್ಟಿಸಲಿದೆ ಎಂದು ಎಚ್ಚರಿಸಿದ ಸಚಿವರು, ಇದರಿಂದಾಗಿ ರಾಜ್ಯದಲ್ಲಿ ಪ್ರಮುಖವಾಗಿ ಮೂರು ಸಮಸ್ಯೆಗಳು ಎದುರಾಗಲಿವೆ ಎಂದರು.

ಕುಡಿಯುವ ನೀರಿನ ಅಭಾವ: ಈ ಬಾರಿ ಮಳೆಯ ಕೊರತೆ ಹಿನ್ನೆಲೆ ಹಳ್ಳಿ ಮತ್ತು ನಗರ ಪ್ರದೇಶಗಳಲ್ಲಿ ಭೀಕರ ಜಲಕ್ಷಾಮ ಉಂಟಾಗುವ ಲಕ್ಷಣಗಳಿದ್ದು, ಈ ಕುರಿತು ರಾಜ್ಯ ಸರ್ಕಾರ ಮುನ್ನಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ಆಹಾರ-ಮೇವು ಕೊರತೆ: ಮಳೆ ಅಭಾವದಿಂದ ಈ ಸಲ ಕೃಷಿ ಚಟುವಟಿಕೆ ಕುಂಠಿತಗೊಂಡು ಆಹಾರ ಧಾನ್ಯಗಳ ಕೊರತೆಯೂ ತಲೆದೋರಬಹುದು. ಅಲ್ಲದೇ, ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗುವ ಭೀತಿ ಇದೆ ಎಂದು ಹೇಳಿದರು. ರಾಜ್ಯದಲ್ಲಿ ಇಷ್ಟೆಲ್ಲ ಗಂಭೀರ ಸವಾಲುಗಳಿದ್ದರೂ ಕಂದಾಯ ಹಾಗೂ ಕೃಷಿ ಇಲಾಖೆಗಳು ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದಿರುವುದು ಸರ್ಕಾರದ ಬೇಜವಾಬ್ದಾರಿತನ ತೋರಿಸುತ್ತದೆ ಎಂದು ಜೋಶಿ ದೂರಿದರು.

ಕೇಂದ್ರ ಆಹಾರ ಇಲಾಖೆ ಅಗತ್ಯ ಮುನ್ನೆಚ್ಚರಿಕೆ: ರಾಜ್ಯ ಕಾಂಗ್ರೆಸ್ ಸರ್ಕಾರದ ಉದಾಸೀನತೆಯ ನಡುವೆಯೂ, ಕೇಂದ್ರ ಸರ್ಕಾರವು ಈ ಪರಿಸ್ಥಿತಿ ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದ ಸಚಿವ ಜೋಶಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ತಡೆಯಲು ಕೇಂದ್ರ ಆಹಾರ ಇಲಾಖೆಯು ಈಗಾಗಲೇ ಅಗತ್ಯ ಆಹಾರ ಧಾನ್ಯಗಳ ಸಂಗ್ರಹಣೆಗೆ ಮತ್ತು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ದೇಶಾದ್ಯಂತ ಸೂಕ್ತ ಸಿದ್ಧತೆಗಳನ್ನು ನಡೆಸಿದೆ ಎಂದು ಸ್ಪಷ್ಟಪಡಿಸಿದರು.

> **ರಾಜ್ಯದ ರೈತರು, ಸಾರ್ವಜನಿಕರು ಆತಂಕದಲ್ಲಿದ್ದಾಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅಗತ್ಯ ಕ್ರಮ ಕೈಗೊಳ್ಳುವ ಬದಲು ಶಿವಸೇನಾ ನಾಯಕರ ಭೇಟಿಗೆ ಹೋಗಿ ಕಾಲಹರಣ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಸಂಪೂರ್ಣವಾಗಿ ನಿದ್ರೆಯಲ್ಲಿ ಮುಳುಗಿದೆ.**
> ■ **ಪ್ರಹ್ಲಾದ ಜೋಶಿ, ಕೇಂದ್ರ ಸಚಿವ**

ಅಡ್ಡ ಮತದಾನ ಬಿಜೆಪಿಗೆ ಎಚ್ಚರಿಕೆಯ ಗಂಟೆ: ಬೊಮ್ಮಾಯಿ

• ಬೆಳಗಾವಿ: ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ದೊಡ್ಡ ಪ್ರಮಾಣದ ಹಣದ ಆಮಿಷ ಒಡ್ಡಿದ್ದರಿಂದ ಕೆಲವರು ಅಡ್ಡ ಮತದಾನ ಮಾಡಿದ್ದಾರೆ. ಇದು ಬಿಜೆಪಿಗೆ ಎಚ್ಚರಿಕೆಯ ಗಂಟೆಯಾಗಿದ್ದು, ಇಂತಹ ಮುಖ್ಯಮಂತ್ರಿ ಇದ್ದಾಗ ಪಕ್ಷವು ಅತ್ಯಂತ ಜಾಗರೂಕತೆಯಿಂದ ಇರಬೇಕಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಭಾನುವಾರ ಬೆಳಗಾವಿ ನಗರದ ನ್ಯೂ ಗೂಡ್ಸ್ ಶೆಡ್ ರಸ್ತೆಯಲ್ಲಿರುವ ಜನಕಲ್ಯಾಣ ಟ್ರಸ್ಟ್ ವತಿಯಿಂದ ನಿರ್ಮಿಸಲಾದ ಜಗನ್ನಾಥರಾವ್ ಜೋಶಿ ಸ್ಮಾರಕ ಭವನದ ಲೋಕಾರ್ಪಣೆ ಸಮಾರಂಭದಲ್ಲಿ ಭಾಗವಹಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಡ್ಡ ಮತದಾನದ ಕುರಿತು ಪಕ್ಷದ ವತಿಯಿಂದ ತನಿಖೆ ನಡೆಸಲು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ವರದಿ ಬಂದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ ಅವರು, ಈ ಬೆಳವಣಿಗೆ ಬಿಜೆಪಿಗೆ ಎಚ್ಚರಿಕೆಯ ಸಂದೇಶವಾಗಿದೆ ಎಂದು ಅಭಿಪ್ರಾಯಪಟ್ಟರು.

ಕೆಎಲ್‌ಇ ಸಂಸ್ಥೆಯ ಅಧ್ಯಕ್ಷ ಡಾ.ಪ್ರಭಾಕರ ಕೋರೆಯವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿರುವ ಕುರಿತು ಪ್ರತಿಕ್ರಿಯಿಸಿದ ಬೊಮ್ಮಾಯಿ, ಉತ್ತರ ಕರ್ನಾಟಕದ ಅಭಿವೃದ್ಧಿಗೆ ಕೆಎಲ್‌ಇ ಸಂಸ್ಥೆಯ ಮೂಲಕ ಅವರು ಸಲ್ಲಿಸಿರುವ ಮಹತ್ತರ ಕೊಡುಗೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರ ಈ ಗೌರವವನ್ನು ನೀಡಿದೆ. ಅವರಿಗೆ ಅಭಿನಂದನೆಗಳು ಎಂದು ಹೇಳಿದರು.

ಶ್ರೀ ಸದಾಶಿವ ವಿದ್ಯಾವರ್ಧಕ ಸಂಸ್ಥೆ (ರಿ)
ಆದರ್ಶ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯ
ಲಿಂಗರಾಜ ನಗರ, ಹುಬ್ಬಳ್ಳಿ




ಹೃತ್ಪೂರ್ವಕ ಅಭಿನಂದನೆಗಳು
ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾಗಿ ಚುನಾಯಿತರಾಗಿರುವ ನಮ್ಮ ಸದಾಶಿವ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷರು, ಸಮಾಜಮುಖಿ ಕ್ರಿಯಾಶೀಲ ನಾಯಕರು ಆಗಿರುವ
ಶ್ರೀಯುತ ಲಿಂಗರಾಜ ಪಾಟೀಲ ರವರಿಗೆ
ಹೃತ್ಪೂರ್ವಕ ಅಭಿನಂದನೆಗಳು
ಶುಭಾಶಯ ಕೋರುವವರು
ಸಂಸ್ಥೆಯ ನಿರ್ದೇಶಕರುಗಳಾದ: ಶ್ರೀ ಡಿ. ಜಿ. ಹಸಬಿ, ಶ್ರೀ ಮಲ್ಲಿಕಾರ್ಜುನ ಸಾವಕಾರ, ಪ್ರೊ. ಬಿ.ಸಿ. ಗೌಡರ, ಶ್ರೀ ಶಂಕ್ರಪ್ಪ ಶೆಟ್ಟರ್, ಶ್ರೀ ವಿಜಯ ಶೆಟ್ಟರ್, ಪ್ರೊ. ಎಸ್.ಬಿ. ಕುನ್ನೂರ, ಪ್ರೊ. ಡೇನಿಯಲ್ ಹೊಸಕೇರಿ ಹಾಗೂ ಶ್ರೀ ನರೇಶ್ ನಾಯಕ
ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು

ಮಾರನಬಸರಿ ಗ್ರಾಮದ
ಮೊಹರಂ ಹಬ್ಬಕ್ಕೆ ಹಾರ್ದಿಕ ಸ್ವಾಗತ



ಗದಗ ಜಿಲ್ಲೆ ಗಜೇಂದ್ರಗಡ ತಾಲೂಕಿನ ಮಾರನಬಸರಿ ಗ್ರಾಮದ ಐತಿಹಾಸಿಕ ಮೊಹರಂ ಹಬ್ಬಕ್ಕೆ ಆಗಮಿಸುವ ಎಲ್ಲ ಭಕ್ತರಿಗೂ ಹಾರ್ದಿಕ ಸ್ವಾಗತ
ಜೂನ್ 24 ಬುಧವಾರ – ಸಂಧಲ್ ರಾತ್ರಿ
ಜೂನ್ 25 ಗುರುವಾರ – ಕತ್ತಲ್ ರಾತ್ರಿ
ಜೂನ್ 26 ಶುಕ್ರವಾರ ದೇವರು ಹೊಳಿಗೆ ಹೊಗುವ ದಿನ.
ಸ್ವಾಗತ ಕೊರುವವರು :
ಮಾರನಬಸರಿ ಗ್ರಾಮ ಪಂಚಾಯತ ನೋಡಲ್ ಅಧಿಕಾರಿಗಳು, ಪಿಡಿಒ ಹಾಗೂ ಸಿಬ್ಬಂದಿಗಳು ಮತ್ತು ಮಾರನಬಸರಿ ಹಾಗೂ ಬೂದಿಹಾಳ ಗ್ರಾಮಗಳ ಸಮಸ್ತ ನಾಗರಿಕರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಯೋಗದಿಂದ ರೋಗ ಮುಕ್ತ



◆ **ಭಟ್ಕಳ:** ಮುರ್ಡೇಶ್ವರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಬೀನಾ ವೈದ್ಯ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆಯ ಉದ್ಯಾನವನದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶಾಲೆಯ ದೈಹಿಕ ಶಿಕ್ಷಕರು ಮಕ್ಕಳಿಗೆ ವಿವಿಧ ಆಸನಗಳನ್ನು ಮಾಡಿಸಿ ಯೋಗದಿಂದ ನಮ್ಮ ಶರೀರವನ್ನು ಯಾವ ರೀತಿ ಸದೃಢವಾಗಿ ಇರಿಸಿಕೊಳ್ಳಬಹುದೆಂದು ಸವಿಸ್ತಾರವಾದ ಮಾರ್ಗದರ್ಶನವನ್ನು ನೀಡಿದರು.

ಈ ಸಂದರ್ಭದಲ್ಲಿ ಬೀನಾ ವೈದ್ಯ ಶಿಕ್ಷಣ ಸಂಸ್ಥೆಯ ಟ್ರಸ್ಟಿ, ಆಡಳಿತ ನಿರ್ದೇಶಕಿ ಡಾ. ಪುಷ್ಪಲತಾ ಮಂಕಾಳ ವೈದ್ಯ ಉಪಸ್ಥಿತರಿದ್ದರು. ಬೀನಾ ವೈದ್ಯ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರು, ಬೋಧಕ, ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು.

ಸಿಎ ಪರೀಕ್ಷೆ: ವಿನೀತ ಸಾಧನೆ

◆ **ಕುಮಟಾ:** ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಅಂತಿಮ ಪರೀಕ್ಷೆಯಲ್ಲಿ ಕುಮಟಾದ ವಿನೀತ ಮಾಧವ ಶಾನಭಾಗ ಅವರು ಉತ್ತೀರ್ಣರಾಗುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ.



ಕುಮಟಾದ ಹೆಗಡೆಕರ ಎಂಬ ನಾಮಾಂಕಿತ ಕುಟುಂಬದವರಾದ ವಿನೀತ ಅವರು, ವಿದ್ಯಾಧಿರಾಜ ತಾಂತ್ರಿಕ ಮಹಾವಿದ್ಯಾಲಯದ ಕಚೇರಿ ಅಧೀಕ್ಷಕರಾಗಿ ನಿವೃತ್ತಿ ಹೊಂದಿದ ಮಾಧವ ಕೇಶವ ಶಾನಭಾಗ ಹಾಗೂ ಮಾಲತಿ ಮಾಧವ ಶಾನಭಾಗ ದಂಪತಿಯ ಪುತ್ರರಾಗಿದ್ದಾರೆ.ಅವರ ಈ ಸಾಧನೆಗೆ ಬಂಧು-ಬಳಗ, ಸ್ನೇಹಿತರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ಉತ್ತಮ ಸಾಧನೆ

◆ **ಭಟ್ಕಳ:** ಪ್ರತಿಷ್ಠಿತ ಚಾರ್ಟೆಡ್ ಅಕೌಂಟೆಂಟ್ (ಸಿಎ) ಅಂತಿಮ ಪರೀಕ್ಷೆಯಲ್ಲಿ ಪ್ರಜ್ವಲ್ ಗೋಳಿ ಹಾಗೂ ಪ್ರಸಾದ ಶೆಟ್ಟಿ ಉತ್ತೀರ್ಣರಾಗಿ ಭಟ್ಕಳಕ್ಕೆ ಕೀರ್ತಿ ತಂದಿದ್ದಾರೆ.





ಪಟ್ಟಣದ ಗುರು ಸುಧೀಂದ್ರ ಕಾಲೇಜಿನಲ್ಲಿ ಬಿ.ಕಾಂ.ಪದವಿ ಪೂರೈಸಿ, ಸಿಎ ತರಬೇತಿಯನ್ನು ಪಡೆದು ಇವರು ಉತ್ತಮ ಸಾಧನೆಗೈದಿದ್ದಾರೆ. ಭಟ್ಕಳದ ವೀಣಾ ಹಾಗೂ ಗುರುಪ್ರಸಾದ ಗೋಳಿ ದಂಪತಿಯ ಪುತ್ರ ಪ್ರಜ್ವಲ್ ಗೋಳಿ ಮತ್ತು ಶಿರೂರಿನ ಶಿಕ್ಷಕಿ ಪ್ರೇಮಾ ಶೆಟ್ಟಿ ಹಾಗೂ ಶ್ರೀಕಾಂತ ಶೆಟ್ಟಿ ದಂಪತಿಯ ಪುತ್ರ ಪ್ರಸಾದ ಶೆಟ್ಟಿ ಸಿಎ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಪೂರ್ವ ವಿದ್ಯಾರ್ಥಿಗಳ ಸಾಧನೆಗೆ ಭಟ್ಕಳ ಎಜ್ಯುಕೇಶನ ಟ್ರಸ್ಟ್ ಆಡಳಿತ ಮಂಡಳಿ, ಪ್ರಾಚಾರ್ಯರು, ಪ್ರಾಧ್ಯಾಪಕರು, ಸಿಬ್ಬಂದಿ ಅಭಿನಂದಿಸಿದ್ದಾರೆ.

ತಲೆಮರೆಸಿಕೊಂಡಿದ್ದ ಆರೋಪಿ ಬಂಧನ

◆ **ಕಾರವಾರ:** ಒಂದು ವರ್ಷದಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಕೊಲೆ ಮತ್ತು ಸರಣಿ ಕಳ್ಳತನದ ಆರೋಪ ಎದುರಿಸುತ್ತಿರುವ ವ್ಯಕ್ತಿಯನ್ನು ಕಾರವಾರ ಪೊಲೀಸರು ಉಡುಪಿ ಜಿಲ್ಲೆಯ ಮಣಿಪಾಲದಲ್ಲಿ ಬಂಧಿಸಿದ್ದಾರೆ. ಅಂಕೋಲಾ ತಾಲೂಕಿನ ಬೆಳಂಬಾರ ಮೂಲದ ಹಾರವಾಡದಲ್ಲಿ ವಾಸವಾಗಿರುವ ವಿವೇಕ್ ಯಾನೆ, ವಿವೇಕಾನಂದ ದುರ್ಗಯ್ಯ ಖಾರ್ವಿ ಬಂಂತ ಆರೋಪಿಯಾಗಿದ್ದು 2008ರಲ್ಲಿ ನಡೆದಿರುವ ಕೊಲೆ ಪ್ರಕರಣವೊಂದರ ಆರೋಪಿಯಾಗಿರುವ ಈತನ ಮೇಲೆ ಕಾರವಾರ ನಗರ, ಅಂಕೋಲಾ ಮತ್ತು ಗೋಕರ್ಣ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಒಟ್ಟು 9 ಮನೆ ಕಳ್ಳತನದ ಪ್ರಕರಣಗಳು ದಾಖಲಾಗಿವೆ.

ನ್ಯಾಯಾಲಯದಲ್ಲಿರುವ ಪ್ರಕರಣಗಳ ವಿಚಾರಣೆಗೆ ಕಳೆದ ಒಂದು ವರ್ಷದಿಂದ ಹಾಜರಾಗದೇ ತಲೆ ಮರೆಸಿಕೊಂಡಿದ್ದ ವಿವೇಕ್ ಖಾರ್ವಿ ಬಂಧನಕ್ಕೆ ಜಿಲ್ಲಾ ಪೊಲೀಸ್ ವರಿಷ್ಠ ದೀಪನ್.ಎಂ.ಎನ್ ಅವರ ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚಿಸಲಾಗಿತ್ತು.ಕಾರವಾರ ಪೊಲೀಸ್ ಉಪ ನಿರೀಕ್ಷಕ ಉದ್ದಪ್ಪ ಧರೆಪ್ಪನವರ್ ಮತ್ತು ಸಿಬ್ಬಂದಿಗಳು ತಾಂತ್ರಿಕ ಮಾಹಿತಿಯ ಆಧಾರದ ಮೇಲೆ ಆರೋಪಿತ ಉಡುಪಿ ಜಿಲ್ಲೆಯ ಮಣಿಪಾಲದಲ್ಲಿ ಇರುವುದನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.



ದಾಂಡೇಲಿ : ನಗರ ಹಾಗೂ ತಾಲೂಕು ಸೇರಿದಂತೆ ವಿವಿಧ ಶಾಲಾ, ಕಾಲೇಜುಗಳಲ್ಲಿ, ಯೋಗ ಕೇಂದ್ರಗಳಲ್ಲಿ ಹಾಗೂ ವಿವಿಧ ಸಂಘ-ಸಂಸ್ಥೆಗಳ ಆಶ್ರಯದಡಿ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಸದೃಢ ಆರೋಗ್ಯಕ್ಕೆ ಯೋಗ ಅವಶ್ಯ

◆ **ಗೋಕರ್ಣ:** ಇಲ್ಲಿನ ಶ್ರೀ ಭದ್ರಕಾಳಿ ಪ್ರೌಢಶಾಲೆ ಕನ್ನಡ ಮಾಧ್ಯಮ ಮತ್ತು ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ ಹಾಗೂ ಭದ್ರಕಾಳಿ ಪ್ರಾಥಮಿಕ ಕನ್ನಡ ಮಾಧ್ಯಮ ವತಿಯಿಂದ ಭಾನುವಾರ ವಿಶ್ವ ಯೋಗ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.ಕೆನರಾ ಶಿಕ್ಷಣ ಪ್ರಸಾರಕ ಆಡಳಿತ ಮಂಡಳಿಯ ಗೌರವಾನ್ವಿತ ಕಾರ್ಯದರ್ಶಿಗಳು, ಉದ್ಯಮಿಗಳು, ಶಿಕ್ಷಣ ಪ್ರೇಮಿಗಳು ಮತ್ತು ಲಯನ್ಸ್ ಕ್ಲಬ್ ನ ಮಾಜಿ ಗವರ್ನರ್ ಜಿ. ಎನ್.ನಾಯಕ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದ ಅವರು ಆಧುನಿಕ ಶೈಲಿಯಲ್ಲಿ ಬದುಕುತ್ತಿರುವ ಪ್ರತಿಯೊಬ್ಬರಿಗೂ ದೇಹದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಅಗತ್ಯವಿದೆ. ಆ ನಿಟ್ಟಿನಲ್ಲಿ ದಿನವೂ ಯೋಗವನ್ನು ಮಾಡುವ ಅಭ್ಯಾಸವನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಿ ಎಂದರು. ಯೋಗದ ಸಂಪನ್ಮೂಲ ವ್ಯಕ್ತಿ ಶಿಕ್ಷಕರಾದ ನಾಗೇಂದ್ರ ಭಟ್, ಪ್ರೌಢಶಾಲೆಯ ಮುಖ್ಯಾಧ್ಯಾಪಕ ಸಿ.ಜಿ ನಾಯಕ ದೊರೆ, ಇಂಗ್ಲೀಷ್ ಮಾಧ್ಯಮದ ಪ್ರೌಢಶಾಲಾ ಮುಖ್ಯಾಧ್ಯಾಪಕಿ ರೇವತಿ.ಆರ್. ಮಲ್ಲನ್ ಮಾತನಾಡಿದರು. ಶಿಕ್ಷಕರಾದ ವಿವೇಕ. ಕೆ.ಪಟಗಾರ, ಅಶ್ವಿನಿ. ಎ. ಚಿತ್ತಾಲ, ಸಹಜ. ವಿ. ಸಿ., ಪ್ರಜ್ಞಾ. ಎ. ನಾಯಕ, ಶ್ರೀಧರ ಹೆಗಡೆ,ಲತಾ. ಟಿ. ಎನ್, ಶ್ರೀ ಲಕ್ಷ್ಮೀ ಎಂ ನಾಯಕ್, ತುಳಸಿ ಗೌಡ , ದ್ವಿತೀಯ ದರ್ಜೆಯ ಸಹಾಯಕರಾದ ಸುಭಾಸ ವಿ ನಾಯ್ಕ ಹಾಗೂ ಭದ್ರಕಾಳಿ ಆಂಗ್ಲ ಮಾಧ್ಯಮದ ಶಿಕ್ಷಕಿಯರಾದ ಪ್ರಜ್ಞಾ ನಾಯಕ, ದಿವ್ಯ ನಾಯ್ಕ, ಪ್ರತಿಭಾ ಗೌಡ, ಸ್ಫೂರ್ತಿ ನಾಯ್ಕ್ ಉಪಸ್ಥಿತರಿದ್ದರು. ಹಿರಿಯ ಶಿಕ್ಷಕರಾದ ಆರ್ .ಜಿ.ನಾವಡ ನಿರ್ವಹಿಸಿದರು. ದೈಹಿಕ ಶಿಕ್ಷಣ ಶಿಕ್ಷಕರಾದ ಸಂತೋಷ್. ಕೆ. ನಾಯಕ. ಮತ್ತು ವೈಭವ ಗಾಂವಕರ ಸಂಘಟನೆಯೊಂದಿಗೆ ಸಹಕಾರ ನೀಡಿದರು.



ಗೋಕರ್ಣ: ಇಲ್ಲಿನ ಶ್ರೀ ಭದ್ರಕಾಳಿ ಪ್ರೌಢಶಾಲೆ ಕನ್ನಡ ಮಾಧ್ಯಮ ಮತ್ತು ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ ಹಾಗೂ ಭದ್ರಕಾಳಿ ಪ್ರಾಥಮಿಕ ಕನ್ನಡ ಮಾಧ್ಯಮ ವತಿಯಿಂದ ಭಾನುವಾರ ವಿಶ್ವ ಯೋಗ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ವಿಶ್ವ ಯೋಗ ದಿನ | ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಹೇಳಿಕೆ

ಆರೋಗ್ಯ ವೃದ್ಧಿಗೆ ಯೋಗ ಅವಶ್ಯ

◆ **ಕಾರವಾರ:** ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಬೆಳೆದಂತೆ ದೈಹಿಕ ಶ್ರಮ ಕಡಿಮೆಯಾಗಿದ್ದು, ಆರೋಗ್ಯದ ಕಡೆಗೆ ನಿರ್ಲಕ್ಷ್ಯ ವಹಿಸಲಾಗುತ್ತಿದೆ. ಆಧುನಿಕ ಜೀವನಶೈಲಿಯಿಂದಾಗಿ ಸಣ್ಣ ಮಕ್ಕಳಲ್ಲೂ ಸಹ ತೀವ್ರ ಒತ್ತಡ, ಖಿನ್ನತೆ ಹಾಗೂ ವಿದ್ಯಾರ್ಥಿಗಳಲ್ಲಿ ಆತ್ಮಹತ್ಯೆಯಂತಹ ನಕಾರಾತ್ಮಕ ಪ್ರವೃತ್ತಿಗಳು ಕಂಡುಬರುತ್ತಿದ್ದು, ಪ್ರತಿದಿನ ಯೋಗ ಅಭ್ಯಾಸ ಮಾಡುವುದರಿಂದ ಮನಸ್ಸಿನಲ್ಲಿ ಸಕಾರಾತ್ಮಕ ಚಿಂತನೆಗಳು ಮೂಡಲಿವೆ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದರು.

ಅವರು ಭಾನುವಾರ ಜಿಲ್ಲಾಡಳಿತ, ಜಿಪಂ ಆಯುಷ್ ಇಲಾಖೆ, ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಕ್ರೀಡಾ ಮತ್ತು ಯುವ ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ನಗರ ಸಭೆ, ಕಾರವಾರ, ಎನ್.ಸಿ.ಸಿ, ಎನ್‌ಎಸ್‌ಎಸ್, ರೆಡ್ ಕ್ರಾಸ್, ಪತಂಜಲಿ, ರೋಟರಿ ಕ್ಲಬ್, ರೋಟರಿ ಸಿಸ್ಸೈಡ್, ರೋಟರಿ ಪಶ್ಚಿಮ, ಆರೋಗ್ಯ ಭಾರತಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಪೊಲೀಸ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯೋಗ ಮತ್ತು ಕ್ರೀಡೆಯಿಂದಾಗಿ ಒತ್ತಡ ರಹಿತ ಆರೋಗ್ಯ ಪೂರ್ಣ ಜೀವನ ನೆಡೆಸಲು ಸಾಧ್ಯವಾಗಲಿದ್ದು, ಇದಕ್ಕಾಗಿ ಪ್ರತಿದಿನ ನಮಗಾಗಿಯೇ ಸಮಯವನ್ನು ಮೀಸಲಿಟ್ಟುಕೊಂಡು ಅಭ್ಯಾಸ ಮಾಡಬೇಕು. ಯೋಗವು ನಮ್ಮ ದೇಶವು ಇಡೀ ಜಗತ್ತಿಗೆ ನೀಡಿರುವ ಅತ್ಯಂತ ಅಮೂಲ್ಯವಾದ ಮತ್ತು ಮಹತ್ತರವಾದ ಜಾಗತಿಕ ಕೊಡುಗೆಯಾಗಿದೆ ಎಂದರು.

ಈ ವರ್ಷದ ಯೋಗ ದಿನದ ಮುಖ್ಯ ಧ್ಯೇಯವಾಕ್ಯವಾದ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಇದು ಪ್ರಸ್ತುತ ಜೀವನಶೈಲಿಗೆ ಅತ್ಯಂತ ಸೂಕ್ತವಾಗಿದೆ. ಯಾವುದೇ ವಯಸ್ಸಿನ ಮಿತಿಯಿಲ್ಲದೆ ಪ್ರತಿಯೊಬ್ಬರೂ ಸರಳ ಯೋಗಗಳನ್ನು ಪ್ರತಿದಿನ ಮಾಡಬಹುದಾಗಿದ್ದು, ಇದು ವೃದ್ಧಾಪ್ಯದಲ್ಲಿ ಆರೋಗ್ಯವಾಗಿರಲು ಸಹಕಾರಿಯಾಗಲಿದ್ದು, ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡಬೇಕು ಎಂದರು.

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಂಕರ ರಾವ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಪ್ರವೀಣ್, ಹಿರಿಯ ಆಯುರ್ವೇದ ವೈದ್ಯ ಡಾ.ಜಗದೀಶ್ ಯಾಜಿ, ಆಯುಷ್ ಇಲಾಖೆಯ ಆಡಳಿತಾಧಿಕಾರಿ ಸಂಜೀವ್ ಕುಮಾರ್, ಎನ್.ಸಿ.ಸಿ, ಕಮಾಂಡೆಂಟ್ ಸುದರ್ಶನ್ ಸಿಂಗ್ ಸ್ಕೌಟ್ಸ್ ಮತ್ತು ಗೈಡ್ಸ್ ನ ಡಾ.ಗಣೇಶ್ ಬಿಸ್ತಣ್ಣನವರ್, ರೋಟರಿ ಅಧ್ಯಕ್ಷೆ ಶಿವಾನಿ ರೇವಣಕರ್, ರೆಡ್ ಕ್ರಾಸ್ ಸಂಸ್ಥೆಯ ವಿ.ಎಂ.ಹೆಗಡೆ, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಕವಿತಾ, ಪತಂಜಲಿ ಅಧ್ಯಕ್ಷೆ ಸುಮಾ ನಾಯಕ್‌ಮತ್ತಿತರರು ಇದ್ದರು.

ಸಾಮೂಹಿಕ ಯೋಗಾಭ್ಯಾಸ ಮತ್ತು ಪ್ರಾಣಾಯಾಮ ನಡೆಯಿತು. ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಧ್ಯಾನ, ಶಾಂತಿ ಮಂತ್ರ ಕಾರ್ಯಕ್ರಮ, ವಿವಿಧ ಶಾಲಾ ವಿದ್ಯಾರ್ಥಿಗಳಿಂದ ಯೋಗ ನೃತ್ಯ ಪ್ರದರ್ಶನ ನಡೆಯಿತು.ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.



ಆಕಾಶ ಹರಿಕಂತ್ರಗೆ ಸನ್ಮಾನ

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಅತೀ ಹೆಚ್ಚು ಅಂಕ ಪಡೆದು, ಭಾರತ ಸರ್ಕಾರ ಮತ್ತು ಜಪಾನ್ ಸರ್ಕಾರದ ಸುಕುರ ಸ್ಟೂಡೆಂಟ್ ಎಕ್ಸ್‌ಚೇಂಜ್ ಕಾರ್ಯಕ್ರಮದ ಅಡಿಯಲ್ಲಿ ಜಪಾನ್ ಪ್ರವಾಸ ಕೈಗೊಂಡಿದ್ದ ವಿದ್ಯಾರ್ಥಿ ಆಕಾಶ್ ಹರಿಕಂತ್ರ ಅವರನ್ನು ಜಿಲ್ಲಾಡಳಿತದಿಂದ ಸನ್ಮಾನಿಸಲಾಯಿತು.

ಮಳೆ: ರೈತರ ಮೊಗದಲ್ಲಿ ಮಂದಹಾಸ

◆ **ಅಂಕೋಲಾ:** ತಾಲೂಕಿನಲ್ಲಿ ಭಾನುವಾರ ಸಂಜೆ ಗುಡುಗು ಸಿಡಿಲಿನಿಂದ ಕೂಡಿದ ಮಳೆ ಸುರಿದಿದ್ದು, ಜನತೆಗೆ ಮೊದಲ ಬಾರಿಗೆ ಈ ವರ್ಷದ ಮುಂಗಾರು ಮಳೆಯ ಅನುಭವ ಉಂಟಾಗಿದೆ.



ಜೂನ್ ತಿಂಗಳ ಆರಂಭದಲ್ಲೇ ಮುಂಗಾರು ಆಗಮನದ ನಿರೀಕ್ಷೆಯೊಂದಿಗೆ ಕಾದು ಕುಳಿತಿದ್ದ ಜನತೆಗೆ ತಿಂಗಳ ಕೊನೆಯ ವಾರ ಸಮೀಪಿಸುತ್ತ ಬಂದರೂ ಮಳೆರಾಯನ ದರ್ಶನ ಇಲ್ಲದಿರುವದು ನಿರಾಶೆ ಮೂಡಿಸಿತ್ತು.

ಕೆಲವೊಮ್ಮೆ ಸುರಿದ ಜಿಟಿಜಿಟಿ ಮಳೆ ಹೊರತುಪಡಿಸಿ ತಾಲೂಕಿನಲ್ಲಿ ಹೇಳಿಕೊಳ್ಳುವಂತ ಮಳೆ ಸುರಿದಿರಲಿಲ್ಲ, ಬಿಸಿಲ ಬೇಗೆ ವಿಪರೀತ ಉಷ್ಣಾಂಶದಿಂದ ಜನ ಕಂಗೆಟ್ಟು ಹೋಗಿದ್ದರು,ಮಳೆ ಇಲ್ಲದೇ ರೈತರು ಹೊಲಗಳತ್ತ ಮುಖ ಮಾಡಿರಲಿಲ್ಲ.

ಭಾನುವಾರ ಸಂಜೆ ಕರಾವಳಿಯ ಮುಂಗಾರು ಆರಂಭದ ರೀತಿಯಲ್ಲಿ ಗುಡುಗು ಸಿಡಿಲಿನಿಂದ ಕೂಡಿದ ಮಳೆ ಸುರಿದು ಬಿಸಿ ವಾತಾವರಣವನ್ನು ಕೊಂಚ ತಂಪು ಮಾಡಿದ್ದು ರಸ್ತೆಯ ಮೇಲೆ, ಚರಂಡಿಗಳಲ್ಲಿ ನೀರು ತುಂಬಿ ಹರಿದಿರುವುದು ಕಂಡು ಬಂತು.ನಿರ್ಗಮನದ ಸಂದರ್ಭದಲ್ಲಿ ಮೃಗಶೀರ ತನ್ನ ನಿಜ ರೂಪದ ದರ್ಶನ ನೀಡಿದ್ದು ಜೂನ್ 22ರಿಂದ ಆರಿದ್ರಾ ಮಳೆ ನಕ್ಷತ್ರ ಆರಂಭವಾಗಲಿದೆ.

ರಸಪ್ರಶ್ನೆ ಸ್ಪರ್ಧೆ: ಅಮೋಘ ಹೆಗಡೆ ಪ್ರಥಮ

◆ **ಕುಮಟಾ:** ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಉತ್ತರ ಕನ್ನಡ ಹಾಗೂ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಕಾರವಾರ ಇವರ ಆಶ್ರಯದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ತಾಲೂಕು ಮಟ್ಟದ ಪರಿಸರ ಕುರಿತ ಲಿಖಿತ ರಸಪ್ರಶ್ನೆ ಸ್ಪರ್ಧೆ ಕುಮಟಾದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಆಯೋಜಿಸಲಾಗಿತ್ತು.



ಸ್ಪರ್ಧೆಯಲ್ಲಿ ಕೊಂಕಣ ಎಜ್ಯುಕೇಶನ್ ಟ್ರಸ್ಟ್‌ನ ಸಿ.ವಿ.ಎಸ್.ಕೆ.ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿ ಅಮೋಘ ಹೆಗಡೆ ಅತ್ಯುತ್ತಮ ಸಾಧನೆ ತೋರಿ ಪ್ರಥಮ ಸ್ಥಾನ ಗಳಿಸಿದ್ದಾನೆ. ತಾಲೂಕಿನ ವಿವಿಧ ಶಾಲೆಗಳಿಂದ ಭಾಗವಹಿಸಿದ್ದ 16 ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಿ ಅಮೋಘ ಹೆಗಡೆ ಈ ಸಾಧನೆ ಮಾಡಿ ನಗದು ಬಹುಮಾನ ಪಡೆದುಕೊಂಡಿದ್ದಾನೆ.

ಗಿಡ ನೆಟ್ಟು ಪೋಷಿಸಿ: ಶಾಸಕ ಹೆಬ್ಬಾರ್



◆ **ಯಲ್ಲಾಪುರ:** ತಾಲೂಕಿನ ಕೊಡಸೆ ಗ್ರಾಮದಲ್ಲಿ ಅರಣ್ಯ ಇಲಾಖೆಯ ವತಿಯಿಂದ ಆರ್‌ಕೆವಿಆರ್ ಯೋಜನೆಯಡಿ ಆಯೋಜಿಸಲಾದ ತಾಯಿ ಹೆಸರಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಶಾಸಕ ಶಿವರಾಮ ಹೆಬ್ಬಾರ್ ಚಾಲನೆ ನೀಡಿದರು

ಈ ಸಂದರ್ಭದಲ್ಲಿ ಶಾಸಕರು ತಮ್ಮ ತಾಯಿಯವರಾದ ಕಾವೇರಿ ಮಹಾಬಲೇಶ್ವರ ಹೆಬ್ಬಾರ್ ಅವರ ಹೆಸರಲ್ಲಿ ಗಿಡ ನೆಟ್ಟು, ಅದಕ್ಕೆ ನೀರುಣಿಸುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಿದರು. ಅಲ್ಲದೆ ಗ್ರಾಮಸ್ಥರಿಗೆ ವಿವಿಧ ತಳಿಯ ಸಸಿಗಳನ್ನು ವಿತರಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟು ಅವುಗಳ ಪೋಷಣೆ ಮಾಡುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮಸ್ಥರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಹೊನ್ನಾವರ : ಪಟ್ಟಣದ ಹೃದಯ ಭಾಗದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ-1ರಲ್ಲಿ ಸಂಭ್ರಮ ಶನಿವಾರ ಆಚರಣೆಯನ್ನು ಮಾಡಲಾಯಿತು. ಇಲಾಖಾ ವಿಷಯದಂತೆ ವಿಶಿಷ್ಟ ಚೇತನರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು.

ಸದೃಢ ದೇಹಕ್ಕೆ ಯೋಗ ಪೂರಕ

◆ **ಹಳಿಯಾಳ:** ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಪತಂಜಲಿ ಯೋಗಪೀಠ, ಹಳಿಯಾಳ ಇವರ ಸಹಯೋಗದಲ್ಲಿ ಭಾನುವಾರು ವಿಶ್ವ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಹಳಿಯಾಳದ ತಹಶೀಲ್ದಾರ್ ಫಿರೋಜ್ ಷಾ ಸೋಮನಕಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯೋಗವು ದೇಹ ಮತ್ತು ಮನಸ್ಸಿನ ಆರೋಗ್ಯ ಕಾಪಾಡುವ ಅತ್ಯುತ್ತಮ ಸಾಧನವಾಗಿದೆ. ಪ್ರತಿಯೊಬ್ಬರೂ ಯೋಗ, ಧ್ಯಾನ ಹಾಗೂ ಪ್ರಾಣಾಯಾಮಗಳನ್ನು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಆರೋಗ್ಯವಂತರಾಗಿ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಮಾಜಿ ಶಾಸಕ ಸುನೀಲ ಹೆಗಡೆ ಅವರು ಮಾತನಾಡಿ, ಯೋಗವು ಭಾರತದ ಅಮೂಲ್ಯ ಕೊಡುಗೆಯಾಗಿದ್ದು, ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ. ಇಂದು ಯೋಗಕ್ಕೆ ವಿಶ್ವಮಟ್ಟದಲ್ಲಿ ಮನ್ನಣೆ ದೊರೆತಿದ್ದು, ವಿಶ್ವದಾದ್ಯಂತ ಯೋಗಾಭ್ಯಾಸ ನಡೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ಹಳಿಯಾಳ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವಿಲಾಸರಾಜ್ ಅವರು ಯೋಗದ ಮಹತ್ವವನ್ನು ಹೇಳಿದರು. ಪತಂಜಲಿ ಯೋಗಪೀಠದ ಮುಖ್ಯಸ್ಥ ಎಸ್. ಎಚ್.ಪಾಟೀಲ(ಆರ್‌ಎನ್‌ಪಾಟೀಲ), ಜಿ.ಡಿ. ಗಂಗಾಧರ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.



ಉದ್ಘಾಟನಾ ಸಮಾರಂಭದ ಬಳಿಕ ಯೋಗ ಶಿಕ್ಷಕ ರಘುರಾಮ ಹೆಗಡೆ ಅವರು ವಿಶ್ವಯೋಗ ದಿನಾಚರಣೆಯ ಪ್ರೋಟೋಕಾಲ್ ಪ್ರಕಾರ ವಿವಿಧ ಯೋಗಾಸನಗಳು, ಪ್ರಾಣಾಯಾಮ ಹಾಗೂ ಧ್ಯಾನಾಭ್ಯಾಸಗಳನ್ನು ನಡೆಸಿಕೊಟ್ಟರು. ಶಾಂತಾ ಹಿರೇಕರ ಸ್ವಾಗತಿಸಿದರು.ಹಿರಿಯ ನಾಗರಿಕರ ವೇದಿಕೆಯ ಸದಸ್ಯರು, ಹೊಂಗಿರಣ ಸಂಘದ ಸದಸ್ಯರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ವಿಶ್ವ ಸಂಸ್ಕೃತಿ ಫೌಂಡೇಶನ್ ಸದಸ್ಯರು ಸೇರಿದಂತೆ ಸುಮಾರು 200ಕ್ಕೂ ಹೆಚ್ಚು ಯೋಗಾಸಕ್ತರು, ಸಾರ್ವಜನಿಕರು ಹಾಗೂ ಗಣ್ಯರು ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು.

ಯೋಗ ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆ : ದೇಶಭಂಡಾರಿ

◆ **ಕುಮಟಾ:** ಕೊಂಕಣ ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ನಡೆಸಲ್ಪಡುವ ಕಲಭಾಗದ ವಿದ್ಯಾಗಿರಿಯಲ್ಲಿಯ ಸರಸ್ವತಿ ವಿದ್ಯಾ ಕೇಂದ್ರ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಜೀವನಶೈಲಿ, ದೈಹಿಕ ಸದೃಢತೆ ಹಾಗೂ ಮಾನಸಿಕ ನೆಮ್ಮದಿಯ ಮಹತ್ವವನ್ನು ಅರಿವು ಮೂಡಿಸುವ ಉದ್ದೇಶದಿಂದ ವಿಶೇಷ ಯೋಗ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಶಾಲೆಯ ಸಾವಿರಾರು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಉತ್ಸಾಹದಿಂದ ಭಾಗವಹಿಸಿ ವಿವಿಧ ಯೋಗಾಸನಗಳು, ಪ್ರಾಣಾಯಾಮ, ಧ್ಯಾನಾಭ್ಯಾಸ ಮತ್ತು ಉಸಿರಾಟದ ವ್ಯಾಯಾಮಗಳನ್ನು ಪ್ರದರ್ಶಿಸಿದರು.

ಸಂಸ್ಥೆಯ ಶೈಕ್ಷಣಿಕ ಮಾರ್ಗದರ್ಶಕರಾದ ಆರ್. ಎಚ್. ದೇಶಭಂಡಾರಿ ಅವರು ಯೋಗದ ಮಹತ್ವದ ಕುರಿತು ಮಾತನಾಡಿ, ಯೋಗವು ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆಯಾಗಿದ್ದು, ಇಂದಿನ ಒತ್ತಡದ ಬದುಕಿನಲ್ಲಿ ಆರೋಗ್ಯಕರ ಹಾಗೂ ಸಂತುಷ್ಟ ಜೀವನ ನಡೆಸಲು ಅತ್ಯುತ್ತಮ ಸಾಧನವಾಗಿದೆ ಎಂದು ತಿಳಿಸಿದರು. ವಿದ್ಯಾರ್ಥಿನಿಯರಾದ ಪೂರ್ವಿ ಗೌಡ ಹಾಗೂ ಮನಸ್ವಿ ಮತ್ತು ಸಹಪಾಠಿನಿಯರು ಯೋಗ ದಿನದ ಮಹತ್ವದ ಕುರಿತು ಮಾತನಾಡಿದರು.



ಶಿಕ್ಷಕ ಗೌರೀಶ ಭಂಡಾರಿ ಕಾರ್ಯಕ್ರಮ ನಿರೂಪಿಸಿದರು. ದೈಹಿಕ ಶಿಕ್ಷಣ ಶಿಕ್ಷಕರಾದ ಈಶ್ವರ ಗೌಡ ಹಾಗೂ ಸುಮಂಗಲಾ ನಾಯ್ಕ ಅವರು ವಿದ್ಯಾರ್ಥಿಗಳ ಯೋಗ ಪ್ರದರ್ಶನಕ್ಕೆ ಮಾರ್ಗದರ್ಶನ ನೀಡಿದರು. ಸುವರ್ಣಾ ಮಯ್ಯರ್ ವಂದಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕಿ ಸುಜಾತಾ ನಾಯ್ಕ, ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯ ಗಣೇಶ ಜೋಶಿ ಹಾಗೂ ಶಾಲೆಯ ಎಲ್ಲಾ ಶಿಕ್ಷಕ-ಶಿಕ್ಷಕಿಯರು ಸಹಕಾರ ನೀಡಿದರು.

ಯೋಗವು ಜೀವನದ ಸಮತೋಲನದ ಮಾರ್ಗ, ಆರೋಗ್ಯಕರ ಬದುಕಿನ ಆಧಾರ ಎಂಬ ಸಂದೇಶದೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

ಉತ್ತಮ ಆರೋಗ್ಯಕ್ಕೆ ಯೋಗ ಸಹಕಾರಿ




◆ **ಮುಂಡಗೋಡ:** ತಾಲೂಕಿನಾದ್ಯಂತ ಭಾನುವಾರ ಅಂತಾರಾಷ್ಟ್ರೀಯ ಯೋಗಾ ದಿನಾಚರಣೆ ಆಚರಿಸಲಾಯಿತು. ಇಲ್ಲಿನ ಶಾಸಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕರು ಜೀವನದಲ್ಲಿ ಯೋಗದ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಯೋಗ ಶಿಕ್ಷಕ ಮಹೇಶ ಹಾವಣಗಿ, ಯೋಗಾಸನದಲ್ಲಿ ನಿಂತು ಮಾಡುವ ಆಸನಗಳಾದ ಸೂರ್ಯ ನಮಸ್ಕಾರ, ತಾಡಾಸನ, ವೃಕ್ಷಾಸನ, ಅರ್ಧಕಟಿ ಚಕ್ರಾಸನ. ಕುಕ್ಕುಟಾಸನ, ನೌಕಾಸನಗಳ ಅಭ್ಯಾಸ ಮಾಡಿಸಿದರು.ತಾಲೂಕಿನ ವಿವಿಧ ಶಾಲೆಯ ಶಾಲಾ ಮುಖ್ಯ ಶಿಕ್ಷಕರು,ಮಕ್ಕಳೊಂದಿಗೆ ಭಾಗವಹಿಸಿ ಯೋಗಾಸನಗಳನ್ನು ಮಾಡಿ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಪಟ್ಟಣದ ವಿವಿಧ ಶಾಲಾ ಕಾಲೇಜುಗಳ ಆವರಣದಲ್ಲಿ, ತಾಲೂಕಾ ಕ್ರೀಡಾಂಗಣದಲ್ಲಿ, ಕರಗಿನಕೊಪ್ಪದ ಲೊಯೋಲ ಕನ್ನಡ ಮಾಧ್ಯಮ ಅನುದಾನಿತ ಪ್ರೌಢಶಾಲೆ, ಗ್ರಾಮೀಣ ಭಾಗದ ಕಿರಿಯ ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ ಪ್ರೌಢ ಶಾಲೆಗಳ ಆವರಣ, ಪಟ್ಟಣದ ಶಾಸಕರ ಮಾದರಿ ಶಾಲೆಯ ಶಾಲಾ ಆವರಣ, ರೋಟರಿ ಶಾಲೆಯ ಅವರಣಇಂದೂರ ಪ್ರೌಢಶಾಲೆಯ ಅವರಣ, ಶಿಕ್ಷಕರು ಮಕ್ಕಳಿಗೆ ಯೋಗ್ಯಭ್ಯಾಸವನ್ನು ನೀಡಿದರು ಹಾಗೂ ಯೋಗಾಸನ ಪ್ರದರ್ಶನ ಮಾಡಿದರು. ಮಳಗಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡುವ ಸ್ಥಳದಲ್ಲಿ ಕೂಲಿ ಕಾರ್ಮಿಕರು ವಿವಿಧ ಪ್ರಾಣಾಯಾಮ ಮಾಡುವ ಮೂಲಕ ವಿಶ್ವ ಯೋಗ ದಿನಾಚರಣೆ ಆಚರಿಸಿದರು.

ವಿಶ್ವ ಯೋಗ ದಿನಾಚರಣೆ

◆ **ಯಲ್ಲಾಪುರ:** ಪತಂಜಲಿ ಯೋಗ ಸಮಿತಿ ಮಹಿಳಾ ಪತಂಜಲಿ ಅಡಿಕೆ ವರ್ತಕರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ವಿವಿಧ ಸಂಘಟನೆಗಳ ಸಹಾಯದಲ್ಲಿ ಎಪಿಎಂಸಿಯ ಅಡಿಕೆ ಭವನದಲ್ಲಿ ವಿಶ್ವ ಯೋಗ ದಿನಾಚರಣೆ ಆಚರಿಸಿದರು.

ಋಷಿಕುಲಂ ಗುರುಕುಲದ ಅಂತಾರಾಷ್ಟ್ರೀಯ ಖ್ಯಾತಿಯ ವಿದ್ವಾಂಸ ವಿಘ್ನೇಶ್ವರ ಭಟ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ತಾಲೂಕ ಪತಂಜಲಿ ಯೋಗ ಸಮಿತಿಯ ಅಧ್ಯಕ್ಷ ವಿ ಕೆ.ಭಟ್ ಸೀಗೆಪಾಲ್ ಅಧ್ಯಕ್ಷತೆವಹಿಸಿದ್ದರು ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ್ ಕೋಣೆಮನೆ ತಾಲೂಕ ಮಹಿಳಾ ಪತಂಜಲಿ ಪ್ರಭಾರಿ ಶೈಲಶ್ರೀ ಭಟ್, ಯೋಗ ಶಿಕ್ಷಕಿ ಆಶಾ ಭಗನಗದ್ದೆ, ಕಾರ್ಯದರ್ಶಿ ಸತೀಶ್ ಹೆಗಡೆ ಇತರರು ಇದ್ದರು.ಯೋಗ ಶಿಕ್ಷಕ ಸುಬ್ರಾಯ ಭಟ್ ಯೋಗ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ಉಪಾಧ್ಯಕ್ಷ ನಾಗೇಶ ರಾಯ್ಕರ್ ಹಾಗೂ ಯುವ ಪ್ರಭಾವಿ ಕನಕಪ್ಪ ಸಹಕರಿಸಿದರು. ಗೋಪಾಲಕೃಷ್ಣ ಗಾಂವ್ಕರ ಸ್ವಾಗತಿಸಿದರು.ಜಿ ಎಸ್.ಭಟ್ ಹಳವಳ್ಳಿ ನಿರೂಪಿಸಿದರು. ಕಾರ್ಯದರ್ಶಿ ಸತೀಶ್ ಹೆಗಡೆ ವಂದಿಸಿದರು.



ಯೋಗ ದಿನ: ಗಮನ ಸೆಳೆದ ಯೋಗ ನೃತ್ಯ

◆ **ಗೋಕರ್ಣ:** ಇಲ್ಲಿನ ಪ್ರತಿಷ್ಠಿತ ಮಾಡರ್ನ್ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪತಂಜಲಿ ಯೋಗ ಸಮಿತಿಯ ಸದಸ್ಯರಾದ ನಾಗೇಂದ್ರ ಭಟ್ ವಿದ್ಯಾರ್ಥಿಗಳಿಗೆ ಯೋಗದ ಮಹತ್ವವನ್ನು ತಿಳಿಸಿದರು. ವಿವಿಧ ಯೋಗಾಸನಗಳು ಹಾಗೂ ಪ್ರಾಣಾಯಾಮಗಳ ಕುರಿತು ಮಾಹಿತಿ ನೀಡಿ, ವಿದ್ಯಾರ್ಥಿಗಳಿಗೆ ಯೋಗಾಭ್ಯಾಸ ಮಾಡಿಸಿದರು. ಮುಖ್ಯೋಪಾಧ್ಯಾಪಕರಾದ ರಾಜೇಶ್ ಗೊನ್ಸಾಲ್ವಿಸ್ ಮಾತನಾಡಿ, ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ವೃದ್ಧಿಸುವುದರ ಜೊತೆಗೆ, ಏಕಾಗ್ರತೆ ಹಾಗೂ ಶಿಸ್ತು ಬೆಳೆಸಲು ಸಹಕಾರಿ ಎಂದು ತಿಳಿಸಿದರು.ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ನಿತ್ಯಾನಂದ ಗೌಡ ಅವರು ಶಿಸ್ತಿನ ಮಹತ್ವದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಿದರು. ಶಾಲೆಯ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳಿಂದ ಪ್ರದರ್ಶಿಸಲಾದ ಯೋಗ ನೃತ್ಯವು ಎಲ್ಲರ ಗಮನ ಸೆಳೆಯಿತು. ಮುಖ್ಯೋಪಾಧ್ಯಾಪಕ ರಾಜೇಶ್ ಗೊನ್ಸಾಲ್ವಿಸ್, ಪ್ರೌಢ ವಿಭಾಗದ ಮುಖ್ಯಸ್ಥರಾದ ವಿಕಾಸ್ ನಾಯಕ, ಹಿರಿಯ ಶಿಕ್ಷಕಿಯಾದ ವೃಂದಾ ಗಾಂವ್ಕರ್ ಉಪಸ್ಥಿತರಿದ್ದರು. ನಮಿತಾ ಪ್ರಸಾದ್ ನಿರ್ವಹಿಸಿದರು ಶಾಲೆಯ ಶಿಕ್ಷಕ ವೃಂದದವರು ಸಹಕರಿಸಿದರು.



ದಶಲಕ್ಷ ಗಿಡ ನೆಡುವ ಅಭಿಯಾನಕ್ಕೆ ಚಾಲನೆ

◆ **ಕುಮಟಾ:** ಅರಣ್ಯವಾಸಿಗಳಿಂದ ಅರಣ್ಯ ರಕ್ಷಣೆ, ಪರಿಸರ ಜಾಗೃತಿ ಹಾಗೂ ಪರಿಸರ ಸಂರಕ್ಷಣೆಯ ಉದ್ದೇಶದಿಂದ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ನೇತೃತ್ವದಲ್ಲಿ ತಾಲೂಕಿನ 11 ಗ್ರಾಪಂ ವ್ಯಾಪ್ತಿಯಲ್ಲಿ ದಶಲಕ್ಷ ಗಿಡ ನೆಡುವ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅರಣ್ಯವಾಸಿಗಳು ಸ್ವಯಂಪ್ರೇರಿತವಾಗಿ ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಿದರು. ಒಂದೇ ದಿನದಲ್ಲಿ ತಾಲೂಕಿನ 51 ಗ್ರಾಮಗಳಲ್ಲಿ ಗಿಡ ನೆಡುವ ಕಾರ್ಯ ಯಶಸ್ವಿಯಾಗಿ ನಡೆದಿರುವುದು ಸಂತಸದ ಸಂಗತಿ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ತಾಲೂಕು ಅಧ್ಯಕ್ಷ ಮಂಜುನಾಥ ಮರಾಠಿ ನಾಗೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂತೆಗುಳಿ, ಮಿರ್ಜಾನ, ಬರ್ಗಿ, ಗೋಕರ್ಣ, ಹಿರೇಗುತ್ತಿ, ದಿವಗಿ, ಕೋಡ್ಕಣಿ, ಕತಗಾಲ, ಬಂಗಣೆ, ಕಲವೆ ಹಾಗೂ ಹೆಗಡೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಅರಣ್ಯ ಭೂಮಿ ಸಾಗುವಳಿ ಪ್ರದೇಶಗಳಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಣೆಗೆ ಕೈಜೋಡಿಸಲಾಯಿತು.



ಅಭಿಯಾನದ ಯಶಸ್ಸಿಗೆ ಗ್ರೀನ್ ಕಾರ್ಡ್ ಪ್ರಮುಖರಾದ ಮಹೇಂದ್ರ, ಕತಗಾಲ, ಶಂಕರ್ ಸುಗ್ಗಿ ಗೌಡ ಕಲ್ಲಬ್ಬೆ, ಹನುಮಂತ ತಿಮ್ಮ ಗೌಡ ಮುಬ್ಬೆಕಾನವಾಡಿ, ಜಟ್ಟಪ್ಪ ನಾಗಪ್ಪ ನಾಯ್ಕ ಸಂತೆಗುಳಿ, ಹಾಜಿರಾಬಿ ಸಂತೆಗುಳಿ, ಗಣಪತಿ ಶಂಕರ್ ಗೌಡ ದಿವಗಿ, ಪಾಂಡುರಂಗ ನಾಯ್ಕ, ಕಮಲಾ ಗುಡ್ನಕಾಗಲ್, ಸುರೇಶ ಗೌಡ ಅಳಕೋಡ, ಸದಾನಂದ ನಾಯ್ಕ ಮಿರ್ಜಾನ, ಸುರೇಶ ಗಜಾನನ ಭಟ್ ಮಿರ್ಜಾನ, ಉಮಾ ಸುನೀಲ್ ನಾಯರ್, ವೆಂಕಟರಮಣ ಪಟಗಾರ, ಶಂಕರ್ ದೇಶಭಂಡಾರಿ, ಕಮಲಾಕರ ತಿಮ್ಮ ಮರಾಠಿ, ತಿಮ್ಮ ಮರಾಠಿ ಸೇರಿದಂತೆ ಅನೇಕರು ನೇತೃತ್ವ ವಹಿಸಿ ಸಹಕರಿಸಿದರು.

ಪರಿಸರ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಇಂತಹ ವೃಕ್ಷಾರೋಪಣಾ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕೆಂದು ಸಂಘಟನೆಯ ಪದಾಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರ: ನಗರದ 220ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕೆಲಸ ಕೈಗೊಳ್ಳುವುದರಿಂದ ಜೂ.23ರಂದು ಬೆ.10 ಘಂಟೆಯಿಂದ ಸಂಜೆ 6 ಘಂಟೆಯವರೆಗೆ 220ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ರಾಣೇಬೆನ್ನೂರಿನ ನಗರದ, ಸುತ್ತಲಿನ ಗ್ರಾಮಗಳ ಹಾಗೂ ನೀರಾವರಿ ಪಂಪಸೆಟ್‌ನ ಎಲ್ಲಾ 11ಕೆ.ವಿ ಮಾರ್ಗಗಳಿಗೆ (ಸಿದ್ದೇಶ್ವರ ನಗರ, ಶಿವಾ ಕಾಲೇಜ್, ಅಲ್ತಾಫ್ ನಗರ, ಗೌಸಿಯಾ ಪ್ಲಾಟ, ಮಂಡಕ್ಕಿ ಬಟ್ಟಿ, ಕೋಟೆ ಮತ್ತು ಕೂನಬೇವು ರಸ್ತೆ ಹೊರತುಪಡಿಸಿ) ವಿದ್ಯುತ್ ಸರಬರಾಜು ಇರುವುದಿಲ್ಲ. ಕೃಷಿ ಪಂಪಸೆಟ್ ಮಾರ್ಗಗಳಿಗೆ ಹಿಂದಿನ ದಿನದ ಪಾಳಿಯಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು. ಆದ್ದರಿಂದ ರಾಣೇಬೆನ್ನೂರು ನಗರ ಹಾಗೂ ಸುತ್ತಲಿನ ಗ್ರಾಮೀಣ ಭಾಗಗಳ ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಸದೃಢ ಆರೋಗ್ಯಕ್ಕೆ ಯೋಗ ಸಹಕಾರಿ



ಹಾವೇರಿ: ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಬಿ.ಎಂ. ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಥೀಮ್‌ದೊಂದಿಗೆ ಯೋಗ ದಿನವನ್ನು ವಿಶಿಷ್ಟವಾಗಿ ಆಚರಿಸಲಾಯಿತು. ಯೋಗಪಟು ಕೃಷ್ಣಪ್ಪನ ವಿವಿಧ ರೀತಿಯ ಯೋಗಾಸನಗಳಾದ ಪದ್ಮಾಸನ, ವಜ್ರಾಸನ, ತಾಡಾಸನ, ವೃಕ್ಷಾಸನ, ಸೂರ್ಯನಮಸ್ಕಾರ ಹಾಗೂ ಇನ್ನೂ ಮುಂತಾದ ಆಸನಗಳನ್ನು ಪ್ರದರ್ಶಿಸುತ್ತ ಶಾಲೆಯ ವಿದ್ಯಾರ್ಥಿಗಳಿಗೆ ಮಾಡಿಸಿದರು ಹಾಗೂ ಜೀವನಕ್ಕೆ ಯೋಗದ ಅವಶ್ಯಕತೆ ಹೇಗಿದೆ ಎಂಬುದನ್ನು ತಿಳಿಸಿದರು. ಯೋಗ ಶಿಕ್ಷಕಿ ವಿದ್ಯಾಶ್ರೀ ಇವರು ಯೋಗಾಸನವನ್ನು ಏಕೆ ಮಾಡಬೇಕು, ಹೇಗೆ ಮಾಡಬೇಕು ಎಂಬುದನ್ನು ವಿವರಿಸಿದರು. ಜೊತೆಗೆ ಪ್ರಾಣಾಯಾಮ, ಚಂದ್ರಲೋಮ ವಿಲೋಮ, ಸೂರ್ಯಲೋಮ ವಿಲೋಮ, ಭ್ರಮರಿ, ಶೀತಲಿ, ಕಪಾಲಭಾತಿ, ಮುಂತಾದ ಪ್ರಾಣಾಯಾಮಗಳನ್ನು ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಹೇಳಿಕೊಟ್ಟರು. ಈ ಸಂದರ್ಭದಲ್ಲಿ ಶಾಲೆಯ ಕಾರ್ಯದರ್ಶಿ ಸಿದ್ದರಾಜ ಕಲಕೋಟಿ, ಪ್ರಾಂಶುಪಾಲರು ಸಂತೋಷ ಕೃಷ್ಣಾಪೂರ್ ಹಾಗೂ ಶಿಕ್ಷಕ-ಶಿಕ್ಷಕಿಯರು ಮತ್ತು ಶಿಕ್ಷಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಯೋಗ ಉತ್ತಮ ಮನೋ ವ್ಯಾಯಾಮ



ರಾಣೇಬೆನ್ನೂರ: ಇಲ್ಲಿನ ಚೋಳಮರ ದೇಶ್ವರ ನಗರದ ಮಾತಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಯೋಗ ಅಭ್ಯಾಸಕ್ಕೆ ಚಾಲನೆ ನೀಡಿದ ಶಾಲಾ ಸದಸ್ಯ ಲತಾ ಸಿಎಸ್ ಮಾತನಾಡಿ, ಯೋಗವು ದೇಹಕ್ಕೆ ಆರೋಗ್ಯ, ಮನಸ್ಸಿಗೆ ಶಾಂತಿ ಮತ್ತು ಜೀವನಕ್ಕೆ ಸಮತೋಲನವನ್ನು ನೀಡುವ ಅಮೂಲ್ಯ ಸಾಧನ. ಮನಸ್ಸನ್ನು ಪ್ರಶಾಂತಗೊಳಿಸುವ ಸುಂದರ ಉಪಾಯವೇ ಯೋಗ, ನಮ್ಮ ಚಂಚಲ ಮನಸ್ಸನ್ನು ಏಕಾಗ್ರತೆಗೊಳಿಸಲು ಯೋಗ ಉತ್ತಮ ಮನೋ ವ್ಯಾಯಾಮವಾಗಿದೆ ಎಂದರು. ಅಶೋಕ ಪೂಜಾರಿ, ಶಂಭುನಾಥ ಕೊಟೂರ್. ವಿಶ್ವನಾಥ ಕಮ್ಮಾರ. ಮುಖ್ಯ ಶಿಕ್ಷಕ ಚನಬಸಪ್ಪ ಎಸ್, ಸಹಶಿಕ್ಷಕರಾದ ದೇವರಜ ಹುಣಸಿಕಟ್ಟಿ, ಮಮತಾ ಕೆ, ವನಜಾಕ್ಷಿ ಕಮ್ಮಾರ, ದೀಪಾ, ವಿಧ್ಯಾ, ಕವಿತಾ, ರೇಖಾ, ಸಾಕಮ್ಮ, ಗೀತಾ ಕಮ್ಮಾರ ಹಾಗೂ ವಿಧ್ಯಾರ್ಥಿಗಳು ಸಾಮೂಹಿಕವಾಗಿ ಯೋಗ ಭಾಗವಹಿಸಿದ್ದರು.

ದೇಶ ಸೇವೆ ಪವಿತ್ರ ಕಾರ್ಯ

ಶಿರಹಟ್ಟಿ: ಗಂಧದಗುಡಿ ಬಳಗ ಹಾಗೂ ಕರ್ನಾಟಕ ಪ್ರಜಾಪರ ವೇದಿಕೆ ಶಿರಹಟ್ಟಿ ಘಟಕದ ವತಿಯಿಂದ ಪಟ್ಟಣದ ಶಿಕ್ಷಕರ ಸಮುದಾಯ ಭವನದಲ್ಲಿ ಭಾನುವಾರ ಅಗ್ನಿಪಥ ಯೋಜನೆಯಡಿ ಅಗ್ನಿವೀರರಾಗಿ ಆಯ್ಕೆಯಾಗಿ ಭಾರತದ ಸೈನ್ಯಕ್ಕೆ ಆಯ್ಕೆಯಾದ ನೀಲಪ್ಪ ಕರಡಿ, ಅನ್ವರಬಾಷಾ ಮುಂಜಲಾಪೂರ, ನಾಗರಾಜ ಬಾರಬಾರ, ಚನ್ನವೀರ ಮಲಿಗೋಡ ಅವರಿಗೆ ಸನ್ಮಾನಿಸಲಾಯಿತು. ಗಂಧದ ಗುಡಿ ಬಳಗ ರಾಜ್ಯ ಕಾರ್ಯಕಾರಿ ಸಮಿತಿ ಅಧ್ಯಕ್ಷ ಹಸನ ಎನ್. ತಹಶೀಲ್ದಾರ ಮಾತನಾಡಿ, ದೇಶ ಸೇವೆ ಎನ್ನುವುದು ಕೇವಲ ಒಂದು ವೃತ್ತಿಯಲ್ಲ, ಅದೊಂದು ಪವಿತ್ರವಾದ ಕಾರ್ಯ. ಭಾರತೀಯ ಸೈನಿಕರ ದೇಶ ಸೇವಾ ಕಾರ್ಯಕ್ಕೆ ನಾವುಗಳು ಸದಾ ಕಾಲ ಚಿರ ಋಣಿಯಾಗಿರುತ್ತೇವೆ ಎಂದರು. ಶರೀಫ ಗುಡಿಮನಿ, ಬಿ.ಎಚ್.ಕಡಕೋಳ, ಸಲ್ಮಾನ ಕುಂದೂರ, ಸುನೀಲಗೌಡ ಪಾಟೀಲ, ಮಾಂತೇಶ, ಬಡೇಣ್ಣವರ ಇದ್ದರು.



ಹಾವೇರಿ: ನಗರದ ರಜನಿ ಸಭಾಂಗಣದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಹಾಗೂ ವಿವಿಧ ಯೋಗ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

ಯೋಗದಿಂದ ರೋಗ ಮುಕ್ತ: ಶಿಡೇನೂರ

ರಾಣೇಬೆನ್ನೂರ: ಉಸಿರಿನೊಂದಿಗೆ ಆರಂಭವಾಗುವ ಯೋಗ, ಆರೋಗ್ಯದೊಂದಿಗೆ ಪೂರ್ಣಗೊಳ್ಳುತ್ತದೆ. ಯೋಗಯುಕ್ತ ಜೀವನವಾದರೆ ರೋಗಮುಕ್ತ ಜೀವನ ಪಡೆಯಬಹುದು, ಆದ್ದರಿಂದ ಪ್ರತಿಯೊಬ್ಬರೂ ಪ್ರತಿದಿನ ಶಿಸ್ತುಬದ್ಧ ಯೋಗವನ್ನು ದಿನಚರಿಯನ್ನಾಗಿ ಅಳವಡಿಸಿಕೊಂಡರೆ ಆರೋಗ್ಯವಂತ ಬದುಕು ಸಾಗಿಸಲು ಸಾಧ್ಯವಾಗುತ್ತದೆ. ಎಂದು ಮುಖ್ಯೋಪಾಧ್ಯಾಯ ಬಿ.ಪಿ. ಶಿಡೇನೂರ ಹೇಳಿದರು.

ಭಾನುವಾರ ಮಾರುತಿ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂಬರ 17ರಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾತನಾಡಿದರು. ಕೇವಲ ಯೋಗದಿನಾಚರಣೆಯಂದು ಯೋಗ ಮಾಡಿದರೆ ಸಾಲದು ದಿನಿತ್ಯವೂ ಯೋಗ ಮಾಡುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು ಅಂದಾಗ ಆರೋಗ್ಯವಂತರಾಗಿರಲು ಸಾಧ್ಯ ಎಂದರು.

ನಗರದ ಖ್ಯಾತ ಯೋಗ ಶಿಕ್ಷಕರಾದ ಆರ್ ಬಿ.ಪಾಟೀಲ ಅವರು ಮಕ್ಕಳಿಗೆ ಯೋಗದ ಮಹತ್ವ ತಿಳಿಸಿ ಸರ್ವರಿಗೂ ಯೋಗಭ್ಯಾಸ ಮಾಡಿಸಿದರು. ಆರ್ .ಟಿ.ತಾಂಬೆ, ಶಿಕ್ಷಕರಾದ ಆರ್ ಬಿ.ಚಲವಾದಿ , ಪ್ರತಿಭಾ ಮೈಲಾರ ಕಳ್ಳಿಮಠ, ಶ್ವೇತಾ ಎಚ್ ವಿ, ಕುಸುಮಾ ಎನ್ ಹಲಗೇರಿ , ಸುಮಾ ಎ.ಜಿ ಸೇರಿದಂತೆ ವಿದ್ಯಾರ್ಥಿಗಳು ಸಿಬ್ಬಂದಿ ಮತ್ತಿತರರು ಇದ್ದರು.



ರಾಣೇಬೆನ್ನೂರ: ಮಾರುತಿ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂಬರ 17ರಲ್ಲಿ ಭಾನುವಾರ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಹೇಳಿಕೆ

ಮನಸ್ಸಿನ ಸಮತೋಲನಕ್ಕೆ ಯೋಗ ಅವಶ್ಯ

ಹಾವೇರಿ: ದೇಹ ಮತ್ತು ಮನಸ್ಸಿನ ಸಮತೋಲನ ಕಾಯ್ದುಕೊಳ್ಳಲು ಸಹಕರಿಯಾಗಿದೆ. ಯೋಗವು ಇಂದಿನ ದೈನಂದಿನ ಬದುಕಿಗೆ ಅತ್ಯಾವಶ್ಯಕವಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಹೇಳಿದರು.

ನಗರದ ರಜನಿ ಸಭಾಂಗಣದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಹಾಗೂ ವಿವಿಧ ಯೋಗ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಯೋಗವು ಪ್ರಾಚೀನ ಭಾರತದ ಅಮೂಲ್ಯ ಪರಂಪರೆ ಹಾಗೂ ಜೀವನ ಕೌಶಲ್ಯವಾಗಿದ್ದು, ಆದಿಕಾಲದ ಪತಂಜಲಿ ಮಹರ್ಷಿಗಳು ಯೋಗದ ಸಂಸ್ಥಾಪಕರು ಮತ್ತು ಪಿತಾಮಹರಾಗಿದ್ದಾರೆ. ದೇಹ ಮತ್ತು ಮನಸ್ಸು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆರೋಗ್ಯ ಎಷ್ಟು ಮುಖ್ಯವೋ, ಮನಸ್ಸು ಸಹ ಅಷ್ಟೇ ಮುಖ್ಯ. ದೇಹ ಸದೃಢವಾಗಿದ್ದರೂ ಮನಸ್ಸು ಆರೋಗ್ಯಕರವಾಗಿರದಿದ್ದರೆ ವ್ಯಕ್ತಿ ಮಾನಸಿಕವಾಗಿ ದೃಢವಾಗಿರಲು ಸಾಧ್ಯವಿಲ್ಲ. ಈ ಕಾರಣದಿಂದ ಯೋಗ ಅತ್ಯಂತ ಅವಶ್ಯಕವಾಗಿದೆ. ಯೋಗ ಕೇವಲ ದೈಹಿಕ ವ್ಯಾಯಾಮವಲ್ಲ ಅದು ದೇಹ ಮತ್ತು ಮನಸ್ಸನ್ನು ಒಗ್ಗೂಡಿಸುವ ಮಾರ್ಗ ಎಂದರು.

ಪತಂಜಲಿ ಮಹರ್ಷಿಗಳು ಆತ್ಮಸಾಧನೆಗಾಗಿ ಅಷ್ಟಾಂಗ ಯೋಗವನ್ನು ಪ್ರತಿಪಾದಿಸಿದ್ದು, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಹಾಗೂ ಸಮಾಧಿ ಎಂಬ ಎಂಟು ಅಂಗಗಳ ಮೂಲಕ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ. ವ್ಯಾಯಾಮವು ನೈತಿಕ ಶಿಸ್ತುಗಳನ್ನು, ನಿಯಮವು ಸಕಾರಾತ್ಮಕ ಚಿಂತನೆ ಮತ್ತು ಸ್ವಯಂ ಶಿಸ್ತನ್ನು, ಆಸನಗಳು ದೇಹದ ನರಮಂಡಲದ ಮೇಲೆ ಉತ್ತಮ ಪ್ರಭಾವ ಬೀರಿ ಮಾನಸಿಕ ಏಕಾಗ್ರತೆಯನ್ನು ವೃದ್ಧಿಸುತ್ತವೆ. ಪ್ರಾಣಾಯಾಮವು ಉಸಿರಾಟ ನಿಯಂತ್ರಣಕ್ಕೆ ನೆರವಾಗುತ್ತದೆ ಎಂದು ತಿಳಿಸಿದರು.

ಪ್ರತಿ ವರ್ಷ ವಿಭಿನ್ನ ಧ್ಯೇಯವಾಕ್ಯದೊಂದಿಗೆ ಅಂತಾರಾಷ್ಟ್ರೀಯಯೋಗದಿನವನ್ನುಆಚರಿಸಲಾಗುತ್ತಿದೆ. ಪ್ರಸಕ್ತ ವರ್ಷ [illegible] ಎಂಬ ವಿಷಯದಡಿ ಆರೋಗ್ಯಕರ ವೃದ್ಧಾಪ್ಯದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

2022ರಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ದೇಶದ 75 ಐತಿಹಾಸಿಕ ಸ್ಥಳಗಳಲ್ಲಿ ಸಾಮೂಹಿಕ ಯೋಗಾಭ್ಯಾಸ ಕಾರ್ಯಕ್ರಮಗಳನ್ನು ನಡೆಸಲಾಗಿತ್ತು. ಅದೇ ರೀತಿ ಕರ್ನಾಟಕದಲ್ಲಿ ಆಯೋಜಿಸಲಾದ 'ಯೋಗಥಾನ್' ಕಾರ್ಯಕ್ರಮದಲ್ಲಿ ಸುಮಾರು 10ಸಾವಿರ ಯೋಗ ಶಿಕ್ಷಕರು ಹಾಗೂ 5ಲಕ್ಷಕ್ಕೂ ಹೆಚ್ಚು ಜನರು ಏಕಾಲದಲ್ಲಿ ಯೋಗಾಭ್ಯಾಸ ನಡೆಸುವ ಮೂಲಕ ದಾಖಲೆ ನಿರ್ಮಿಸಲಾಗಿತ್ತು ಎಂದರು.

ಈ ವೇಳೇ ಹೂಡಾ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಪಂ ಸಿಇಒ ದಲ್ಜಿತ ಕುಮಾರ, ಎಸ್ಪಿ ಯಶೋಧಾ ವಂಟಗೋಡಿ, ಎಡಿಸಿ ಡಾ.ಎಲ್ ನಾಗರಾಜ್, ಆಯುಷ್ ಜಿಲ್ಲಾ ಅಧಿಕಾರಿ ಡಾ.ಸಿ.ಜಿ. ನಿಡಗುಂದಿ, ಡಿಡಿಪಿಐ ಮೋಹನ ದಂಡಿನ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಬಿ.ಎಚ್.ಲತಾ ಹಾಗೂ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಯೋಗ ಶಿಕ್ಷಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಯೋಗಾಸಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.



> **ಭಾರತದ ಸಂಸ್ಕೃತಿಯ ಭಾಗವಾದ ಯೋಗವನ್ನು ವಿಶ್ವದಾದ್ಯಂತ ಪರಿಚಯಿಸುವ ಉದ್ದೇಶದಿಂದ 2014ರಲ್ಲಿ ಪ್ರಧಾನಮಂತ್ರಿಗಳು ವಿಶ್ವಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಸಂಬಂಧಿಸಿದ ನಿರ್ಣಯ ಮಂಡಿಸಿದ್ದರು. ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳ ಪೈಕಿ 175 ರಾಷ್ಟ್ರಗಳು ಯಾವುದೇ ವಿರೋಧವಿಲ್ಲದೆ ಆ ನಿರ್ಣಯವನ್ನು ಬೆಂಬಲಿಸಿವೆ. ಇದು ಯೋಗದ ಮಹತ್ವವನ್ನು ವಿಶ್ವವೇ ಒಪ್ಪಿಕೊಂಡಿರುವುದಕ್ಕೆ ಸಾಕ್ಷಿಯಾಗಿದೆ.**
> ■ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾಧಿಕಾರಿ

ನೀಟ್ ಪರೀಕ್ಷೆ: 2,123 ಅಭ್ಯರ್ಥಿಗಳು ಹಾಜರು

ಹಾವೇರಿ: ಜಿಲ್ಲಾಕೇಂದ್ರ ಹಾವೇರಿ ನಗರದ ಐದು ಪರೀಕ್ಷಾ ಕೇಂದ್ರಗಳಲ್ಲಿ ಭಾನುವಾರ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) ಬಹುತೇಕ ಶಾಂತಿಯುತ ಮತ್ತು ಸುಗಮವಾಗಿ ನಡೆಯಿತು.

ನಗರದ ಹೊರವಲಯದಲ್ಲಿರುವ ಗಾಂಧಿಪುರ ಸರ್ಕಾರಿ ಪದವಿ ಕಾಲೇಜು, ಗುದ್ಲೆಪ್ಪ ಹಳ್ಳಿಕೇರಿ ಪಪೂ ಕಾಲೇಜು, ದೇವಗಿರಿಯ ಸರ್ಕಾರಿ ಎಂಜನೀಯರಿಂಗ್ ಕಾಲೇಜು, ಇಜಾರಿಲಕಮಾಪುರದಸರ್ಕಾರಿ ಬಾಲಕಿಯರ ಪಪೂ ಕಾಲೇಜು, ಸರ್ಕಾರಿ ಬಾಲಕರ ಪಿಯು ಕಾಲೇಜನ್ನು ಪರೀಕ್ಷಾ ಕೇಂದ್ರಗಳನ್ನಾಗಿ ಗುರುತಿಸಲಾಗಿತ್ತು. ಪರೀಕ್ಷೆಯು ರಾಷ್ಟ್ರೀಯ ಮಟ್ಟದ ಮಹತ್ವದ ಪರೀಕ್ಷೆಯಾಗಿರುವುದರಿಂದ ಪರೀಕ್ಷಾ ಕೇಂದ್ರಗಳಲ್ಲಿ ಯಾವುದೆ ಲೋಪದೋಷಗಳು ಕಂಡು ಬರದಂತೆ ಜಿಲ್ಲಾಡಳಿತ ಅಗತ್ಯ ಪೂರ್ವ ಸಿದ್ಧತೆಗಳನ್ನು ಕೈಗೊಂಡಿತ್ತು.ಸುಸಜ್ಜಿತ ಪರೀಕ್ಷಾ ಕೊಠಡಿಗಳು, ಅಭ್ಯರ್ಥಿಗಳ ಆಸನ ವ್ಯವಸ್ಥೆ, ಸಿಸಿಟಿವಿ ಕ್ಯಾಮರಾಗಳ ಕಾರ್ಯನಿರ್ವಹಣೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿತ್ತು.

ಪರೀಕ್ಷಾ ಕೇಂದ್ರಗಳ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಪರೀಕ್ಷಾ ಮಾರ್ಗ ಸೂಚಿಗಳನ್ವಯ ಅಭ್ಯರ್ಥಿಗಳ ಪರಿಶೀಲನೆ, ಪ್ರವೇಶ ದ್ವಾರಗಳ ನಿರ್ವಹಣೆ ಹಾಗೂ ಭದ್ರತಾ ಕ್ರಮಗಳನ್ನು ನಿಯೋಜಿಸಲಾಗಿತ್ತು. ಮಧ್ಯಾಹ್ನ 1 ಗಂಟೆಯಷ್ಟೊತ್ತಿಗೆ ಬಹುತೇಕ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಉಪಸ್ಥಿತರಿದ್ದು, ಎಲ್ಲ ಹಂತದ ತಪಾಸಣೆಗೆ ಒಳಗಾಗಿ ಕೊಠಡಿಯಲ್ಲಿ ಆಸೀನರಾಗಿದ್ದರು.ಒಟ್ಟಿನಲ್ಲಿ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯುವರೆಗೆ ನೀಟ್ ಪರೀಕ್ಷೆ ಸೂಸುತ್ರವಾಗಿ ನಡೆಯಿತು.

> **409 ಅಭ್ಯರ್ಥಿಗಳು ಗೈರು**
> ನಗರದಲ್ಲಿ ನೀಟ್ ಪರೀಕ್ಷೆಗೆ ನಿಯೋಜಿಸಿದ ಐದು ಪರೀಕ್ಷಾ ಕೇಂದ್ರಗಳಲ್ಲಿ 2,532 ಅಭ್ಯರ್ಥಿಗಳು ನೊಂದಾಯಿಸಿಕೊಂಡಿದ್ದರು. ಈ ಪೈಕಿ 2,123 ಅಭ್ಯರ್ಥಿಗಳು ಹಾಜರಾಗಿದ್ದು, 409 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ಮಾಹಿತಿ ನೀಡಿದ್ದಾರೆ.



ಆರೋಗ್ಯಯುತ ಜೀವನಕ್ಕೆ ಯೋಗ ಸಹಕಾರಿ

ಬ್ಯಾಡಗಿ: ಯೋಗ ಎಂಬುದು ಕೇವಲ ವ್ಯಾಯಾಮವಲ್ಲ, ಜೀವನ ವಿಧಾನ. ಯೋಗ ಅಂದರೆ ಏಕತೆ, ಮಾನವೀಯತೆ. ಯೋಗದ ಶಕ್ತಿ ನಮ್ಮನ್ನು ಆರೋಗ್ಯವಾಗಿರಿಸುವುದಷ್ಟೇ ಅಲ್ಲ, ಸ್ವಸ್ಥವಾಗಿರಿಸುವುದಾಗಿದೆ. ನಿಜವಾಗಿಯೂ ಇಂದು ಯೋಗ ಜಾಗತಿಕವಾಗಿ ಪ್ರಖ್ಯಾತಿಯಾಗಿದೆ. ಯೋಗ ಪ್ರತಿಯೊಬ್ಬರಿಗೂ ಅತ್ಯಗತ್ಯವಾಗಿದೆ ಎಂದು ಬ್ಯಾಡಗಿ ಜೆಎಂಎಸ್ ಸಿ ಕೊರ್ಟನ ನ್ಯಾಯಾಧೀಶೆ ರಾಜೇಶ್ವರಿ ಜೆ ಪುರಾಣಿಕ್ ಹೇಳಿದರು.

ಪಟ್ಟಣದ ತಾಲೂಕು ಕಾನೂನು ಸೇವೆಗಳ ಸಮಿತಿ ಬ್ಯಾಡಗಿ ಮತ್ತು ತಾಲೂಕು ನ್ಯಾಯವಾದಿಗಳ ಸಂಘ ಬ್ಯಾಡಗಿ ಇವರ ಸಂಯುಕ್ತ ಆಶಯದಲ್ಲಿ ಇಂದು ಬ್ಯಾಡಗಿ ಕೋರ್ಟ್‌ನ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾತನಾಡಿದವರು.

ಬದಲಾದ ಜೀವನ ಶೈಲಿಯಿಂದ ಜನರಲ್ಲಿ ಆರೋಗ್ಯದ ಸಮಸ್ಯೆಗಳು ಸಾಮಾನ್ಯವಾಗಿದೆ. ಹೀಗಾಗಿ ಆರೋಗ್ಯವನ್ನು ಉತ್ತಮವಾಗಿಸಲು ಯೋಗ ಅತಿ ಮುಖ್ಯ ಎಂದು ಹೇಳಿದರು.

ದಿವಾಣಿ ನ್ಯಾಯಾಧೀಶ ಬಸವರಾಜ್ ಟಿ.ನಾಯಕ್ ಮಾತನಾಡಿ, ಯೋಗವು ಮನಸ್ಸು ಮತ್ತು ದೇಹವನ್ನು ಸಂಪರ್ಕಿಸುವ ಪುರಾತನ ಕಲೆಯಾಗಿದೆ. ಪ್ರತಿವರ್ಷ ಯೊಗ ದಿನದಂದು ಯೋಗ, ಧ್ಯಾನ, ಸಭೆಗಳು, ಚರ್ಚೆಗಳು, ಸಾಂಸ್ಕೃತಿಕ ಪ್ರದರ್ಶನಗಳು ಇತ್ಯಾದಿಗಳನ್ನು ಅಭ್ಯಸಿಸುವುದರ ಮೂಲಕ ವಿಶ್ವದ ಬಹುತೇಕ ರಾಷ್ಟಗಳಲ್ಲಿ ಯೋಗ ದಿನವನ್ನು ಆಚರಿಸಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಆರ್ ಸಿ.ಶಿಡೇನೂರ, ಉಪಾಧ್ಯಕ್ಷ ಜಿ ಬಿ.ಯಲಗಚ್ಚ, ಕಾರ್ಯದರ್ಶಿ ಎಚ್.ಜಿ.ಮುಳಗುಂದ, ಸಹ ಕಾರ್ಯದರ್ಶಿ ಎಂ.ಎಸ್. ಕುಮ್ಮುರ ಹಾಗೂ ಯೋಗ ತರಬೇತುದಾರರು, ಹಿರಿಯ ಮತ್ತು ಕಿರಿಯ ನ್ಯಾಯವಾದಿಗಳು ಹಾಗೂ ನ್ಯಾಯಾಂಗ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.



ಸುಂದರ ಕುಲಕರ್ಣಿ ಅವರಿಂದ ನಿರಂತರ ಯೋಗ ಜಾಗೃತಿ

ಹಾವೇರಿ : ಕಳೆದ ಎರಡು ದಶಕಗಳಿಂದ ಯೋಗಾಭ್ಯಾಸದಲ್ಲಿ ತೊಡಗಿಸಿ ಕೊಂಡಿರುವ ಸುಂದರ ಕುಲಕರ್ಣಿ(61) ಅವರು ಯೋಗದಲ್ಲಿ ಸಾಧನೆ ತೋರಿದ್ದು, ತಾವು ಕಲಿತ ಯೋಗವನ್ನು ಇತರರಿಗೆ ಹೇಳಿಕೊಟ್ಟು ಯೋಗದ ಕುರಿತು ನಿರಂತರ ಜಾಗೃತಿ ಮೂಡಿಸುತ್ತಿದ್ದಾರೆ.

ಕಳೆದ 12 ವರ್ಷಗಳಿಂದ ನಗರದಲ್ಲಿ ಯೋಗ ತರಬೇತಿ ನೀಡುತ್ತಿದ್ದು, ಮಕ್ಕಳಿಂದ ಹಿಡಿದು ಇಳಿ ವಯಸ್ಸಿನವರು ಇವರಲ್ಲಿ ಯೋಗ ತರಬೇತಿ ಪಡೆಯುತ್ತಿದ್ದಾರೆ. ಸ್ವತಃ ಸುಂದರ ಕುಲಕರ್ಣಿ ಅವರು ಬ್ಯಾಕ್ ಪೇನ್, ಕಿಡ್ನಿಯಲ್ಲಿ ಹರಳು ಸೇರಿದಂತೆ ಆರೋಗ್ಯದಲ್ಲಿ ಸಮಸ್ಯೆ ಎದುರಿಸುತ್ತಿದ್ದರು. ಈ ಸಮಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಯೋಗ ಮಾಡುವಂತೆ ಸಲಹೆ ನೀಡಿದ್ದರಿಂದ ಯೋಗಾಭ್ಯಾಸದಲ್ಲಿ ತೊಡಗಿ ಕೊಂಡರು. ನಂತರದ ದಿನಗಳಲ್ಲಿ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದ್ದರಿಂದ ಪ್ರೇರಣೆಗೊಂಡು ನಿರಂತರವಾಗಿ ಯೋಗಾಭ್ಯಾಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ದಿನ ಕಳೆದಂತೆ ತಾವು ಕಲಿತ ಯೋಗವನ್ನು ಇತರರಿಗೆ ಉಚಿತವಾಗಿ ಹೇಳಿ ಕೊಡುವ ಮೂಲಕ ಯೋಗದ ಕುರಿತು ಜಾಗೃತಿ ಮೂಡಿಸುವಲ್ಲಿ ತೊಡಗಿಕೊಂಡರು. ಇದುವರೆಗೂ ಸುಮಾರು 750ಕ್ಕೂ ಹೆಚ್ಚು ಶಿಬಿರಗಳನ್ನು ಆಯೋಜಿಸಿ ಯೋಗ ತರಬೇತಿ ನೀಡಿದ್ದಾರೆ. ಶಾಲಾ-ಕಾಲೇಜುಗಳಿಗೆ ತೆರಳಿ ಮಕ್ಕಳಿಗೂ ಸಹ ಯೋಗ ತರಬೇತಿ ನೀಡಿದ್ದಾರೆ. ಯಾವುದೇ ಫಲಾಪೇಕ್ಷೆ ಇಲ್ಲದೇ ಕಳೆದ 12 ವರ್ಷಗಳಿಂದ ನಿರಂತರವಾಗಿ ಯೋಗ ತರಬೇತಿ ನೀಡುವ ಮೂಲಕ ಜನಮನ್ನಣೆ ಗಳಿಸಿದ್ದಾರೆ.



> **ಸ್ವತಃ ಬ್ಯಾಕ್ ಪೇನ್, ಕಿಡ್ನಿಯಲ್ಲಿ ಹರಳು ಸೇರಿದಂತೆ ಆರೋಗ್ಯದಲ್ಲಿ ಸಮಸ್ಯೆ ಎದುರಿಸುತ್ತಿದ್ದೆ. ಯೋಗ ಮಾಡುವಂತೆ ಸಲಹೆ ನೀಡಿದ್ದರಿಂದ ಯೋಗಾಭ್ಯಾಸದಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಆರೋಗ್ಯದಲ್ಲಿ ಚೇತರಿಕೆ ಕಂಡುಕೊಂಡೆ. ಇದುವರೆಗೂ ಸುಮಾರು 750ಕ್ಕೂ ಹೆಚ್ಚು ಶಿಬಿರಗಳನ್ನು ಆಯೋಜಿಸಿ ಯೋಗ ತರಬೇತಿ ನೀಡಲಾಗಿದೆ.**
> ■ ಸುಂದರ ಕುಲಕರ್ಣಿ, ಯೋಗಪಟು

ಕಡ್ಡಾಯ ಯೋಗ ಶಿಕ್ಷಣ ಅಳವಡಿಕೆಯಾಗಲಿ

ಹಾವೇರಿ : ಇತ್ತೀಚಿನ ದಿನಗಳಲ್ಲಿ ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನಕ್ಕೆ ಅಂಟಿಕೊಂಡಿರುವ ನಮ್ಮ ದೈನಂದಿನ ರೂಢಿಗಳು ಹಾಗೂ ಆಹಾರ ಪದ್ಧತಿಯಿಂದ ನಾವೆಲ್ಲ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳಿಗೆ ತುತ್ತಾಗುತ್ತಿದ್ದೇವೆ. ಇದಕ್ಕೆ ಪರಿಹಾರ ಎಂದರೆ ನಮ್ಮ ಮಾನಸಿಕ ಒತ್ತಡ ನಿರ್ವಹಣೆಗೆ ಕಡ್ಡಾಯ ಯೋಗ ಶಿಕ್ಷಣ ಅಳವಡಿಕೆಯಾಗಬೇಕಿದೆ ಎಂದು ಅನನ್ಯ ಇಂಟರ್‌ನ್ಯಾಷನಲ್ ಸ್ಕೂಲ್ ಕಾರ್ಯದರ್ಶಿ ಸೌಮ್ಯ ಮಲ್ಲಿಕಾರ್ಜುನ ಹಾವೇರಿ ಹೇಳಿದರು.

ನಗರದ ಸಿ.ಡಿ. ಹಾವೇರಿ ವಿದ್ಯಾಸಂಸ್ಥೆಯ ಅನನ್ಯ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಜರುಗಿದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ, ಇಂದು ನಾವು ಯೋಗ ಮರೆತ ಹಿನ್ನೆಲೆಯಲ್ಲಿ ಆಸ್ಪತ್ರೆಗಳಿಗೆ ಅಲೆಯುವ ಪರಿಸ್ಥಿತಿ ಹಾಗೂ ಚಿಕಿತ್ಸೆಗಳಿಗಾಗಿ ಅತೀಯಾದ ಹಣ ವ್ಯಯ ಮಾಡುವ ಪರಿಸ್ಥಿತಿ ಎದುರಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮಾನವ ಸಮಾಜ ಯೋಗವನ್ನು ಕಡ್ಡಾಯ ರೂಢಿಯಾಗಿ ಅನುಸರಿಸಿದರೆ ನಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ನಾವು ಸಫಲರಾಗುತ್ತೇವೆ ಎಂದರು. ಶಾಲೆಯ ಪ್ರಾಂಶುಪಾಲೆ ಮಂಜುಳಾ ಮಾತನಾಡಿದರು. ಸಂಪನ್ಮೂಲ ವ್ಯಕ್ತಿ ಅಂತಾರಾಷ್ಟ್ರೀಯ ಯೋಗಪಟು ಹೇಮಾ ಅಂಗಡಿ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ವಿವಿಧ ಯೋಗಾಸನಗಳನ್ನು ಬೋಧಿಸಿದರು. ಯೋಗದಿನದ ಪ್ರಯುಕ್ತ ಮಕ್ಕಳಿಗೆ ಯೋಗ ಮತ್ತು ಆರೋಗ್ಯ ಎಂಬ ವಿಷಯದ ಮೇಲೆ ಚಿತ್ರಕಲಾ ಸ್ಪರ್ಧೆ, ಭಾಷಣ ಸ್ಪರ್ಧೆ ಹಾಗೂ ಯೋಗಾಸನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಶಾಲೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹಾಜರಿದ್ದರು.



ಫಲವತ್ತಾದ ಕೃಷಿಭೂಮಿ ಸ್ವಾಧೀನ ಕೈಬಿಡಿ

ಹಾವೇರಿ: ಬೆಂಗಳೂರಿನ ಬಿಡದಿ ಮತ್ತು ಹಾರೋಹಳ್ಳಿ ಹೋಬಳಿಯ ಅತ್ಯಂತ ಫಲವತ್ತಾದ ಕೃಷಿ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿರುವ ಕ್ರಮವನ್ನು ತತ್‌ಕ್ಷಣವೇ ಕೈಬಿಡಬೇಕು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷಮಂಜುನಾಥಗೌಡಶಿವಣ್ಣನವರ ಆಗ್ರಹಿಸಿದರು.

ನಗರದ ಜಿಲ್ಲಾಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಹೊರಡಿಸಿರುವ ಅಂತಿಮ ಗೆಜೆಟ್ ಅಧಿಸೂಚನೆಯು ರೈತ ವಿರೋಧಿ ಹಾಗೂ ದಬ್ಬಾಳಿಕೆಯ ನೀತಿಯಾಗಿದೆ. ಸಾರ್ವಜನಿಕ ಹಿತಾಸಕ್ತಿಯ ಹೆಸರಿನಲ್ಲಿ ಬೃಹತ್ ರಿಯಲ್ ಎಸ್ಟೇಟ್ ದಂಧೆಗೆ ಅವಕಾಶ ಕಲ್ಪಿಸುವ ಉದ್ದೇಶ ಹೊಂದಿದೆ. ಮೊದಲ ಹಂತದಲ್ಲಿ 498.34ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಮುಂದಾಗಿದ್ದು, ಇದರಿಂದ 755 ರೈತ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಲಿವೆ. ಈ ಪೈಕಿ ಶೇ.81ಕ್ಕೂ ಹೆಚ್ಚು, ಅಂದರೆ 614 ರೈತರು ಒಂದು ಎಕರೆಗಿಂತ ಕಡಿಮೆ ಜಮೀನು ಹೊಂದಿರುವ ಅತಿ ಸಣ್ಣ ರೈತರಾಗಿದ್ದು, ಅವರ ಜೀವನೋಪಾಯಕ್ಕೆ ತೀವ್ರ ಹೊಡೆತ ಬೀಳಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಂದಿನ ತಿಂಗಳೊಳಗೆ ಸುಮಾರು 7,500ರಿಂದ 9,600 ಎಕರೆವರೆಗೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಆರಂಭಿಸುವ ಸಾಧ್ಯತೆ ಇದ್ದು, ರೈತರು ಒಪ್ಪದಿದ್ದರೂ ನ್ಯಾಯಾಲಯದಲ್ಲಿ ಪರಿಹಾರ ಮೊತ್ತ ಠೇವಣಿ ಇಟ್ಟು ಜಮೀನು ವಶಪಡಿಸಿಕೊಳ್ಳುವ ಎಚ್ಚರಿಕೆಯನ್ನು ಸರ್ಕಾರ ನೀಡುತ್ತಿದೆ ಎಂದು ಆರೋಪಿಸಿದರು.

ಸ್ಮಾರ್ಟ್ ಸಿಟಿ ಮತ್ತು ಇಂಟಿಗ್ರೇಟೆಡ್ ಟೌನ್‌ಶಿಪ್ ಹೆಸರಿನಲ್ಲಿ ಸುಮಾರು 10ಲಕ್ಷಕ್ಕೂ ಹೆಚ್ಚು ಹಸಿರು ಮರಗಳನ್ನು ಕಡಿಯುವ ಮೂಲಕ ಪರಿಸರಕ್ಕೆ ಭಾರೀ ಹಾನಿ ಉಂಟುಮಾಡುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದ ಅವರು, ಕೇಂದ್ರದ 2013ರ ಭೂಸ್ವಾಧೀನ ಕಾಯ್ದೆಯಲ್ಲಿನ ಸಾಮಾಜಿಕ ಪರಿಣಾಮ ಮೌಲ್ಯಮಾಪನ ಹಾಗೂ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಕ್ರಿಯೆಗಳನ್ನು ತಪ್ಪಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆಯನ್ನು ಬಳಸಿಕೊಳ್ಳಲಾಗಿದೆ ಎಂದು ಆರೋಪಿಸಿದರು. ಸರ್ಕಾರ ಕೂಡಲೇ ಅಂತಿಮ ಅಧಿಸೂಚನೆಯನ್ನು ರದ್ದುಗೊಳಿಸಿ ಮುಂದಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಕೆ. ಸಿದ್ದಬಸಪ್ಪ ಯಾದವ್, ಲಕ್ಷ್ಮೀ ಕದರಮಂಡಲಗಿ, ಲಿಂಗರಾಜ ಹೊನ್ನಾಳಿ, ಚನ್ನವೀರಪ್ಪ ಬಡಿಗೇರ, ಶಿವಾನಂದ ಕರಿಗಾರ, ಶಿವಾನಂದ ಯಲಿಗಾರ, ಮೂಕಪ್ಪ ಅಗಸಿಬಾಗಿಲ, ರಾಮನಗೌಡ ಪಾಟೀಲ, ರಾಘವೇಂದ್ರ ಗಿರಿಯಪ್ಪನವರ ಹಾಗೂ ಮಧುಕುಮಾರ ಸಿದ್ದಣ್ಣವರ ಉಪಸ್ಥಿತರಿದ್ದರು.



ಬಿಡದಿ ರೈತರ ಹೋರಾಟ ಬೆಂಬಲಿಸಿ ಕರವೇ ಪ್ರತಿಭಟನೆ

ಹಾವೇರಿ: ಬಿಡದಿ ರೈತರ ಹೋರಾಟವನ್ನು ಬೆಂಬಲಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣಕುಮಾರ ಶೆಟ್ಟಿ ಬಣ)ದ ಕಾರ್ಯಕರ್ತರು ನಗರದ ಮುರಘರಾಜೇಂದ್ರ ಮಠದಿಂದ ಬೃಹತ ಪ್ರತಿಭಟನೆ ಆರಂಭಿಸಿ ಕಾಗಿನೆಲೆ ವೃತ್ತದಲ್ಲಿ ರಸ್ತೆ ತಡೆದು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ವೇದಿಕೆಯ ಜಿಲ್ಲಾಧ್ಯಕ್ಷ ಮಂಜುನಾಥ ಓಲೇಕಾರ ಮಾತನಾಡಿ, ರಾಜ್ಯ ಸರ್ಕಾರ ಜೂ.13ರಂದು ರಾಮನಗರ ಜಿಲ್ಲೆಯ ಬಿಡದಿ ಸಮೀಪದ ಗ್ರೇಟರ ಬೆಂಗಳೂರು ಇಂಟಿಗ್ರೇಟೆಡ್ ಟೌನಶಿಪ್ ಯೋಜನೆಗಾಗಿ 516 ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಂತಿಮ ಅಧಿಸೂಚನೆ ಹೊರಡಿಸಿರುವುದನ್ನು ಕರ್ನಾಟಕ ರಕ್ಷಣಾ ವೇದಿಕೆ ತೀವ್ರವಾಗಿ ಖಂಡಿಸುತ್ತದೆ. ನೂರಾರು ವರ್ಷಗಳಿಂದ ವಿಶಾಲ ಹಸಿರು ಮತ್ತು ಸಸ್ಯ ಸಮೃದ್ಧ ಕೃಷಿ ಭೂಮಿಯಾಗಿದ್ದ ಬಿಡದಿ ಸುತ್ತಮುತ್ತಲಿನ ಊರುಗಳನ್ನು ಕಾಂಕ್ರೀಟ್ ಕಟ್ಟಡಗಳಿಂದ ಕೂಡಿದ ಟೌನಶಿಫ್ ಮಾಡಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮ ಸರಿಯಲ್ಲ, ಭೂಸ್ವಾಧೀನ ಅಧಿಸೂಚನೆ ಹೊರಬರುತ್ತಿದ್ದಂತೆ ರೈತರು ತೀವ್ರ ವಿರೋಧ ವ್ಯಕ್ತಪಡಿಸಿದ್ದು ಸ್ವಾಧೀನಕ್ಕೆ ಗುರುತಿಸಲಾದ ಭೂಮಿ ಅತ್ಯಂತ ಫಲವತ್ತಾಗಿದ್ದು ಕೃಷಿಗೆ ಅವಶ್ಯಕವಾಗಿದೆ ಎಂದು ಒತ್ತಾಯಿಸಿದರು.

ಈ ಭೂಮಿಯಲ್ಲಿ ರೇಷ್ಮೆ, ತೆಂಗು, ಹೀಗೆ ಹತ್ತಾರು ಬೆಳೆಗಳನ್ನು ಬೆಳೆದು ಜೀವನ ನಡೆಸುತ್ತಿದ್ದಾರೆ. ಈ ಯೋಜನೆ ಎಚ್.ಡಿ. ಕುಮಾರ ಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ರೂಪಿಸಿದ್ದರು. ಆಗ ರೈತರು ವಿರೋಧ ವ್ಯಕ್ತಪಡಿಸಿದಾಗ ಯೋಜನೆಯನ್ನು ಕೈಬಿಡಲಾಗಿತ್ತು. ಆದರೆ ಈಗಿನ ಸರ್ಕಾರ ರೈತರ ವಿರೋಧದ ನಡುವೆಯು ಜಾರಿಗೆ ತರುತ್ತಿದೆ. ಇದರ ಹಿಂದಿನ ಉದ್ದೇಶ ಏನು ಅಂತ ತಿಳಿಯದು. ಈ ಯೋಜನೆಗೆ ಸುಮಾರು ಏಳು ಸಾವಿರಕ್ಕೂ ಹೆಚ್ಚು ಎಕರೆ ಭೂಮಿ ಬೇಕಾಗಿದ್ದು, ಭೂಮಿಯನ್ನು ಕಸಿದುಕೊಂಡರೆ ರೈತರ ಗತಿ ಏನು? ಕೂಡಲೇ ರಾಜ್ಯ ಸರ್ಕಾರ ಈ ಯೋಜನೆಯನ್ನು ಕೈ ಬಿಟ್ಟು ರೈತರ ನೆರವಿಗೆ ಬರಬೇಕು. ಇಲ್ಲವಾದರೆ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣಕುಮಾರ ಶೆಟ್ಟಿ ಬಣ) ರಾಜ್ಯಾದ್ಯಂತ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಈ ಮೂಲಕ ಎಚ್ಚರಿಸಿದರು.


ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷರಾದ ಪುಟ್ಟಪ್ಪ ಹಿತ್ತಲಮನಿ, ನೂರಹ್ಮದ ಲಕ್ಷ್ಮೇಶ್ವರ, ಮಾರುತಿ ಹಾಲಗಿ, ಮಾದೇವಪ್ಪ ಹೆಡಿಗೊಂಡ, ಖಲಂದರ ಎಲೆದಹಳ್ಳಿ, ವಿಜಯಕುಮಾರ ಎನ್.ಎಂ., ಫಕ್ಕೀರಪ್ಪ ಕಟ್ಟಿಮನಿ, ಅನಸೂಯಾ ಸಿದ್ದಪ್ಪಳವರ, ಕುಮಾರ ಸುಳ್ಳನವರ, ಮೌಲಾಸಾಬ ನಧಾಫ, ಮಾಲತೇಶ ಜಿ.ಕೆ., ಮೌಲಾಲಿ ಯರೆಮನಿ, ರಾಜಕುಮಾರ ದೊಡ್ಮನಿ, ಬರಮಪ್ಪ ಡಮ್ಮಳ್ಳಿ, ರಾಜು ನವಲಗುಂದ, ರಮೇಶ ದಾಸಪ್ಪನವರ, ಮಾಂತೇಶ ಶಿಗ್ಗಟ್ಟಿ, ಸುರೇಶ ಲಚ್ಚಮಣ್ಣನವರ, ಪವನ ವಡ್ಡರ, ಅಶೋಕ ಗದಗ ಸೇರಿದಂತೆ ಇತರರು ಇದ್ದರು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಧ್ವನಿ
೦೯
ಬೆಳಗಾವಿ
ಗರಿಷ್ಠ 28° ಕನಿಷ್ಠ 23°
ಸೋಮವಾರ
22 ಜೂನ್ 2026
ಹುಬ್ಬಳ್ಳಿ

ಕಿರುಸುದ್ದಿ

ಪಿಎಂ ಕಿಸಾನ್ ಸಮ್ಮಾನ್ ನಿಧಿ ರೈತರ ಖಾತೆಗೆ ₹99.69 ಕೋಟಿ : ಸಂಸದ ಕಡಾಡಿ



ಮೂಡಲಗಿ: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಬೆಳಗಾವಿ ಜಿಲ್ಲೆಯ 4 ಲಕ್ಷ 98 ಸಾವಿರಕ್ಕೂ ಹೆಚ್ಚು ರೈತರ ಬ್ಯಾಂಕ್ ಖಾತೆಗಳಿಗೆ 99.69 ಕೋಟಿ ರೂ ಡಿಬಿಟಿ ಮೂಲಕ ರೈತರ ಖಾತೆಗೆ ವರ್ಗಾಯಿಸಿದ್ದಾರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ಕೇಂದ್ರ ಸರ್ಕಾರದ ಕ್ರಮವನ್ನು ಶ್ಲಾಘಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಸಂಸದ ಈರಣ್ಣ ಕಡಾಡಿ ಅವರು, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ 23ನೇ ಕಂತಿನ ಭಾಗವಾಗಿ ದೇಶದ 9.44 ಕೋಟಿ ಫಲಾನುಭವಿ ರೈತರ ಖಾತೆಗಳಿಗೆ ರೂ. 18.800 ಸಾವಿರ ಕೋಟಿ ರೂಪಾಯಿ ಹಾಗೂ ರಾಜ್ಯದ 41.35 ಲಕ್ಷಕ್ಕೂ ಹೆಚ್ಚು ರೈತರ ಖಾತೆಗೆ 827.10 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಗುರಿಯೊಂದಿಗೆ ಹಾಗೂ ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಈ ಆರ್ಥಿಕ ನೆರವು ರೈತರಿಗೆ ಕೃಷಿ ಚಟುವಟಿಕೆಗಳನ್ನು ನಡೆಸಲು ಮತ್ತು ಆರ್ಥಿಕ ಸಂಕಷ್ಟದಿಂದ ಹೊರಬರಲು ಹೆಚ್ಚಿನ ಬಲ ನೀಡಲಿದೆ ಎಂದು ಸಂಸದ ಈರಣ್ಣ ಕಡಾಡಿ ಅವರು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಅರ್ಜಿಆಹ್ವಾನ

ಬೆಳಗಾವಿ : ಜಿಲ್ಲೆಯ ಕಿತ್ತೂರು ತಾಲೂಕಿನ ವೀರಾಪೂರ ಗ್ರಾಮ ಪಂಚಾಯತಿಯಲ್ಲಿ ಖಾಲಿ ಇರುವ 1 ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ (ವಿಆರ್ ಡಬ್ಲ್ಯೂ)ಹುದ್ದೆಯನ್ನು ಇಲಾಖೆಯ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಮಾಸಿಕ ರೂ.10,000/- ಗಳ ಗೌರವಧನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರ್ಹ ವಿಕಲಚೇತನ ಅಭ್ಯರ್ಥಿಗಳಿಂದ ಈ ಕೆಳಕಂಡ ಷರತ್ತಿಗೊಳಪಟ್ಟು ಮರು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಜೂನ್ 19 ರಿಂದ ಜುಲೈ 18 ರ ಸಂಜೆ 5 ಗಂಟೆಯೊಳಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ ಕಾರ್ಯಾಲಯ, ಕಿತ್ತೂರು ಇಲ್ಲಿಗೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಬೈಲಹೊಂಗಲ ತಾಲೂಕಿನ ಎಂಆರ್‌ಡಬ್ಲ್ಯೂ ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಬೆಳಗಾವಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ಬೆಳಗಾವಿ : ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ 2025-26 ನೇ ಸಾಲಿನಲ್ಲಿ ಮೆಟ್ರಿಕ – ಪೂರ್ವ(01-08)ನೇ ತರಗತಿ ವರೆಗೆ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿ (ಮುಸ್ಲಿಂ, ಕ್ರಿಶ್ಚಿಯನ್, ಜೈನ, ಸಿಖ್, ಬೌದ್ಧ ಹಾಗೂ ಪಾರ್ಸಿ ವರ್ಗದವರು) ವಿದ್ಯಾರ್ಥಿವೇತನಕ್ಕಾಗಿ ವಿದ್ಯಾರ್ಥಿಗಳು ಕಡ್ಡಾಯವಾಗಿ ರಾಜ್ಯ ಎಸ್.ಎಸ್.ಪಿ ವಿದ್ಯಾರ್ಥಿವೇತನಕ್ಕೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ https://ssp.postmatric.kamataka.gov.in/ ವೆಬ್ ಸೈಟನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಸೆಪ್ಟಂಬರ 30 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಅರ್ಜಿಗಳನ್ನು ವೆಬ್‌ಸೈಟ್‌ನಲ್ಲಿ ಸಲ್ಲಿಸಿ ಅದರ ಒಂದು ಪ್ರತಿಯನ್ನು ತಮ್ಮ ತಮ್ಮ ಶಾಲೆಗಳಲ್ಲಿ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು, ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ ಇವರ ಕಾರ್ಯಾಲಯ, ಜಿಲ್ಲಾ ಮಾಹಿತಿ ಕೇಂದ್ರ ಹಾಗೂ ತಾಲೂಕಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿ ಹೊಂಡಕ್ಕೆ ಬಿದ್ದು ಬಾಲಕ ಸಾವು

ಯರಗಟ್ಟಿ: ಸಮೀಪದ ಸತ್ತಿಗೇರಿ ಗ್ರಾಮದ ತೋಟದ ಕೃಷಿ ಹೊಂಡದಲ್ಲಿ ಗುರುವಾರ ಬಾಲಕನೊಬ್ಬ ಬಿದ್ದು ಸಾವಿಗೀಡಾದ್ದಾನೆ. ಸಾವಿಗೀಡಾದ ಬಾಲಕನನ್ನು ಸಿದ್ಧಾರ್ಥ ಭೀಮಪ್ಪ ಗುಡೆನ್ನವರ(11) ಎಂದು ಗುರುತಿಸಲಾಗಿದೆ. ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಕಾಲುಜಾರಿ ಕೃಷಿ ಹೊಂಡಕ್ಕೆ ಬಿದ್ದು ಸಾವಿಗೀಡಾಗಿದ್ದಾನೆ. ಸ್ಥಳಕ್ಕೆ ಸಿಪಿಐ ಐ.ಎಂ.ಮಠಪತಿ, ಪಿಎಸ್‌ಐ ಎಲ್.ಬಿ.ಮಾಳಿ ಭೇಟಿ ನೀಡಿ ಪರಿಶೀಲನೆ ಯರಗಟ್ಟಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರಾಯಬಾಗ: ತಾಲೂಕಿನ ಬಾವನಸೌಂದತ್ತಿ ಗ್ರಾಮದ ಪ್ರತೀಕ್ಷಾ ಅಶೋಕ ಭಿಷ್ಠೆ ಗದಗ ಇನ್ಸ್ ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಕಾಲೇಜಿನಲ್ಲಿ ಎಂಬಿಬಿಎಸ್ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಮಹಂತ ಶಿಕ್ಷಣ ಸಂಸ್ಥೆವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ ಸಂಸ್ಥೆಯ ಅಧ್ಯಕ್ಷ ಮೋಹನ ಸಾಂಗಲೆ, ಉಪಾಧ್ಯಕ್ಷರಾದ ದೀಪಾಲಿ ಕಾಟೆ, ಭೀಮರಾವ ಭಿಷ್ಠೆ, ದಶರಥ ಕಾಟೆ ಮುಖ್ಯೋಧ್ಯಾಪಕಿ ಡಿ.ಎ. ನದಾಫ್ ಸೇರಿದಂತೆ ಶಾಲಾ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನ್ಯಾಯಾಲಯದಲ್ಲಿ ಯೋಗಾಭ್ಯಾಸ

ಯರಗಟ್ಟಿ: ಅಂತಾರಾಷ್ಟ್ರೀಯ 12ನೇ ಯೋಗ ದಿನಾಚರಣೆಯ ಅಂಗವಾಗಿ ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಯೋಗಾಭ್ಯಾಸ ಅತ್ಯಂತ ಯಶಸ್ವಿಯಾಗಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ನ್ಯಾಯಾಧೀಶ ಕೃಷ್ಣಪ್ಪ ಪಮ್ಮಾರ ಚಾಲನೆ ನೀಡಿ ಮಾತನಾಡಿದ ಅವರು ಭಾರತೀಯರಾದ ನಾವು ವಿಶ್ವಕ್ಕೆ ಕೊಟ್ಟ ಏಕೈಕ ದಿನಾಚರಣೆ ಎಂದರೆ ಅದುವೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ. ಪ್ರಾಚೀನ ಕಾಲದಲ್ಲಿ ಯೋಗಕ್ಕೆ ಬಹಳಷ್ಟು ಪ್ರಾಮುಖ್ಯತೆ ನೀಡುತ್ತಿದ್ದರು ಇದು ಮನುಷ್ಯನನ್ನು ವ್ಯವಸ್ಥಿತವಾಗಿ ದೈಹಿಕವಾಗಿ ಮಾನಸಿಕವಾಗಿ ದೀರ್ಘ ಕಾಲದವರೆಗೆ ಬಾಳಿ ಬದುಕುವಂತೆ ನೆಮ್ಮದಿಯ ಜೀವನ ನೀಡುತ್ತಿತ್ತು. ಎಂದು ಹೇಳಿದರು

ಯೋಗದ ಮಹತ್ವ, ಆರೋಗ್ಯಕರ ಜೀವನದಲ್ಲಿ ಯೋಗದ ಪಾತ್ರ ಹಾಗೂ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಯಲ್ಲಿ ಯೋಗದ ಕೊಡುಗೆ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಲಾಯಿತು. ನಂತರ ತರಬೇತುದಾರರ ಮಾರ್ಗದರ್ಶನದಲ್ಲಿ ನ್ಯಾಯಾಲಯದ ಸಿಂಬದ್ದಿ ಹಾಗೂ ನ್ಯಾಯವಾದಿಗಳು ವಿವಿಧ ಯೋಗಾಸನಗಳು ಮತ್ತು ಪ್ರಾಣಾಯಾಮಗಳನ್ನು ಅಭ್ಯಾಸವನ್ನು ನಿವೃತ್ತ ಶಿಕ್ಷಕ ಎಸ್. ಎಸ್. ಕುರುಬಗಟ್ಟಿಮಠ ಮಾಡಿದರು.ಈ ವೇಳೆ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಸ್. ಆರ್. ರೆಬ್ಬಣ್ಣವರ, ಉಪಾಧ್ಯಕ್ಷ ವ್ಹಿ. ಜಿ. ಬಿರಾದಾರಪಾಟೀಲ, ಎಂ. ಎಂ. ಮಡಿವಾಳರ, ಈರಣ್ಣಾ ಗೌಡರ ಸೇರಿದಂತೆ ನ್ಯಾಯಾಲಯದ ಸಿಬ್ಬಂದಿ ವರ್ಗದವರು ಇದ್ದರು.



ಯರಗಟ್ಟಿ: ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ನ್ಯಾಯಾಧೀಶ ಕೃಷ್ಣಪ್ಪ ಪಮ್ಮಾರ ಚಾಲನೆ ನೀಡಿದರು.

ಸದೃಢ ಆರೋಗ್ಯಕ್ಕೆ ಯೋಗ ಉತ್ತಮ ಸಾಧನ

ಅಥಣಿ: ದೈಹಿಕಮತ್ತು ಮಾನಸಿಕಸದೃಢತೆಗಾಗಿ ಯೋಗ ಉತ್ತಮ ಸಾಧನವಾಗಿದ್ದು, ರೋಗ ಮುಕ್ತ ಸಮಾಜವನ್ನು ಕಟ್ಟಲು ಪ್ರತಿಯೊಬ್ಬರೂ ಪ್ರತಿನಿತ್ಯ ಯೋಗ ಅಭ್ಯಾಸ ರೂಡಿಸಿಕೊಳ್ಳಬೇಕು. ಯೋಗದ ಜೊತೆಗೆ ನಮ್ಮ ಜೀವನ ಶೈಲಿ ಮತ್ತು ಆಹಾರ ಪದ್ಧತಿಯನ್ನು ಸುಧಾರಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಪಟ್ಟಣದ ಕೆಎಲ್ಇ ಸಂಸ್ಥೆಯ ಎಸ್ ಎಸ್ ಎಮ್ ಎಸ್ ಮಹಾ ವಿದ್ಯಾಲಯದ ಕ್ರೀಡಾಂಗಣದಲ್ಲಿ ತಾಲೂಕ ಆಡಳಿತ, ಪತಂಜಲಿ ಯೋಗಸಮಿತಿಆಶ್ರಯದಲ್ಲಿಹಮ್ಮಿಕೊಳ್ಳಲಾಗಿದ್ದ 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಜನಸಾಮಾನ್ಯರಲ್ಲಿ ಶುಗರ್ ಮತ್ತು ಬಿಪಿ ಸೇರಿದಂತೆ ಅನೇಕ ಕಾಯಿಲೆಗಳು ಹೆಚ್ಚಾಗುತ್ತಿವೆ. ಆದ್ದರಿಂದ ಪ್ರತಿನಿತ್ಯ ಯೋಗವನ್ನು ರೂಡಿಸಿಕೊಳ್ಳುವುದರಿಂದ ಆರೋಗ್ಯಕರ ಜೀವನ ನಡೆಸುವುದರ ಜೊತೆಗೆ ಸದೃಢ ಸಮಾಜವನ್ನು ಕಟ್ಟಲು ಸಾಧ್ಯವಿದೆ ಎಂದರು.

ಪತಂಜಲಿ ಯೋಗ ಸಮಿತಿಯ ರಾಜ್ಯ ಉಸ್ತುವಾರಿ ಭವರಲಾಲ್ ಆರ್ಯ ಮಾತನಾಡಿ, ಪುರಾತನ ಕಾಲದ ಪತಂಜಲಿ ಮಹರ್ಷಿಗಳು ನೀಡಿದ ಈ ಯೋಗ ಸಂದೇಶವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಿದ ಕೀರ್ತಿ ನಮ್ಮ ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲುತ್ತದೆ ಎಂದರು.

ನಂತರ ಒಂದು ಗಂಟೆಗಳ ಕಾಲ ವಿವಿಧ ಯೋಗಾಸನ ಭಂಗಿಗಳನ್ನು ಪ್ರದರ್ಶನ ಮಾಡುವ ಮೂಲಕ ಶಾಲಾ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಯೋಗ ಅಭ್ಯಾಸಗಳ ಮಾರ್ಗದರ್ಶನ ಮಾಡಿದರು.

ಈ ಸಂದರ್ಭದಲ್ಲಿ ಕಾಡಸಿದ್ದೇಶ್ವರ ಸ್ವಾಮಿಜಿ, ಅಥಣಿ ಪುರಸಭೆಯ ಅಧ್ಯಕ್ಷ ಶಿವಲೀಲಾ ಬೂಟಾಳಿ, ಉಪಾಧ್ಯಕ್ಷೆ ಭುವನೇಶ್ವರಿ ಯಕ್ಕಂಚಿ, ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ, ಪಟ್ಟಣದ ಹಿರಿಯ ವೈದ್ಯ ಡಾ. ಮಲ್ಲಿಕಾರ್ಜುನ ಹಂಜಿ, ಯುವ ಮುಖಂಡ ಚಿದಾನಂದ ಸವದಿ, ತಹಶೀಲ್ದಾರ್ ಸಿದರಾಯ ಬೋಸಗಿ, ಡಿವೈಎಸ್ಪಿ ಪ್ರಶಾಂತ್ ಮುನ್ನೊಳ್ಳಿ, ತಾ. ಪಂ ಅಧಿಕಾರಿ ಶಿವಾನಂದ ಕಲ್ಲಾಪುರ, ಕ್ಷೇತ್ರ ಶಿಕ್ಷಣ ಅಧಿಕಾರಿ ಎಂ ಆರ್ ಮುಂಜೆ, ಸಿಪಿಐ ಸಂತೋಷ್ ಹಳ್ಳೂರ, ಪುರಸಭೆ ಅಧಿಕಾರಿ ಅಶೋಕ ಗುಡಿಮನಿ, ಆರೋಗ್ಯ ಅಧಿಕಾರಿ ಡಾ. ಬಸಗೌಡ ಕಾಗೆ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಆರ್ ಎಸ್ ಪಾಟೀಲ, ಪತಂಜಲಿ ಯೋಗ ಸಮಿತಿಯ ಅಧ್ಯಕ್ಷ ಎಸ್ ಕೆ ಹೊಳೆಪ್ಪನವರ, ಸುರೇಶ್ ಚಿಕ್ಕಟ್ಟಿ, ಶಿವಾನಂದ ಬುರ್ಲಿ, ಅಪ್ಪಾಸಾಹೇಬ ತಾಂಬಾಟ, ಶಿವಾನಂದ ಮಾಲಗಾವಿ, ಅಪ್ಪಾಸಾಹೇಬ ಅಲಿಬಾದಿ, ಸುರೇಖಾ ತಂಬಾಟ, ರೋಹಿಣಿ ಯಾದವಾಡ ಸೇರಿದಂತೆ ಅನೇಕ ಯೋಗ ಶಿಕ್ಷಕರು, ತಾಲೂಕ ಮಟ್ಟದ ಅಧಿಕಾರಿಗಳು, ವಿವಿಧ ಶಾಲಾ ಕಾಲೇಜಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ತಟ್ಟೆ ಇಡ್ಲಿ, ಮದ್ದೂರು ವಡೆ ಸವಿದ ವಿದ್ಯಾರ್ಥಿಗಳು

ವಿದ್ಯಾರ್ಥಿಗಳಿಗೆ ಶಾಸಕ ಲಕ್ಷ್ಮಣ ಸವದಿ ವಿಶೇಷ ಉಪಹಾರ ವ್ಯವಸ್ಥೆ ಮಾಡಿದ್ದರು. ಯೋಗ ಅಭ್ಯಾಸದ ಪ್ರಾತ್ಯಕ್ಷತೆಯ ನಂತರ ರಾಯಲ್ ಸಭಾಂಗಣದಲ್ಲಿ ವಿವಿಧ ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸರದಿ ಸಾಲಿನಲ್ಲಿ ನಿಂತು ತಟ್ಟೆ ಇಡ್ಲಿ, ಮದ್ದೂರು ವಡೆ, ದಾವಣಗೆರೆ ಬೆಣ್ಣೆ ದೋಸೆ ಸವಿದು ಮಕ್ಕಳು ಖುಷಿ ಪಟ್ಟರು.

ಪ್ರತಿಯೊಬ್ಬರೂ ಯೋಗಾಸನ ಮಾಡಿ

ರಾಮದುರ್ಗ: ಯುವ ಜನಾಂಗ ಪಿಜ್ಜಾ, ಬರ್ಗರ್‌ದಂತಹ ಆಹಾರ ಸೇವನೆ ಮಾಡುತ್ತ ಆರೋಗ್ಯದ ಕಾಳಜಿ ನಿರ್ಲಕ್ಷ ಮಾಡುತ್ತಿರುವುದು ಒಂದಡೆಯಾದರೆ ಕಲುಷಿತ ವಾತಾವರಣ, ಆಹಾರ ಸೇವನೆ ಪರಿಣಾಮ ಆರೋಗ್ಯದಲ್ಲಿ ವ್ಯತ್ಯಾಸವಾಗುವುದನ್ನು ಸರಿಪಡಿಸಲಿ ಪ್ರತಿಯೊಬ್ಬರೂ ಯೋಗಾಸನ ಮಾಡಬೇಕೆಂದು ಡಿಸಿಸಿ ಬ್ಯಾಂಕ ನಿರ್ದೇಶಕ ಮಲ್ಲಣ್ಣ ಯಾದವಾಡ ಹೇಳಿದರು.

ಭಾನುವಾರ ಪಟ್ಟಣದ ಬಸವೇಶ್ವರ ಶಾಲಾ ಮೈದಾನದಲ್ಲಿ ಪತಂಜಲಿ ಯೋಗ ಪ್ರತಿಷ್ಠಾನ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಐದು ದಿನಗಳ ಕಾಲ ನಡೆದ ಯೋಗಭ್ಯಾಸದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರತಿಯೋಬ್ಬರು ಪ್ರತಿ ದಿನ ಯೋಗಭ್ಯಾಸ ಮಾಡುವ ಮೂಲಕ ಸುಖಿ ಜೀವನ ನಡೆಸಲು ಸಾಧ್ಯವೆಂದರು.

ವೀರಕ್ತಮಠ ಟ್ರಸ್ಟ್ ಅಧ್ಯಕ್ಷ ಪ್ರದೀಪಕುಮಾರ ಪಟ್ಟಣ ಮಾತನಾಡಿ ಯುವಜನರು ಉತ್ತಮ ಆರೋಗ್ಯಕ್ಕಾಗಿ ಗುಟ್ಕಾ, ತಂಬಾಕುದಂತಹ ದುಶ್ಚಟಗಳಿಂದ ದೂರವಿದ್ದು ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಯೋಗ ಅವಶ್ಯವಿದೆ ಎಂದು ಹೇಳಿದರಲ್ಲದೆಭವಿಷ್ಯದಯುವಜನಾಂಗದ ಆರೋಗ್ಯ ಕಾಪಾಡಲು ರಾಮದುರ್ಗದಲ್ಲಿ ನಿರ್ಮಾಣವಾಗುತ್ತಿರುವ ಯೋಃ ಭವನ ಯೋಗ ಗುರುಗಳ ಕೋಟೂರ ಅವರ ಕನಸಿನ ಕುಸಾಗಿದ್ದು ಭವನ ನಿರ್ಮಾಣಕ್ಕೆ ಅಗತ್ಯ ಸಹಾಯ ಸಹಕಾರ ಪಟ್ಟಣ ಕುಟುಂಬದಿಂದ ನೀಡಲಾಗುವುದು ಎಂದು ಹೇಳಿದರು.

ಪಂಚಮಸಾಲಿ ಸಮಾಜದ ತಾಲೂಕಾ ಅಧ್ಯಕ್ಷ ಸಿ. ಬಿ. ಪಾಟೀಲ ಮಾತನಾಡಿ ಯೋಗದಿಂದ ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯ ಸದೃಡವಾಗಿರುಲು ಅವಶ್ಯವಾಗಿದೆ. ಆರೋಗ್ಯವಾಗಿರಲು ಯೋಗಭ್ಯಾಸ ನಿರಂತರವಾಗಿ ನಡೆಯಲಿ ಮತ್ತು ಯೋಗಭ್ಯಾಸವನ್ನು ಅರಣ್ಯ ಪ್ರದೇಶದಲ್ಲಿ ಮಾಡಿದರೆ ಒಳ್ಳೇಯ ವಾಯು ಸೇವನೆಯಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಹೇಳಿದರು.

ಪತಂಜಲಿ ಯೋಗ ಪ್ರತಿಷ್ಠಾನದ ಅಧ್ಯಕ್ಷ ಡಾ. ಬಿ. ಎಲ್. ಸಂಕನಗೌಡ್ರ, ಚಂದ್ರು ಮಾಳದಕರ, ಗೋಪಾಲ ಬಿಂದಗಿ, ವೆಂಕಟೇಶ ಹಿರೇರಡ್ಡಿ, ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ಆನಂದ ನಾಯಕ, ಡಾ. ಶೀವಲೀಲಾ ಕಂಬಿ, ಗೀತಾ ಗುರುಮಠ, ರಾಜೇಶ ಬೀಳಗಿ ಸೇರಿದಂತೆ ಹಲವರಿದ್ದರು.



ಕಾಡು ರಕ್ಷಣೆಗೆ ಹುಲಿ ಸಹಕಾರಿ

ಗೋಕಾಕ: ಕಾಡು ರಕ್ಷಣೆಯಲ್ಲಿ ಮನುಷ್ಯನ ಪಾತ್ರ ಎಷ್ಟು ಮುಖ್ಯವೋ ಅಷ್ಟೇ ಕಾಡು ಪ್ರಾಣಿಗಳ ಪಾತ್ರವು ಪ್ರಮುಖವಾಗಿದೆ. ಆಹಾರ ಸರಪಣಿಯಲ್ಲಿ ಅಗ್ರ ಸ್ಥಾನದಲ್ಲಿರುವ ಹುಲಿ ಪರೋಕ್ಷವಾಗಿ ಕಾಡು ರಕ್ಷಣೆಗೆ ಸಹಕಾರಿಯಾಗಿದೆ ಎಂದು ಪೋಲೀಸ್ ವೃತ್ತ ನಿರೀಕ್ಷಕ ಸುರೇಶ ಆರ್.ಬಿ ಅಭಿಪ್ರಾಯಪಟ್ಟರು.

ಅವರು ನಗರದ ಬಣಗಾರ ಗಲ್ಲಿಯ ಶ್ರೀ ಶಂಕರಲಿಂಗ ಪ್ರೌಢಶಾಲೆಯಲ್ಲಿ ಅರಣ್ಯ ರಕ್ಷಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇನ್ಸ್ಪೆಕ್ಟರ್ ಪೊಲೀಸ್ ಅಧಿಕಾರಿ ಕಿರಣ ಮೋಹಿತೆ ಮಾತನಾಡಿ, ಪ್ರಕೃತಿಯ ಸಮತೋಲನದಲ್ಲಿ ಕಾಡುಗಳು ಹಾಗೂ ಕಾಡು ಪ್ರಾಣಿಗಳು ಮಹತ್ವದ ಪಾತ್ರ ವಹಿಸುತ್ತವೆ. ಅರಣ್ಯ ರಕ್ಷಣೆಯ ಹಾಗೆ ಅರಣ್ಯ ಪ್ರಾಣಿಗಳನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಮಕ್ಕಳು ಈ ದಿಶೆಯಲ್ಲಿ ಕಾರ್ಯನಿರ್ವಹಿಸಬೇಕು ಮತ್ತು ಜಾಗೃತಿ ಅಭಿಯಾನದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಆರೋಗ್ಯ ಇಲಾಖೆಯ ಅಂಗಡಿಯವರು ಮಾತನಾಡಿ ಸೊಳ್ಳೆಗಳಿಂದ ಹರಡಬಹುದಾದ ರೋಗಗಳು ಮತ್ತು ಮುಂಜಾಗ್ರತೆಯ ಬಗ್ಗೆ ತಿಳಿಹೇಳಿದರು. ಕಾರ್ಯಕ್ರಮವನ್ನು ಅರಣ್ಯ ರಕ್ಷಕ ಅಪ್ಪಣ್ಣಾ ಸಂಕ್ರಿ ಆಯೋಜಿಸಿದ್ದರು. ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ಬಿ.ಎಮ್.ಹಿಂಡಿಹೊಳಿ ವಹಿಸಿದ್ದರು. ಮುಖ್ಯೋಪಾಧ್ಯಾಯ ಆರ್.ಎಸ್.ಹೆಬ್ಬಾಳೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಉಪಾಧ್ಯಕ್ಷ ಡಾ. ಆಯ್. ಎಸ್. ಹೆಬ್ಬಳ್ಳಿ, ಸಹ ಕಾರ್ಯದರ್ಶಿ ಆರ್. ಎಮ್. ಬಿಳ್ಳೂರ, ನಿರ್ದೇಶಕರಾದ ಆರ್.ಜಿ.ದೊಡಮನಿ ಮತ್ತು ಎಮ್. ಎಸ್. ಆಲತಗಿ, ಪ್ರಧಾನ ಗುರುಗಳಾದ ಸಿ.ಎಲ್.ಮಗದುಮ್ ಉಪಸ್ಥಿತರಿದ್ದರು. ಆಯ್.ಎಸ್.ಜನ್ಮಟ್ಟಿ ಸ್ವಾಗತಿಸಿ ವಂದಿಸಿದರು. ಕೆ. ಎಚ್. ಅಖಾನಿ ಕಾರ್ಯಕ್ರಮ ನಿರ್ವಹಣೆ ಮಾಡಿದರು.





ಚಿಕ್ಕೋಡಿ: ತಾಲೂಕಿನ ಯಕ್ಸಂಬಾ ಪಟ್ಟಣದಲ್ಲಿ ಜೊಲ್ಲೆ ಶಿಕ್ಷಣ ಸಂಸ್ಥೆಯ ಶಿವಶಂಕರ ಜೊಲ್ಲೆ ಇಂಗ್ಲಿಷ್ ಮಾಧ್ಯಮ ಪಬ್ಲಿಕ್ ಶಾಲೆ (ಸಿಬಿಎಸ್‌ಇ)ಯ ಆವರಣದಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಿಮಿತ್ತ ಯೋಗಪಟು ಬಾಳಾಸಾಹೇಬ ಪಾಟೀಲ ಅವರು ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಸಿಬ್ಬಂದಿಗೆ ಯೋಗ ತರಬೇತಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷ ಜ್ಯೋತಿಪ್ರಸಾದ ಜೊಲ್ಲೆ, ಬಹದ್ದೂರ ಗುರವ, ಸಂಯೋಜನಾಧಿಕಾರಿ ಎಮ್ ಎಮ್ ಪಾಟೀಲ, ಪ್ರಿಯಾ ಜೊಲ್ಲೆ, ಬಾಬುರಾವ್ ಮಾಳಿ ಇದ್ದರು.



ಬಗಳಿ: ಗ್ರಾಮದ ಆದರ್ಶ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಶನಿವಾರ ಸಂಭ್ರಮದಿಂದ ಆಚರಿಸಲಾಯಿತು. ಸಂಸ್ಥೆಯ ಕಾರ್ಯದರ್ಶಿ ಶಿವಪ್ರಸಾದ್ ತೆಲಸಂಗ , ಶಾಲೆಯ ಶಿಕ್ಷಕ ವೃಂದ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ



ನೇಸರಗಿ: ಇಲ್ಲಿನ ಎಪಿಎಂಸಿ ಆವರಣದಲ್ಲಿ ಭಾನುವಾರ ಗ್ರಾಮದ ಅನೇಕ ಯೋಗ ನುರಿತ ಶಿಕ್ಷಕರು, ಗಣ್ಯರು, ರಾಜಕೀಯ ಮುಖಂಡರ, ವಿದ್ಯಾರ್ಥಿಗಳ ನೇತೃತ್ವದಲ್ಲಿ 12 ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾಜಿ ಗ್ರಾಪಂ ಅಧ್ಯಕ್ಷ ವೀರಭದ್ರ ಚೋಭಾರಿ, ಜಿಲ್ಲಾ ಬಿಜೆಪಿ ಎಸ್ ಟಿ ಮೋರ್ಚಾ ಅಧ್ಯಕ್ಷ ಅಡಿವಪ್ಪ ಚಿಗರಿ, ಮಲ್ಲಿಕಾರ್ಜುನ ಸೋಮಣ್ಣವರ,ತೆಜಪ್ಪಗೌಡ ಪಾಟೀಲ, ಸುರೇಶ ಲೆಂಕನಟ್ಟಿ, ಶಿಕ್ಷಕ ಸಂತೋಷ ಪಾಟೀಲ,ಮಲ್ಲಿಕಾರ್ಜುನ ಸತ್ತಿಗೇರಿ, ಚೇತನ ಕೊಳದೂರ,ಅನೇಕ ವಿದ್ಯಾರ್ಥಿಗಳು, ಯುವಕರು,ಯೋಗ ಆಸಕ್ತರು ಭಾಗವಹಿಸಿದ್ದರು.



ಯಮಕನಮರಡಿ : ಸ್ಥಳೀಯ ಪೊಲೀಸ್ ಠಾಣೆ ಗ್ರೌಂಡ್‌ನಲ್ಲಿ ಸಿಬ್ಬಂದಿ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಯೋಗಾಭ್ಯಾಸ ಮಾಡಲಾಯಿತು.

ಹೊಸ ಪ್ರಾದೇಶಿಕ ಪಕ್ಷದ ಕುರಿತು ಚರ್ಚೆ



ರಾಯಬಾಗ: ರಾಜ್ಯ ರಾಜಕೀಯ ಬೆಳವಣಿಗೆಗಳ ನಡುವೆ ಹೊಸ ಪ್ರಾದೇಶಿಕ ಪಕ್ಷದ ಸ್ಥಾಪನೆ ಕುರಿತು ಚಲನಚಿತ್ರ ನಟ ಹಾಗೂ ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಹಾಗೂ ಡಿಎಸ್ ಎಸ್ ರಾಜ್ಯಾಧ್ಯಕ್ಷ ರಾಜು ತಳವಾರ್ ಅವರು ರಾಯಬಾಗದಲ್ಲಿ ಮಹತ್ವದ ಚರ್ಚೆ ನಡೆಸಿದರು. ಸಾಮಾಜಿಕ ನ್ಯಾಯ, ರೈತರು, ಕಾರ್ಮಿಕರು, ಯುವಕರು ಹಾಗೂ ಹಿಂದುಳಿದ ವರ್ಗಗಳ ಧ್ವನಿಯನ್ನು ಬಲಪಡಿಸುವ ಉದ್ದೇಶದಿಂದ ಹೊಸ ಪ್ರಾದೇಶಿಕ ರಾಜಕೀಯ ಪರ್ಯಾಯದ ಅಗತ್ಯತೆ ಕುರಿತು ಉಭಯ ನಾಯಕರು ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ವಿವಿಧ ಸಾಮಾಜಿಕ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದು, ರಾಜ್ಯದ ಜನರ ಆಶೋತ್ತರಗಳಿಗೆ ಸ್ಪಂದಿಸುವ ರಾಜಕೀಯ ವೇದಿಕೆ ನಿರ್ಮಾಣದ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಹಲ್ಯಾಳ: ಸ್ಥಳೀಯ ಪ್ರೌಢ ಶಾಲೆ ಹಲ್ಯಾಳದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ವಿವಿಧ ಯೋಗಾಸನಗಳು ಮತ್ತು ಪ್ರಾಣಾಯಾಮಗಳನ್ನು ಅಭ್ಯಾಸ ಮಾಡಿ ಯೋಗದ ಮಹತ್ವವನ್ನು ಅರಿತುಕೊಂಡರು.

ಶಾಲೆಯ ಮುಖ್ಯೋಪಾಧ್ಯಾಯರಾದ ಅನಿಲ ಮೇಲಿನಕೇರಿ ಯೋಗವು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡುವ ಅತ್ಯುತ್ತಮ ಸಾಧನವಾಗಿದ್ದು, ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.ದೈಹಿಕ ಶಿಕ್ಷಕರಾದ ಎಸ್. ಜಿ. ಗಾಣಿಗೇರ ಅವರ ಮಾರ್ಗದರ್ಶನದಲ್ಲಿ ತಾಡಾಸನ, ವೃಕ್ಷಾಸನ, ಭುಜಂಗಾಸನ ಸೇರಿದಂತೆ ಹಲವು ಯೋಗಾಸನಗಳ ಪ್ರದರ್ಶನ ನಡೆಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಯೋಗದ ಮೂಲಕ ಆರೋಗ್ಯಕರ ಜೀವನ ನಡೆಸುವ ಸಂಕಲ್ಪ ಕೈಗೊಂಡರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ನಿತ್ಯ ಯೋಗ ಮಾಡಿ



ಕಕಮರಿ: ಆರೋಗ್ಯಕರ ಜೀವನ ನಡೆಸಲು ದಿನ ನಿತ್ಯ ಯೋಗ ಮಾಡಬೇಕು. ಮನುಷ್ಯ ದೈಹಿಕವಾಗಿ ಮಾನಸಿಕವಾಗಿ ಸದೃಡವಾಗಿರಬೇಕಾದರೆ ಯೋಗ ಅತೀ ಅವಶ್ಯಕವಾಗಿದೆ ಎಂದು ತೆಲಸಂಗ ಡಾ. ಬಿ.ಎಸ್.ಕಾಮನ ಹೇಳಿದರು.

ಅವರು ಗ್ರಾಮದ ಶ್ರೀ ಅಮ್ಮಾಜೇಶ್ವರಿ ಪ್ರೌಢಶಾಲೆಯ ಮೈದಾನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಯುವಕರು ಯೋಗ ಮತ್ತು ವ್ಯಾಯಾಮವನ್ನು ದಿನನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು.ತೆಲಸಂಗ ಕೇಶವ ಉಂಡೋಡಿ ಮಾತನಾಡಿ ವಿಧ್ಯಾರ್ಥಿಗಳಂತೂ ಯೋಗ ಮಾಡಲೇಬೇಕು. ಯೋಗದಿಂದ ಮನಸ್ಸು ಏಕಾಗ್ರತೆ ಹೊಂದಿ ಓದಿನತ್ತ ಮನಸ್ಸು ಕೇಂದ್ರಿಕೃತವಾಗುತ್ತದೆ. ಯಶಸ್ಸನ್ನು ಸಾಧಿಸಿ ಗುರಿಮುಟ್ಟಬಹುದು ಎಂದರು. ಸಂಸ್ಥೆಯ ಅಧ್ಯಕ್ಷ ಅಪ್ಪಾಸಾಬ ಈರಗೌಡ, ಶಾಲೆಯ ಶಿಕ್ಷಕವೃಂದದವರು, ವಿಧ್ಯಾರ್ಥಿಗಳು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಯಮಕನಮರಡಿ : ಆನಂದಪೂರ ಗ್ರಾಮದ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ ಆನಂದಪೂರ ಹತ್ತರಗಿಸಾ ಸುಶೀಲಾ ಸಿದ್ದಪ್ಪ ಮಲಕಾರ ಕನ್ನಡ ಮಾಧ್ಯಮ ಕಾನ್ವೆಂಟ್ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷ ಮಹಾದೇವ ರಾ ಪಟೋಳಿ ಹಾಗೂ ಆಡಳಿತ ಮಂಡಳಿ ಸದಸ್ಯ, ಶಾಲಾ ಸಿಬ್ಬಂದಿ ಹಾಗೂ ಮಕ್ಕಳು ಇದ್ದರು.



ಕಿರುಸುದ್ದಿ

ಸ್ವ-ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನ

• **ಬೆಳಗಾವಿ :** ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ ಬೆಳಗಾವಿ ವತಿಯಿಂದ ಅಣಬೆ ಕೃಷಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದ್ದು ಗ್ರಾಮೀಣ ಪ್ರದೇಶದ ಹೊಂದಿರುವ ಯುವಕ ಯುವತಿಯರಿಗೆ, ನಿರುದ್ಯೋಗಿಗಳಿಗೆ ಮತ್ತು ಕೃಷಿಕರಿಗೆ ಸ್ವಉದ್ಯೋಗ ತರಬೇತಿ ನೀಡುವ ಉದ್ದೇಶದಿಂದ ಬೆಳಗಾವಿಯ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯು (ಕೆನರಾ ಬ್ಯಾಂಕ್ ಆರ್‌ಸೆಟಿ, ಬೆಳಗಾವಿ) ವತಿಯಿಂದ ಅಣಬೆ ಕೃಷಿ ತರಬೇತಿಗೆ 10 ದಿನಗಳ ತರಬೇತಿಯನ್ನು ಜುಲೈ 1 ರಂದು ಹಮ್ಮಿಕೊಳ್ಳಲಾಗಿದ್ದು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ (ಕೆನರಾ ಬ್ಯಾಂಕ್ ಆರ್‌ಸೆಟಿ, ಬೆಳಗಾವಿ), ಪ್ಲಾಟ್ ನಂ. ಸಿ-03 (ಪಾರ್ಟ್) ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ಆಟೋ ನಗರ, ಬೆಳಗಾವಿ-ದೂರವಾಣಿ ಸಂಖ್ಯೆ ಸಂಪರ್ಕಿಸಬಹುದಾಗಿದೆ ಎಂದು ನಿರ್ದೇಶಕರು ಕೆನರಾ ಬ್ಯಾಂಕ್ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇ-ಕೆವೈಸಿ : ವಂಚನೆಗೆ ಬಲಿಯಾಗದಿರಿ

• **ಖಾನಾಪುರ:** ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳಲ್ಲಿ ಅನರ್ಹ ಫಲಾನುಭವಿಗಳನ್ನು ಗುರುತಿಸಿ ತಡೆಯುವ ಉದ್ದೇಶದಿಂದ ರಾಜ್ಯಾದ್ಯಂತ ವಿಶೇಷ ಅಭಿಯಾನವನ್ನು ಶೀಘ್ರದಲ್ಲೇ ಆರಂಭಿಸಲಾಗುವುದಾಗಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಮಾಹಿತಿ ನೀಡಿದ್ದಾರೆ. ಆದರೆ ಈ ಯೋಜನೆಗಳ ಫಲಾನುಭವಿಗಳಿಗೆ ತಾಲೂಕಿನ ಕೆಲವರು 'ಇ-ಕೆವೈಸಿ' ಹೆಸರಿನಲ್ಲಿ ಹಣ ವಸೂಲಿ ಮಾಡುವ ದಂಧೆ ಆರಂಭಿಸಿರುವುದು ಗಮನಕ್ಕೆ ಬಂದಿದೆ. ಆದರೆ ನಾಗರಿಕರು ಇಂತಹ ವಂಚನೆಗಳಿಗೆ ಬಲಿಯಾಗಬಾರದು ಹಾಗೂ ಇ-ಕೆವೈಸಿಗಾಗಿ ಆತುರಪಡಬಾರದು ಎಂದು ಪಂಚಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಘಟಕದ ಅಧ್ಯಕ್ಷ ಸೂರ್ಯಕಾಂತ ಕುಲಕರ್ಣಿ ತಿಳಿಸಿದ್ದಾರೆ. ಈ ಕುರಿತು ಭಾನುವಾರ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಅವರು, "ಸರ್ಕಾರದಿಂದ ಶೀಘ್ರದಲ್ಲೇ ಅಧಿಕೃತ ಮರುಪರಿಶೀಲನಾ ಕಾರ್ಯ ಆರಂಭವಾಗಲಿದೆ. ಸರ್ಕಾರದಿಂದಲೇ ಫಲಾನುಭವಿಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಈ ಕಾರ್ಯಕ್ಕಾಗಿ ಸರ್ಕಾರದ ಅಧಿಕೃತ ತಂಡಗಳು ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿವೆ. ಫಲಾನುಭವಿಗಳಿಂದ ಸಹಿಯೊಂದಿಗೆ ಸ್ವಯಂ ಘೋಷಣಾ ಪತ್ರ ಪಡೆಯಲಿವೆ. ಫಲಾನುಭವಿಗಳು ತಾಳ್ಮೆಯಿಂದ ಇರಬೇಕು" ಎಂದು ವಿವರಿಸಿದರು.

ಸವದಿಯವರಿಗೆ ಸಚಿವ ಸ್ಥಾನ ನೀಡಲು ಗಾಣಿಗರ ಆಗ್ರಹ

• **ಖಾನಾಪುರ:** ರಾಜ್ಯ ಸಚಿವ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಹಿಂದು ಲಿಂಗಾಯತ ಗಾಣಿಗ ಸಮುದಾಯದ ಮುಖಂಡರಾದ ಅಥಣಿ ಶಾಸಕ ಲಕ್ಷ್ಮಣ ಸವದಿ ಅವರಿಗೆ ಸಂಪುಟ ದರ್ಜೆಯ ಸಚಿವ ಸ್ಥಾನ ನೀಡಬೇಕು ಎಂದು ಖಾನಾಪುರ ತಾಲೂಕು ಗಾಣಿಗ ಅಭಿವೃದ್ಧಿ ಸಂಘದ ಅಧ್ಯಕ್ಷ ಅಡಿವೆಪ್ಪ ಕೋಟಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರನ್ನು ಆಗ್ರಹಿಸಿದರು. ಪಟ್ಟಣದಲ್ಲಿ ಭಾನುವಾರ ಆಯೋಜಿಸಿದ್ದ ಸಮುದಾಯದ ಮುಖಂಡರ ಸಭೆ ಉದ್ದೇಶಿಸಿ ಮಾತನಾಡಿದ ಅವರು, "ರಾಜ್ಯದಲ್ಲಿ ಈ ಸಮುದಾಯವನ್ನು ಪ್ರತಿನಿಧಿಸುತ್ತಿರುವ ಲಕ್ಷ್ಮಣ ಸವದಿ ಈ ಹಿಂದೆ ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಹಲವು ಖಾತೆಗಳ ಸಚಿವರಾಗಿ ಬಹಳಷ್ಟು ಪರಿಣಾಮಕಾರಿ ಆಡಳಿತ ನಡೆಸಿದ್ದಾರೆ. ಸವದಿ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಸಮುದಾಯ ಒಟ್ಟುಗೂಡಿಸಿದ ಆಗ್ರಹಿಸುತ್ತಿದೆ. ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ ಹೈಕಮಾಂಡ್ ನಮ್ಮ ಮನವಿಯನ್ನು ಪರಿಗಣಿಸಿ ನಮ್ಮ ಸಮುದಾಯದ ಜನತೆಯ ಬೇಡಿಕೆಯನ್ನು ಈಡೇರಿಸಬೇಕು" ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಗಂಗಾಧರ ಮಡ್ಡೀಮನಿ, ವಿಜಯ ಮುತಗಿ, ಪ್ರಕಾಶ ಹೊಸಮನಿ, ಪ್ರಕಾಶ ಕಾದ್ರೊಳ್ಳಿ, ಶಿವಪುತ್ರ ಸವದಿ, ರಾಜೇಶ ಜಾಂಬೋಟಕರ, ಮಲ್ಲಿಕಾರ್ಜುನ ಮುತಗಿ, ವೈಜಪ್ಪ ಗಾಣಗಿ ಸೇರಿದಂತೆ ಸಮುದಾಯದ ಮುಖಂಡರು ಇದ್ದರು.

ಅಪಘಾತ: ಓರ್ವ ಸಾವು

• **ಖಾನಾಪುರ:** ತಾಲೂಕಿನ ಲೋಕೊಳ್ಳಿ ಕ್ರಾಸ್ ಬಳಿ ಜಾಂಬೋಟಿ-ಜತ್ತ ರಾಜ್ಯ ಹೆದ್ದಾರಿಯಲ್ಲಿ ಶನಿವಾರ ಟಿಪ್ಪರ್ ಮತ್ತು ಬೈಕ್ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಲೋಕೊಳ್ಳಿ ಗ್ರಾಮದ ನಿವಾಸಿ ಸಾತೇರಿ ಗುರವ (65) ತಮ್ಮ ಬೈಕ್‌ನಲ್ಲಿ ಮನೆಯಿಂದ ಹೊಲಕ್ಕೆ ಹೊರಟಿದ್ದ ಸಂದರ್ಭದಲ್ಲಿ ಟಿಪ್ಪರ್ ಅಪ್ಪಳಿಸಿದೆ. ಘಟನಾ ಸ್ಥಳಕ್ಕೆ ಖಾನಾಪುರ ಠಾಣೆಯ ಪೊಲೀಸರು ಭೇಟಿ ನೀಡಿ ತನಿಖೆ ಕೈಗೊಂಡಿದ್ದಾರೆ. ಟಿಪ್ಪರ್ ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ.



ಚಿಕ್ಕೋಡಿ: ಪಟ್ಟಣದ ಕೇಶವ ಕಲಾ ಭವನದಲ್ಲಿ ಶನಿವಾರ ಸಿದ್ಧಿವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 24ನೇ ವಾರ್ಷಿಕ ಸರ್ವಸಾಧಾರಣಾ ಸಭೆ ನಡೆಯಿತು. ಸಿದ್ಧಿವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಸಂಸ್ಥಾಪಕ ಅಧ್ಯಕ್ಷ ಸಂಜಯ ಅಡಕೆ ಅಧ್ಯಕ್ಷತೆ ವಹಿಸಿದ್ದರು. ಸಂಘದ ನಿರ್ದೇಶಕರಾದ ಶ್ರೀಕಾಂತ ಕುಲಕರ್ಣಿ, ಪ್ರಕಾಶ ಹುಬರಟ್ಟಿ, ಅಪ್ಪಾಸಾಹೇಬ ಚವ್ಹಾಣ, ಅರುಣ ನೇರ್ಲಿ, ಸುನೀಲ ರಜಪೂತ, ಸಂಜಯ ತೇಲಿ, ಗೋವಿಂದ ಅಡಕೆ ಸೇರಿದಂತೆ ಇತರರು ಇದ್ದರು.

ರಸ್ತೆ-ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ

• **ಬೆಳಗಾವಿ:** ತಾಲೂಕಿನ ಸುಕ್ಷೇತ್ರ ದತ್ತ ಮಹಾರಾಜರ ಪವಾಡ ಪುರುಷರ ನೆಲೆಯಾದ ದತ್ತಾತ್ರೇಯ ಬಾಳೇಕುಂದ್ರಿ, ಗ್ರಾಮದ ಶ್ರೀರಾಮ ಕಾಲೋನಿಯಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭಾನುವಾರ ಚಾಲನೆ ನೀಡಲಾಯಿತು.ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಮಾರ್ಗದರ್ಶನದಲ್ಲಿ ಕೈಗೆತ್ತಿಕೊಳ್ಳಲಾದ ಈ ಅಭಿವೃದ್ಧಿ ಕಾಮಗಾರಿಗೆ ಗ್ರಾಮ ಪಂಚಾಯತಿ ಅಧ್ಯಕ್ಷೆ ಗುಲಾಬಿ ಅಶೋಕ ಕೋಲಕಾರಕಾರ ಅವರ ನೇತೃತ್ವದಲ್ಲಿ ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಹಿಂದೂಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಹಾಗೂ ಮುಸ್ಲಿಂ ಸಮುದಾಯದ ಮುಖಂಡರು ಸಹ ಭಾಗವಹಿಸಿ ಸೌಹಾರ್ದತೆಯ ಸಂದೇಶ ಸಾರಿದರು.ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮಸ್ಥರು, ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ನಿರಂತರವಾಗಿ ಸಾರ್ವಜನಿಕರೊಂದಿಗೆ ಬೆರೆತು ಕ್ಷೇತ್ರದ ಜನತೆಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಜನಪರ ಆಡಳಿತ ನೀಡುತ್ತಿದ್ದಾರೆ ಎಂದು ಹೇಳಿದರು. ಈ ವೇಳೆ ಹೊಸಗೌಡ ಪಾಟೀಲ, ಸುರೇಶ್ ಕಾಕೋಜಿ, ಪ್ರೇಮ ಕೋಲಕಾರಕಾರ, ಮಲ್ಲಯ್ಯಾ ಪೂಜಾರಿ, ಪುನಗೌಡ ಪಾಟೀಲ, ಪ್ರಲ್ಹಾದ್ ಪಾಟೀಲ, ರಫೀಕ ಮುಲ್ಲಾ, ಮೈನುದ್ದೀನ ಸನದಿ, ಉಮೇಶ ಕೊಟಗಿ, ಮಹೇಶ್ ಕೊಟಗಿ, ಶ್ರೀಕಾಂತ ಅರಭಾವಿ ಸೇರಿದಂತೆ ಅನೇಕ ಗಣ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಬೆಳಗಾವಿ: ತಾಲೂಕಿನ ಸುಕ್ಷೇತ್ರ, ದತ್ತ ಮಹಾರಾಜರ ಪವಾಡ ಪುರುಷರ ನೆಲೆಯಾದ ದತ್ತಾತ್ರೇಯ ಬಾಳೇಕುಂದ್ರಿ, ಗ್ರಾಮದ ಶ್ರೀರಾಮ ಕಾಲೋನಿಯಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭಾನುವಾರ ಚಾಲನೆ ನೀಡಲಾಯಿತು.

ಜನಪ್ರತಿನಿಧಿಗಳು ಪಕ್ಷಾತೀತವಾಗಿ ಕನ್ನಡದ ರಕ್ಷಣೆಗೆ ಮುಂದಾಗಲಿ

• **ಬೆಳಗಾವಿ:** ಬೆಳಗಾವಿಯಲ್ಲಿ ಕನ್ನಡ ಕಡ್ಡಾಯಗೊಳಿಸುವುದನ್ನು ವಿರೋಧಿಸಿ ಎಂಇಎಸ್ ಸಂಘಟನೆ ಮಹಾಮೋರ್ಚಾ ಹಮ್ಮಿಕೊಂಡಿರುವುದಕ್ಕೆ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ತೀವ್ರ ವಿರೋಧ ವ್ಯಕ್ತಪಡಿಸಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಕನ್ನಡದ ರಕ್ಷಣೆಗೆ ಮುಂದಾಗಬೇಕು ಎಂದು ಕರವೇ ಜಿಲ್ಲಾ ಅಧ್ಯಕ್ಷ ದೀಪಕ ಗುಡಗನಟ್ಟಿ ಆಗ್ರಹಿಸಿದರು.

ಭಾನುವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದು, ಕನ್ನಡದ ನೆಲದಲ್ಲಿ ಕನ್ನಡ ಭಾಷೆಗೆ ವಿರುದ್ಧವಾಗಿ ನಡೆಯುವ ಯಾವುದೇ ಚಟುವಟಿಕೆಯನ್ನು ಸಹಿಸಲಾಗುವುದಿಲ್ಲ ಎಂದು ಹೇಳಿದರು.

ರಾಜ್ಯೋತ್ಸವದ ಸಂದರ್ಭದಲ್ಲಿ ಎಂಇಎಸ್ ಸಂಘಟನೆಗೆ ಕರಾಳ ದಿನಾಚರಣೆ ನಡೆಸಲು ಅವಕಾಶ ನೀಡುವುದಿಲ್ಲ ಎಂದು ಸರ್ಕಾರ ಹೇಳಿದ್ದರೂ, ನಂತರ ವಿವಿಧ ಸಂದರ್ಭಗಳಲ್ಲಿ ಅವಕಾಶ ನೀಡಿರುವುದು ಕನ್ನಡಿಗರ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಅಸಮಾಧಾನ ಹೊರ ಹಾಕಿದರು.

ಕನ್ನಡ ಕಡ್ಡಾಯಕ್ಕೆ ವಿರೋಧ ವ್ಯಕ್ತಪಡಿಸಿ ಮಹಾಮೋರ್ಚಾ ನಡೆಸಲು ಅವಕಾಶ ನೀಡಿರುವುದು ಕನ್ನಡಿಗರಿಗೆ ಮಾಡಿದ ಅಪಮಾನವಾಗಿದೆ. ಈ ಕುರಿತು ಸರ್ಕಾರ ಹಾಗೂ ಜಿಲ್ಲಾಡಳಿತ ಸ್ಪಷ್ಟ ನಿಲುವು ತಾಳಬೇಕು ಎಂದು ಅವರು ಒತ್ತಾಯಿಸಿದರು.

ಬೆಳಗಾವಿಯಲ್ಲಿ ವಾಸಿಸುವ ಪ್ರತಿಯೊಬ್ಬರೂ



ಕನ್ನಡದ ವಿಷಯ ಬಂದಾಗ ಬೆಳಗಾವಿಯ ಮಂತ್ರಿಗಳು, ಸಂಸದರು, ಶಾಸಕರು ಸೇರಿದಂತೆ ಹಲವು ಜನಪ್ರತಿನಿಧಿಗಳು ಮೌನ ವಹಿಸುತ್ತಿದ್ದಾರೆ ಎಂದು ಆರೋಪಿಸಿದ ಅವರು, ತಮ್ಮ ನಿಲುವು ಸ್ಪಷ್ಟಪಡಿಸದಿದ್ದರೆ ಕನ್ನಡಿಗರು ಸೂಕ್ತ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಬೆಳಗಾವಿಯಲ್ಲಿ ಕನ್ನಡ ಕಡ್ಡಾಯಗೊಳಿಸಲು ಯಾರ ಅನುಮತಿಯೂ ಅಗತ್ಯವಿಲ್ಲ, ಇಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಕನ್ನಡದ ವಿರುದ್ಧ ಧ್ವನಿ ಎತ್ತುವವರಿಗೆ ಅವಕಾಶ ನೀಡುವವರು ರಾಜಕೀಯವಾಗಿ ಹಿನ್ನಡೆ ಅನುಭವಿಸಬೇಕಾಗುತ್ತದೆ, ಎಂದು ಹೇಳಿದರು.

ಈ ವೇಳೆ ಕರವೇ ರಾಜ್ಯ ಸಂಚಾಲಕ ಸುರೇಶ ಗವನ್ನವರ, ಉಪಾಧ್ಯಕ್ಷರಾದ ಗಣೇಶ್ ರೋಕಡೆ, ರಾಜು ನಾಶಿಪುಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಶರಥ ಬನೋಶಿ, ಜಿಲ್ಲಾ ಸಂಚಾಲಕರಾದ ಹೊಳೆಪ್ಪ ಸುಳದಾಳ್, ಅಡಿವೆಪ್ಪ ತಲ್ಲೂರಿ, ಉದಯಕುಮಾರ್ ಚಿಕ್ಕಣ್ಣವರ, ಸುಧೀರಗೌಡ ಪಾಟೀಲ್ , ಸೇರಿದಂತೆ ಹಲವಾರು ಕರವೇ ಪದಾಧಿಕಾರಿಗಳು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸ್ವಾಭಿಮಾನಿ ರ್‍ಯಾಲಿ

ಎಂಇಎಸ್ ಮಹಾಮೋರ್ಚಾಗೆ ಪ್ರತಿಯಾಗಿ ಜೂನ್ 22ರಂದು ಕನ್ನಡದ ನೆಲದಲ್ಲಿ ಕನ್ನಡ ಕಡ್ಡಾಯ ನಿರಂತರ ಎಂಬ ಘೋಷಣೆಯೊಂದಿಗೆ ಸ್ವಾಭಿಮಾನಿ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. ಜೂನ್ 22ರಂದು ಬೆಳಿಗ್ಗೆ 11 ಗಂಟೆಗೆ ಧರ್ಮವೀರ ಸಂಭಾಜಿ ವೃತ್ತದಿಂದ ಆರಂಭವಾಗುವ ರ್‍ಯಾಲಿ, ವೀರರಾಣಿ ಕಿತ್ತೂರು ಚನ್ನಮ್ಮ ವೃತ್ತದಲ್ಲಿ ಸಮಾವೇಶಗೊಳ್ಳಲಿದ್ದು, ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು. ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕನ್ನಡದ ಪರವಾಗಿ ಧ್ವನಿ ಎತ್ತಬೇಕು ಎಂದು ದೀಪಕ ಗುಡಗನಟ್ಟಿ ಮನವಿ ಮಾಡಿದರು.

ಆದರ್ಶ ಪರೀಕ್ಷೆ ಉತ್ತೀರ್ಣರಾದರೂ ವಿದ್ಯಾರ್ಥಿಗಳ ಪ್ರವೇಶಕ್ಕೆ ಪರದಾಟ

• **ರಾಯಬಾಗ:** ತಾಲೂಕಿನ ಮೈಖಳಿ ಗ್ರಾಮದ ಆದರ್ಶ ಆಂಗ್ಲ ಮಾಧ್ಯಮ ಶಾಲೆಯ 6 ನೇ ತರಗತಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೂ ಮಾಹಿತಿ ನೀಡದೆ ಪ್ರವೇಶಗಳು ಮುಗಿದಿವೆ ಎಂದು ದಾಖಲಾತಿಗೆ ನಿರಾಕರಿಸಿದ ಘಟನೆ ನಡೆದಿದೆ.

ಮೈಖಳಿ ಗ್ರಾಮದ ಅರವಿಂದ ಶಂಕರ ಪೂಜೇರಿ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಮೊದಲ ಪಟ್ಟಿಯಲ್ಲಿ ಆಯ್ಕೆಯಾಗಿದ್ದರು. ಇವರಿಗೆ ಸಮರ್ಪಕವಾಗಿ ಮಾಹಿತಿ ಸಿಕ್ಕಿಲ್ಲ, ದಾಖಲಿಸಲು ಶಾಲೆಗೆ ಆಗಮಿಸಿದ ಪೋಷಕರಿಗೆ ಅವಧಿ ಮುಗದಿದೆ ಎಂದು ಶಾಲೆಯ ಪ್ರಧಾನ ಗುರುಗಳು ಹಾಗೂ ಕ್ಲರ್ಕ್ ನಿರಾಕರಿಸಿದ್ದಾರೆ. 5ನೇ ತರಗತಿ ಮುಗಿಸಿ ವಿದ್ಯಾರ್ಥಿಗಳು ಆರನೇ ತರಗತಿ ಪ್ರವೇಶ ಪಡೆಯಲು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆದರ್ಶ ಆಂಗ್ಲ ಮಾಧ್ಯಮ ಸೇರಬಯಸುವ ವಿದ್ಯಾರ್ಥಿಗಳ ಕನಸು ಈಗ ನುಚ್ಚುನೂರಾಗಿದೆ.

> ದಾಖಲಾತಿ ಅವಧಿ ಮುಗಿದ ನಂತರ ದಾಖಲು ಮಾಡಿಕೊಳ್ಳಲು ಅವಕಾಶವಿರುವುದಿಲ್ಲವೆಂದು ಆದರ್ಶ ವಿದ್ಯಾಲಯದ ಸಿಬ್ಬಂದಿ ಹೇಳಿದ್ದಾರೆ.
> ■ ಆರ್. ಬಸವರಾಜಪ್ಪ, ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ

ಗ್ರಾಮದ ಆದರ್ಶ ಆಂಗ್ಲ ಮಾಧ್ಯಮ ಶಾಲೆಗೆ ವಿದ್ಯಾರ್ಥಿಗಳ ಪಾಲಕರು ಬಂದು ವಿಚಾರಿಸಿದಾಗ ನಿಮ್ಮ ಮೊಬೈಲ್‌ಗಳಿಗೆ ಎಸ್‌ಎಂಎಸ್ ಬಂದಿರುತ್ತದೆ ಅದನ್ನು ನೋಡಬೇಕು ಎಂದು ಕ್ಲರ್ಕ್ ಮತ್ತು ಪ್ರಧಾನ ಗುರುಗಳು ಉಸ್ತಾದ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪೋಷಕರು ಹಾಗೂ ಶಾಲೆಯ ಶಿಕ್ಷಕರ ಮಧ್ಯೆ ವಾಗ್ವಾದ ನಡೆದಿದೆ.

ಒಂದು ವೇಳೆ ಪ್ರವೇಶ ನೀಡದೆ ಹೋದಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದು ಪೋಷಕರು ಎಚ್ಚರಿಕೆ ನೀಡಿದರು.



ಮನಸ್ಸು-ದೇಹ ಜೋಡಿಸುವ ಕಲೆ ಯೋಗ

• **ಮೂಡಲಗಿ :** ತಾಲೂಕಿನ ಕಲ್ಲೋಳಿಯ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಎಲ್ಲ ಅಂಗ ಸಂಸ್ಥೆಗಳು ಮತ್ತು ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಪಟ್ಟಣ ಪಂಚಾಯತ ಕಲ್ಲೋಳಿ ಇವರುಗಳ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಶನಿವಾರ ಅತ್ಯಂತ ಸಡಗರ ಮತ್ತು ಉತ್ಸಾಹದಿಂದ ಆಚರಿಸಲಾಯಿತು.

ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ ಬಸಗೌಡ ಪಾಟೀಲ ಅವರು ವಹಿಸಿದ್ದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅಧ್ಯಕ್ಷ ಬಸಗೌಡ ಪಾಟೀಲ ಅವರು, "ಯೋಗವು ಕೇವಲ ದೈಹಿಕ ಕಸರತ್ತಲ್ಲ, ಅದು ಮನಸ್ಸು ಮತ್ತು ದೇಹವನ್ನು ಜೋಡಿಸುವ ಅದ್ಭುತ ಕಲೆ. ಇಂದಿನ ಒತ್ತಡದ ಜೀವನದಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಆರೋಗ್ಯಕರ ಜೀವನ ಶೈಲಿಯನ್ನು ರೂಢಿಸಿಕೊಳ್ಳಲು ಯೋಗ ಅತ್ಯಗತ್ಯ. ಪ್ರತಿಯೊಬ್ಬರೂ ದಿನನಿತ್ಯ ತಮ್ಮ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು" ಎಂದರು.

ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಂ. ವಾಯ್. ಮೇತ್ರಿ, ಪ್ರೌಢ ಶಾಲೆ ಮುಖ್ಯೋಪಾಧ್ಯಾಯ ಎ.ಆರ್. ಪಾಟೀಲ, ಪ್ರಾಥಮಿಕ ವಿಭಾಗದ ರಾಜು ಉಪ್ಪಾರ, ಆಂಗ್ಲ ಮಾಧ್ಯಮ ವಿಭಾಗದ ಮೂಬೀನ ಶೇಖ, ಬೋಧಕ/ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಯೋಗಪಟು ಸಂಜು ಫೋಡಗೇರಿ ಹಾಗೂ ದೈಹಿಕ ಶಿಕ್ಷಕರಾದ ಭೀಮಪ್ಪ ಡಬ್ಬನವರ ಹಾಗೂ ಪದವಿ ವಿಭಾಗದ ಬಿ.ಕೆ. ಸೊಂಟನವರ ಅವರ ಮಾರ್ಗದರ್ಶನದಲ್ಲಿ ವಿವಿಧ ಆಸನಗಳು, ಪ್ರಾಣಾಯಾಮ ಹಾಗೂ ಧ್ಯಾನವನ್ನು ಸಮೂಹಿಕವಾಗಿ ಮಾಡುವ ಮೂಲಕ ಯೋಗ ದಿನಾಚರಣೆಯನ್ನು ಯಶಸ್ವಿಗೊಳಿಸಿದರು.

ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿ ಶಂಕರ ನಿಂಗನೂರ ನಿರೂಪಿಸದರು. ರಮೇಶ ಬಾಗೋಜಿ ಸ್ವಾಗತಿಸಿದರು. ಮುಸ್ತಫಾ ಜಾಲಗಾರ ವಂದಿಸಿದರು.



ಮೂಲಸೌಕರ್ಯಕ್ಕೆ ಆಗ್ರಹಿಸಿ ಸಂಸದರಿಗೆ ಮನವಿ

• **ಖಾನಾಪುರ:** ಪಟ್ಟಣದ ವಿದ್ಯಾನಗರದಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜು ಮತ್ತು ಪಿಎಂಶ್ರೀ ಹಿರಿಯ ಪ್ರಾಥಮಿಕ ಶಾಲೆಗಳು ವರ್ಗಕೊಠಡಿ, ಕಂಪೌಂಡ್, ಡೆಸ್ಕ್ ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳಿಂದ ಬಳಲುತ್ತಿದ್ದು, ಎರಡೂ ವಿದ್ಯಾಸಂಸ್ಥೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಆಗ್ರಹಿಸಿ ಎರಡೂ ಸಂಸ್ಥೆಗಳ ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರ ನೇತೃತ್ವದ ನಿಯೋಗ ಭಾನುವಾರ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಮನವಿ ಸಲ್ಲಿಸಿತು.

ಪಟ್ಟಣದ ಸ್ಟೇಶನ್ ರಸ್ತೆ ಮಾರುತಿ ದೇವಾಲಯದಲ್ಲಿ ಸಂಸದರಿಗೆ ಮನವಿ ಸಲ್ಲಿಸಿ ಮಾತನಾಡಿದ ಸರ್ಕಾರಿ ಪಿಯು ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಸನ್ನ ಕುಲಕರ್ಣಿ, "ಸರ್ಕಾರಿ ಪಿಯು ಕಾಲೇಜಿನಲ್ಲಿ 6 ವರ್ಗಕೊಠಡಿಗಳಿವೆ. ಆದರೆ ಪ್ರಸಕ್ತ ವರ್ಷ ಕಾಲೇಜಿನಲ್ಲಿ 620ಕ್ಕೂ ಹೆಚ್ಚು ಮಕ್ಕಳು ದಾಖಲೆ ಪಡೆದಿದ್ದಾರೆ. ಪಿಎಂಶ್ರೀ ಶಾಲೆಯಲ್ಲಿ ಎಲ್‌ಕೆಜಿಯಿಂದ 7ನೇ ತರಗತಿವರೆಗಿನ ಶಿಕ್ಷಣ ಬೋಧಿಸಲಾಗುತ್ತಿದ್ದು, ಈ ಶಾಲೆಯಲ್ಲಿ ಕೇವಲ ನಾಲ್ಕು ಕೊಠಡಿಗಳಿವೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಎರಡೂ ವಿದ್ಯಾಸಂಸ್ಥೆಗಳಿಗೆ ಕೇಂದ್ರ ಸರ್ಕಾರ ಹಾಗೂ ಸಂಸದರ ಅನುದಾನದಡಿ ಅನುದಾನ ಒದಗಿಸಬೇಕು" ಎಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಸಂಸದ ಕಾಗೇರಿ, "ಪಿಎಂಶ್ರೀ ಶಾಲೆಗೆ



ಕೇಂದ್ರದಿಂದ ಅನುದಾನ ಒದಗಿಸುವ ಅವಕಾಶವಿದೆ. ಜೊತೆಗೆ ಪಿಯು ಕಾಲೇಜಿನ ಮೂಲಸೌಕರ್ಯ ಅಭಿವೃದ್ಧಿಗೂ ಅನುದಾನ ಒದಗಿಸುವ ನಿಟ್ಟಿನಲ್ಲಿ ಗಮನಹರಿಸಲಾಗುವುದು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಸಕ ವಿಠ್ಠಲ ಹಲಗೇಕರ, ಪಿಎಂಶ್ರೀ ಶಾಲೆಯ ಎಸ್ಡಿಎಂಸಿ ಅಧ್ಯಕ್ಷ ರಮೇಶ ಪೂಜಾರ ಮತ್ತಿತರರು ಇದ್ದರು.

ಮನಸ್ಸಿನ ಏಕಾಗ್ರತೆ ಹೆಚ್ಚಿಸಲು ಯೋಗ ಸಹಕಾರಿ: ಈರನಗೌಡ್ರ

• **ಸುರೇಬಾನ:** ಯೋಗವು ಶಾರೀರಿಕ ಆರೋಗ್ಯಕ್ಕಾಗಿ ಅಷ್ಟೇ ಅಲ್ಲದೆ ಮನಸ್ಸಿನ ಏಕಾಗ್ರತೆ ಮತ್ತು ಪ್ರಫುಲ್ಲತೆಯನ್ನು ಹೆಚ್ಚಿಸಲು ಸಹಕಾರಿಯಾಗಿದೆ ಎಂದು ಎಸ್ಡಿಎಂಸಿ ಅಧ್ಯಕ್ಷ ಎನ್ ಎಸ್ ಈರನಗೌಡ್ರ ಹೇಳಿದರು.

ಅವರು ಸಮೀಪದ ಗೊಣ್ಣಾಗರ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಯೋಗದಿಂದ ರೋಗ ನಮ್ಮ ಹತ್ತಿರ ಸುಳಿಯುವುದಿಲ್ಲ ಆದಕ್ಕಾಗಿ ಎಲ್ಲರೂ ಪ್ರತಿನಿತ್ಯ ಕನಿಷ್ಠ ಒಂದು ಗಂಟೆಯಾದರು ಯೋಗ ಮಾಡಬೇಕು ಎಂದು ಹೇಳಿದರು.

ಮುಖ್ಯೋಪಾಧ್ಯಾಯ ಕೆ.ಎನ್. ಯಡ್ರಾವಿ ಪ್ರಾಸ್ತಾವಿಕವಾಗಿ ಮಾತನಾಡಿ, ಶಾಲೆಯ ಮಕ್ಕಳ ಏಕಾಗ್ರತೆಯನ್ನು ಹೆಚ್ಚಿಸಲು ಯೋಗವು ಸಹಕಾರಿಯಾಗಿದ್ದು ಆದ್ದರಿಂದ ವಿದ್ಯಾರ್ಥಿಗಳು ಮನೆಯಲ್ಲಿ ಯೋಗಾಭ್ಯಾಸ ಮಾಡಬೇಕು ಎಂದು ಹೇಳಿದರು.

ಶಿಕ್ಷಕರಾದ ಎಂಬಿ ಭಾವಿಕಟ್ಟಿ ಇವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಯೋಗಾಭ್ಯಾಸ ಮಾಡಿದರು. ಕಾರ್ಯಕ್ರಮದಲ್ಲಿ ಎಸ್ಡಿಎಂಸಿ ಸದಸ್ಯರಾದ



ನಿಂಗಯ್ಯ ಹಿರೇಮಠ, ಭಾಸ್ಕರ್ ಬಡಿಗೇರ, ಮರಿಯಪ್ಪಕುರಿ, ಮಾರುತಿತಳವಾರ ಶಿಕ್ಷಕರಾದ ಬಿ ವಿ ಹೆರಕಲ್, ಶಿವರಾಜ ರೋಣದ, ಜಹೂರ ಕಲೆಗಾರ,ಮೋಹನ ಜಾದವ್, ಡಿಪಿ ಗೋಕಾವಿ, ಅಂಜಲಿ ತಳಗಡೆ ಉಪಸ್ಥಿತರಿದ್ದರು.

ಉತ್ತಮ ಆರೋಗ್ಯಕ್ಕೆ ಯೋಗ ಸಹಕಾರಿ

• **ಯರಗಟ್ಟಿ:** ದೈಹಿಕ ಹಾಗೂ ಮಾನಸಿಕ ಸದೃಢತೆ ಹಾಗೂ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ದೈನಂದಿನ ಜೀವನದಲ್ಲಿ ಯೋಗವನ್ನು ನಮ್ಮ ದಿನಚರಿಯನ್ನಾಗಿ ಮಾಡಿಕೊಳ್ಳಬೇಕೆಂದು ತಹಶೀಲ್ದಾರ ಎಂ. ವ್ಹಿ. ಗುಂಡಪ್ಪಗೋಳ ಹೇಳಿದರು.

ಪಟ್ಟಣದ ಸರಕಾರಿ ಮಾದರಿ ಪ್ರಾಥಮಿಕ ಕನ್ನಡ ಶಾಲೆ, ಬಸವೇಶ್ವರ ಪ್ರೌಢ ಶಾಲೆ, ಕರ್ನಾಟಕ ಪ್ರಾಥಮಿಕ ಶಾಲೆ, ಬಾಲಾಜಿ ಪ್ರೌಢ ಶಾಲಾ ಆವರಣದಲ್ಲಿ ರವಿವಾರ ಹಮ್ಮಿಕೊಂಡಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಆರೋಗ್ಯ ಬಲಿಷ್ಠವಾಗಿ ಬೆಳಸಿಕೊಳ್ಳಲು ಮೊದಲು ಯೋಗ ಮಾಡಲು ಮುಂದಾಗಬೇಕು ಎಂದು ಹೇಳಿದರು.

ದೈಹಿಕ ಶಿಕ್ಷಣ ಶಿಕ್ಷಕ ಬಿ. ಎಂ. ಸರದಾರ ಮಾತನಾಡಿ, ನಿರಂತರ ಯೋಗಾಭ್ಯಾಸ ಮಾಡುವದರಿಂದ ರೋಗ ಸಂಪೂರ್ಣ ದೂರವಾಗಿ, ನಿರೋಗಿಗಳಾಗಿ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದರು.



ಪ್ರಧಾನ ಗುರುಗಳಾದ ಎ. ಎ. ಮಕ್ತುಮನವರ, ರಾಜ್ಯ ಸಂಪ್ಮೂಲ ವ್ಯಕ್ತಿಗಳಾದ ಎಂ. ಎಂ. ಚೀಲದ, ಪ್ರಧಾನಗುರುಗಳಾದ ಬಿ. ಎಸ್. ಆಲದಕಟ್ಟಿ, ಎಸ್. ಬಿ. ಮಿಕಲಿ, ಪ್ರಧಾನ ಗುರುಗಳಾದ ಆನಂದ ವಜ್ರಮಟ್ಟಿ, ಮಂಜುನಾಥ ತಡಸಲೂರ, ಡಾ. ವ್ಹಿ. ಎಂ. ತಾವಂಶಿ, ಡಾ. ಕೆ. ಎನ್. ಕಡಕೋಳ, ಎನ್. ಎಸ್. ಕಾಂಬಳೆ, ಎಸ್. ಜೆ. ಸತ್ತಿಗೇರಿ, ಡಾ. ಕುಮಾರ ದಾಸರ, ಶ್ರೀಮತಿ ಡಿ. ಎಂ. ಪಾಟೀಲ, ಎಲ್. ಎಸ್. ಹೊನ್ನಪ್ಪಗೋಳ, ರಾಜೇಂದ್ರ ಶೆಟ್ಟಿ, ಶಿಕ್ಷಕರಾದ ವ್ಹಿ. ಎಂ. ಹಾದಿಮನಿ, ಯಲ್ಲಪ್ಪ ಸತ್ತಿಗೇರಿ, ಮನೋಜ ಜಗಮೈನ್ನವರ, ಆರ್. ಎನ್. ನದಾಫ, ಎಲ್. ಎನ್. ನೀಲಪ್ಪನ್ನವರ, ಆರ್. ಎಮ್. ಮುನವಳ್ಳಿ, ಆರ್. ಸಿ. ಬಡಿಗೇರ, ಕೆ. ಬಿ. ಸವದತ್ತಿ, ಪಿ. ಎಸ್. ಹರಿಹರ, ಮಂಗಲಾ ನಾಯ್ಕ, ಪಲ್ಲವಿ ಕಳಸಿ, ಅಶೋಕ ಹೊಂಗಲ, ಎಸ್‌ಡಿಎಂಸಿ ಸದಸ್ಯರಾದ ಶಂಕುತಲಾ ಹಡಪದ, ಫೀರೋಜ ಖಾದ್ರಿ, ವಿಜಯ ಬಡಿಗೇರ ಸೇರಿದಂತೆ ಎನ್ .ಸಿ.ಎನ್, ವಿದ್ಯಾರ್ಥಿಗಳು ಇದ್ದರು.

ಮಾಜಿ ಸಿಎಂ ಬೊಮ್ಮಾಯಿಗೆ ಸನ್ಮಾನ

• **ಸವದತ್ತಿ:** ಬಿಜೆಪಿ ತಾಲೂಕು ಅಧ್ಯಕ್ಷ ವಿರೂಪಾಕ್ಷಪ್ಪ ಮಾಮನಿಯವರ ನಿವಾಸಕ್ಕೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭೇಟಿ ನೀಡಿದರು.

ವಿರೂಪಾಕ್ಷಪ್ಪ ಮಾಮನಿ ಅವರು ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಹಾಗೂ ಮಾಜಿ ಶಾಸಕರಾದ ಮಹಾಂತೇಶ್ ದೊಡ್ಡ ಗೌಡರ್ ಮತ್ತು ವಿಜಯ್ ಮೆಟ ಗುಡ್ ರವರನ್ನು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು ಹಾಗೂ ಭಾರತೀಯ ಜನತಾ ಪಕ್ಷದ ಮುಖಂಡರಾದ ಬಸವರಾಜ್ ಕಾರದಗಿ, ಶ್ರೇಯಸ್ ಮಾಮನಿ, ಚಿನ್ಮಯ್ ಆನಂದ್ ಮಾಮನಿ, ಜಗದೀಶ ಕೌಜಗೇರಿ, ಬಸವರಾಜ ಪುಟ್ಟಿ ಸಾಲಿಮಠ, ಮಹಾಂತೇಶ್ ಸುಬೇದಾರ್, ಬಾಬು ಕಡಕೋಳ, ಈರಪ್ಪ ಬಟಕುರ್ಕಿ, ನಿಕ್ಕಮ್ ಮಂಜುನಾಥ್ ದೊಡ್ಡಮನಿ, ಚೇತನ್ ಪಾವಡದ, ಬಾಬು ಕಾಳೆ, ಪುಂಡಲೀಕ ಮಾದರ್, ಅರ್ಜುನ್ ಅಮೋಜಿ ,ಅಶೋಕ ಪಾಟೀಲ್, ನಾಗರಾಜ ಪಾವಡದ, ಅಭಿಷೇಕ್ ಬೂದಿಹಾಳ ಸೇರಿದಂತೆ ಭಾರತೀಯ ಜನತಾ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಜೂ.28ರಂದು ಪ್ರತಿಭಾ ಪುರಸ್ಕಾರ

• **ರಾಮದುರ್ಗ:** ತಾಲೂಕಿನ ಲಿಂಗಾಯತ ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳಿಗೆ ತಾಲೂಕು ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭವು ಜೂ. 28ರಂದು ಪಟ್ಟಣದ ವಿಶ್ವೇಶ್ವರಯ್ಯ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಪಂಚಮಸಾಲಿ ಸಮಾಜದ ಅಧ್ಯಕ್ಷ ಸಿ. ಬಿ. ಪಾಟೀಲ ಹೇಳಿದರು.

ಭಾನುವಾರ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2026ರಲ್ಲಿ ನಡೆದಿರುವ ಎಸ್‌ಎಸ್ ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದ ಪಂಚಮಸಾಲಿ ಸಮಾಜದ ವಿದ್ಯಾರ್ಥಿ/ ವಿದ್ಯಾರ್ಥಿನಿಯರನ್ನು ಸತ್ಕರಿಸಲಾಗುವುದು ಎಂದು ತಿಳಿಸಿದರು.

ಕೂಡಲಸಂಗಮ ಪಂಚಮಸಾಲಿ ಸಮಾಜದ ಪ್ರಥಮಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿಗಳ ಸಾನಿಧ್ಯದಲ್ಲಿನಡೆಯುವಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ಬೈಲಹೊಂಗಲದ ನ್ಯಾಯವಾದಿ ಎಫ್. ಎಸ್. ಸಿದ್ದನಗೌಡರ ಆಗಮಿಸಿದರೆ ಅತಿಥಿಗಳಾಗಿ ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ನಿಂಗಪ್ಪ ಪಿರೋಜಿ, ವೀರರಾಣಿ ಚನ್ನಮ್ಮ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ಅಧ್ಯಕ್ಷ ಪಿ. ಎಫ್. ಪಾಟೀಲ ಸೇರಿದಂತೆ ಸಮಾಜದ ಮುಖಂಡರು ಆಗಮಿಸುವರು ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಜೂ. 26ರ ಒಳಗೆ ಅಂಕಪಟ್ಟಿ ಮತ್ತು ಆಧಾರ ಕಾರ್ಡದೊಂದಿಗೆ ಹೆಸರು ನೋಂದಾಯಿಸಬೇಕು ಹೆಚ್ಚಿನ ಮಾಹಿತಿಗಾಗಿ ಸಿ. ಬಿ. ಪಾಟೀಲ-7760938111, ಗೌಡಪ್ಪಗೌಡ ಪಾಟೀಲ-9980149264, ಮಂಜು ನವಲಗುಂದ-9742726708, ಬಾಳಪ್ಪ ಹಂಜಿ-9945752703 ಮತ್ತು ಎಂ.ಎಸ್.ಕಿತ್ತಲಿ-9980345748ಗೆ ಸಂಪರ್ಕಿಸಲು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವೀರರಾಣಿ ಚನ್ನಮ್ಮ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ಅಧ್ಯಕ್ಷ ಪಿ. ಎಫ್. ಪಾಟೀಲ, ಬಿ.ಎಫ್. ಬಸಿಡೋಣಿ, ವೈ. ಎಚ್. ಪಾಟೀಲ, ಉಮೇಶ ಕೊಳವಿ, ನಿಂಗನಗೌಡ ಪಾಟೀಲ ಸೇರಿದಂತೆ ಹಲವರಿದ್ದರು.

ಕಿರುಸುದ್ದಿ

ಸದೃಢ ಆರೋಗ್ಯಕ್ಕಾಗಿ ಯೋಗ ಅವಶ್ಯಕ



ಬಾದಾಮಿ: ಮಾನವನ ಸದೃಢ ಆರೋಗ್ಯಕ್ಕಾಗಿ ಯೋಗ ಅವಶ್ಯಕವಾಗಿದೆ ಮುಖ್ಯಶಿಕ್ಷಕಿ ಬಸಮ್ಮಾ ನರಸಾಪೂರ ಹೇಳಿದರು.

ಅವರು ತಾಲೂಕಿನ ಯಂಕಂಚಿ ಮಣಿನಾಗರ ಗ್ರಾಮದ ಕಸ್ತೂರಬಾ ಗಾಂಧಿ ಬಾಲಕೀಯರ ವಸತಿ ಶಾಲೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಯೋಗ ದಿನಾಚರಣೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಯೋಗದ ಮಹತ್ವವನ್ನು ಮಕ್ಕಳಿಗೆ ತಿಳಿಸಿದರು. ವಿವಿಧ ಯೋಗಗಳನ್ನು ಮಾಡಿಸಿದರು. ಈ ಸಂದರ್ಭದಲ್ಲಿ ಸಹಶಿಕ್ಷಕಿ ಅನಿತಾ ಜಲಗೇರಿ, ಸಹಶಿಕ್ಷಕರು, ಸಿಬ್ಬಂದಿಗಳು, ಶಾಲಾ ಬಾಲಕೀಯರು ಉಪಸ್ಥಿತರಿದ್ದರು.

ಮೊಹರಂ ಹಬ್ಬದ ಪೂರ್ವಭಾವಿ ಶಾಂತಿ ಸಭೆ



ಬೀಳಗಿ: ಮೊಹರಂ ಹಬ್ಬ ಹಿಂದೂ-ಮುಸ್ಲಿಂ ಭಾವೈಕ್ಯತೆ ಸಾರುವ ಹಬ್ಬವಾಗಿದ್ದು, ಎಲ್ಲರೂ ಕೂಡಿ ಸಹೋದರತ್ವದಿಂದ ಪ್ರೀತಿ, ವಿಶ್ವಾಸದಿಂದ ಆಚರಣೆ ಮಾಡುವ ಮೂಲಕ ಪೊಲೀಸ್ ಇಲಾಖೆಯೊಂದಿಗೆ ಸಹಕಾರ ನೀಡಬೇಕು ಎಂದು ಸಿಪಿಐ ಹಣಮಂತ ಸಣಮನಿ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮೊಹರಂ ಹಬ್ಬದ ಆಚರಣೆಯ ಕುರಿತು ವಿವಿಧ ಸಮಾಜದ ಮುಖಂಡರ ಪೂರ್ವಭಾವಿ ಶಾಂತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ತಾಲೂಕು ಶಾಂತಿ ಸೌಹಾರ್ದ ಭಾವೈಕ್ಯ ತಾಣ. ಇಲ್ಲಿ ಹಿರಿಯರು, ಕಿರಿಯರು ಜಾತಿ ಭೇದಭಾವ ಇಲ್ಲದೇ ಸಹೋದರರಂತೆ ನಡೆದುಕೊಂಡು ಹಲವಾರು ವರ್ಷಗಳಿಂದ ಬಂದಿದ್ದು, ಅದನ್ನು ಎಲ್ಲರೂ ಕೂಡಿಕೊಂಡು ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದರು. ಯಾವುದೇ ಸಣ್ಣಪುಟ್ಟ ಘಟನೆ ನಡೆದರೂ ಅವುಗಳನ್ನು ನಮ್ಮ ಗಮನಕ್ಕೆ ತರಬೇಕು. ಎಲ್ಲರೂ ಶಾಂತಿಯುತವಾಗಿ ಹಬ್ಬಕ್ಕೆ ಮೆರಗು ತರುವ ನಿಟ್ಟಿನಲ್ಲಿ ಆಚರಣೆ ಮಾಡಬೇಕು ಎಂದು ತಿಳಿಸಿದರು. ಸಂಗಪ್ಪ ಕಂದಗಲ್ಲ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಅನೀಲ ಗಚ್ಚಿನಮನಿ, ಸಿದ್ದು ಮೇಟಿ, ಶಿವಾನಂದ ಯಾಳವಾರಮಠ, ಸಿದ್ದು ಸಾರಾವರಿ, ಯಲ್ಲಪ್ಪ ಮೇಟಿ ಇದ್ದರು.

ಯೋಗ ದಿನನಿತ್ಯದ ರೂಢಿಯಾಗಲಿ



ರಬಕವಿ-ಬನಹಟ್ಟಿ: ಇಂದಿನ ಒತ್ತಡದ ಬದುಕಿನಲ್ಲಿ ಮನಸ್ಸಿನ ಶಾಂತಿಗಾಗಿ ಯೋಗ ಅಗತ್ಯವಾಗಿದೆ. ಪ್ರತಿಯೊಬ್ಬರು ಯೋಗವನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಯೋಗದಿಂದ ಉತ್ತಮ ಆರೋಗ್ಯವನ್ನು ಪಡೆದುಕೊಳ್ಳಬಹುದಾಗಿದೆ ಎಂದು ರಬಕವಿ-ಬನಹಟ್ಟಿ ನ್ಯಾಯಾಧೀಶ ಆಶಪ್ಪ ಸಣಮನಿ ಹೇಳಿದರು. ಅವರು ಭಾನುವಾರ ಇಲ್ಲಿನ ನ್ಯಾಯಾಲಯ ಆವರಣದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಯೋಗ ಗುರು ಮಠಪತಿ ಮಾತನಾಡಿ, ಈ ಬಾರಿ ನಾವೆಲ್ಲರೂ ಪ್ರಕೃತಿಯೊಂದಿಗೆ ಯೋಗ ದಿನವನ್ನು ಆಚರಣೆ ಮಾಡಬೇಕು. ಪ್ರತಿಯೊಬ್ಬರು ಒಂದೊಂದು ಸಸಿಯನ್ನು ನೆಟ್ಟು, ಅದನ್ನು ಉಳಿಸಿ ಬೆಳೆಸಿಕೊಳ್ಳಬೇಕು. ಉತ್ತಮ ಪರಿಸರದಿಂದ ಮತ್ತು ಯೋಗದಿಂದ ಮನಸ್ಸು ಮತ್ತು ಶರೀರ ಶುದ್ಧವಾಗುತ್ತದೆ. ವಿದ್ಯಾರ್ಥಿಗಳು ಈಗಿನಿಂದಲೇ ಯೋಗವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಮುಂದಿನ ದಿನಗಳಲ್ಲಿ ಉತ್ತಮ ಫಲಿತಾಂಶ ಪಡೆದುಕೊಳ್ಳಬಹುದಾಗಿದೆ ಎಂದರು. ಎಂ.ಜಿ. ಕೆರೂರ, ಎಸ್.ವಿ. ಗೊಳಸಂಗಿ, ಬಿ.ಎಂ. ಹಳಮನಿ, ಸಿ.ಎಂ. ಜತ್ತಿ, ರವಿ ಸಂಪಗಾಂವಿ ಸೇರಿದಂತೆ ಅನೇಕ ನ್ಯಾಯವಾದಿಗಳು ಭಾಗವಹಿಸಿದ್ದರು.



ಮಹಾಲಿಂಗಪುರ: ಸಮೀಪದ ಸೈದಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಡೆಯಿತು. ಪಾಲಕರಾದ ಕವಿತಾ ಮಾದರ, ರೂಪಾ ಹರಿಜನ, ಲಕ್ಷ್ಮೀ ಹೊಸಮನಿ, ಪರಶುರಾಮ ಮಾದರ, ಸದಾಶಿವ ಪೂಜೇರಿ ಗ್ರಂಥಪಾಲಕ ಶಿವಪ್ಪ ಪಾಶ್ಚಾಪುರ ಭಾಗವಹಿಸಿ ಮಕ್ಕಳೊಂದಿಗೆ ಯೋಗ ಮಾಡಿ ಗಮನ ಸೆಳೆದರು. ಮುಖ್ಯೋಪಾಧ್ಯಾಯನಿ ಸುಶೀಲಾ, ಶಿಕ್ಷಕ ಸುನಿಲ ತುಪ್ಪದ, ರಾಜೇಶ್ವರಿ ಟಕ್ಕನ್ನವರ ಇದ್ದರು.

ವಿಶಿಷ್ಟಚೇತನ ಎಂಬ ಕೀಳರಿಮೆ ಬೇಡ

ಗುಳೇದಗುಡ್ಡ: ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು, ಸಮಾಜದಲ್ಲಿ ಉತ್ತಮ ಸತ್ಪ್ರಜೆಯಾಗಿ ಹೊರಹೊಮ್ಮಬೇಕು. ಪಾಲಕರು ನಿಮ್ಮ ಮೇಲೆ ಕಟ್ಟಿರುವ ಕನಸನ್ನು ಸಾಕಾರಗೊಳಿಸಬೇಕು. ಹಿರಿಯರಿಗೆ, ಶಿಕ್ಷಕರಿಗೆ ಗೌರವಕೊಡಬೇಕು ಎಂದು ವಿಶಿಷ್ಟಚೇತನರ ತಾಲೂಕು ಅಧ್ಯಕ್ಷ ಹುಚ್ಚೇಶ ಯಂಡಿಗೇರಿ ಹೇಳಿದರು.

ಅವರು ಭಾನುವಾರ ಪಟ್ಟಣ ಸರ್ಕಾರಿ ಹಿರಿಯ ಕನ್ನಡ ಗಂಡು ಮಕ್ಕಳ ಶಾಲೆ ನಂ.1ರಲ್ಲಿ ಹಮ್ಮಿಕೊಂಡಿದ್ದ ವಿಶಿಷ್ಟಚೇತನರ ಸಂವಾದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿ, ಅಂಗವಿಕಲತೆ ಶಾಪವಲ್ಲ, ಅದು ಆಕಸ್ಮಿಕ. ನಾನು ವಿಕಲಚೇತನ, ನನ್ನಿಂದ ಏನೂ ಸಾಧನೆ ಮಾಡಲು ಆಗುವುದಿಲ್ಲ ಎಂಬ ಕೀಳರಿಮೆಯನ್ನು ಬಿಡಬೇಕು. ಅಂಗವಿಕಲತೆ ಹೊಂದಿದವರು ಸಾಕಷ್ಟು ಸಾಧನೆಯನ್ನು ಮಾಡಿದ್ದಾರೆ ಇಂತಹ ಸಾಧಕರನ್ನು ಸ್ಫೂರ್ತಿಯಾಗಿ ತೆಗೆದುಕೊಂಡು, ಸಾಧಿಸಬೇಕು ಎಂದು ಹೇಳಿದರು.

ನಿವೃತ್ತ ಶಿಕ್ಷಕಿ ಜಿ.ಎಸ್. ಯಂಡಿಗೇರಿ ಮಾತನಾಡಿದರು. ಶಾಲೆ ಮುಖ್ಯಗುರುಮಾತೆ ಸುಮಾ ಆಡಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಶಿಕ್ಷಕಿಯರಾದ ಭಾರತಿ ತಾಂಡೂರ. ಎಸ್.ಟಿ. ಭಾರಟಕ್ಕಿ, ಶಭಿನಂ ನದಾಫ್. ವಿದ್ಯಾರ್ಥಿಗಳು ಇದ್ದರು. ಬಳಿಕ ಹುಚ್ಚೇಶ ಯಂಡಿಗೇರಿ ಅವರನ್ನು ಶಾಲೆಯ ವತಿಯಿಂದ ಸನ್ಮಾನಿಸಲಾಯಿತು.



ಗುಳೇದಗುಡ್ಡದ ಹಿರಿಯ ಕನ್ನಡ ಗಂಡು ಮಕ್ಕಳ ಶಾಲೆ ನಂ.1ರಲ್ಲಿ ವಿಶಿಷ್ಟಚೇತನರ ಸಂವಾದ ಕಾರ್ಯಕ್ರಮ ನಡೆಯಿತು. ವಿಶಿಷ್ಟಚೇತನರ ತಾಲೂಕು ಅಧ್ಯಕ್ಷ ಹುಚ್ಚೇಶ ಯಂಡಿಗೇರಿ, ನಿವೃತ್ತ ಶಿಕ್ಷಕಿ ಜಿ.ಎಸ್. ಯಂಡಿಗೇರಿ, ಶಾಲೆ ಮುಖ್ಯಗುರುಮಾತೆ ಸುಮಾ ಆಡಿನ, ಶಿಕ್ಷಕಿಯರಾದ ಭಾರತಿ ತಾಂಡೂರ. ಎಸ್.ಟಿ. ಭಾರಟಕ್ಕಿ, ಶಭಿನಂ ನದಾಫ್. ವಿದ್ಯಾರ್ಥಿಗಳು ಇದ್ದರು. ನಂತರ ಹುಚ್ಚೇಶ ಯಂಡಿಗೇರಿ ಅವರನ್ನು ಶಾಲೆಯ ವತಿಯಿಂದ ಸನ್ಮಾನಿಸಲಾಯಿತು.

ಯೋಗವು ಭಾರತೀಯ ಪ್ರಾಚೀನ ಪರಂಪರೆಯ ಅಮೂಲ್ಯ ಕೊಡುಗೆ

ಬಾಗಲಕೋಟೆ: ಒತ್ತಡ ರಹಿತ ಮತ್ತು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಯೋಗಾಭ್ಯಾಸ ಅವಶ್ಯವಾಗಿದೆ ಎಂದು ಲೋಕಸಭಾ ಸದಸ್ಯ ಪಿ.ಸಿ.ಗದ್ದಿಗೌಡರ ಹೇಳಿದರು.

ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಆಯುಷ್ ಮಂತ್ರಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಆಯುಷ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯೋಗವು ಭಾರತೀಯ ಪ್ರಾಚೀನ ಪರಂಪರೆಯ ಅಮೂಲ್ಯ ಕೊಡುಗೆಯಾಗಿದ್ದು, ಇದನ್ನು ಪ್ರಪಂಚಕ್ಕೆ ಪರಿಚಯಿಸುವ ನಿಟ್ಟಿನಲ್ಲಿ ಪ್ರತಿ ವರ್ಷ ಜೂ.21ರಂದು ವಿಶ್ವ ಯೋಗ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ ಎಂದರು.

ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಮಾತನಾಡಿ, ದೇಹ, ಮನಸ್ಸು ಹಾಗೂ ಆಧ್ಯಾತ್ಮಿಕ ಬದುಕನ್ನು ಒಗ್ಗೂಡಿಸಿಕೊಂಡು ಬದುಕು ಸಾಗಿಸುವಂತಹ ಕಲೆ ನಮ್ಮ ದೇಶದಲ್ಲಿ ಹುಟ್ಟಿಕೊಂಡಿದೆ. ಇದನ್ನು ಋಷಿ ಮುನಿಗಳು ಅಭ್ಯಾಸ ಮಾಡಿ ಸಾರ್ಥಕಗೊಳಿಸಿ ರೂಪಿಸಿದ ಬದುಕಿನ ಪದ್ಧತಿಯನ್ನು ನಾವೆಲ್ಲರೂ ಅನುಸರಿಸುವಂತೆ ಮಾಡುವ ನಿಟ್ಟಿನಲ್ಲಿ ಪ್ರಧಾನಮಂತ್ರಿಗಳು ವೈಚಾರಿಕ ದೃಷ್ಟಿಕೋನ ಇಟ್ಟುಕೊಂಡು ಯೋಗ ದಿನಾಚರಣೆ ಕಾರ್ಯಕ್ರಮ ಪ್ರಾರಂಭಿಸಿದ್ದಾರೆ ಎಂದರು. ಆರೋಗ್ಯ ಪೂರ್ಣ ಮನಸ್ಸು ಇರಬೇಕಾದರೆ ಆರೋಗ್ಯಯುತವಾದ ದೇಹ ಇರಲೇಬೇಕಾಗುತ್ತದೆ ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಜನ ಇಂದು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸುತ್ತಿದ್ದಾರೆ. ಇಡೀ ಜಗತ್ತೇ ಯೋಗದ ಕಡೆ ಹೋಗುತ್ತಿದ್ದಾರೆ. ಅನೇಕ ರೋಗಗಳು ಯೋಗದಿಂದಲೇ ಕಡಿಮೆ ಆಗುತ್ತಿವೆ. ಯೋಗವು ದೈಹಿಕ ಆರೋಗ್ಯ ವೃದ್ಧಿಸುವುದರ ಜೊತೆಗೆ ಮಾನಸಿಕ ನೆಮ್ಮದಿ, ಏಕಾಗ್ರತೆ ಹಾಗೂ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಆದ್ದರಿಂದ ಪ್ರತಿದಿನ ಯೋಗಾಭ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದರು.

ಡಿಸಿ ಸಂಗಪ್ಪ ಮಾತನಾಡಿ, ಯೋಗವು ವಿಶ್ವದಾದ್ಯಂತ ಆರೋಗ್ಯಕರ ಜೀವನಶೈಲಿಯ ಮಾರ್ಗವಾಗಿ ಗುರುತಿಸಿಕೊಂಡಿದ್ದು, ನಿಯಮಿತ ಯೋಗಾಭ್ಯಾಸದಿಂದ ಅನೇಕ ರೋಗಗಳನ್ನು ತಡೆಗಟ್ಟಲು ಸಾಧುವಾಗುತ್ತದೆ ಎಂದರು.

ಜಿಲ್ಲಾ ಆಯುಷ ಅಧಿಕಾರಿ ಡಾ.ಎಸ್.ಜಿ.ಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಸಾಮೂಹಿಕ ಯೋಗಾಭ್ಯಾಸ ಮಾಡಿಸಲಾಯಿತು. ಶಿರೂರಿನ ವಿಜಯ ಮಹಾಂತ ತೀರ್ಥದ ಡಾ.ಬಸವಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಿ, ಯೋಗದ ಮಹತ್ವವನ್ನು ತಿಳಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ, ಉಪ ಅರಣ್ಯ ಸಂರಕ್ಷಾಧಿಕಾರಿ ಸ್ವಪ್ನಿಲ್ ಅಹಿರೇ, ಎಡಿಸಿ ಅಶೋಕ ತೇಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಡಿ.ಎನ್, ತಹಶೀಲ್ದಾರ್ ವಾಸುದೇವ ಸ್ವಾಮಿ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ ಸೇರಿದಂತೆ ಇತರರು ಉಪಸ್ಥಿತರಿದ್ದರು.



> ಪ್ರತಿಯೊಬ್ಬರೂ ದಿನನಿತ್ಯ ಯೋಗವನ್ನು ಜೀವನಶೈಲಿಯ ಭಾಗವಾಗಿ ಮಾಡಿಕೊಂಡಾದ ಮಾತ್ರ ಉತ್ತಮ ಆರೋಗ್ಯದ ಜೊತೆಗೆ ಮಾನಸಿಕ ನೆಮ್ಮದಿಯ ಜೀವನ ಸಾಗಿಸಲು ಸಾಧ್ಯವಾಗುತ್ತದೆ. ಆರೋಗ್ಯ ಚೆನ್ನಾಗಿದ್ದಾಗ ಮಾತ್ರ ದಿನನಿತ್ಯದ ಕಾರ್ಯ ಚಟುವಟಿಕೆಯಲ್ಲಿ ಲವಲವಿಕೆಯಿಂದ ಇರಲು ಸಾಧ್ಯ. ಚಿಕ್ಕಂದಿನಿಂದಲೇ ಯೋಗಾಭ್ಯಾಸ ಮಾಡುವದರಿಂದ ಮುಪ್ಪಿನ ವಯಸ್ಸಿನಲ್ಲಿಯೂ ಆರೋಗ್ಯದಿಂದ ಬದುಕಬಹುದಾಗಿದೆ.
>
> ■ ಪಿ.ಸಿ.ಗದ್ದಿಗೌಡರ. ಲೋಕಸಭಾ ಸದಸ್ಯ

ಬದುಕಿನ ಸಮತೋಲನಕ್ಕೆ ಯೋಗ ಮುಖ್ಯ

ಬಾಗಲಕೋಟೆ: ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ ಅದು ನಮ್ಮ ದೇಹ, ಮನಸ್ಸು ಮತ್ತು ಆತ್ಮದ ನಡುವೆ ಸಮತೋಲನವನ್ನು ಸಾಧಿಸುವ ಜೀವನ ವಿಧಾನವಾಗಿದೆ. ಇಂದಿನ ವೇಗದ ಜೀವನದಲ್ಲಿ ಯೋಗವು ಒತ್ತಡವನ್ನು ಕಡಿಮೆ ಮಾಡಿ, ಆರೋಗ್ಯಕರ ಹಾಗೂ ಸಂತೋಷದ ಬದುಕಿಗೆ ದಾರಿ ತೋರಿಸುತ್ತದೆ ಎಂದು ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು.

ನಗರದ ಬಿವಿವಿ ಸಂಘದ ಮೈದಾನದಲ್ಲಿ ವಿವಿಧ ಮಹಾವಿದ್ಯಾಲಯಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಹನ್ನೆರಡನೇಯ ಯೋಗದಿನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಆರೋಗ್ಯಕರ ವಯೋವೃದ್ಧಿಗಾಗಿ ಯೋಗ ಈ ವರ್ಷದ ಧ್ಯೇಯವಾಕ್ಯ ಅದರಂತೆ ನಾವು ಪ್ರತಿದಿನ ಕೆಲವೇ ನಿಮಿಷಗಳಾದರೂ ಯೋಗಕ್ಕೆ ಮೀಸಲಿಟ್ಟರೆ, ನಮ್ಮ ಜೀವನದ ಗುಣಮಟ್ಟವನ್ನು ಹೆಚ್ಚಿಸಬಹುದು. ಯೋಗದ ಸಂದೇಶವಾದ ಆರೋಗ್ಯ, ಶಾಂತಿ ಮತ್ತು ಸಾಮರಸ್ಯವನ್ನು ಎಲ್ಲೆಡೆ ಹರಡಬೇಕು. ಯೋಗವು ಭಾರತದ ಪ್ರಾಚೀನ ಪರಂಪರೆಯ ಅಮೂಲ್ಯ ಕೊಡುಗೆಯಾಗಿದೆ.ನಿಯಮಿತ ಯೋಗಾಭ್ಯಾಸದಿಂದ ದೈಹಿಕ ಸಾಮರ್ಥ್ಯ ಹೆಚ್ಚುತ್ತದೆ, ಮನಸ್ಸು ಶಾಂತವಾಗುತ್ತದೆ ಮತ್ತು ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ಮಕ್ಕಳಿಂದ ವಯೋವೃದ್ಧರ ತನಕ ಎಲ್ಲರೂ ಯೋಗದ ಪ್ರಯೋಜನವನ್ನು ಪಡೆಯಿರಿ ಎಂದರು.

ಗಮನ ಸೆಳೆದ ಆಸನಗಳು: ದೇಹದ ಸಮತೋಲನ ಮತ್ತು ಭಂಗಿಯನ್ನು ಸುಧಾರಿಸುವ ತಾಡಾಸನ,ಏಕಾಗ್ರತೆ ಮತ್ತು ಸಮತೋಲನ ಹೆಚ್ಚಿಸುವ ವೃಕ್ಷಾಸನ, ದೇಹದ ನಮ್ಯತೆಯನ್ನು ಹೆಚ್ಚಿಸುವ ತ್ರಿಕೋಣಾಸನ, ಧ್ಯಾನ ಮತ್ತು ಮನಸ್ಸಿನ ಶಾಂತಿಗೆ ಸಹಕಾರಿಯ ಪದ್ಮಾಸನ, ಜೀರ್ಣಕ್ರಿಯೆಗೆ ಸಹಕಾರಿಯಾಗುವ ವಜ್ರಾಸನ ಸೇರಿದಂತೆ ಸೇತುಭಂದಾಸನ ಸುಖಾಸನ, ಭುಜಂಗಾಸನ, ಶಲಭಾಸನ, ಧನುರಾಸನ, ಪವನಮುಕ್ತಾಸನ, ಸರ್ವಾಂಗಾಸನ, ಹಲಾಸನ, ಶವಾಸನ, ಮಕರಾಸನದ ಭಂಗಿಗಳು ಗಮನ ಸೆಳೆದವು.

ಯೋಗ ದಿನಾಚರಣೆಯಲ್ಲಿ ಬಿವಿವಿ ಸಂಘದ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಗುರುಬಸವ ಸೂಳಿಭಾವಿ, ಮಲ್ಲಿಕಾರ್ಜುನ ಸಾಸನೂರ ಸೇರಿದಂತೆ ಸಂಘದ ಸದಸ್ಯರು, ವಿವಿಧ ಮಹಾವಿದ್ಯಾಲಯದ ಪ್ರಾಚಾರ್ಯರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳಿದ್ದರು.



ಮನಸ್ಸಿನ ಸ್ವಚ್ಛತೆಗೆ ಯೋಗ ಅವಶ್ಯ: ಆದಾಪೂರ



ಬೀಳಗಿ: ನಾವು ಸ್ವಚ್ಚವಾಗಬೇಕಾದರೆ ನೀರಿನಿಂದ ಸ್ನಾನ ಮಾಡುತ್ತೇವೆ. ಮಾನಸಿಕವಾಗಿ ಸ್ವಚ್ಚವಾಗಬೇಕಾದರೆ ಯೋಗವನ್ನು ಮಾಡಬೇಕು. ಇದು ಒಂದು ರೀತಿಯಲ್ಲಿ ಪ್ರತಿನಿತ್ಯ ಯೋಗ ಮಾಡುವ ಮೂಲಕ ನಮ್ಮ ಮನಸ್ಸನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದರೊಂದಿಗೆ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರಮೇಶ ಆದಾಪೂರ ಹೇಳಿದರು.

ತಾಲೂಕಿನ ಅರಕೇರಿ ಗ್ರಾಮದ ಶ್ರೀಮತಿ ಎಂ. ಎಂ. ಸಾವಕಾರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಿದ್ದ 12ನೇ ವಿಶ್ವಯೋಗ ದಿನಾಚರಣೆ ಮತ್ತು ಸಸಿ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕ್ಷೇತ್ರ ಸಮನ್ವಯಾಧಿಕಾರಿ ಶಿವಾಜಿ ಕಾಂಬಳೆ ಪ್ರಾಸ್ತಾವಿಕವಾಗಿ ಮಾತನಾಡಿ, ದೇಹ, ಮನಸ್ಸನ್ನು ನಿಯಂತ್ರಣದಲ್ಲಿ ಇಡಲು ಯೋಗ ಅತ್ಯಾವಶ್ಯಕ. ದಿನನಿತ್ಯ ಜೀವನದಲ್ಲಿ ಯೋಗ ಅಳವಡಿಸಿಕೊಂಡಾಗ ಏಕಾಗ್ರತೆ ಸಿದ್ದಿಸುತ್ತದೆ. ಯೋಗ ಹಲವಾರು ಕಾಯಿಲೆಗಳನ್ನು ಹೊಡೆದೋಡಿಸುತ್ತದೆ ಎಂದರು.

ಕೊಪ್ಪಳ ಜಿಲ್ಲೆಯ ಡಿವೈಪಿಸಿ ಕಚೇರಿ ಅಧಿಕಾರಿ ದಂಡಪ್ಪಗೌಡ ಪಾಟೀಲ ಸನ್ಮಾನ ಸ್ವೀಕರಿಸಿ ಮಾತನಾಡಿ, ದೇಹ ಮನಸ್ಸಿಗೆ ಹೊಂದಿಕೊಳ್ಳುವುದೇ ಯೋಗ. ಸಂಪತ್ತನ್ನು ಕಳೆದುಕೊಂಡರೆ ಮರಳಿ ಗಳಿಸಬಹುದು. ಆರೋಗ್ಯವನ್ನು ಕಳೆದುಕೊಂಡರೆ ಅರ್ಧ ಕಳೆದುಕೊಂಡಂತೆ, ಜೀವನದಲ್ಲಿ ಚಾರಿತ್ರ್ಯ ಕಳೆದುಕೊಂಡರೆ ಎಲ್ಲವನ್ನು ಕಳೆದುಕೊಂಡಂತೆ. ಯೋಗ ಗುರು ಪತಂಜಲಿ ಜಗತ್ತಿಗೆ ಯೋಗವನ್ನು ಕಾಣಿಕೆ ನೀಡಿದ್ದಾರೆಂದು ಹೇಳಿದರು.

ದೈಹಿಕ ಶಿಕ್ಷಣ ಶಿಕ್ಷಕ, ಯೋಗಪಟು ಕೆ. ಟಿ. ದೊಡ್ಡಾಳ ಏಳು ದಿನಗಳ ಕಾಲ ವಿದ್ಯಾರ್ಥಿಗಳಿಗೆ ಮತ್ತು ಗ್ರಾಮಸ್ಥರಿಗೆ ಉಚಿತ ಯೋಗ ಶಿಬಿರವನ್ನು ನಡೆಸಿ ಕೊಟ್ಟಿದ್ದಕ್ಕೆ ಅವರನ್ನು ಹೃದಯಸ್ಪರ್ಶಿಯಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರು, ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸದಸ್ಯರು, ಗ್ರಾಮದ ಗಣ್ಯರು, ಸಿಆರ್‌ಪಿ, ಬಿಆರ್‌ಪಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಿಬ್ಬಂದಿ ವರ್ಗ, ಅರಕೇರಿ ಗ್ರಾಮದ ಎಲ್ಲ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕ-ಶಿಕ್ಷಕಿಯರು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಶಿಕ್ಷಣ ಪ್ರೇಮಿಗಳು ಭಾಗವಹಿಸಿದ್ದರು.

ಪ್ರತಿಯೊಬ್ಬರೂ ಆರೋಗ್ಯವಂತರಾಗಿರಿ

ಕಮತಗಿ: ಇಂದಿನ ವೇಗದ ಜೀವನದಲ್ಲಿ ಪ್ರತಿಯೊಬ್ಬರು ಆರೋಗ್ಯವಂತರಾಗಬೇಕು ಎಂದು ಪಪಂ ಅಧ್ಯಕ್ಷ ಬಸವರಾಜ ಕುಂಬಳಾವತಿ ಹೇಳಿದರು.

ಅವರು ಪಿ.ಎಂ. ಸ್ವನಿಧಿ ಯೋಜನೆಯ ಕಮತಗಿ ಪಪಂ ಕಾರ್ಯಾಲಯ, ಜಿಲ್ಲಾ ಕೌಶಲ್ಯ ಮಿಷನ್ ಬಾಗಲಕೋಟೆ ಹಾಗೂ ಹೆಜ್ಜೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ (ರಿ), ಕಮತಗಿ ಇವರ ಸಂಯುಕ್ತ ಆಶ್ರಯದಲ್ಲಿ ಪಿ.ಎಂ. ಸ್ವನಿಧಿ ಯೋಜನೆಯ, ಲೋಕಕಲ್ಯಾಣ ಮೇಳದ ಅಂಗವಾಗಿ ಬೀದಿ ವ್ಯಾಪಾರಿಗಳಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರದ ಸಸಿಗೆ ನೀರು ಹನಿಸುವುದರ ಮೂಲಕ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಜೀವನೋಪಾಯ ನಡೆಸುತ್ತಿರುವ ಬೀದಿ ವ್ಯಾಪಾರಿಗಳ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುವ ಉದ್ದೇಶದಿಂದ, ಈ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ವೈದ್ಯರಿಂದ ಸಾಮಾನ್ಯ ಆರೋಗ್ಯ ತಪಾಸಣೆ, ರಕ್ತದೊತ್ತಡ, ಮಧುಮೇಹ ಸೇರಿದಂತೆ ವಿವಿಧ ಆರೋಗ್ಯ ಪರೀಕ್ಷೆಗಳು ಹಾಗೂ ಅಗತ್ಯ ಸಲಹೆಗಳನ್ನು ಉಚಿತವಾಗಿ ನೀಡಲಾಗುತ್ತದೆ.

ಪಿ.ಎಂ. ಸ್ವನಿಧಿ ಯೋಜನೆಯ ಫಲಾನುಭವಿಗಳು ಈ ಉಚಿತ ಆರೋಗ್ಯ ತಪಾಸನಾ ಸೌಲಭ್ಯ ಪಡೆದುಕೊಂಡು ಆರೋಗ್ಯವಂತ ರಾಗಿರಿ ಎಂದು ಹೇಳಿದರು.

ಪಟ್ಟಣ ಪಂಚಾಯತ ಸದಸ್ಯ ದೇವಿಪ್ರಸಾದ ನಿಂಬಲಗುಂದಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಪಪಂ ಸದಸ್ಯರು ನಾಮ ನಿರ್ದೇಶಿತ, ಆಶ್ರಯ ಸಮಿತಿ ಸದಸ್ಯರು ಪಪಂ ಸಿಬ್ಬಂದಿಗಳು, ನಾಗೇಶ ಮುರಾಳ, ಸಂಸ್ಥೆಯ ಅಧ್ಯಕ್ಷ ವೀರಭದ್ರಪ್ಪ ಮುರಾಳ, ನಾಗಪ್ಪ ಅಚನೂರ, ಉಪಸ್ಥಿತರಿದ್ದರು.

ಬಾಗಲಕೋಟೆಯ ತಪಶೆಟ್ಟಿ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ಪ್ರಸಾದ ಉಗರಗೋಳ ಡಾ. ಆನಂದ ಮತ್ತು ಡಾ. ಸಂದೀಪ ತಪಶೆಟ್ಟಿ ತಪಾಸಣೆ ಮಾಡಿದರು. 100 ಕ್ಕೂ ಹೆಚ್ಚು ಬೀದಿ ವ್ಯಾಪಾರಿಗಳು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.



ಯೋಗ ಪ್ರಾಚೀನ ಸಂಸ್ಕೃತಿಯ ಕೊಡುಗೆ



ರಬಕವಿ-ಬನಹಟ್ಟಿ: ಯೋಗ ಕೇವಲ ದೈಹಿಕ ವ್ಯಾಯಾಮ ಅಲ್ಲ, ಅದು ಭಾರತೀಯ ಪ್ರಾಚೀನ ಸಂಸ್ಕೃತಿಯ ಅಮೂಲ್ಯವಾದ ಕೊಡುಗೆಯಾಗಿದೆ. ಯೋಗದಿಂದ ದೇಹ, ಮನಸ್ಸು ಮತ್ತು ಆತ್ಮದ ನಡುವಿನ ಸಮತೋಲನ ಸಾಧನೆ ಸಾಧ್ಯ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಭಾನುವಾರ ಇಲ್ಲಿನ ಎಸ್‌ಆರ್‌ಎ ಮೈದಾನದಲ್ಲಿ ನಡೆದ ವಿಶ್ವಸ ಯೋಗ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದರು. ಯೋಗ ಗುರು ಡಾ. ಪರಶುರಾಮ ರಾವಳ ಮಾತನಾಡಿದರು. ಶಿವಾನಂದ ಗಾಯಕವಾಡ, ಮಲ್ಲಪ್ಪ ಖಿವಟಗಿ, ಶ್ರೀಶೈಲ ಯಾದವಾಡ, ವಿದ್ಯಾಧರ ಸವದಿ, ಶ್ರೀಶೈಲ ಬೀಳಗಿ, ಚಿದಾನಂದ ಹೊರಟ್ಟಿ, ಪ್ರವೀಣ ಧಭಾಡಿ, ಮೀನಾಕ್ಷಿ ಸವದಿ, ವೈಷ್ಣವಿ ಬಾಗೇವಾಡಿ ಮತ್ತು ಸುವರ್ಣಾ ಕೊಪ್ಪದ ಮತ್ತು ಕಾಲೇಜು ವಿದ್ಯಾರ್ಥಿನಿಯರು ಸೇರಿದಂತೆ ಅನೇಕರಿದ್ದರು.



ಗುಳೇದಗುಡ್ಡ: ಸ್ಥಳೀಯ ನೆಹರು ಅಂತಾರಾಷ್ಟ್ರೀಯ ಪಬ್ಲಿಕ್ ಶಾಲೆಯಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಯೋಗ ತರಬೇತುದಾರಾದ ಮಂಜುನಾಥ ಮನಗೂಳಿ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ವಿವಿಧ ಯೋಗಾಸನಗಳನ್ನು ಪ್ರದರ್ಶಿಸಿದರು. ಸಂಸ್ಥೆಯ ಅಧ್ಯಕ್ಷ ಮಹಾಂತಯ್ಯ ಸರಗಣಾಚಾರಿ ಶಾಲಾ ಆಡಳಿತಾಧಿಕಾರಿ ಪುನೀತ ಕಾದರೊಳ್ಳಿ, ಪ್ರಾಚಾರ್ಯ ಪ್ರಕಾಶ ನಾಲವತ್ತವಾಡ, ಶಾಲೆ ಪ್ರಾಚಾರ್ಯ ಲಕ್ಷ್ಮಣ ಹಾದಿಮನಿ ಹಾಗೂ ಶಿಕ್ಷಕ ಸಿಬ್ಬಂದಿ ಇದ್ದರು.

ದೈನಂದಿನ ಜೀವನದಲ್ಲಿ ಯೋಗ ಅಳವಡಿಸಿಕೊಳ್ಳಿ

ಇಳಕಲ್ಲ: ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಸ್ಪಂದನ ಪದವಿಪೂರ್ವ ವಿಜ್ಞಾನ ಕಾಲೇಜಿನಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅತ್ಯಂತ ಯಶಸ್ವಿಯಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳಲ್ಲಿ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದ್ದ ಈ ಕಾರ್ಯಕ್ರಮದಲ್ಲಿ ಯೋಗದ ಮಹತ್ವವನ್ನು ಯುವ ಪೀಳಿಗೆಗೆ ಮನವರಿಕೆ ಮಾಡಿಕೊಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ಅಮರೇಶ ಬಿ. ಕೌದಿಯವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಸಿದ್ಧ ಯೋಗ ಗುರುಗಳಾದ ಗಿರೀಶ್ ಲದ್ವಾ ರವರು ವಿದ್ಯಾರ್ಥಿಗಳಿಗೆ ವಿವಿಧ ಯೋಗಾಸನಗಳು ಮತ್ತು ಪ್ರಾಣಾಯಾಮದ ಪ್ರಾತ್ಯಕ್ಷಿಕೆ ತರಬೇತಿಯನ್ನು ನೀಡಿದರು. ವಿದ್ಯಾರ್ಥಿಗಳಲ್ಲಿ 'ನವಚೈತನ್ಯದ ರಹಸ್ಯ ಯೋಗದಲ್ಲಿ ಅಡಗಿದೆ' ಎಂಬುದನ್ನು ಅವರು ಪ್ರಾಯೋಗಿಕವಾಗಿ ವಿವರಿಸಿದರು.



ಕಾಲೇಜಿನ ಪ್ರಾಚಾರ್ಯರಾದ ಅಮರೇಶ ಬಿ. ಕೌದಿ ಮಾತನಾಡಿ, ಯೋಗ ಎನ್ನುವುದು ಕೇವಲ ವ್ಯಾಯಾಮವಲ್ಲ. ಅದು ನಮ್ಮ ಯಶಸ್ಸು, ಆಯಸ್ಸು ಮತ್ತು ಸಮೃದ್ಧಿ ಎಲ್ಲವನ್ನೂ ಕರುಣಿಸುವ ಒಂದು ರಹದಾರಿ. ವಿದ್ಯಾರ್ಥಿಗಳು ತಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಂಡರೆ ಉಜ್ವಲ ಭವಿಷ್ಯವನ್ನು ನಿರ್ಮಿಸಿಕೊಳ್ಳಬಹುದು ಎಂದರು.

ಇದೇ ಸಂದರ್ಭದಲ್ಲಿ ವೇದಿಕೆಯ ಮೇಲೆ ಕಾಲೇಜಿನ ನಿರ್ದೇಶಕರು ಹಾಗೂ ಉಪನ್ಯಾಸಕರುಗಳಾದ ರವಿ ಎಲ್. ಅರಸಿದ್ದಿ, ವೀರೇಶ ಡಿ. ಬಾಚೇನಹಳ್ಳಿ ಹಾಗೂ ಬಸವರಾಜ ಸಿ. ತುಂಬಗಿಯವರು ಉಪಸ್ಥಿತರಿದ್ದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಕಾರ್ಯಕ್ರಮವನ್ನು ಮಲ್ಲಿಕಾರ್ಜುನ ಜಗ್ಗಲ್ ಅವರು ನಿರೂಪಿಸಿದರು, ಸಮೀರ್ ಸರ್ಕಾವಸ ಅವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ನೂರಾರು ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ಯೋಗ ದಿನವನ್ನು ಯಶಸ್ವಿಗೊಳಿಸಿದರು.

ಪಟ್ಟದಕಲ್ಲಿನಲ್ಲಿ ಯೋಗ ದಿನಾಚರಣೆ

ಬಾದಾಮಿ: 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಭಾನುವಾರ ವಿಶ್ವ ಪರಂಪರೆಯ ಐತಿಹಾಸಿಕ ತಾಣ ಪಟ್ಟದಕಲ್ಲಿನಲ್ಲಿ ಭಾರತೀಯ ಪುರಾತತ್ವ ಇಲಾಖೆ ಸಹಯೋಗದ ವತಿಯಿಂದ ವಿಶೇಷ ಯೋಗ ಶಿಬಿರವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ನೂರಾರು ಯೋಗಾಸಕ್ತರು, ಸಾರ್ವಜನಿಕರು ಹಾಗೂ ಯುವಜನರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು ಒಟ್ಟಾಗಿ ಯೋಗಾಭ್ಯಾಸ ನಡೆಸಿದರು.

ಯೋಗವು ಕೇವಲ ದೈಹಿಕ ಕಸರತ್ತಲ್ಲ, ಅದು ಮನಸ್ಸು ಮತ್ತು ಶರೀರವನ್ನು ಜೋಡಿಸುವ ದಿವ್ಯ ಶಕ್ತಿ ಎಂದು ಪ್ರಧಾನಿಯವರು ಸಾರಿದ ಮಾತು ಇಂದಿನ ಯೋಗ ದಿನಾಚರಣೆಯಲ್ಲಿ ಸಾಕಾರಗೊಂಡಿತು.

ಪ್ರಸ್ತುತ ವರ್ಷದ ಯೋಗ ದಿನದ ಧ್ಯೇಯವಾಕ್ಯವಾದ ''ಆರೋಗ್ಯಕರ ವಯಸ್ಸಾಗುವಿಕೆಗೆಯೋಗ'' ಸಾಕಾರಗೊಂಡಿತು. ಈಸಂದರ್ಭದಲ್ಲಿ ಧಾರವಾಢ ವಿಭಾಗದ ಪುರಾತತ್ವ ಇಲಾಖೆಯ ಅಧಿಕಾರಿ ರಮೇಶ ಮೂಲಿಮನಿ, ಮುಖ್ಯ ಯೋಗ ಪ್ರವರ್ತಕ ಸಂತೋಷ ಪಟ್ಟಣಶೆಟ್ಟಿ, ಯೋಗ ಪಟು ಉಮೇಶ ಜಾಧವ, ಲಕ್ಕಿ ಶಿವಪ್ಪಗೌಡರ, ತೇಜಸ್ವಿನಿ ಸಾಳಗುಂದಿ ಇತರರು ಉಪಸ್ಥಿತರಿದ್ದರು.



ಮೊಹರಂ ಹಬ್ಬ: ಶಾಂತಿಪಾಲನಾ ಸಮಿತಿ ಸಭೆ

ಕಲಾದಗಿ: ಗ್ರಾಮದಲ್ಲಿ ನಡೆಯುವ ಪ್ರತಿ ಹಬ್ಬಗಳಂತೆ ಬರುವ ಜೂ.26 ರಂದು ನಡೆಯುವ ಮೊಹರ್ಂ ಹಬ್ಬವನ್ನು ಸಹ ಭಾವೈಕ್ಯತೆಯಿಂದ ಆಚರಿಸಬೇಕು. ಯಾರಿಂದಲೂ ಕಾನೂನು ಚೌಕಟ್ಟನ್ನು ಮೀರುವ ಕೆಲಸ ಆಗಬಾರದು ಎಂದು ಬಾಗಲಕೋಟೆ ಗ್ರಾಮೀಣ ಸಿಪಿಐ ಆರ್.ಎಸ್. ಬಿರಾದಾರ ಹೇಳಿದರು.

ಇಲ್ಲಿನ ಪೊಲೀಸ್ ಠಾಣೆಯಲ್ಲಿ ಮೊಹರ್ಂ ಹಬ್ಬದ ನಿಮಿತ್ಯ ನಡೆದ ಶಾಂತಿಪಾಲನಾ ಸಮಿತಿ ಸಭೆಯಲ್ಲಿ ಗ್ರಾಮದ ಮುಖಂಡರನ್ನು ಉದ್ದೇಶಿಸಿ ಮಾತನಾಡಿದ ಅವರು, ಗ್ರಾಮವೂ ಭಾವೈಕ್ಯತೆಗೆ ಹೆಸರಾಗಿದ್ದು, ಹಬ್ಬದ ದಿನಗಳಲ್ಲಿ ಹಾಗೂ ಇನ್ನಿತರ ದಿನಗಳಲ್ಲಿ ಕಾನೂನಿಗೆ ಭಂಗ ತರುವಂಥಹ ಕೆಲಸ ಯಾರಿಂದಲೂ ಆಗುವುದಿಲ್ಲ ಎಂಬ ವಿಶ್ವಾಸ ನಮಗಿದೆ. ಅಂತಹ ಪರಿಸ್ಥಿತಿ ಕಂಡು ಬಂದರೆ ಹಿರಿಯರು ಅಂಥಃವರಿಗೆ ಬುದ್ದಿ ಹೇಳಿ ಸರಿಮಾಡುವ ಕೆಲಸ ಮಾಡಿ ಜವಾಬ್ದಾರಿಯನ್ನು ತೋರಬೇಕು ಎಂದು ಮನವಿ ಮಾಡಿದರು.



ಕಲಾದಗಿ ಪಿಎಸ್‌ಐ ಪ್ರವೀಣ ಬೀಳಗಿ ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಾಕಾರಿ ಪೋಸ್ಟ್‌ಗಳನ್ನು ಹರಿಬಿಡುವ ಕೆಲಸವನ್ನು ಯುವಕರು ಮಾಡಬಾರದು. ಹಾಗೇನಾದರು ಆದರೆ ಕಾನೂನಿನ ಚೌಕಟ್ಟಿನಲ್ಲಿ ಅದಕ್ಕೆ ತಕ್ಕ ಕ್ರಮವನ್ನು ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಮೊಹರಂಗೆ ಅಗತ್ಯ ಬಂದೂಬಸ್ತ್ ಕ್ರಮಗಳನ್ನು ಕೈಗೊಳ್ಳುವ ಭರವಸೆ ನೀಡಿದರು.

ಗ್ರಾಮದ ಮುಖಂಡರಾದ ಹಸನ್ನಹದ ರೋಣ, ಕೆ.ಆರ್.ಶಿಲ್ಪಿ, ಎ.ಜಿ.ಬಾರೂದವಾಲೆ, ಸಂಗಪ್ಪ ಭಬ್ಬಿ, ಮಲ್ಲಪ್ಪ ಜಮಖಂಡಿ, ರೆಹಮಾನಸಾಬ ಮಕಾನದಾರ, ಸಂಜಯ ಗಣಾಚಾರಿ ಮುಂತಾದವರು ಮಾತನಾಡಿ ಗ್ರಾಮದಲ್ಲಿ ಎಲ್ಲಾ ಧರ್ಮದವರು ಸಹೋಧರತ್ವದಿಂದ ಇದ್ದು ಭಾವೈಕ್ಯತೆಯ ಧರ್ಮವನ್ನು ಪಾಲಿಸುತ್ತೇವೆ ಎಂದು ಭರವಸೆ ನೀಡಿದರು.

ಅಂಜುಮನ್ ಕಮಿಟಿ ಅಧ್ಯಕ್ಷ ಆರ್.ಬಿ.ಬೇಪಾರಿ, ರಾಜೇಸಾಬ ಗೋಠೆ, ಉಸ್ಮಾನಸಾಬ ರೋಣ, ದಯಾನಂದ ಆಲಗುಂಡಿ, ಅಮೀನಸಾಬ ಬೀಳಗಿ, ಶ್ಯಾಮಕಾಳೆ, ಸುಭಾಷ ದುರ್ವೆ, ಸದಾಶಿವ ಪೂಜಾರಿ, ಮಂಜು ಕಾಳೆ, ಮುಂತಾದವರು ಸಭೆಯಲ್ಲಿದ್ದರು.

ಕಿರುಸುದ್ದಿ

ಇಂದು ಬಸವ ಪ್ರಸಾದ

ಬಸವನಬಾಗೇವಾಡಿ: ಸ್ಥಳೀಯ ವಿವೇಕ ಬ್ರಿಗೇಡ್ ನೇತೃತ್ವದಲ್ಲಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ 100ನೇ (ಸೋಮವಾರ) ವಾರದ ಬಸವ ಪ್ರಸಾದ ಸೇವೆ ಸೋಮವಾರ ಸಂಜೆ 6.30ಕ್ಕೆ ನಡೆಯಲಿದೆ ಬಸವ ಭಕ್ತರು ದಾಸೋಹಕ್ಕೆ ಆಗಮಿಸಿ ಬಸವೇಶ್ವರರ ಕೃಪೆಗೆ ಪಾತ್ರರಾಗಬೇಕೆಂದು ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

ವಿಶ್ವ ಯೋಗ ದಿನಾಚರಣೆ



ಮುದ್ದೇಬಿಹಾಳ: ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಸ್ವತಂತ್ರ ಮಹಿಳಾ ಯೋಗ ಸಮಿತಿ ಸದಸ್ಯರ ವತಿಯಿಂದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಯೋಗ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮ ಸಮಿತಿಯ ಅಧ್ಯಕ್ಷ ಪ್ರೇಮ ಗುಡದಿನ್ನಿ ಅವರ ನೇತೃತ್ವದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರೇಮ ಅವರು, ಮಹಿಳೆಯರಿಗೆ ಒತ್ತಡದ ಬದುಕನ್ನು ನಿವಾರಿಸಿ ಸುಂದರ ಬದುಕು ರೂಪಿಸಿಕೊಳ್ಳಲು, ದಾರಿ ದೀಪವಾಗಿರುವ ಯೋಗವೇ ರೋಗ ಮುಕ್ತ ಜೀವನ ಮಾಡಬಲ್ಲದು. ತಮ್ಮ ಜೀವನದಲ್ಲಿ ದಿನದಲ್ಲಿ ಒಂದು ಬಾರಿಯಾದರೂ ಅಳವಡಿಸಿಕೊಂಡು ಜೀವನವನ್ನು ಸುಂದರವಾಗಿಸಿಕೊಳ್ಳಿ ಎಂದು ಹೇಳಿದರು. ಪ್ರತಿನಿತ್ಯ ಬೆಳಗ್ಗೆ ಯೋಗ ಅಭ್ಯಾಸ ಮಾಡುವ ಮಹಿಳೆಯರೆಲ್ಲ ಸೇರಿ ಕಾರ್ಯಕ್ರಮವನ್ನು ಆಯೋಜಿಸಿದರು. ಸಂಚಾಲಕಿಯರಾದ ರೂಪಾ ದೇಸಾಯಿ, ಅನುರಾಧ ಪ್ಯಾಟಿಗೌಡರ, ಸರಸ್ವತಿ ಬಿರಾದಾರ, ಸಂಗಮ ದೇವರಹಳ್ಳಿ, ಸಹನಾ ಬಡಿಗೇರ, ನೀಲಮ್ಮ ಮುಂತಾದವರು ಉಪಸ್ಥಿತರಿದ್ದರು. ಮಹಿಳೆಯರಿಗಾಗಿ ವಿಶೇಷ ಯೋಗ ಆಸನಗಳನ್ನು ಸಭೆಯಲ್ಲಿ ಮಾಡಿಸಲಾಯಿತು.



ನಾಲತವಾಡ: ಊರಿನ ಹೆಣ್ಣು ಮಕ್ಕಳು ಹಾಗೂ ಮಕ್ಕಳು ಒಟ್ಟು ಸೇರಿ ಮಳೆಗಾಗಿ ವಿಶೇಷ ಪೂಜೆ ಮಾಡಿದರು. ತಲೆಯ ಮೇಲೆ ಮಣ್ಣಿನ ಕಲಶ, ಅದರ ಮೇಲೆ ಹುಲ್ಲು-ಸಿ ಇಟ್ಟು 'ಗುರ್ಜಿ ಗುರ್ಜಿ, ಮಳೆ ಬಾ ಗುರ್ಜಿ' ಅಂತ ಹಾಡು ಹೇಳಿಕೊಂಡು ಊರ ಸುತ್ತಿದರು. ಹುಸನವ್ವ ಬಾವಗೋಳ, ಆಶಮ್ಮ ಎತ್ತಿನಮನಿ, ನಿಂಗಮ್ಮ ಗುರಿಕಾರ, ಮಾದೇವಿ ಸಂಗಟಿ, ಬಸಮ್ಮ ಕಾಳೆ ಇತರರು ಇದ್ದರು.



ಆಲಮಟ್ಟಿ: ಮೊಹರಂ ಹಬ್ಬದ ನಿಮಿತ್ತ ಭಾನುವಾರ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಹಸೇನ, ಹುಸೇನ್, ಲಾಲ್ ಶಾ ದೇವರುಗಳನ್ನು ಗಂಗಾಸ್ಥಳಕ್ಕೆ ತಂದು ಪುನ್ಯಸ್ನಾನಗೈದು ಪೂಜೆ ಸಲ್ಲಿಸುತ್ತಿರುವುದು ಕಂಡು ಬಂತು.

ನಿಧನಸುದ್ದಿ

ಸಿದ್ದರಾಮ ಬಮ್ಮನಹಳ್ಳಿ

ಆಲಮೇಲ: ತಾಲೂಕಿನ ದೇವಣಗಾಂವ ಗ್ರಾಮದ ಪ್ರೊ. ಸಿದ್ದಾರಾಮ ಗುರಪ್ಪ ಬಮ್ಮನಹಳ್ಳಿ (ಸಿದ್ದು ಸರ್ ಬಮ್ಮನಹಳ್ಳಿ) ಅವರು ಭಾನುವಾರ ನಿಧನರಾಗಿದ್ದಾರೆ.



ಮೃತರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಇದ್ದಾರೆ. ಇದೇ ಸಂದರ್ಭದಲ್ಲಿ ಆಲಮೇಲ ಎಚ್.ಎ. ನಂದಿ ಪದವಿ ಕಾಲೇಜಿನ ವತಿಯಿಂದ ಮೃತರ ಕುಟುಂಬಕ್ಕೆ 25 ಸಾವಿರ ರೂ. ಸಹಾಯ ಧನ ನೀಡಲಾಯಿತು.

ಸಂತಾಪ: ನರೋಣಾ ಮಹಾಂತೇಶ್ವರ ಮಠದ ಡಾ. ಗುರುಮಹಾಂತಮಹಾಸ್ವಾಮಿಗಳು, ಮಾಜಿ ಶಾಸಕ ರಮೇಶ ಭೂಸನೂರ, ಎಚ್.ಎ. ನಂದಿ ಕಾಲೇಜಿನ ಅಧ್ಯಕ್ಷ ಬಸವರಾಜ ಧನಶ್ರೀ, ಆಡಳಿತ ಅಧಿಕಾರಿ ಎನ್.ಎ. ಬಿರಾದಾರ, ಪ್ರಾಚಾರ್ಯ ಎಂ.ಜಿ.ಉಪ್ಪಾರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಸಂತಾಪ ವ್ಯಕ್ತಪಡಿಸಿದ್ದಾರೆ.



ಬಸವನಬಾಗೇವಾಡಿ: ತಾಲೂಕಿನ ಮುತ್ತಗಿ ಗ್ರಾಮದಲ್ಲಿ ನೇರಗಾ ಕೂಲಿ ಕಾರ್ಮಿಕರು ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಿದರು. ಪಿಡಿಒ ಹಾಗೂ ಗ್ರಾಮ ಪಂಚಾಯತಿಯ ಸಿಬ್ಬಂದಿಗಳು ಹಾಗೂ ಸಂಜೀವಿನಿ ಮಹಿಳಾ ಒಕ್ಕೂಟದ ಸಿಬ್ಬಂದಿಗಳು ಭಾಗವಹಿಸಿದ್ದರು.

12ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ

ವಿಜಯಪುರ: ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಯೋಗ ಮತ್ತು ವ್ಯಾಯಾಮ ವಿಜ್ಞಾನ ಕೇಂದ್ರದ ಸಂಯೋಜಕಿ ಮತ್ತು ಶರೀರ ಕ್ರಿಯಾಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ. ಜ್ಯೋತಿ ಖೋದ್ನಾಪುರ ಕೇಂದ್ರದ ಮುನ್ನುಡಿ ಮತ್ತು ಪ್ರಸ್ತುತ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು.

ಡೀಮ್ಡ್ ವಿವಿಯ ಯೋಗ ಮತ್ತು ವ್ಯಾಯಾಮ ವಿಜ್ಞಾನ ಕೇಂದ್ರ, ಶರೀರ ಕ್ರಿಯಾಶಾಸ್ತ್ರ (ಫಿಜಿಯಾಲಜಿ) ವಿಭಾಗ ಹಾಗೂ ಎನ್‌ಎಸ್‌ಎಸ್ ಘಟಕದ ಆಶ್ರಯದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಖ್ಯಾತ ಯೋಗ ಶಿಕ್ಷಕ ಎಂ.ಪಿ. ದೊಡ್ಡಮನಿ, ವೈದ್ಯಕೀಯ ವಿಭಾಗದ ಮಾಜಿ ಪ್ರಾಚಾರ್ಯ ಮತ್ತ ಹಿರಿಯ ಪ್ರಾಧ್ಯಾಪಕ ಡಾ. ಆರ್. ಸಿ. ಬಿದರಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ, ವೈದ್ಯಕೀಯ ಅಧೀಕ್ಷಕ ಡಾ. ಎಸ್. ಎನ್. ಬೆಂಟೂರ, ಬಿಎಲ್‌ಡಿಇ ಡೀಮ್ಡ್ ವಿವಿಯ ನ್ಯಾಕ್ ನಿರ್ದೇಶಕಿ ಡಾ. ಸುಮಂಗಲಾ ಪಾಟೀಲ, ಡಾ. ರವಿ ಪಾಟೀಲ, ವೈದ್ಯಕೀಯ ಉಪಅಧೀಕ್ಷಕರು ಮತ್ತು ಶರೀರ ಕ್ರಿಯಾಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಲತಾ ಮುಳ್ಳೂರು ಮುಂತಾದವರು ಇದ್ದರು. ಶರೀರ ಕ್ರಿಯಾಶಾಸ್ತ್ರ ವಿಭಾಗದ ಸಹ-ಪ್ರಾಧ್ಯಾಪಕಿ ಡಾ. ಅನಿತಾ ತೇಲಿ ಸ್ವಾಗತಿಸಿದರು. ಪ್ರಾಧ್ಯಾಪಕಿ ಡಾ. ಗೌಹರ್ ಬಾನು ಪರಿಚಯಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ. ತನುಜಾ ಪಟ್ಟಣಕರ ವಂದಿಸಿದರು.



ವಿಜಯಪುರ: ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ

ಆರೋಗ್ಯಯುತ ಜೀವನಕ್ಕೆ ಯೋಗ ಅವಶ್ಯ

ವಿಜಯಪುರ: ಆರೋಗ್ಯಯುತ ಜೀವನ ರೂಪಿಸಿಕೊಳ್ಳಲು ಯೋಗವನ್ನು ಪ್ರತಿಯೊಬ್ಬರೂ ತಮ್ಮ ಬದುಕಿನ ದೈನಂದಿನ ಭಾಗವಾಗಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ್ ಕೆ. ಅವರು ಕರೆ ನೀಡಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಆಯುಷ್ ಇಲಾಖೆ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಯೋಗವು ಜಗತ್ತಿಗೆ ನಮ್ಮ ದೇಶ ನೀಡಿರುವ ಅತ್ಯಂತಹೆಮ್ಮೆಯಕೊಡುಗೆಯಾಗಿದ್ದು,ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಇಂದಿನ ಆಧುನಿಕ ಜೀವನಶೈಲಿಯಲ್ಲಿ ಎದುರಾಗುತ್ತಿರುವ ಒತ್ತಡ, ಆತಂಕ ಹಾಗೂ ಮಾನಸಿಕ ಸಮಸ್ಯೆಗಳಿಗೆ ಯೋಗ ಸಂಜೀವಿನಿಯಾಗಿದೆ. ಮನಸ್ಸು ಮತ್ತು ದೇಹದ ಸದೃಢತೆಗೆ ಯೋಗವು ಬಹು ಮುಖ್ಯವಾಗಿದ್ದು, ಪ್ರತಿನಿತ್ಯ ನಿಯಮಿತವಾಗಿ ಯೋಗಾಭ್ಯಾಸ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ನಿರೋಗಿ ಹಾಗೂ ಸುಂದರ ಜೀವನ ನಡೆಸಲು ಸಾಧ್ಯ ಎಂದರು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನೂರಾರು ಯೋಗಾಸಕ್ತರಿಗೆ ಸುನೀತಾ ಬಿರಾದಾರ, ಜ್ಯೋತಿ, ಸಂಜಯ ಹಾಗೂ ಚಂದ್ರಶೇಖರ ಅವರ ಮಾರ್ಗದರ್ಶನದಲ್ಲಿ ಸುಮಾರು 45 ನಿಮಿಷಗಳ ಕಾಲ ವಿವಿಧ ಯೋಗಾಸನಗಳು ಮತ್ತು ಪ್ರಾಣಾಯಾಮದ ಸಾಮೂಹಿಕ ಯೋಗಾಭ್ಯಾಸ ಪ್ರಾತ್ಯಕ್ಷಿಕೆಯನ್ನು ಯಶಸ್ವಿಯಾಗಿ ನಡೆಸಿಕೊಡಲಾಯಿತು.



> **ಯೋಗವು ಪ್ರಪಂಚದಾದ್ಯಂತ ಅತ್ಯಂತ ಜನಪ್ರಿಯತೆಯನ್ನು ಗಳಿಸಿದ್ದು, ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ.**
> ■ ಡಾ. ಆನಂದ ಕೆ. ಜಿಲ್ಲಾಧಿಕಾರಿ, ವಿಜಯಪುರ

ಮಹಾನಗರ ಪಾಲಿಕೆ ಮೇಯರ್ ಸಿದ್ರಾಮಪ್ಪ ಕರಡಿ, ಜಿಪಂ ಸಿಇಒ ರಿಷಿ ಆನಂದ, ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ, ಜಿಲ್ಲಾ ಆಯುಷ್ ಇಲಾಖೆಯ ಅಧಿಕಾರಿ ಡಾ.ವಿದ್ಯಾವತಿ ಅಥಣಿ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ್ ಧೈವಾಡಿ, ವಾರ್ತಾಧಿಕಾರಿ ಅಮರೇಶ ದೊಡಮನಿ, ಆಯುಷ್ ಇಲಾಖೆಯ ಆರ್.ಎಸ್. ಪಾಟೀಲ, ಡಾ. ಮಹೇಶ ನಾವದಗಿ, ಸಂಜು ಕುಲಕರ್ಣಿ, ಪಾಟೀಲ, ದೇಸಾಯಿ ಸೇರಿದಂತೆ ವಿವಿಧ ಜಿಲ್ಲಾಮಟ್ಟದ ಅಧಿಕಾರಿಗಳು, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಪತಂಜಲಿ ಯೋಗ ಸಂಸ್ಥೆ, ವಿವಿಧ ಆಯುರ್ವೇದ ಮತ್ತು ಯುನಾನಿ ಕಾಲೇಜುಗಳ ಸಿಬ್ಬಂದಿ, ಎನ್‌ಸಿಸಿ ಕೆಡೆಟ್‌ಗಳು ಹಾಗೂ ವಿವಿಧ ಶಾಲಾ- ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಇದ್ದರು.

ರೋಗಗಳ ತಡೆಗಟ್ಟುವ ಶಕ್ತಿ ಯೋಗಕ್ಕಿದೆ

ವಿಜಯಪುರ: ಯೋಗಕ್ಕೆ ಹಲವು ಮಾರಣಾಂತಿಕ ರೋಗಗಳನ್ನು ತಡೆಗಟ್ಟುವ ಅದ್ಭುತ ಶಕ್ತಿಯಿದ್ದು, ಯೋಗದಿಂದ ಏಕಾಗ್ರತೆ, ಮಾನಸಿಕ ಆರೋಗ್ಯ ಹಾಗೂ ಚೈತನ್ಯವನ್ನು ವೃದ್ಧಿಗೊಳಿಸಬಹುದು ಎಂದು ಎಕ್ಸಲಂಟ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಮಂಜುನಾಥ ಜುನಗೊಂಡ ಹೇಳಿದರು.

ನಗರ ಹೊರ ವಲಯದ ಎಕ್ಸಲಂಟ್ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯೋಗ ಕೇವಲ ದೈಹಿಕ ಕಸರತ್ತಲ್ಲ, ಮಾನವನ ಆತ್ಮದ ಅಭಿವ್ಯಕ್ತಿಯಾಗಿದೆ. ಆದ್ದರಿಂದ ವಿದ್ಯಾರ್ಥಿಗಳಾದ ತಾವು ತಪ್ಪದೇ ದಿನಪ್ರತಿ ಯೋಗದಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಬೇಕು ಎಂದರು.

ಎಕ್ಸಲಂಟ್ ಸಂಸ್ಥೆಯ ಅಧ್ಯಕ್ಷ ಬಸವರಾಜ ಕೌಲಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ಧಾವಂತದ ಬದುಕಿನಲ್ಲಿ, ಮಾಲಿನ್ಯದ ವಾತಾವರಣದಲ್ಲಿ ಆರೋಗ್ಯಕರವಾಗಿರಬೇಕಾದರೆ ಯೋಗ ನಮಗೆ ಅತ್ಯಗತ್ಯ. ಪ್ರತಿ ದಿನ 20 ರಿಂದ 30 ನಿಮಿಷಗಳಕಾಲ ಯೋಗಾಭ್ಯಾಸಮಾಡಬೇಕು. ಇದರಿಂದ ಇಡಿ ದಿನ ಉತ್ಸಾಹಭರಿತರಾಗಿರಲು ಸಾಧ್ಯ ಎಂದರು.

ಅಂತಾರಾಷ್ಟ್ರೀಯ ಯೋಗ ಪಟು ಪ್ರಕಾಶ ಚವ್ಹಾಣ ಯೋಗ ಪ್ರದರ್ಶನವನ್ನು ನಡೆಸಿಕೊಟ್ಟರು. ಶಾಲೆಯ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಯೋಗಾಭ್ಯಾಸ ಪ್ರದರ್ಶನ ನಡೆಯಿತು.

ಶಾಲೆಯ ಮುಖ್ಯಗುರು ಶ್ರೀಶೈಲ ಹೆಗಳಾಡಿ ಮಾತನಾಡಿ, ಈ ವರ್ಷದ ಯೋಗ ದಿನಾಚರಣೆಯನ್ನು ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ವಿಶೇಷ ಘೋಷ ವಾಕ್ಯದೊಂದಿಗೆ ಇಂದಿನ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ದೈಹಿಕ ಶಿಕ್ಷಕ ಸಂಗಮೇಶ ಗುಳಗಿ, ಪರಿಮಳಾ ನಾಗರೇಶಿ, ದೇವರಾಜ ಶಿಂಧೆ ಮಾರ್ಗದರ್ಶನದಲ್ಲಿ ಹಾಸ್ಟೇಲ್ ವಿದ್ಯಾರ್ಥಿಗಳಿಂದ ಯೋಗ ಪ್ರದರ್ಶನ ನಡೆಯಿತು. ಶಿಕ್ಷಕ ಬಸವರಾಜ ಹಡಪದ, ಕವಿತಾ ಅಥಣಿ, ಶಿಕ್ಷಕ ಎಸ್.ಎಸ್. ಬಿರಾದಾರ, ಶ್ರೀಕಾಂತ ಹೂಗಾರ, ಸುಧಾಕರ ಅಲ್ಲವಗೊಳ, ಎ.ಪಿ. ಕೊರ್ತಿ, ಎಸ್.ಬಿ. ಪವಾರ, ಐ.ಎಮ್. ಹಿಟ್ನಳ್ಳಿ ಇದ್ದರು.



ಸದೃಢ ದೇಹಕ್ಕೆ ಯೋಗ ಪೂರಕ: ಮಿಂಚನಾಳ

ದೇವರಹಿಪ್ಪರಗಿ: ಸದೃಢ ದೇಹ, ಪರಿಶುದ್ಧ ಮನಸ್ಸು ನಿರ್ಮಾಣಕ್ಕೆ ಯೋಗ ಪೂರಕವಾಗಿದೆ. ಇಡೀ ಜಗತ್ತು ಯೋಗ ಅಳವಡಿಸಿಕೊಂಡು ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದೆ ಎಂದು ಯೋಗಗುರು ಪಂಚಾಕ್ಷರಿ ಮಿಂಚನಾಳ ಹೇಳಿದರು.

ರವಿವಾರ ಪಟ್ಟಣದ ಶ್ರೀ ಸಿದ್ದೇಶ್ವರ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾದ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಯೋಗ ಎಂಬುದು ದೈಹಿಕ ಮಾನಸಿಕತೆ ಮೇಲೆ ನೇರ ಪರಿಣಾಮ ಬೀರಲಿದ್ದು, ಆರೋಗ್ಯಯುತ ಜೀವನಕ್ಕೆ ಸಹಕಾರಿಯಾಗಿದೆ. ಆಧುನಿಕತೆ ಬೆಳೆದಂತೆ ಒತ್ತಡ ಜೀವನ ಹೆಚ್ಚಾಗುತ್ತಿದೆ. ಔಷಧವಿಲ್ಲದ ಬದುಕು ಸಾಗಿಸಲು ಯೋಗವು ರಾಮಬಾಣವಾಗಿದೆ. ಪುರಾತನ ಕಾಲದಿಂದಲೂ ಯೋಗದಿಂದಲೇ ಎಲ್ಲವನ್ನು ಸಾಧಿಸುವ ಸಾಮರ್ಥ್ಯ ಭಾರತೀಯರು ಪಡೆದಿದ್ದಾರೆ. ಈಗ ಇಡೀ ಜಗತ್ತು ಅದನ್ನು ಅನುಸರಿಸುತ್ತಿದೆ. ಕಳೆದ 12 ವರ್ಷಗಳಿಂದ ಅಂತರಾಷ್ಟ್ರೀಯ ಮನ್ನಣೆ ಪಡೆದು ಜಗತ್ಪ್ರಸಿದ್ಧವಾಗಿದೆ. ಜ್ಞಾನಯೋಗ, ಭಕ್ತಿಯೋಗ, ರಾಜಯೋಗ ಹಾಗೂ ಕರ್ಮಯೋಗದಿಂದ ಜೀವನ ಸುಂದರಗೊಳಿಸಿಕೊಳ್ಳಬಹುದು. ಪ್ರತಿಯೊಬ್ಬರೂ ದಿನನಿತ್ಯ ಯೋಗ ಮಾಡುವುದನ್ನು ರೂಢಿ ಮಾಡಿಕೊಳ್ಳಬೇಕು. ನಿತ್ಯ ಪರಿಶುದ್ಧ ಗಾಳಿ ಸೇವನೆಯಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬುದು ಎಲ್ಲರೂ ಯೋಗ ಪಾಲಿಸಿ ನಿರೋಗದಿಂದ ಬದುಕು ಕಟ್ಟಿಕೊಳ್ಳೋಣ ಎಂದು ಕರೆ ನೀಡಿದರು.

ಯೋಗೋತ್ಸವದಲ್ಲಿ ಸಿದ್ದೇಶ್ವರ ಶಾಲೆಯ ಸುಮಾರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ಯಶಸ್ವಿಗೊಳಿಸಿದರು. ಸಿದ್ದೇಶ್ವರ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಪ್ರೋ. ವಿವೇಕಾನಂದ ಪಾಟೀಲ, ದೇವರಹಿಪ್ಪರಗಿ ಯೋಗ ಸಮಿತಿ ಅಧ್ಯಕ್ಷ ಚೆನ್ನವೀರ ಕುದರಿ, ನರೇಂದ್ರ ನಾಡಗೌಡ, ಆನಂದ ಜಡಿಮಠ, ಎಸ್ ವ್ಹಿ ಹರಳಯ್ಯ ಪಡನೂರ, ಸಂಗಪ್ಪಾ ತಡವಲ್ ಸೇರಿದಂತೆ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು, ಬೋಧಕರು, ಸಿಬ್ಬಂಧಿ, ಸಾರ್ವಜನಿಕರು ಪಾಲ್ಗೊಂಡಿದ್ದರು.



ಮಳೆಗಾಗಿ ಗೊಂಬೆಗಳ ಮದುವೆ: ದೇವರಲ್ಲಿ ಮರೆಹೋದ ರೈತರು, ಗ್ರಾಮಸ್ಥರು

ಬಸವನಬಾಗೇವಾಡಿ: ತಾಲೂಕಿನ ಮುತ್ತಗಿ ಗ್ರಾಮದಲ್ಲಿ ಗ್ರಾಮ ದೇವತೆ ಯುವಕ ಸಂಘ ಹಾಗೂ ಗ್ರಾಮದ ಸಮಸ್ತ ಗುರು ಹಿರಿಯರು ಹಾಗೂ ರೈತರು ಸೇರಿ ಮುಂಗಾರು ಮಳೆಗಾಗಿ ಗೊಂಬೆಗಳ ಮದುವೆ ಮಾಡಿ, ಊರಿಗೆ ಊಟ ಹಾಕುವ ಕಾರ್ಯಕ್ರಮ ಶನಿವಾರ ಆಯೋಜಿಸಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಈ ಬಾರಿ ರೈತರಿಗೆ ಮುಂಗಾರು ಮಳೆ ಸರಿಯಾಗಿ ಬಾರದೆ ಇರುವುದರಿಂದ ಊರಿನ ಎಲ್ಲಾ ರೈತರು ಸೇರಿ ಗ್ರಾಮ ದೇವತೆ ಮುಂದೆ ಮಳೆಗಾಗಿ ಪ್ರಾರ್ಥನೆ ಸಲ್ಲಿಸಿದರು,

ಈ ಕಾರ್ಯಕ್ರಮದಲ್ಲಿ ಗ್ರಾಮ ದೇವತೆಯ ಅರ್ಚಕರಾದ ಬಾಬು ಬಡಿಗೇರ, ದೇವೇಂದ್ರಗೌಡ ಬಿರಾದಾರ, ಅಬ್ದುಲರಜಾಕ ಚಪ್ಪರಬಂದ, ಶಾಂತಗೌಡ ಬಿರಾದಾರ, ಮಲ್ಲಿಕಾರ್ಜುನ ಚೀರಲದ್ನಿ, ಗುರುಪಾದ ಮೊಪಗಾರ, ಮೌಲಾಲಿ ಮಂಟೂರ, ಮಲಕಾಜಿ ಬಿರಾದಾರ, ನಾಗಪ್ಪ ಹಂಡಿ, ಶಿವಶಂಕರ ಬಿರಾದಾರ, ಶಿವಪ್ಪ ಇಜೇರಿ, ಮುನ್ನಾ ಚಪ್ಪರಬಂದ, ಮುದಕು ಕುದರಿ, ಯಮನೂರಿ ಕೋಲಕಾರ, ಶಿವರುದ್ರಪ್ಪ ಹೊಸಮನಿ, ಕಸ್ತೂರಿ ಹಿರೇಮಠ, ಲಕ್ಷ್ಮೀ ಬಿರಾದಾರ, ಶಾಂತವ್ವ ನಾಯ್ಕರ, ಮಾದೇವಿ ಬಿರಾದಾರ, ಹೆಣ್ಣು ಗೊಂಬೆಯ ಮದುಮಗಳ ಕಡೆಯಿಂದ ಬಂದ ಬಿಗರಿಗೆ ಉಪಹಾರ, ಚೋಡಾ ಚಹಾ, ಶೀರಾ, ಅನ್ನ, ಸಾಂಬಾರ ಸೇರಿ ರುಚಿಯಾದ ಅಡುಗೆ ಮಾಡಿಸಿ ಗ್ರಾಮದ ಜನರಿಗೆ ಊಟ ಹಾಕಿಸಿ ಅತೀ ವಿಜೃಂಭಣೆಯಿಂದ ಗೊಂಬೆಗಳ ಮದುವೆ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮದ ತಾಯಂದಿರು ಮಹಿಳೆಯರು, ಗ್ರಾಮದ ಗುರು ಹಿರಿಯರು ಹಾಗೂ ಯುವಕರು ಇದ್ದರು.



ಮಕ್ಕಳಲ್ಲಿ ಶಿಸ್ತು, ಮೌಲ್ಯ ಬೆಳೆಸುವಲ್ಲಿ ತಂದೆ ಪಾತ್ರ ಪ್ರಮುಖ: ಡಾ.ಕೆಲೂರ

ವಿಜಯಪುರ: ತಂದೆಯು ಮಕ್ಕಳಿಗೆ ಶಿಸ್ತು, ಮೌಲ್ಯಗಳು, ಆತ್ಮವಿಶ್ವಾಸ ಹಾಗೂ ಉತ್ತಮ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಮಕ್ಕಳ ಜೀವನ ರೂಪಿಸುವಲ್ಲಿ ಅವರ ಪಾತ್ರ ಮಹತ್ವ ಎಂದು ವೇದ ಅಕಾಡೆಮಿ ಸಂಸ್ಥೆಯ ಅಧ್ಯಕ್ಷ ಡಾ.ಶಿವಾನಂದ ಕೆಲೂರ ಹೇಳಿದರು.

ನಗರ ಹೊರ ವಲಯ ಇಟ್ಟಂಗಿಹಾಳ ಬಳಿಯ ವೇದ ಅಕಾಡೆಮಿ ಸಂಸ್ಥೆಯಲ್ಲಿ ಹಮ್ಮಿಕೊಂಡ ತಂದೆಯರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳ ಜೀವನದಲ್ಲಿ ತಂದೆಯರ ಪಾತ್ರ ಹಾಗೂ ಕುಟುಂಬದ ಸದೃಢ ಬೆಳವಣಿಗೆಯಲ್ಲಿ ತಂದೆಯ ಕೊಡುಗೆ ಅನನ್ಯವಾಗಿ ಎಂದರು.

ಸಂಸ್ಥೆಯ ಖಜಾಂಚಿ ಶಿವಲೀಲಾ ಕೆಲೂರ ಮಾತನಾಡಿ, ಮಕ್ಕಳಿಗೆ ತಂದೆ-ತಾಯಿ ಎಂದರೆ ಒಂದೇ ನಾಣ್ಯದ ಎರಡು ಮುಖಗಳು, ತಂದೆಯರು ಮಕ್ಕಳಿಗಾಗಿ ಹಗಲಿರುಳು ಕಷ್ಟಪಡುತ್ತಾರೆ, ಅದನ್ನು ಮಕ್ಕಳಿಗೆ ತಿಳಿಸುವ ಕಾರ್ಯ ತಾಯಂದಿರು ಮಾಡಬೇಕು ಎಂದರು.

ಶಾಲೆಯಲ್ಲಿ ಮಕ್ಕಳಿಂದ ತಂದೆಯರಿಗೆ ಪಾದ ಪೂಜೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ವಿಶಿಷ್ಟ ಕಾರ್ಯಕ್ರಮವು ಭಾವನಾತ್ಮಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿಬಿಂಬಿಸಿ, ತಂದೆ- ಮಕ್ಕಳ ನಡುವಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ ಎಂದರು.

ಇದೇ ಸಂದರ್ಭ ವಿದ್ಯಾರ್ಥಿಗಳು ತಮ್ಮ ತಂದೆಯರಿಗೆ ಪ್ರತ್ಯಕ್ಷ ಪಾದಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಎನ್.ಜಿ. ಯಾರನಾಳ, ಕೃಪಾ ಕೆಲೂರ, ಮುಖ್ಯ ಶಿಕ್ಷಕಿ ರಶ್ಮಿ ಕವಟಗಿಮಠ ಹಾಗೂ ಶಾಲೆಯ ಎಲ್ಲ ಶಿಕ್ಷಕರು ಇದ್ದರು.



ಕ್ಯಾಂಪಸ್ ಉದ್ಯೋಗ ಮೇಳ: 23 ವಿದ್ಯಾರ್ಥಿಗಳು ಆಯ್ಕೆ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್ ವಿದ್ಯಾಲಯದಲ್ಲಿ ಜೂ. 9 ರಂದು ಬೆಂಗಳೂರಿನ ಸೆಂಟಮ್ ಎಲೆಕ್ಟ್ರಾನಿಕ್ಸ್ ಮತ್ತು ಬೆಳಗಾವಿಯ ಏಕಸ್ ಸಂಸ್ಥೆಗಳು ನಡೆಸಿದ ಕ್ಯಾಂಪಸ್ ಉದ್ಯೋಗ ಮೇಳದಲ್ಲಿ ಕಾಲೇಜಿನ ಒಟ್ಟು 23 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಸಂಸ್ಥೆಗೆ 17 ಮತ್ತು ಏಕಸ್ ಸಂಸ್ಥೆಗೆ ಆರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಬೆಂಗಳೂರಿನ ಸೆಂಟಮ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ವತಿಯಿಂದ ಸಹಾಯಕ ವ್ಯವಸ್ಥಾಪಕ ಮತ್ತು ಮಾನವ ಸಂಪನ್ಮೂಲ ಅಧಿಕಾರಿ ಅಂಕಿತ್ ಸಿ. ಡಿ. ಅವರು ಖುದ್ದಾಗಿ ಆಗಮಿಸಿ ಸಂದರ್ಶನ ನಡೆಸಿದರು.

ಈ ಸಂದರ್ಶನದಲ್ಲಿ ವಿಜಯಪುರ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದ 21ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದ 20 ವಿದ್ಯಾರ್ಥಿಗಳಿಗೆ ಮೌಖಿಕ ಸಂದರ್ಶನ ನಡೆಸಲಾಗಿತ್ತು. ಈ ವಿದ್ಯಾರ್ಥಿಗಳಲ್ಲಿ ಅಂತಿಮವಾಗಿ 17 ವಿದ್ಯಾರ್ಥಿಗಳನ್ನು ಕಂಪನಿ ಆಯ್ಕೆಮಾಡಿಕೊಂಡಿದೆ.

ಬೆಳಗಾವಿಯ ಏಕಸ್ ಸಂಸ್ಥೆಯಿಂದ ವತಿಯಿಂದ ಮಾನವ ಸಂಪನ್ಮೂಲ ಅಧಿಕಾರಿ ಶ್ರಾವಣಿ ಕುಲಕರ್ಣಿ ಮತ್ತು ಅವರ ತಂಡದವರು ಮೆಕ್ಯಾನಿಕಲ್ ಮತ್ತು ಆಟೋಮೊಬೈಲ್ ಎಂಜಿನಿಯರಿಂಗ್ ವಿಭಾಗದ 24 ಕ್ಕೂ ಹೆಚ್ಚು ವಿದ್ಯಾರ್ಥಿಗಳ ಸಂದರ್ಶನದಲ್ಲಿ ನಡೆಸಿದ್ದರು. ಲಿಖಿತ ಪರೀಕ್ಷೆಯ ಮೂಲಕ 16 ವಿದ್ಯಾರ್ಥಿಗಳನ್ನು ಮೌಖಿಕ ಸಂದರ್ಶನಕ್ಕೆ ಆಯ್ಕೆ ಮಾಡಲಾಗಿತ್ತು. ಅವರಲ್ಲಿ ಅತ್ಯುತ್ತಮ ಆರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಈ ಕ್ಯಾಂಪಸ್ ಸಂದರ್ಶನ ಸಂದರ್ಭದಲ್ಲಿ ಆರಂಭದಲ್ಲಿ ಪಾಲಿಟೆಕ್ನಿಕ್ ಪ್ರಾಚಾರ್ಯ ಪ್ರಭುದೇವ ಕಳಸಗೊಂಡ, ಉದ್ಯೋಗಾಧಿಕಾರಿ ಸುಧನ್ವ ಕುಲಕರ್ಣಿ, ಸಂತೋಷ ಹಿರೇಮಠ, ಪಾಂಡುರಂಗ ಆಸ್ಲಂಕರ್, ಈರೇಶ ಪಾಟೀಲ ಹಾಗೂ ಸಂಸ್ಥೆಯ ಎಲ್ಲ ವಿಭಾಗದ ಮುಖ್ಯಸ್ಥರು ಮತ್ತು ಉಪನ್ಯಾಸಕ ಸಿಬ್ಬಂದಿ ಇದ್ದರು. ನೇರ ಸಂದರ್ಶನದ ಮೂಲಕ ಉದ್ಯೋಗ ಪಡೆದ ಎಲ್ಲ 23 ಸಾಧಕ ವಿದ್ಯಾರ್ಥಿಗಳಿಗೆ ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ.ಬಿ. ಪಾಟೀಲ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಪ ಸದಸ್ಯ ಸುನೀಲಗೌಡ ಪಾಟೀಲ, ಆಡಳಿತ ಮಂಡಳಿಯ ನಿರ್ದೇಶಕರು, ವಿದ್ಯಾಲಯದ ಪ್ರಾಚಾರ್ಯರು, ಬೋಧಕ, ಬೋಧಕರ ಹೊರತಾದ ಸಿಬ್ಬಂದಿ ವರ್ಗದವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಅಲ್ಲದೇ, ಆಯ್ಕೆಯಾದ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೆ ಶುಭ ಹಾರೈಸಿದ್ದಾರೆ.



ಯೋಗ ರೂಢಿಸಿ, ರೋಗ ಓಡಿಸಿ

ಮುದ್ದೇಬಿಹಾಳ: ತಾಲೂಕಿನ ಬಿದರಕುಂದಿ ಗ್ರಾಮದ ಆದರ್ಶ ವಿದ್ಯಾಲಯ ಬಿದರಕುಂದಿಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸರ್ಕಾರಿ ಗ್ರೇಡ್ 1 ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಅಧ್ಯಕ್ಷರಾದ ಎ.ಸಿ.ಕೆರೂರ ಮತ್ತು ಎನ್.ಎಸ್. ಬಿರಾದಾರ್ ರವರ ಮಾರ್ಗದರ್ಶನದಲ್ಲಿ ಶಾಲೆಯ 300 ವಿದ್ಯಾರ್ಥಿಗಳಿಗೆ ಯೋಗಾಸನವನ್ನು ಮಾಡಿಸಲಾಯಿತು.

ಯೋಗವನ್ನು ರೂಡಿಸಿ ರೋಗವನ್ನು ಓಡಿಸಿ ಎನ್ನುವಂತೆ ಅಷ್ಟ ಪುತ್ಥಂಜಲಿಯವರ ಅಷ್ಟಾಂಗ ಯೋಗವನ್ನು ಯೋಗಾಸನದ ಬಗ್ಗೆ ತಿಳಿಸಿದರು. ಸಭೆಯ ಅಧ್ಯಕ್ಷತೆಯನ್ನು ಶಾಲೆ ಮುಖ್ಯ ಗುರುಗಳಾದ ಅನಿಲ್ ಕುಮಾರ್ ರಾಥೋಡ. ವಹಿಸಿದ್ದರು.

ಶಿಕ್ಷಕರಾದ ಎಸ್.ಬಿ.ಸಜ್ಜನ, ಎಸ್.ಎಲ್.ಸೋಮಪುರ, ಸಿ.ಪಿ. ಓಲೆಕಾರ, ಎನ್.ಬಿ.ಸಜ್ಜನ, ಆರ್.ಎಂ.ಪಿಂಜಾರ, ಎನ್ .ಬಿ.ನಾಡಗೌಡ, ರೇಣುಕಾ ದೇವಿಗಿರಕರ, ಸವಿತಾ ಪವಾರ, ಚೇತನಾ ಹಿರಿಯಾಳ, ನವೀನ್ ಚಲವಾದಿ, ಹುಸೇನಬಾಷಾ ಹಾವರಗಿ, ಶ್ವೇತಾ ಕಟ್ಟಿಮನಿ. ಸುಪ್ರಿಯಾ ಹೂಗಾರ. ಸಿದ್ದು ಬಸರಕೋಡ ಇದ್ದರು.



ಆರ್‌ಎಸ್‌ಎಸ್ ನೋಂದಾಯಿಸಿಕೊಳ್ಳುವ ಅವಶ್ಯಕತೆಯಿಲ್ಲ: ಅಂಗಡಿ

ವಿಜಯಪುರ: ಯಾವ ಸಂಘ ಸಂಸ್ಥೆ ಸರ್ಕಾರದಿಂದ ಅನುದಾನ ಪಡೆಯಬೇಕು ಎಂದು ಬಯಸುತ್ತದೆಯೋ ಅಂತವುಗಳು ನೋಂದಣಿ ಮಾಡಿಕೊಳ್ಳುತ್ತವೆ. ಸರ್ಕಾರದಿಂದ ಸಹಾಯ ಪಡೆಯಲಿಚ್ಚಿಸದ ಯಾವುದೇ ಸಂಸ್ಥೆಯು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂಬ ನಿಯಮ ಭಾರತದ ಸಂವಿಧಾನದಲ್ಲಿಲ್ಲ, ಹಾಗಾಗಿ ಆರ್‌ಎಸ್ ಎಸ್ ಕೂಡ ನೋಂದಾಯಿಸಿಕೊಳ್ಳುವ ಅವಶ್ಯಕತೆಯಿಲ್ಲ ಎಂಬುದನ್ನು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಅರಿತುಕೊಳ್ಳಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಚಾಟಿ ಬೀಸಿದರು.

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 1925 ರಲ್ಲಿ ಆರಂಭವಾಗಿರುವ ಆರ್‌ಎಸ್‌ಎಸ್ ಕಾನೂನು ಬಿಟ್ಟು ಯಾವುದೇ ಕೆಲಸ ಮಾಡಿಲ್ಲ, ಸಾಕಷ್ಟುಬಾರಿ ಆರ್‌ಎಸ್‌ಎಸ್ ಮೇಲೆ ಹಲವು ಕೇಸುಗಳಾದಾಗಲೂ ಅದು ಕಾನೂನು ಮೂಲಕ ಹೋರಾಟಮಾಡಿ ಗೆದ್ದಿದೆ. ಇದೀಗ ಮತ್ತೆ ಆರ್‌ಎಸ್‌ಎಸ್ ಬಗ್ಗೆ ಕೇಳುವ ಕಾಂಗ್ರೆಸ್ ನಾಯಕರಿಗೆ ಸೋಲುವ ಪ್ರಶ್ನೆಯೇ ಇಲ್ಲ, ಗೃಹ ಸಚಿವ ಪ್ರಿಯಾಂಕ್ ಖರ್ಗೆ ರವರು ಆರ್‌ಎಸ್ ಎಸ್ ಬಗ್ಗೆ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ಗೃಹ ಸಚಿವರಾಗಿರುವ ಖರ್ಗೆ ರವರು ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಕೆಲಸ ಮಾಡಬೇಕು ಎಂದರು.

ಕಳೆದ 100 ವರ್ಷಗಳಿಂದಲೂ ಕಿರಿಕಿರಿ ಮಾಡಿತ್ತಿರುವ ಕಾಂಗ್ರೆಸ್ ನವರೇ ಸೋತು ಆರ್‌ಎಸ್‌ಎಸ್ ಬಗ್ಗೆ ಅಭಿಮಾನ ತೋರಿಸಿದ್ದಾರೆ. ಪ್ರಿಯಾಂಕ್ ಖರ್ಗೆ ಅವರಿಗೆ ಆರ್‌ಎಸ್‌ಎಸ್ ಗೆ ಏನು ಮಾಡಲು ಆಗುವುದಿಲ್ಲ, ಹಾಗಾಗಿ ಇವರು ಆ ವಿಚಾರ ಬಿಟ್ಟು ರಾಜ್ಯದ ಕಾನೂನು ಸುವ್ಯವಸ್ಥೆ ಕಾಪಾಡಬೇಕು ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದ್ದಾರೆ. ಆದರೆ ಅದನ್ನೇ ಅಪಾರ್ಥವಾಗಿ ಕಲ್ಪಿಸಲಾಗುತ್ತಿದೆ. ರಾಜ್ಯ ಹಾಗೂ ಕೇಂದ್ರದಲ್ಲೂ ಮಂತ್ರಿಗಳಾದ ಜಿಗಜಿಣಗಿಯವರು ಖರ್ಗೆ ಬಗ್ಗೆ ಕೇಡು ಮಾತನಾಡಿಲ್ಲ, ಹಾಗಾಗಿ ಯಾರೂ ಸಹ ಸಂಸದರ ಬಗ್ಗೆ ಕೇವಲವಾಗಿ ಮಾತನಾಡಬಾರದು ಎಂದು ವಿನಂತಿಸಿದರು.

ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮಂಜುನಾಥ ಮೀಸೆ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಈರಣ್ಣ ರಾವೂರ, ವಿಜಯ ಜೋಶಿ ಇದ್ದರು.



ಕಿರುಸುದ್ದಿ

ದಾಖಲಾತಿ ಹಾಜರಾತಿ ಆಂದೋಲನ



ಕುಷ್ಟಗಿ: ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಜುಮ್ಲಾಪುರ ಗ್ರಾಮದಲ್ಲಿ ದಾಖಲಾತಿ ಹಾಜರಾತಿ ಆಂದೋಲನವನ್ನು ಶಾಲಾ ಶಿಕ್ಷಣ ಇಲಾಖೆ ಹಾಗೂ ಕಲಿಕೆ ಟಾಟಾ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಇಸಿಒ, ಸಿಆರ್‌ಪಿ ಮತ್ತು ಮುಖ್ಯೋಪಾಧ್ಯಾಯರು ಚಾಲನೆ ನೀಡುವುದರ ಮೂಲಕ ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಡ್ರಮ್ ಸೆಟ್ ಮೂಲಕ ಅಲಂಕೃತಗೊಂಡ ವಾಹನದಲ್ಲಿ ಹೊಸದಾಗಿ ದಾಖಲಾದ ಮಕ್ಕಳನ್ನು ಮೆರವಣಿಗೆ ಮೂಲಕ ಘೋಷಣೆ ಕೂಗುತ್ತ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜಾಗೃತಿಯನ್ನು ಮೂಡಿಸಲಾಯಿತು.

ಎಸ್‌ಡಿಎಂಸಿ ಅಧ್ಯಕ್ಷರು, ಮತ್ತು ಸದಸ್ಯರು, ಇಸಿಒ ರಾಘವೇಂದ್ರ, ಸಿಆರ್‌ಪಿ ಯಮನಪ್ಪ ಗುಂಟಿಕಾರ, ಮುಖ್ಯೋಪಾಧ್ಯಾಯರಾಗಿ ದೊಡ್ಡಬಸಪ್ಪ ಬಂಡಿ, ಸಹ ಶಿಕ್ಷಕರಾದ ಹನುಮಗೌಡ, ಅತಿಥಿ ಶಿಕ್ಷಕರು ಹಾಗೂ ಟಾಟಾ ಟ್ರಸ್ಟ್‌ನ ಹಿರಿಯ ಕಾರ್ಯಕ್ರಮ ಸಂಯೋಜಕರಾದ ಬಾಷಾಸಾಬ ಬಸವರಾಜ ಹಾದಿಮನಿ, ಗ್ರಾಮದ ಯುವಕರು, ಶಿಕ್ಷಣ ಪ್ರೇಮಿಗಳು ಮತ್ತು ಹಿರಿಯರಿದ್ದರು.

ಮೊಹರಂ ಹಬ್ಬ ಶಾಂತಿಯುತ ಆಚರಿಸಿ

ಹನುಮಸಾಗರ: ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಮೊಹರಂ ಹಬ್ಬದ ಅಂಗವಾಗಿ ನಡೆದ ಶಾಂತಿ ಸಭೆಯಲ್ಲಿ ಮಾತನಾಡಿ, ಮೊಹರಂ ಧಾರ್ಮಿಕ ಮಹತ್ವ ಹೊಂದಿರುವುದರ ಜತೆಗೆ ಸಮಾಜದಲ್ಲಿ ಸಾಮರಸ್ಯ ಮತ್ತು ಮಾನವೀಯ ಮೌಲ್ಯ ಸಾರುವ ಹಬ್ಬವಾಗಿದೆ. ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆಗೆ ಸಹಕರಿಸಬೇಕು. ಮೆರವಣಿಗೆ ಮತ್ತು ಧಾರ್ಮಿಕ ಕಾರ್ಯಕ್ರಮಗಳ ವೇಳೆ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಬೇಕು. ವದಂತಿಗಳಿಗೆ ಕಿವಿಗೊಡದೆ, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಹಾಗೂ ಪ್ರಚೋದನಕಾರಿ ಸಂದೇಶ ಹರಡುವುದನ್ನು ತಪ್ಪಿಸಬೇಕು. ಯಾವುದೇ ಅನುಮಾನಾಸ್ಪದ ಚಟುವಟಿಕೆ ಕಂಡುಬಂದಲ್ಲಿ ಕೂಡಲೇ ಪೊಲೀಸ್ ಇಲಾಖೆ ಗಮನಕ್ಕೆ ತರಬೇಕು ಎಂದರು.

ಮೊಹರಂ ಹಬ್ಬವನ್ನು ಶಾಂತಿ, ಸೌಹಾರ್ದತೆ ಹಾಗೂ ಸಹೋದರತ್ವದ ಭಾವನೆಯೊಂದಿಗೆ ಆಚರಿಸುವಂತೆ ಹನುಮಸಾಗರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಮೊಹರಂ ಹಬ್ಬದ ಅಂಗವಾಗಿ ನಡೆದ ಶಾಂತಿ ಸಭೆಯಲ್ಲಿ ಪಿಎಸ್ಐ ಎಂ.ಧನಂಜಯ ಮಾತನಾಡಿದರು. ಮೊಹರಂ ಹಬ್ಬದ ಆಚರಣೆಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಶಾಂತಿಯುತ ಹಾಗೂ ಸುವ್ಯವಸ್ಥಿತ ಆಚರಣೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಗ್ರಾಮದ ಪ್ರಮುಖರು ಇತರರು ಇದ್ದರು.

ಜೂ.28ರಿಂದ ಪೋಲಿಯೋ ಅಭಿಯಾನ

ಸಿಂಧನೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿಗಳ ವಿಭಾಗ ರಾಯಚೂರು, ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಆಶ್ರಯದಲ್ಲಿ ಜೂನ್ 28ರಂದು ಪಲ್ಸ್ ಪೋಲಿಯೊ ಲಸಿಕೆ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಅಯ್ಯನಗೌಡ ತಿಳಿಸಿದ್ದಾರೆ. ಭಾನುವಾರ ಹೇಳಿಕೆ ನೀಡಿರುವ ಅವರು, ಸಿಂಧನೂರು ತಾಲ್ಲೂಕಿನಲ್ಲಿ ಐದು ವರ್ಷದೊಳಗಿನ ಮಕ್ಕಳಿಗೆ 2 ಹನಿ ಪೋಲಿಯೋ ಲಸಿಕೆ ಹಾಕಲಾಗುವುದು.

ನಗರ ಪ್ರದೇಶದ ವ್ಯಾಪ್ತಿಯ ಪೋಲಿಯೋ ಬೂತ್‌ಗಳನ್ನು ತೆರೆಯಲಾಗಿದ್ದು, ಸಾರ್ವಜನಿಕರಿಗೆ ತಮ್ಮ ಮನೆಯ ಹತ್ತಿರದ ಬೂತ್‌ಗಳಲ್ಲಿ ಲಸಿಕೆ ಹಾಕಿಸಬೇಕು. ತಮ್ಮ ಮೊಬೈಲ್‌ಗಳಲ್ಲಿ ಕ್ಯೂಆರ್ ಕೋಡ್ ಮೂಲಕ ಮಾಹಿತಿ ಪಡೆಯಲು ಅನುಕೂಲವಾಗುವಂತೆ ಸಿದ್ಧಪಡಿಸಲಾಗಿದೆ. ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು. ಜೂನ್.23, 24, 25ರಂದು ಅಂಗನವಾಡಿ ಮಕ್ಕಳು, ಖಾಸಗಿ ಕಿಂಡರ್‌ಗಾರ್ಟನ್‌ಗಳಲ್ಲಿ ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೊ ಹನಿ ಹಾಕಲಾಗುವುದು. ಪೋಲಿಯೋ ಮುಕ್ತ ಭಾರತ ನಿರ್ಮಾಣಕ್ಕಾಗಿ ಸಾರ್ವಜನಿಕರು ಕೈಜೋಡಿಸಬೇಕು ಎಂದು ಮನವಿ ಮಾಡಿದ್ದಾರೆ.



ಯಲಬುರ್ಗಾ: ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜ ಮೈದಾನದಲ್ಲಿ ಭಾನುವಾರ ತಾಲೂಕಾಡಳಿತ, ಪಟ್ಟಣ ಪಂಚಾಯತಿ ಕಾರ್ಯಾಲಯ, ಆಯುಷ ಇಲಾಖೆ, ಬಸವಲಿಂಗೇಶ್ವರ ಯೋಗ ತರಬೇತಿ ಕೇಂದ್ರ, ಸಹಯೋಗದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ವಿಶ್ವಯೋಗ ದಿನಾಚರಣೆ ನಿಮಿತ್ತ ಸಸಿಗಳಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಯೋಗ ಸಮಗ್ರ ಜೀವನ ಪದ್ಧತಿ

ಯಲಬುರ್ಗಾ: ಯೋಗವು ದೇಹ, ಮನಸ್ಸು ಮತ್ತು ಆತ್ಮದ ಸಮನ್ವಯ ಸಾಧಿಸುವ ಸಮಗ್ರ ಜೀವನ ಪದ್ಧತಿಯಾಗಿದೆ ಎಂದು ಯೋಗ ಮಾರ್ಗದರ್ಶಕ ಅಶೋಕ್ ಹೇಳಿದರು.

ತಾಲೂಕಿನ ಕುದ್ರಿಕೊಟಗಿ ಗ್ರಾಮದ ಹೊರವಲಯದಲ್ಲಿರುವ ಶ್ರೀಸತ್ಯ ಸಾಯಿ ಸೇವಾನಿಕೇತನಂ ಕ್ಯಾಂಪಸ್‌ನಲ್ಲಿ ಭಾನುವಾರ ಆಯೋಜಿಸಿದ್ದ ಅಂತರಾಷ್ಟ್ರೀಯ ವಿಶ್ವಯೋಗ ದಿನಾಚರಣೆ ನಿಮಿತ್ತ ಯೋಗ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿವಿಧ ಯೋಗಾಸನಗಳ ಮಹತ್ವ ಮತ್ತು ಆರೋಗ್ಯಕಾರಿ ಪ್ರಯೋಜನಗಳ ಪಡೆಯುವ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಗಳು ಯೋಗವನ್ನು ಕಲಿಯುವ ಜತೆಗೆ ಸದೃಢ ಆರೋಗ್ಯವನ್ನು ಪಡೆದುಕೊಳ್ಳಲು ಸಾಧ್ಯ ಎಂದರು.

ಶ್ವಾಸಕೋಶಗಳ ಸಾಮರ್ಥ್ಯ ಹೆಚ್ಚಿಸುವ ಹಾಗೂ ಒತ್ತಡ ನಿವಾರಣೆಗೆ ಸಹಕಾರಿಯಾಗುವ ಉಸಿರಾಟದ ತಂತ್ರಗಳನ್ನೂ ಪರಿಚಯಿಸಿದರು. ಅಧಿವೇಶನದ ಕೊನೆಯಲ್ಲಿ ಸಿಂಹಾಸನದ ಮಹತ್ವವನ್ನು ವಿವರಿಸಿದರು.

ಶ್ರೀಸತ್ಯ ಸಾಯಿ ಸೇವಾನಿಕೇತನಂ ಕ್ಯಾಂಪಸ್ ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಗುರುತನ್ನು ಮೂಡಿಸಿದ್ದು, ಸದ್ಗುರು ಮಧುಸೂದನ್ ಸಾಯಿ ಅವರ ಆಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ 2018ರಲ್ಲಿ ಸ್ಥಾಪನೆಯಾಗಿದೆ.

ಮುಖ್ಯ ಶಿಕ್ಷಕ ಸಿದ್ದಲಿಂಗೇಶ, ಕ್ಯಾಂಪಸ್ 'ಇನ್‌ಚಾರ್ಜ್ ಎ.ಸಿ. ಮಂಜುನಾಥ್, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಯಲಬುರ್ಗಾ: ತಾಲೂಕಿನ ಕುದ್ರಿಕೊಟಗಿ ಗ್ರಾಮದ ಹೊರವಲಯದಲ್ಲಿರುವ ಶ್ರೀಸತ್ಯ ಸಾಯಿ ಸೇವಾನಿಕೇತನಂ ಕ್ಯಾಂಪಸ್‌ನಲ್ಲಿ ಭಾನುವಾರ ಆಯೋಜಿಸಿದ್ದ ಅಂತರಾಷ್ಟ್ರೀಯ ವಿಶ್ವಯೋಗ ದಿನಾಚರಣೆ ನಿಮಿತ್ತ ಯೋಗ ತರಬೇತಿ ಕಾರ್ಯಕ್ರಮ ನಡೆಯಿತು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ | ಸಂಸದ ಕೆ.ರಾಜಶೇಖರ ಅಭಿಮತ

ಯೋಗ ಋಷಿಮುನಿಗಳ ಕೊಡುಗೆ

ಕೊಪ್ಪಳ: ಮನುಷ್ಯನ ದೇಹ ಮತ್ತು ಮನಸನ್ನು ಒಂದಾಗಿಸಿ ಪ್ರಕೃತಿಯೊಂದಿಗೆ ಜೋಡಿಸುವ ಮಹಾನ್ ಶಕ್ತಿ ಯೋಗಕ್ಕಿದೆ ಎಂದು ಸಂಸದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಹಾಗೂ ಜಿಲ್ಲೆಯ ಸರ್ವಯೋಗ ಸಂಸ್ಥೆಗಳ ಸಹಯೋಗದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ-2026ರ ಅಂಗವಾಗಿ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ಘೋಷವಾಕ್ಯದೊಂದಿಗೆ ಕೊಪ್ಪಳ ತಾಲೂಕು ಕ್ರೀಡಾಂಗಣದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಯೋಗ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೂ.21ರಂದು ಇಡೀ ವಿಶ್ವವೇ ಯೋಗ ದಿನವನ್ನು ಆಚರಿಸುತ್ತಿದೆ. ಇದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡುವಂತಹ ದಿನವಾಗಿದೆ. ಯೋಗದ ಇತಿಹಾಸ ವಿಶೇಷವಾಗಿದೆ. ಯೋಗವು ಸಾವಿರಾರು ವರ್ಷಗಳಷ್ಟು ಹಳೆಯದಾದ ಭಾರತದ ಸಂಸ್ಕೃತಿ ಮತ್ತು ಋಷಿಮುನಿಗಳ ಕೊಡುಗೆಯಾಗಿದೆ. ಯೋಗ ದಿನಾಚರಣೆಯನ್ನು ಜಾಗತಿಕ ಮಟ್ಟದಲ್ಲಿ ಒಂದು ವಿಶೇಷ ದಿನವನ್ನಾಗಿ ಆಚರಿಸುವ ಕುರಿತಂತೆ ಭಾರತವು ಮಾಡಿದ ಪ್ರಸ್ತಾಪಕ್ಕೆ ವಿಶ್ವಸಂಸ್ಥೆಯಲ್ಲಿ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು. ವಿಶ್ವದ 177 ದೇಶಗಳು ಈ ನಿರ್ಣಯಕ್ಕೆ ಸಹಿ ಹಾಕಿದವು. ಇದರ ಫಲವಾಗಿ 2015ರ ಜೂನ್ 21 ರಂದು ಇಡೀ ವಿಶ್ವದಲ್ಲಿ ಮೊದಲ ಬಾರಿಗೆ 'ಅಂತಾರಾಷ್ಟ್ರೀಯ ಯೋಗ ದಿನಾಚರಣೆ'ಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು. ಅಂದಿನಿಂದ ಇಂದಿನವರೆಗೂ ಪ್ರತಿ ವರ್ಷ ಜೂ.21ರಂದು ವಿಶ್ವದಾದ್ಯಂತ ಯೋಗ ಹಬ್ಬವನ್ನು ಆಚರಿಸಲಾಗುತ್ತಿದೆ ಎಂದರು.



ಗಮನ ಸೆಳೆದ ಮಕ್ಕಳ ಯೋಗ ಪ್ರದರ್ಶನೆ

ಪುಟ್ಟ ಬಾಲಕ ಅಗಸ್ತ್ಯ ಆರಕೇರಿ, ವಿದ್ಯಾರ್ಥಿನಿ ರೇಷ್ಮಾ ಹಾಗೂ ಸಂಗಡಿಗರು ಮತ್ತು ಕುಮಾರ ಸಿದ್ಧಾರ್ಥ ಅವರಿಂದ ನಡೆದ ವಿಶೇಷ ಯೋಗ ಪ್ರದರ್ಶನ ಗಮನ ಸೆಳೆಯಿತು. ಈ ಎಲ್ಲಾ ಮಕ್ಕಳಿಗೆ ಹಾಗೂ ಯೋಗ ತರಬೇತಿ ನೀಡಿದ ಯೋಗ ಶಿಕ್ಷಕರಿಗೆ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಮಾತನಾಡಿ, ಯೋಗವು ಭಾರತದ ಭವ್ಯ ಪರಂಪರೆಯ ಪ್ರತೀಕವಾಗಿದೆ. ಪ್ರತಿದಿನದ ಯೋಗಾಭ್ಯಾಸ ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಲಿದೆ. ಪ್ರಧಾನಿ ನರೇಂದ್ರ ಮೋದಿಜಿಯವರ ಪ್ರಯತ್ನದಿಂದ ವಿಶ್ವದಾದ್ಯಂತ ಯೋಗ ದಿನಾಚರಣೆಯನ್ನು ಆಚರಿಸುವ ಮೂಲಕ ಯೋಗದ ಮಹತ್ವವನ್ನು ಜಗತ್ತಿಗೆ ತಿಳಿಸಲಾಗಿದೆ. ಒತ್ತಡದ ಜೀವನದಲ್ಲಿ ಪ್ರತಿಯೊಬ್ಬರಿಗೂ ಯೋಗ ಬಹಳ ಮುಖ್ಯವಾಗಿದೆ. 'ಯೋಗ ಭಾರತ-365' ಕಾರ್ಯಕ್ರಮದ ಮೂಲಕ ಆಯುಷ್ ಇಲಾಖೆಯ ಪ್ರತಿನಿತ್ಯ ಆನ್‌ಲೈನ್ ಮೂಲಕ ಯೋಗ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಂತೋಷದ ಸಂಗತಿಯಾಗಿದೆ ಎಂದರು.

ಆಯುಷ್ ವೈದ್ಯಾಧಿಕಾರಿಗಳಾದ ಡಾ.ವೈ.ಜೆ.ಶಿರವಾರ ಅವರು ಯೋಗಾಭ್ಯಾಸ ನಡೆಸಿಕೊಟ್ಟರು. ಪ್ರಜಾಪಿತ ಬ್ರಹ್ಮ ಕುಮಾರಿ ವಿಶ್ವವಿದ್ಯಾಲಯದ ಯೋಗಿನಿ ಅಕ್ಕನವರು ಜ್ಞಾನ ಕಾರ್ಯಕ್ರಮ ನಡೆಸಿಕೊಟ್ಟರು. ಡಿಸಿ ಡಾ.ಸುರೇಶ ಬಿ.ಇಟ್ನಾಳ, ಎಸ್ಪಿ ಡಾ.ರಾಮ್ ಎಲ್.ಅರಸಿದ್ದಿ, ಎಡಿಸಿ ಸಿದ್ದರಾಮೇಶ್ವರ, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಪಂ ಉಪ ಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಪಿ.ಬಿ.ಹಿರೇಗೌಡರ, ಡಿಡಿಪಿಯು ಜಗದೀಶ್, ಜಿಲ್ಲಾ ಕ್ರೀಡಾ ಅಧಿಕಾರಿಗಳಾದ ವಿಠ್ಠಲ್ ಬಿ.ಜಾಬಗೌಡರ ಇದ್ದರು.

ಯೋಗದಿಂದ ರೋಗನಿರೋಧಕ ಶಕ್ತಿ ಹೆಚ್ಚಳ

ಕಲಬುರಗಿ: ಯೋಗವು ಪ್ರಾಚೀನ ಭಾರತೀಯ ಸಂಪ್ರದಾಯದ ಒಂದು ಅಮೂಲ್ಯ ಕೊಡುಗೆಯಾಗಿದ್ದು, ಇದು ದೇಹ, ಮನಸ್ಸು ಮತ್ತು ಪ್ರಕೃತಿಯ ನಡುವೆ ಸಮತೋಲನವನ್ನು ಸಾಧಿಸಲು ಸಹಾಯ ಮಾಡುತ್ತದೆ ಎಂದು ವಿಪ ಸದಸ್ಯ, ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶಶೀಲ್ ಜಿ. ನಮೋಶಿ ಹೇಳಿದರು.

ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಎಸ್.ನಿಜಲಿಂಗಪ್ಪ ದಂತ ಮಹಾವಿದ್ಯಾಲಯದಲ್ಲಿ ನಡೆದ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ, ಕೇಂದ್ರ ಸಂವಹನ ಇಲಾಖೆ (ವಾರ್ತಾ ಮತ್ತು ಪ್ರಸಾರ ಸಚಿವಾಲಯ), ಮಹಿಳಾ ಪತಂಜಲಿ ಯೋಗ ಸಮಿತಿ, ಭಾರತ ಸೇವಾದಳ ಜಿಲ್ಲಾ ಸಮಿತಿ ಕಲಬುರ್ಗಿ ಸಹಯೋಗದಲ್ಲಿ ನಡೆದ 12ನೇಯ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆಸನಗಳು ಮತ್ತು ಪ್ರಾಣಾಯಾಮಗಳು ದೇಹದ ನಮ್ಯತೆಯನ್ನು ಹೆಚ್ಚಿಸುತ್ತವೆ, ರಕ್ತಸಂಚಾರವನ್ನು ಸುಧಾರಿಸುತ್ತವೆ ಮತ್ತು ರಕ್ತದೊತ್ತಡವನ್ನು ನಿಯಂತ್ರಿಸುತ್ತವೆ. ಧ್ಯಾನ ಮತ್ತು ಉಸಿರಾಟದ ನಿಯಂತ್ರಣವು ಒತ್ತಡ, ಆತಂಕ ಮತ್ತು ಖಿನ್ನತೆಯನ್ನು ಕಡಿಮೆ ಮಾಡಿ, ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಯೋಗಾಭ್ಯಾಸವು ದೇಹದ ಆಂತರಿಕ ಅಂಗಗಳು ಮತ್ತು ಗ್ರಂಥಿಗಳನ್ನು ಉತ್ತೇಜಿಸುವುದರಿಂದ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ದೈನಂದಿನ ಯೋಗಾಭ್ಯಾಸವು ಮನಸ್ಸನ್ನು ಶಾಂತಗೊಳಿಸಿ, ಉತ್ತಮ ನಿದ್ರೆಗೆ ಸಹಕಾರಿಯಾಗುತ್ತದೆ ಎಂದು ವೈದ್ಯಕೀಯ ವರದಿಯೇ ದೃಢಪಡಿಸಿದೆ ಎಂದು ಹೇಳಿದರು. ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ದಂತ ವೈದ್ಯಕೀಯ ಮಹಾವಿದ್ಯಾಲಯದ ಸಂಚಾಲಕ ಡಾ.ಅನಿಲಕುಮಾರ ಪಟ್ಟಣ, ಡಾ.ಜಯಶ್ರೀ ಮುದ್ದಾ, ಡಾ.ವೀರೇಂದ್ರ ಪಾಟೀಲ, ಡಾ.ಉಮಾ ರೇವೂರ, ಸುಮಂಗಲಾ, ಅನಿತಾ, ವೀರೇಶ, ಭಾರತೀಯ ಸೇವಾದಳದ ಜಿಲ್ಲಾ ಸಂಘಟಕ ಚಂದ್ರಶೇಖರ್ ಜಮಾದಾರ ಉಪಸ್ಥಿತರಿದ್ದರು. ಡಾ.ಸುರಭಿ ರಾಯರಾಮ ನಿರೂಪಿಸಿದರು. ಸಂಸ್ಥೆಯ ಎಲ್ಲ ವಿಭಾಗದ ಮುಖ್ಯಸ್ಥರು, ಪ್ರಾಚಾರ್ಯರು ಉಪನ್ಯಾಸಕರು ಭಾಗವಹಿಸಿದ್ದರು.



ಒತ್ತಡ ನಿವಾರಣೆಗೆ ಯೋಗ ಸಹಕಾರಿ

ರಾಯಚೂರು: ಆಧುನಿಕತೆ ಚಿಕ್ಕ ಮಕ್ಕಳು ವೃದ್ಧರಿಂದ ಹಿಡಿದು ಎಲ್ಲ ವಯೋಮಾನದವರಿಗೂ ಸ್ಪರ್ಷಿಸಿದೆ. ಹೀಗಾಗಿ ಬಹುತೇಕರು ದೈಹಿಕ ಶ್ರಮದಾಯಕ ಕಾಯಕಗಳನ್ನು ಮರೆಯುತ್ತಿದ್ದಾರೆ. ಹೀಗಾಗಿ ಬೇಡ ಎನ್ನುವ ಕಾಯಿಲೆಗಳು ಎಲ್ಲರನ್ನು ಆವರಿಸಿಕೊಳ್ಳುತ್ತಿವೆ. ಇವುಗಳನ್ನು ದೂರ ಇಡುವುದಕ್ಕೆ ಯೋಗ ಸೇರಿದಂತೆ ಇತರೆ ವ್ಯಾಯಾಮ ಬಹಳ ಅವಶ್ಯಕವಾಗಿವೆ ಎಂದು ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬಿ.ವೆಂಕಟ್ ಸಿಂಗ್ ಹೇಳಿದರು.

ಭಾನುವಾರ ನಗರದ ಮಾಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಬೆಳಿಗ್ಗೆ ಆಯಿತೆಂದರೆ ವಿದ್ಯಾರ್ಥಿಗಳಿಂದ ಹಿಡಿದು ವಯೋವೃದ್ಧದವರೆಗೂ ಪ್ರತಿಯೊಬ್ಬರೂ ಒತ್ತಡದಲ್ಲಿನೇ ಸಮಯವನ್ನು ಕಳೆಯುತ್ತಿದ್ದಾರೆ. ಒತ್ತಡದ ನಿವಾರಣೆಗೆ ಯೋಗ ಮತ್ತು ವ್ಯಾಯಾಮಕ್ಕೆ ದಿನದಲ್ಲಿನ ಅಲ್ಪ ಸಮಯವನ್ನಾದರೂ ಮೀಸಲಿಡಬೇಕು ಎಂದರು. ಎಸ್ಪಿ ಅರುಣಾಂಗ್ಶು ಗಿರಿ ಮಾತನಾಡಿ, ಭಾರತ ವಿಶ್ವದ ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಉತ್ತಮವಾದಿದೆಂದು ಈಗ ಪರಿಗಣಿಸಲ್ಪಡುತ್ತಿರುವ ಯೋಗವನ್ನು ಕೊಡುಗೆಯಾಗಿ ನೀಡಿದೆ ಎಂದು ಹೇಳಿದರು.

ಎಡಿಸಿ ಹಂಪಣ್ಣ ಸಜ್ಜನ ಮಾತನಾಡಿ, ಪ್ರತಿ ನಿತ್ಯ ಯೋ ಮತ್ತು ವ್ಯಾಯಾಮವನ್ನು ಮಾಡುವುದರಿಂದ ದೇಹವನ್ನು ಸದೃಢವಾಗಿಟ್ಟುಕೊಳ್ಳುವುದಲ್ಲದೆ ರೋಗ ನಿರೋಧಕಶಕ್ತಿಯನ್ನು ವೃದ್ಧಿಸಿಕೊಳ್ಳಬಹುದು.ನ ಯೋಗದಿಂದ ಮಾನಸಿಕ ಒತ್ತಡವನ್ನು ಕಡಿಮೆ ಮಾಡಿಕೊಂಡು ಶಾಂತವಾಗಿ ದಿನನಿತ್ಯದ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಬ್ರಹ್ಮಕುಮಾರಿ ವಿವಿಯ ಸ್ಮಿತಕ್ಕ ಮಾತನಾಡಿ, ಯೋಗ ಮತ್ತು ಧ್ಯಾನವನ್ನು ಮಾಡುವುದರಿಂದ ನಮ್ಮ ಮನಸ್ಸಿನ ಏಕಾಗ್ರತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಬೆಳಿಗ್ಗೆ ಸ್ವಲ್ಪ ಸಮಯವನ್ನಾದರೂ ಯೋಗ ಮತ್ತು ಧ್ಯಾನ ಮಾಡುವುದಕ್ಕೆ ಮೀಸಲಿಡಬೇಕು ಎಂದು ಹೇಳಿದರು. ವಿವಿಧ ಇಲಾಖೆಗಳ ಸಿಬ್ಬಂದಿ ಹಾಗೂ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಆರೋಗ್ಯಕರ ಬದುಕಿಗೆ ಯೋಗ ಅವಶ್ಯಕ

ಹನುಮಸಾಗರ: ಪಟ್ಟಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಿಶೇಷ ಯೋಗ ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕ ಶಿವಶಂಕರ ಮೆದಿಕೇರಿ, ಆನಂದ ಕಾಟ್ವಾ ಹಾಗೂ ಆದಿತ್ಯ ಅವರ ನೇತೃತ್ವದಲ್ಲಿ ವಿವಿಧ ಯೋಗಾಸನಗಳ ಪ್ರಾತ್ಯಕ್ಷಿಕೆ ನಡೆಯಿತು.

ಭಾಗವಹಿಸಿದವರಿಗೆ ಯೋಗಾಭ್ಯಾಸದ ಮಹತ್ವ ಹಾಗೂ ಆರೋಗ್ಯದ ಮೇಲೆ ಅದರ ಸಕಾರಾತ್ಮಕ ಪರಿಣಾಮಗಳ ಕುರಿತು ಅರಿವು ಮೂಡಿಸಲಾಯಿತು.

ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ, ದೇಹ, ಮನಸ್ಸು ಹಾಗೂ ಆತ್ಮದ ಸಮತೋಲನ ಸಾಧಿಸುವ ಶ್ರೇಷ್ಠ ಜೀವನ ಪದ್ಧತಿಯಾಗಿದೆ ಎಂದು ವಿವಿಧ ಗಣ್ಯರು ಅಭಿಪ್ರಾಯಪಟ್ಟರು.

ಸಂಸ್ಕೃತ ಪಂಡಿತ ಪ್ರಲ್ಹಾದಾಚಾರ್ಯ ಪೂಜಾರ ಮಾತನಾಡಿ, ಯೋಗವು ಕೇವಲ ಆಸನಗಳಿಗೆ ಸೀಮಿತವಲ್ಲ. ಯೋಗಕ್ಕೆ ಎಂಟು ಅಂಗಗಳಿದ್ದು, ಪ್ರತಿಯೊಬ್ಬರೂ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಯಮ ಮತ್ತು ನಿಯಮಗಳು ವ್ಯಕ್ತಿಯ ಬದುಕಿನಲ್ಲಿ ಶಿಸ್ತು, ಸಂಯಮ ಹಾಗೂ ಸಾತ್ವಿಕತೆಯನ್ನು ಬೆಳೆಸುತ್ತವೆ. ಯೋಗದ ಮೂಲ ಉದ್ದೇಶ ಮನಸ್ಸಿನ ನಿಗ್ರಹ, ಚಿತ್ತಶುದ್ಧಿ ಮತ್ತು ಆತ್ಮಸಾಕ್ಷಾತ್ಕಾರ ಸಾಧನೆಯಾಗಿದೆ ಎಂದು ಹೇಳಿದರು.



ಯೋಗ ಸಾಧಕ ಶಿವಶಂಕರ ಮೆದಿಕೇರಿ ಮಾತನಾಡಿದರು.

ಯೋಗ ಶಿಕ್ಷಕರಾದ ಆನಂದ ಕಾಟ್ವಾ ಹಾಗೂ ಆದಿತ್ಯ ಅವರು ವಿವಿಧ ಯೋಗಾಸನಗಳ ಮಹತ್ವವನ್ನು ವಿವರಿಸಿದರು.

ಕ್ರೀಡಾ ಸಂಸ್ಥೆಯ ಅಧ್ಯಕ್ಷ ಸತೀಶ ಜಮಖಂಡಿಕರ, ಮಾತಾ ಬಿ.ಎಸ್., ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ಬಿರಪ್ಪ, ಸುನಿತಾ ಕುಮಾರಿ, ಶರಣಬಸಪ್ಪ ಮಾಹೋಳ, ಬಸವರಾಜ ಹಳ್ಳೂರ, ಸುಚಪ್ಪ ದೇವರಮನಿ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರುದ್ರಗೌಡ ಗೌಡಪ್ಪನವರ, ಶೇಖರಪ್ಪ ಕುರಿ, ಬಸವರಾಜ ದೇವಣ್ಣವರ, ಕೆಪಿಎಸ್ ಪ್ರಾಚಾರ್ಯ ಮಹಾಂತಯ್ಯ ಸೊಪ್ಪಿಮಠ, ಈರಣ ವಿಶ್ವಕರ್ಮ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಯೋಗ ಎಲ್ಲ ಕಾಯಿಲೆಗಳಿಗೂ ರಾಮಬಾಣ: ಬಸವಲಿಂಗೇಶ್ವರ ಶ್ರೀ

ಯಲಬುರ್ಗಾ: ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಯೋಗ ಬದುಕಿನ ಅವಿಭಾಜ್ಯ ಅಂಗವಾಗಬೇಕು. ಅಂದಾಗ ನೆಮ್ಮದಿ ಜೀವನ ಸಾಧ್ಯ ಎಂದು ಸ್ಥಳೀಯ ಶ್ರೀಧರ ಮುರುಡಿ ಹಿರೇಮಠದ ಪೀಠಾಧಿಪತಿ ಹಾಗೂ ಗುರು ಬಸವಲಿಂಗೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜ ಮೈದಾನದಲ್ಲಿ ಭಾನುವಾರ ತಾಲೂಕಾಡಳಿತ, ಪಟ್ಟಣ ಪಂಚಾಯತಿ ಕಾರ್ಯಾಲಯ, ಆಯುಷ ಇಲಾಖೆ, ಬಸವಲಿಂಗೇಶ್ವರ ಯೋಗ ತರಬೇತಿ ಕೇಂದ್ರ ಸಹಯೋಗದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ವಿಶ್ವ ಯೋಗ ದಿನಾಚರಣೆ ನಿಮಿತ್ತ ಸಸಿಗಳಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಿತ್ಯ ಒತ್ತಡದ ಬದುಕಿನಲ್ಲಿ ಜೀವನ ಸಾಗಿಸುವ ನಮಗೆ ಹಲವಾರು ಕಾಯಿಲೆಗಳಿಗೆ ಅಂಟಿಕೊಂಡು ನರಳುತ್ತಿರುವವರಿಗೆ ಯೋಗಾಸನ ಮಾಡುವುದರಿಂದ ಎಲ್ಲ ಕಾಯಿಲೆಗಳಿಗೂ ರಾಮಬಾಣವಾಗಿದೆ ಎಂದರು.

ಜೇಗೇರಿ ಮಠದ ಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ದೇಹ, ಮನಸ್ಸನ್ನು ಒಂದುಗೂಡಿಸುವದೇ ಯೋಗ ನೈತಿಕ ಮೌಲ್ಯ ಮತ್ತು ಆಧ್ಯಾತ್ಮಿಕ ಶಿಸ್ತನ್ನು ರೂಢಿಸಿಕೊಳ್ಳಲು ಯೋಗ ಅತಿ ಅವಶ್ಯ. ಇಂತಹ ಕೊಡುಗೆಯನ್ನು ವಿಶ್ವಕ್ಕೆ ನೀಡಿದ್ದು ಭಾರತೀಯರು ಎಂಬುದು ನಿಜಕ್ಕೂ ಹೆಮ್ಮೆ ಪಡುವ ವಿಷಯವಾಗಿದೆ ಎಂದರು.

ಬೇನಾಳ ಹಿರೇಮಠದ ಸದಾಶಿವ ಮಹಾಂತ ಸ್ವಾಮೀಜಿ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಯೋಗ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಬಂದಿದ್ದು ಯೋಗದಿಂದಾಗುವ ಉಪಯುಕ್ತತೆಯನ್ನು ಜನತೆ ಮನಗಂಡಿದ್ದಾರೆ. ಹೀಗಾಗಿ ಮಹಿಳೆಯರು, ಯುವಕರು, ವಯೋವೃದ್ಧರು ಯೋಗಾಭ್ಯಾಸಕ್ಕೆ ಅಣಿಗೊಳ್ಳುತ್ತಿರುವುದು ಸ್ವಾಗತಾರ್ಹ ಆದರೂ ಇನ್ನೂ ಹೆಚ್ಚು ಜನರು ಯೋಗಾಸನಕ್ಕೆ ಮುಂದಾಗಬೇಕಿದೆ ಎಂದು ಹೇಳಿದರು.

ಮುಖ್ಯಾಧಿಕಾರಿ ನಾಗೇಶ, ಬಿಇಒ ಅಶೋಕಗೌಡ್ರ, ಡಾ.ವಿವೇಕ್ ವಾಗಲೇ, ವೀರಣ್ಣ ಹುಬ್ಬಳ್ಳಿ, ಸುರೇಶಗೌಡ ಶಿವನಗೌಡ್ರ, ದುರಗಪ್ಪ ಹಿರೇಮನಿ, ಅಮರೇಶ ಹುಬ್ಬಳ್ಳಿ, ಬಸವರಾಜ ಗುಳಗುಳಿ, ಮಹೆಬೂಬಸಾಬ ಇಟಗಿ, ದೊಡ್ಡಬಸಪ್ಪ ಹಕಾರಿ, ಸಂತೋಷಿಮಾ ಜೋಶಿ, ಜಗನ್ನಾಥ ದೇಸಾಯಿ, ಶೀತಲ ದೇಸಾಯಿ ಇತರರಿದ್ದರು.

ಯೋಗವೇ ಆರೋಗ್ಯದ ಕೀಲಿಕೈ: ಬೆನಕನಹಳ್ಳಿ

ಕಲಬುರಗಿ: ಮಾನವನ ದೇಹವೇ ಪ್ರಕೃತಿಯ ಅದ್ಭುತ ಸೃಷ್ಟಿಯಾಗಿದ್ದು, ಅದರ ಆರೋಗ್ಯದ ಕೀಲಿಕೈ ಯೋಗದಲ್ಲಿದೆ ಎಂದು ಯೋಗ ಸಂಶೋಧಕ ಭೀಮಾಶಂಕರ ಬೆನಕನಹಳ್ಳಿ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಸಿತನೂರ ಬಳಿಯ ಭಾರತೀಯ ವಿದ್ಯಾಕೇಂದ್ರದಲ್ಲಿ ಭಾರತೀಯ ವಿದ್ಯಾಕೇಂದ್ರ ವಿಶ್ವಸ್ಥ ಮಂಡಳಿ, ಕಲಬುರಗಿ ಸಂಚಾಲಿತ ಮಾತೃಶ್ರೀ ಸಂಗಮ್ಮ ಶಿವಶರಣಪ್ಪ ಪಾಟೀಲ (ಕಡಗಂಚಿ) ಬಾಲಕರ ನಿಲಯ ಪ್ರೌಢಶಾಲೆ ಹಾಗೂ ಮಾತೃಶ್ರೀ ಸಂಘವಿ ಮರಗಾಬಾಯಿ ಬಾಬುಲಾಲ್ ಜೈನ್ (ಶಹಾಪುರ) ನಿಲಯ ಹಿರಿಯ ಪ್ರಾಥಮಿಕ ಶಾಲೆ, ಸಿರನೂರ ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಆಧುನಿಕ ಜೀವನದ ಒತ್ತಡ, ಆತಂಕ ಮತ್ತು ಅನಾರೋಗ್ಯದ ನಡುವೆಯೂ ದೇಹ, ಮನಸ್ಸು ಹಾಗೂ ಆತ್ಮದ ಸಮತೋಲನವನ್ನು ಸಾಧಿಸುವ ಮಹಾನ್ ಜೀವನ ವಿಜ್ಞಾನವೇ ಯೋಗವಾಗಿದೆ ಎಂದು ಅವರು ಹೇಳಿದರು. ಯೋಗವೆಂದರೆ ಕೇವಲ ಆಸನಗಳ ಪ್ರದರ್ಶನವಲ್ಲ; ಅದು ಮನುಷ್ಯನನ್ನು ತನ್ನೊಳಗಿನ ಶಕ್ತಿಯೊಂದಿಗೆ ಜೋಡಿಸುವ ಆತ್ಮಸಾಕ್ಷಾತ್ಕಾರದ ಪಯಣವಾಗಿದೆ ಎಂದು ತಿಳಿಸಿದರು.

ಮಾನವನ ದೇಹದಲ್ಲಿರುವ ಎಲ್ಲಾ ರಕ್ತನಾಳಗಳನ್ನು ಒಂದರ ಪಕ್ಕ ಒಂದು ಜೋಡಿಸಿದರೆ ಅವು ಸುಮಾರು ಒಂದು ಲಕ್ಷ ಕಿಲೋಮೀಟರ್ ಉದ್ದವಿರುತ್ತವೆ. ಇದು ಭೂಮಿಯ ಸುತ್ತಳತೆಯನ್ನು ಎರಡು ಬಾರಿ ಮೀರಿ ಸುತ್ತುವಷ್ಟು ದೂರವಾಗಿದ್ದು, ಇಂತಹ ಸಂಕೀರ್ಣ ದೇಹ ವ್ಯವಸ್ಥೆಯನ್ನು ಸಮತೋಲನದಲ್ಲಿಡಲು ಯೋಗದಂತಹ ಸಮಗ್ರ ಜೀವನಶೈಲಿ ಅತ್ಯಗತ್ಯವಾಗಿದೆ ಎಂದು ಹೇಳಿದರು.



ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಯೋಗವು ವೇದಗಳು ಮತ್ತು ಉಪನಿಷತ್ತುಗಳಲ್ಲಿ ಉಲ್ಲೇಖಗೊಂಡಿದೆ. ಭಾರತದ ಋಷಿಮುನಿಗಳ ತಪಸ್ಸಿನ ಫಲವಾಗಿರುವ ಯೋಗಕ್ಕೆ ಇಂದು ವಿಶ್ವಮಟ್ಟದಲ್ಲಿ ಅಪಾರ ಮಾನ್ಯತೆ ದೊರೆತಿದ್ದು, ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳ ಪೈಕಿ 177 ರಾಷ್ಟ್ರಗಳು ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಬೆಂಬಲ ಸೂಚಿಸಿರುವುದು ಯೋಗದ ಸಾರ್ವತ್ರಿಕ ಮಹತ್ವಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ವಿದ್ಯಾಸಂಸ್ಥೆಯ ಹಿರಿಯ ಸದಸ್ಯ ಚನ್ನವೀರಪ್ಪ ಗುಡ್ಡಾ, ದೈಹಿಕ ಶಿಕ್ಷಕ ಜಲಂಧರವಾಡಿ, ಪ್ರೌಢಶಾಲೆಯ ಮುಖ್ಯ ಶಿಕ್ಷಕ ಚಿದಾನಂದ ಬಳ್ಳೂರ್ಗಿ, ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಶಿವಾನಂದ ಶಿರ್ವಾಡ ಸೇರಿದಂತೆ ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳ ಆಡಳಿತಾಧಿಕಾರಿಗಳು, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಹಿಂದುಳಿದ ವರ್ಗದ ಕೆ.ಶಾಂತಪ್ಪಗೆ ನಿಗಮ-ಮಂಡಳಿ ಸ್ಥಾನ ನೀಡಿ

ಮಸ್ಕಿ: ರಾಜ್ಯ ಸರ್ಕಾರವು ರಾಯಚೂರು ಜಿಲ್ಲಾ ಹಿಂದುಳಿದ ವರ್ಗಗಳ ಅಧ್ಯಕ್ಷ ಕೆ.ಶಾಂತಪ್ಪ ಅವರಿಗೆ ನಿಗಮ-ಮಂಡಳಿ ಹಾಗೂ ಎಂಎಲ್‌ಸಿ ಸ್ಥಾನಮಾನ ನೀಡಬೇಕು ಎಂದು ಹಿಂದುಳಿದ ವರ್ಗಗಳ ತಾಲೂಕು ಅಧ್ಯಕ್ಷ ಕರಿಯಪ್ಪ ಹಾಲಾಪೂರು ಸರ್ಕಾರಕ್ಕೆ ಮನವಿ ಮಾಡಿದರು.

ಪಟ್ಟಣದ ಪತ್ರಿಕೆ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಸಮುದಾಯವು ಕಾಂಗ್ರೆಸ್ ಪಕ್ಷದ ಗೆಲುವಿಗೆ ಮಹತ್ವದ ಕೊಡುಗೆ ನೀಡಿದ್ದು, ಪಕ್ಷ ಸಂಘಟನೆ ಹಾಗೂ ಸರ್ಕಾರದ ಕಾರ್ಯಕ್ರಮಗಳ ಯಶಸ್ಸಿಗೆ ನಿರಂತರವಾಗಿ ಶ್ರಮಿಸುತ್ತಿದೆ. ಆದ್ದರಿಂದ ಕೆ.ಶಾಂತಪ್ಪ ಇವರಿಗೆ ನಿಗಮ-ಮಂಡಳಿ ಅಥವಾ ಎಂಎಲ್‌ಸಿ ಸ್ಥಾನಮಾನ ಕಲ್ಪಿಸಿದರೆ ಹಿಂದುಳಿದ ವರ್ಗಕ್ಕೆ ಆದ್ಯತೆ ನೀಡಿದಂತೆ ಆಗುತ್ತದೆ ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ನಾಗಭೂಷಣ ಬಾರಿಕೇರ, ಮಲ್ಲಯ್ಯ ಮುರಾರಿ, ಬಸನಗೌಡ ಮಾರಲದಿನ್ನಿ, ದುರುಗೇಶ ವಕೀಲರು, ರವಿ ಕುಮಾರ ಮಡಿವಾಳ, ಇದ್ದರು.



ಸಾರ್ವತ್ರಿಕ ಚುನಾವಣೆಯು ಪ್ರಜಾಪ್ರಭುತ್ವದ ಭದ್ರಬುನಾದಿ

ಕುಷ್ಟಗಿ: ಸಮೀಪದ ಸರಕಾರಿ ಪ್ರೌಢ ಶಾಲೆ ಬಿಜಕಲ್‌ನಲ್ಲಿ 2026-27ನೇ ಸಾಲಿನ ಶಾಲಾ ಸಂಸತ್ತು ರಚನೆ ಕಾರ್ಯ ಇಂದು ನಡೆಯಿತು.

ಶಾಲಾ ಸಂಸತ್ತು ಪ್ರಕ್ರಿಯೆಯ ಉದ್ಘಾಟನೆ ನೆರವೇರಿಸಿ ಶಾಲಾ ಮುಖ್ಯ ಗುರುಗಳಾದ ಬಸವರಾಜ ಬಾಗಲಿ ಮಾತನಾಡಿದರು. ನಮ್ಮನ್ನಾಳುವ ಪ್ರತಿನಿಧಿಗಳನ್ನು ನಾವೇ ಆರಿಸಿಕೊಳ್ಳುವ ಪದ್ಧತಿಯು ಚುನಾವಣೆಯಾಗಿದೆ. ಚುನಾವಣೆ ಪ್ರಜಾಪ್ರಭುತ್ವ ವ್ಯವಸ್ಥೆಯ ಭದ್ರ ಬುನಾದಿ ಆಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಸಾರ್ವತ್ರಿಕ ಚುನಾವಣೆಗಳು ನಡೆಯುತ್ತಿರುವ ರೀತಿಯಲ್ಲಿಯೇ ಇಂದು ಶಾಲಾ ಆವರಣದಲ್ಲಿ ಚುನಾವಣೆಯ ಪ್ರಕ್ರಿಯೆ ನಡೆಸಲಾಗಿದ್ದು, ವಿದ್ಯಾರ್ಥಿಗಳಿಗೆ ಇದೊಂದು ಮಾದರಿ ಚುನಾವಣಾ ಪ್ರಕ್ರಿಯೆ ಯಾಗಿರುತ್ತದೆ. ಭವಿಷ್ಯದ ಪ್ರಜೆಗಳಾಗಿ ನಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ರೀತಿಯನ್ನು ಇಲ್ಲಿ ಹೇಳಿಕೊಡಲಾಗುತ್ತದೆ. ಯಾವುದೇ ಪೂರ್ವಗ್ರಹ ಪೀಡಿತರಾಗದೆ ಮತದಾನ ಮಾಡಬೇಕೆಂಬುದು ಈ ಪ್ರಕ್ರಿಯೆಯ ಪರಿಕಲ್ಪನೆಯಾಗಿರುತ್ತದೆ ಎಂದರು.

ಮತದಾರರ ಸಾಕ್ಷರತಾ ಕ್ಲಬ್‌ನ ಈ ಎಲ್‌ಸಿ ಉಸ್ತುವಾರಿ ಶಿಕ್ಷಕ ಪ್ರಸನ್ನಕುಮಾರ್ ಭಿಕ್ಷಾವತಿಮಠ ರವರು ಚುನಾವಣಾ ಪ್ರಕ್ರಿಯೆಯ ನಿಯಮಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಚುನಾವಣಾ ಪ್ರಕ್ರಿಯೆಯನ್ನು ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ವೀರನಗೌಡ ಪೊಲೀಸ್ ಪಾಟೀಲ, ಸದಸ್ಯ ಸಿದ್ದಪ್ಪ ಚಲವಾದಿ, ಗ್ರಾಮದ ಪ್ರಮುಖರಾದ ಶ್ರೀಧರ ವೆಂಕಲ ಕುಂಟಿ, ಮೌನೇಶ್ ಬಡಿಗೇರ ವೀಕ್ಷಿಸಿದರು.



ಮತದಾನ ಕೇಂದ್ರದ ಅಧ್ಯಕ್ಷ ಅಧಿಕಾರಿಯಾಗಿ ಶಿಕ್ಷಕರಾದ ವಿಜಯಕುಮಾರ್ ಬಿರಾದಾರ್ ಕಾರ್ಯನಿರ್ವಹಿಸಿದರೆ, ಮತಗಟ್ಟೆ ಅಧಿಕಾರಿಗಳಾಗಿ ಶಶಿಧರ ಗೊರಬಾಳ್, ಹಂಪಯ್ಯ ಜಂಬಲದಿನ್ನಿ, ಸಂಗೀತ ವೈ.ಬಿ. ಕಾರ್ಯನಿರ್ವಹಿಸಿದರು.

ನಂತರ ನಡೆದ ಮತ ಎಣಿಕೆ ಕೇಂದ್ರದ ಎಣಿಕೆ ಅಧಿಕಾರಿಗಳಾಗಿ ಶಿಕ್ಷಕರಾದ ಸಂತೋಷ್ ನಾಗಲೋಟಿ ಹಾಗೂ ಸಹಾಯಕ ಎಣಿಕೆ ಅಧಿಕಾರಿಗಳಾಗಿ ವಿಜಯಲಕ್ಷ್ಮಿ ದೇಸಾಯಿ ಕಾರ್ಯನಿರ್ವಹಿಸಿ ಫಲಿತಾಂಶ ಪ್ರಕಟಿಸಿದರು.

ಸಂಸದೀಯ ನಾಯಕ ಹಾಗೂ ಸಂಸತ್ತಿನ ಪ್ರಧಾನಮಂತ್ರಿಯಾಗಿ 10ನೇ ತರಗತಿಯ ವಿದ್ಯಾರ್ಥಿನಿ ಅನಿತಾ ಶರಣಪ್ಪ ಯಲಬುರ್ತಿ ಆಯ್ಕೆಯಾದಳು.

ನಂತರ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನ ಮಂತ್ರಿ ಸೇರಿದಂತೆ ಎಲ್ಲಾ ಮಂತ್ರಿಗಳಿಗೆ ಮುಖ್ಯ ಗುರುಗಳು ಪ್ರಮಾಣವಚನ ಮತ್ತು ಅಧಿಕಾರದ ಗೌಪ್ಯತೆಯ ನೀತಿ ಬೋಧಿಸಿದರು.

ಕಿರುಸುದ್ದಿ

ಸಿದ್ಧಿ ವಿನಾಯಕ ದೇವಸ್ಥಾನದ ವಾರ್ಷಿಕೋತ್ಸವ ಅದ್ದೂರಿ

• **ವಿಜಯನಗರ:** ಹೊಸಪೇಟೆ ನಗರದ ಪಣ್ಣ ಮೂರ್ತಿ ಸಮೀಪದಲಿರುವ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದ 27ನೇ ವಾರ್ಷಿಕೋತ್ಸವ ಭಾನುವಾರ ಅದ್ದೂರಿಯಾಗಿ ನಡೆಯಿತು. ವಾರ್ಷಿಕೋತ್ಸವದ ನಿಮಿತ್ತ ಬೆಳಗ್ಗೆ ಗಣಪತಿ ಪೂಜನ, ಪುಣ್ಯಾಹವಾಚನ, ಧ್ವಜಾರೋಹಣ, ಶತರುದ್ರಾಭಿಷೇಕ, 21 ಕಾಯಿ ಗಣ ಹೋಮ, ಗರಿಕೆ ಪೂಜೆ, ಪೂರ್ಣಾಹುತಿ, ಶ್ರೀಗಣೇಶನಿಗೆ ತರಹೇವಾರಿ ಪುಷ್ಪಗಳಿಂದ ವಿಶೇಷ ಅಲಂಕಾರ ಹಾಗೂ ಮಹಾ ಪೂಜೆ ನೆರವೇರಿಸಲಾಯಿತು. ದೇವಸ್ಥಾನದ ವಾರ್ಷಿಕೋತ್ಸವದ ನಿಮಿತ್ತ ದೇವರ ದರ್ಶನಕ್ಕಾಗಿ ಬೆಳಗ್ಗೆಯಿಂದಲೇ ಸಾಲುಗಟ್ಟಿದ್ದರು. ಹಣ್ಣು, ಕಾಯಿ ಅರ್ಪಿಸಿ ದೇವರಿಗೆ ಭಕ್ತಿ ಸಮರ್ಪಿಸಿದರು. ಬಳಿಕ ಮಧ್ಯಾಹ್ನ ಭಕ್ತರು ಹಾಗೂ ಸಾರ್ವಜನಿಕರಿಗೆ ಮಹಾ ಪ್ರಸಾದ ವಿತರಿಸಲಾಯಿತು. ಮಧ್ಯಾಹ್ನ 12.30ರಿಂದ ಸಂಜೆ 4 ಗಂಟೆ ವರೆಗೆ ನಡೆದ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಸಾವಿರಾರು ಜನರು ಪ್ರಸಾದ ಸ್ವೀಕರಿಸಿ ಧನ್ಯತೆ ಮೆರೆದರು.



ಆಡಳಿತ ಮಂಡಳಿ ವಿರುದ್ಧ ಕೊಟ್ಟೂರು ಬಂದ್‌ಗೆ ನಿರ್ಧಾರ



• **ಕೊಟ್ಟೂರು:** ತಾಲೂಕಿನ ಶಾಲಾ, ಕಾಲೇಜು ಡೊನೇಷನ್ ಹಾವಳಿ ವಿರುದ್ಧ ಇದೆ ಜೂ.29ಕ್ಕೆ ಕೊಟ್ಟೂರು ಬಂದ್ ಮಾಡುವುದಾಗಿ ಪ್ರಗತಿಪರ ಸಂಘಟನೆಗಳ ನಡೆಸಿದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಪ್ರಗತಿಪರ ಸಂಘಟನೆಗಳ ಮುಖಂಡರು ತಿಳಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಭೆಯಲ್ಲಿ ಶಾಲಾ, ಕಾಲೇಜುಗಳ ವಿಪರೀತ ಡೊನೇಷನ್ ಹಾವಳಿ ವಿರುದ್ಧ ಸಾಕಷ್ಟು ಬಾರಿ ಹೋರಾಟ ಮಾಡಿ ಮನವಿ ನೀಡಿದ್ದೇವೆ. ಈ ಸಂಬಂಧ ಮೇಲಧಿಕಾರಿಗಳು ಎಲ್ಲ ಶಾಲಾ, ಕಾಲೇಜು ಆಡಳಿತ ಮಂಡಳಿಯವರನ್ನು ತಾಲೂಕು ಕಚೇರಿಗೆ ಕರೆದು ಸಭೆ ನಡೆಸಲಾಗಿತು. ಸಭೆಯಲ್ಲಿ ಸರ್ಕಾರದ ನಿಯಮನುಸಾರವಾಗಿ ಕಡ್ಡಾಯವಾಗಿ ಶುಲ್ಕ ಕಡಿಮೆ ಮಾಡುವಂತೆ ಆದೇಶ ಮಾಡಿದರೂ ಪ್ರಯೋಜನೆ ನಿರ್ದೇಶನಗಳಿಗೆ ಕಿಂಚಿತ್ತು ಬೆಲೆ ಕೊಡದೆ ಇರುವ ತಾಲೂಕಿನ ಕಾಲೇಜು ಆಡಳಿತ ಮಂಡಳಿಯವರು ಇಲ್ಲಿಯವರೆಗೂ ಶುಲ್ಕವನ್ನು ಕಡಿಮೆ ಮಾಡದೆ ಅಧಿಕಾರಿಗಳ ನಿರ್ದೇಶನಗಳಿಗೆ ಬೆಲೆ ಕೊಡದೆ ಇರುವುದು ಇವರ ಪ್ರಭಾವಿತ, ನಿರ್ಲಕ್ಷನ, ಎದ್ದು ತೋರುತ್ತದೆ ಇದರಿಂದಾಗಿ ಕೊಟ್ಟೂರಿನ ಎಲ್ಲ ಪ್ರಗತಿಪರ ಸಂಘಟನೆಗಳಲ್ಲಿ ವಿಸ್ತೃತವಾಗಿ ಚರ್ಚಿಸಿ ತೀರ್ಮಾನ ತೆಗೆದುಕೊಂಡು ಕೊಟ್ಟೂರು ಬಂದ್ ಮಾಡುವುದಾಗಿ ನಿರ್ಧಾರ ಕೈಗೊಂಡಿದ್ದೇವೆ ಎಂದು ತಿಳಿಸಿದರು. ಬಿದ್ದು ದುರುಗೇಶ್, ವೀಕಲ ಹನುಮಂತಪ್ಪ, ಗುಡಿಯಾರ ಮಲ್ಲಿಕಾರ್ಜುನ, ಜಯಪ್ರಕಾಶ ನಾಯ್ಕ್, ಪಿ.ಚಂದ್ರಶೇಖರ, ಅಂಜಿನಪ್ಪ ಕುಬೇರಪ್ಪ, ಕೆಂಚಪ್ಪ ಕೊಲ್ಲೂರಿನ ಇತರರಿದ್ದರು.

ಬಿಜೆಪಿಯಿಂದ ಜಾಗೃತಿ ಅಭಿಯಾನ



• **ಕುರುಗೋಡು:** ಸಮೀಪದ ಎಮ್ಮಿಗನೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಖಾದ್ಯ ತೈಲ ಸಂರಕ್ಷಣೆ ಕುರಿತು ಜಾಗೃತಿ ಅಭಿಯಾನ ಜರುಗಿತು. ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಬಿ.ಮಂಜುಳಾ ಮಾತನಾಡಿ, ಖಾದ್ಯ ತೈಲ ಸಂರಕ್ಷಣೆ ಆಹಾರ ಭದ್ರತೆ ಮತ್ತು ಆರೋಗ್ಯದ ದೃಷ್ಟಿಯಿಂದ ಅತ್ಯಂತ ಮಹತ್ವವಾದದ್ದಾಗಿದೆ, ಖಾದ್ಯ ತೈಲ ಸಸ್ಯಗಳು ಮತ್ತು ಬೀಜಗಳಿಂದ ದೊರೆಯುತ್ತದೆ ಅಡುಗೆಯ ರುಚಿ,ಪೌಷ್ಠಿಕ ಮತ್ತು ಆರೋಗ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು. ಕಾಲೇಜಿನ ಪ್ರಾಂಶುಪಾಲರಾದ ಕೆ.ಬಿ.ವೀರೇಶ್, ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಂರಕ್ಷಣಾಧಿಕಾರಿ ಪೂಜಾ,ಬಿಜೆಪಿ ಹಿರಿಯ ಮುಖಂಡರಾದ ಮಹೇಶ ಗೌಡ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಟಿ.ರಾಮಪ್ಪ, ಕಂಪ್ಲಿ ಮಂಡಲ ಯುವ ಮೋರ್ಚಾ ಅಧ್ಯಕ್ಷ ಬಡಿಗೇರ್ ವೀರೇಶ, ಎಸ್ಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಎಚ್.ಪಂಪಾಪತಿ, ಪದಾಧಿಕಾರಿಗಳಾದ ಮಡಿವಾಳರ ವೀರೇಶ, ರಂಗಪ್ಪ, ಸತ್ಯ, ಮಾರುತಿ, ಮಲ್ಲೇಶ ಹಾಗೂ ವಿದ್ಯಾರ್ಥಿಗಳು ಸಿಬ್ಬಂದಿ, ಮಹಿಳೆಯರಿದ್ದರು.



ಕುರುಗೋಡು: ಕೊಟ್ಟೂರು ಸ್ವಾಮಿ ಮಠದಲ್ಲಿ ವಿಶ್ವ ಯೋಗ ದಿನ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಪಟ್ಟಣದ ಕೊಟ್ಟೂರು ಸ್ವಾಮಿ ಬಳ್ಳಾರಿ ರಸ್ತೆ ವಿರಕ್ತ ಮಠದಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ನಿರಂಜನ ಪ್ರಭು ಮಹಾಸ್ವಾಮಿ, ತಹಶೀಲ್ದಾರ್ ನರಸಪ್ಪ, ಪಿಎಸ್‌ಐ ಸುಪ್ರೀತ್ ವಿರುಪಾಕ್ಷಪ್ಪ, ಪಟ್ಟಣದ ಹಿರಿಯರಾದ ಉಮಾಪತಿ ಗೌಡ ಬಿ.ಎಂ., ಡಾ.ಸೋಮಶೇಖರ್ ಹೂಗಾರ್, ಭಾಷಾ ಎಂ.ಮುದ್ದನಗೌಡ ಇತರರಿದ್ದರು.

ಯೋಗದಿಂದ ಆರೋಗ್ಯಕರ ಜೀವನ ಸಾಧ್ಯ

• **ಹುಣಸಗಿ:** ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಹುಣಸಗಿಯಲ್ಲಿ ವಿದ್ಯಾರ್ಥಿಗಳಿಗೆ ಸಾಮೂಹಿಕ ಯೋಗಾಭ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಎಸ್‌ಡಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಮುದಗಲ್ ಉದ್ಘಾಟಿಸಿ ಮಾತನಾಡಿ, ಯೋಗವು ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆಯಾಗಿದ್ದು, ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡುವ ಅತ್ಯುತ್ತಮ ಸಾಧನವಾಗಿದೆ ಎಂದು ತಿಳಿಸಿದರು. ಇಂದಿನ ಸ್ಪರ್ಧಾತ್ಮಕ ಜೀವನದಲ್ಲಿ ವಿದ್ಯಾರ್ಥಿಗಳು ಪ್ರತಿನಿತ್ಯ ಯೋಗಾಭ್ಯಾಸ ಮಾಡುವ ಮೂಲಕ ಏಕಾಗ್ರತೆ, ಆತ್ಮವಿಶ್ವಾಸ ಹಾಗೂ ಆರೋಗ್ಯವನ್ನು ವೃದ್ಧಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಬಳಿಕ ವಿದ್ಯಾರ್ಥಿಗಳು ವಿವಿಧ ಯೋಗಾಸನಗಳು ಹಾಗೂ ಪ್ರಾಣಾಯಾಮಗಳನ್ನು ಸಾಮೂಹಿಕವಾಗಿ ಪ್ರದರ್ಶಿಸಿ ಯೋಗದ ಮಹತ್ವವನ್ನು ಸಾರಿದರು. ಶಾಲೆಯ ಮುಖ್ಯೋಪಾಧ್ಯಾಯ ವಿಠ್ಠಲ್ ಚವಾಣ್, ದೈಹಿಕ ಶಿಕ್ಷಣ ಶಿಕ್ಷಕರಾದ ನಾಗನಗೌಡ ಪಾಟೀಲ್, ಬೈಲಪ್ಪ ನಾಗನಟಗಿ, ರಮೇಶ್ ವಾಲಿ, ಗುಳಪ್ಪ ಅಂಗಡಿ ಸೇರಿದಂತೆ ಶಾಲೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿವಿಧೆಡೆ ಯೋಗ ದಿನ: ಪಟ್ಟಣದ ಯುಕೆಪಿ ಕ್ಯಾಂಪಿನ ಸ್ಪಂದನ ಪಬ್ಲಿಕ್ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸಾಮೂಹಿಕ ಯೋಗಾಭ್ಯಾಸದಲ್ಲಿ ಪಾಲ್ಗೊಂಡಿದ್ದರು. ಸಹ ಶಿಕ್ಷಕಿ ಜಯಶ್ರೀ ಮಡಿವಾಳರ ಮಾತನಾಡಿದರು. ಸಂಸ್ಥೆಯ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಹುಣಸಗಿ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಹುಣಸಗಿಯಲ್ಲಿ ವಿದ್ಯಾರ್ಥಿಗಳಿಗೆ ಸಾಮೂಹಿಕ ಯೋಗಾಭ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ವಿಶ್ವ ಯೋಗ ದಿನಾಚರಣೆ | ಎಡಿಸಿ ರಮೇಶ ಕೋಲಾರ ಅಭಿಮತ

ಯೋಗ, ಧ್ಯಾನಕ್ಕೆ ಭಾರತವೇ ಮೂಲ

• **ಯಾದಗಿರಿ:** ಆದಿ, ಅನಾದಿ ಕಾಲದಿಂದಲೂ ಯೋಗ, ವ್ಯಾಯಾಮ, ಧ್ಯಾನ ಋಷಿ ಮುನಿಗಳು ಮಾಡಿಕೊಂಡ ಬಂದ ಪರಿಣಾಮ ಅವರಿಗೆ ಆಯುಷ್ಯ ಹೆಚ್ಚಿಗೆ ಇತ್ತು ಮತ್ತು ಉತ್ತಮ ಆರೋಗ್ಯ ಹೊಂದಿದ್ದರೆಂದು ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ ಹೇಳಿದರು.

ಇಲ್ಲಿನ ಬಾಲಾಜಿ ಕಲ್ಯಾಣ ಮಂಟಪದ ಆವರಣದಲ್ಲಿ ಭಾನುವಾರ ಜಿಪಂ, ಆಯುಷ್ ಇಲಾಖೆ ಮತ್ತು ಆರೋಗ್ಯ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಭಾರತೀಯರು ಯೋಗದ ಮೂಲಕವೇ ಅನೇಕ ರೋಗಗಳನ್ನು ಗುಣಪಡಿಸಿಕೊಳ್ಳುವ ಕಾಲವೊಂದಿತ್ತು. ಆದರೆ, ಮುಂದೆ ಇಂಗ್ಲಿಷ್ ಔಷಧಿಗಳಿಗೆ ಮೊರೆ ಹೋಗುವ ಮೂಲಕ ಈ ದೇಸಿ ಪದ್ಧತಿ ಮೇಲಿನ ಕಾಳಜಿ ಕಡಿಮೆ ಆಯಿತು. ಆದರೆ ಇತ್ತೀಚಿನ ವರ್ಷಗಳಲ್ಲಿ ಮತ್ತೆ ಜನರು ಯೋಗ ಇತರೆ ದೈಹಿಕ ಕಸರತ್ತಿನ ಮೂಲಕ ತಮ್ಮ, ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವತ್ತ ಮರಳಿದ್ದಾರೆಂದು ವಿವರಿಸಿದರು.



ಪ್ರಾಸ್ತಾವಿಕವಾಗಿ ಮಾತನಾಡಿದ ಆಯುಷ್ಯ ವೈದ್ಯಾಧಿಕಾರಿ ಡಾ.ಪ್ರಕಾಶ ರಾಜಾಪುರ, ಯೋಗಾಭ್ಯಾಸವು ಮಾನವನ ಜೀವನದ ಒಂದು ಅಮೂಲ್ಯ ಸಾಧನವಾಗಿದೆ. ಮಕ್ಕಳಿಂದ ಹಿಡಿದುವೃದ್ಧರವರೆಗೆ ಲಿಂಗ ಬೇಧವಿಲ್ಲದೇ ಅಭ್ಯಾಸ ಮಾಡಬಹುದೆಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ ಉದ್ಘಾಟಿಸಿದರು. ಹೆಚ್ಚುವರಿ ಎಸ್.ಪಿ.ಧರಣೇಶ, ಡಿವೈಎಸ್‌ಪಿ ಸುರೇಶ ನಾಯಕ, ಕ್ರೀಡಾಧಿಕಾರಿ ರಾಜು ಬಾವಿಹಳ್ಳಿ, ಬ್ರಹ್ಮಕುಮಾರಿ ವೀಣಾ ಅಕ್ಕ, ಡಾ.ಪಂಪಾರಡ್ಡಿ, ಡಾ.ಹಣಮಂತರೆಡ್ಡಿ ಇತರರಿದ್ದರು. ಜಿಲ್ಲಾ ಆಯುಷ್ಯಾಧಿಕಾರಿ ಡಾ.ವಂದನಾ ಗಾಳಿ ಸ್ವಾಗತಿಸಿದರು. ಸಂಗಮೇಶ ಕೆಂಭಾವಿ ನಿರೂಪಿಸಿದರು. ಡಾ.ಪ್ರಮೋದ ವಂದಿಸಿದರು. ಅನಿಲ ಗುರುಜಿ ಯೋಗಾಭ್ಯಾಸ ಮಾಡಿಸಿದರು.

ಹಣಕ್ಕಿಂತ ಆರೋಗ್ಯವೇ ನಿಜವಾದ ಆಸ್ತಿ

• **ವಿಜಯನಗರ:** ಇಂದಿನ ಆಧುನಿಕ ಯುಗದಲ್ಲಿಮನುಷ್ಯ ಎಷ್ಟೇ ಆಸ್ತಿ-ಅಂತಸ್ತು, ಹಣ ಸಂಪಾದನೆ ಮಾಡಿದರೂ ವೃದ್ಧಾಪ್ಯದಲ್ಲಿ ಆವನ ಕೈಹಿಡಿಯುವುದು ಕೇವಲ ಆತ ಕಾಪಾಡಿಕೊಂಡು ಬಂದ ಉತ್ತಮ ಆರೋಗ್ಯ ಮಾತ್ರ. ಹೀಗಾಗಿ ಪ್ರತಿಯೊಬ್ಬರೂ ಯೋಗವನ್ನು ದೈನಂದಿನ ಜೀವನದ ಭಾಗವಾಗಿಸಿಕೊಳ್ಳಬೇಕು ಎಂದು ಎಡಿಸಿ ಇ.ಬಾಲಕೃಷ್ಣ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ನಗರಸಭೆ ಹಾಗೂ ವಿವಿಧ ಪ್ರಮುಖ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಭವ್ಯ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಈ ಬಾರಿಯ ಯೋಗ ದಿನಾಚರಣೆಯು ಆರೋಗ್ಯಕರವೃದ್ಧಾಪ್ಯಕ್ಕಾಗಿಯೋಗಎಂಬ ಅರ್ಥಪೂರ್ಣ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ.

ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್ ಮಾತನಾಡಿ, ಯೋಗ ಎಂಬುವುದು ಕೇವಲ ದೈಹಿಕ ಕಸರತ್ತಲ್ಲ, ಅದು ನಮ್ಮ ಜೀವನದ ಭಾಗವಾಗಬೇಕು. ಯೋಗದಿಂದರೋಗಮುಕ್ತಿ ಎಂಬತತ್ವವನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳುವುದರಿಂದ ನಮ್ಮ ಆಯಸ್ಸು ಹೆಚ್ಚಾಗುವುದಲ್ಲದೆ, ಗಂಭೀರ ಕಾಯಿಲೆಗಳಿಂದ ಐಸಿಯು ಸೇರುವ ಪರಿಸ್ಥಿತಿಗಳನ್ನು ತಪ್ಪಿಸಬಹುದು ಎಂದರು.

ಯೋಗ ಗುರು ಬಾಲಚಂದ್ರ ಶರ್ಮಾ ಅವರು ಯೋಗ ತರಬೇತಿ ನೀಡಿದರು. ಯೋಗ ದಿನಾಚರಣೆಯಲ್ಲಿ ಸುಮಾರು 2000ಕ್ಕೂ ಅಧಿಕ ಸಂಖ್ಯೆಯಲ್ಲಿ ಯೋಗಾಸಕ್ತರು, ಯೋಗ ಪಟುಗಳು ಹಾಗೂ ಸಾರ್ವಜನಿಕರು ಶಿಸ್ತುಬದ್ಧವಾಗಿ ಯೋಗಾಸನಗಳನ್ನು ಪ್ರದರ್ಶಿಸಿ ಗಮನ ಸೆಳೆದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಮಂಜುನಾಥ್, ಆಯುಷ್ ಇಲಾಖೆಯ ಡಾ.ಕೆ.ಎಚ್.ಗುರುಬಸವರಾಜ್ ಡಾ.ಮುನಿ ವಾಸುದೇವ ರೆಡ್ಡಿ, ನಗರಸಭೆ ಪೌರಾಯುಕ್ತ ಎರಗುಡಿ ಶಿವಕುಮಾರ್, ಡಿಪಿ ಐ ರಾಮಚಂದ್ರ, ಬಿಇಒ ಉಮಾಪತಿ, ದೈಹಿಕ ಪರಿವೀಕ್ಷಕ ಶ್ರೀಕಾಂತ್, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಅಶ್ವಿನ್ ಕೋತಂಬರಿ, ಕಸಟ್ಟಿ ಉಮಾಪತಿ, ಈಶ್ವರಿಯ ಬ್ರಹ್ಮಕುಮಾರಿ ವಿದ್ಯಾಲಯದ ಮಾನಸ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಬಿಜೆಪಿಯಿಂದ ವಿಶ್ವ ಯೋಗ ದಿನಾಚರಣೆ

• **ಕೊಟ್ಟೂರು:** ತಾಲೂಕಿನ ಉಜ್ಜನಿಯ ಸದ್ಧರ್ಮ ಪೀಠದ ಆವರಣದಲ್ಲಿ ಭಾನುವಾರ ಶ್ರೀಪೀಠದ ಆಶ್ರಯದಲ್ಲಿ ಬಿಜೆಪಿ ಮಂಡಲ ಘಟಕ ಪ್ರಧಾನಿ ಮೋದಿ ಆಶಯದಂತೆ ವಿಶ್ವ ಯೋಗ ದಿನಾಚರಣೆ ನಡೆಸಿತು. ನೂರಾರು ವಿದ್ಯಾರ್ಥಿಗಳು ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡು ಹೊಸಪೇಟೆಯ ಯೋಗಪಟು ಕವಿತಾ ಮಾರ್ಗದರ್ಶನದಲ್ಲಿ ವಿವಿಧ ಯೋಗಗಳನ್ನು ಮಾಡಿದರು. ಯೋಗದ ನಂತರ ವಿದ್ಯಾರ್ಥಿಗಳಿಗೆ ಬಿಜೆಪಿ ಮಂಡಲ ಅಧ್ಯಕ್ಷ ಕಾಮಶೆಟ್ಟಿ ನಾಗರಾಜ ತಮ್ಮ ತಾಯಿಯ ಹೆಸರಿನಲ್ಲಿ ಸಸಿ ನೆಟ್ಟು ಬೆಳೆಸುವಂತೆ ಸಸಿಗಳನ್ನು ವಿತರಿಸಿದರು. ನೂರಾರು ವಿದ್ಯಾರ್ಥಿಗಳು ಏಕ ಕಾಲದಲ್ಲಿ ಯೋಗ ಮಾಡಿದ್ದರಿಂದ ಪೀಠದಲ್ಲಿ ಸಂಭ್ರಮ ಮನೆಮಾಡಿತ್ತು. ಜಿಲ್ಲಾ ಉಪಾಧ್ಯಕ್ಷ ಸೂರ್ಯ ಪಾಪಣ್ಣ, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಚಿನ್‌ಕುಮಾರ್, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಗೀತಮ್ಮ, ಸಾಣಿಹಳ್ಳಿ ಹನುಮಂತು, ನೇತ್ರಾವತಿ, ಮಂಡಲ ಕಾರ್ಯದರ್ಶಿ ಸಿದ್ದೇಶ್, ಗ್ರಾಮದ ಮುಖಂಡರಾದ ಮರುಳಸಿದ್ದಪ್ಪ, ಕೊಟ್ರೇಶ, ಭರತ್, ವೀರೇಶ್ ಇತರರಿದ್ದರು.



ಯೋಗ ನಿತ್ಯ ಜೀವನದ ಭಾಗವಾಗಲಿ: ಶಾಸಕ

• **ಬೀದರ:** ಪ್ರತಿದಿನ ಯೋಗಾಭ್ಯಾಸ ಮಾಡುವ ವ್ಯಕ್ತಿ ನೂರು ವರ್ಷಗಳ ಪೂರ್ಣ ಬದುಕು ಸಾಗಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಯೋಗವನ್ನು ತಮ್ಮ ನಿತ್ಯ ಜೀವನದ ಭಾಗವಾಗಿಸಿಕೊಳ್ಳಬೇಕು ಎಂದು ಮಾಜಿ ಸಚಿವ ಹಾಗೂ ಶಾಸಕ ಪ್ರಭು ಬಿ.ಚವ್ಹಾಣ ತಿಳಿಸಿದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಭಾನುವಾರ ಔರಾದ(ಬಿ) ತಾಲೂಕು ಕ್ರೀಡಾಂಗಣದ ಆವರಣದಲ್ಲಿ ಆಯೋಜಿಸಲಾಗಿದ್ದ ಸಾಮೂಹಿಕ ಯೋಗ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿದಿನ ಯೋಗಾಭ್ಯಾಸ ಮಾಡುವವರಿಗೆ ಆಸ್ಪತ್ರೆಗೆ ಹೋಗುವ ಅನಿವಾರ್ಯತೆ ಎದುರಾಗುವುದಿಲ್ಲ, ದಿನನಿತ್ಯ ಆಟೋಟಗಳಲ್ಲಿ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸುವವರನ್ನು ರೋಗಗಳು ಸುಲಭವಾಗಿ ಬಾಧಿಸುವುದಿಲ್ಲ. ದೈಹಿಕ ಚಟುವಟಿಕೆಗಳ ಕೊರತೆಯಿಂದ ಟೊಂಕದಲ್ಲಿ ಉಳುಕು, ತಲೆನೋವು, ಎದೆನೋವು ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ನಿಯಮಿತವಾಗಿ ವಾಕಿಂಗ್, ಜಾಗಿಂಗ್, ಯೋಗ ಹಾಗೂ ಪ್ರಾಣಾಯಾಮ ಮಾಡುವವರು ಆರೋಗ್ಯವಂತ ಜೀವನ ನಡೆಸುವುದರ ಜೊತೆಗೆ ದೀರ್ಘಾಯುಷ್ಯ ಹೊಂದಲು ಸಾಧ್ಯವಾಗುತ್ತದೆ. ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ 50 ವರ್ಷ ವಯಸ್ಸಿಗೆ ತಲುಪುವ ವೇಳೆಗೆ ಹಲವು ರೀತಿಯ ದೈಹಿಕ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ ಎಂದು ಹೇಳಿದರು.

ತಾಲೂಕು ಆರೋಗ್ಯಾಧಿಕಾರಿ ಅನಿಲಕುಮಾರ ಎಕಲೂರ್, ಪ್ರೊ.ಹಾವಗಿರಾವ ವಟಗೆ, ಶಿವರಾಜ ಶೆಟಗಾರ, ಬಸವರಾಜ ಹಳ್ಳೆ ಅವರು ಯೋಗ ತರಬೇತಿ ನೀಡಿದರು.

ತಹಶೀಲ್ದಾರ್ ಮಹೇಶ ಪಾಟೀಲ, ತಾಪಂ ಇಒ ಕಿರಣ ಪಾಟೀಲ, ಪುರಸಭೆ ಮುಖ್ಯಾಧಿಕಾರಿ ರವಿ ಸುಕುಮಾರ, ಕ್ಷೇತ್ರ ಶಿಕ್ಷಣಾಧಿಕಾರಿ ವಾಗಂಬರ ಗಾಯಕವಾಡ, ಮುಖಂಡರಾದ ಮಾರುತಿ ಚವ್ಹಾಣ, ಶಿವಾಜಿರಾವ ಪಾಟೀಲ ಮುಂಗನಾಳ, ಧೊಂಡಿಬಾ ನರೋಟೆ, ರಾಮಶೆಟ್ಟಿ ಪನ್ನಾಳೆ, ಶಿವಾನಂದ ವಡ್ಡೆ, ಪ್ರಕಾಶ ಅಲ್ಮಾಜೆ, ದಯಾನಂದ ಘೂಳೆ, ಕೇರಬಾ ಪವಾರ, ಗುಂಡಪ್ಪ ಮುಧಾಳೆ, ಸಂಗಮೇಶ ದೇಶಮುಖ, ಸುನೀಲ ಸುಸಲಾದೆ, ಅಶೋಕ ಅಲ್ಮಾಜೆ, ಅಶೋಕ ಶೆಂಬೆಳ್ಳಿ ಇತರರಿದ್ದರು.



ಬಳ್ಳಾರಿಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂಭ್ರಮ

• **ಬಳ್ಳಾರಿ:** ಆರೋಗ್ಯವೇ ಭಾಗ್ಯ ಎಂಬ ದಿವ್ಯ ಮಂತ್ರಕ್ಕೆ ಜೀವ ತುಂಬುವಂತೆ, ಭಾನುವಾರ ನಗರದಲ್ಲಿ ಅಂತಾರಾಷ್ಟ್ರೀಯ 12ನೇ ಯೋಗ ದಿನಾಚರಣೆಯನ್ನು ಅತ್ಯಂತ ಉತ್ಸಾಹದಿಂದ ಆಚರಿಸಲಾಯಿತು.

ವಯಸ್ಸಿನ ಭೇದವಿಲ್ಲದೆ, ನೂರಾರು ಜನರು, ಅಧಿಕಾರಿಗಳು, ಉದ್ಯಮಿಗಳು, ರಾಜಕಾರಣಿಗಳು, ಸಂಘಸಂಸ್ಥೆಯ ಪದಾಧಿಕಾರಿಗಳು ಬೆಳಗಿನ ತಂಗಾಳಿಯಲ್ಲಿ ಯೋಗಾಸನಗಳನ್ನು ಮಾಡುವ ಮೂಲಕ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ಸಂದೇಶವನ್ನು ಸಾರಿದರು. ಸುರ್ಯೋದಯದ ವೇಳೆಗೆ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ಘೋಷವಾಕ್ಯದೊಂದಿಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆಯುಷ್ ಇಲಾಖೆ ಆಶ್ರಯದಲ್ಲಿ ನಗರದ ಎಸ್.ಜಿ. ಲಾ-ಕಾಲೇಜು ಆವರಣ(ಶೆಟ್ಟರ್ ಗುರುಶಾಂತಪ್ಪ ಲಾ ಕಾಲೇಜು ಮೈದಾನ)ವು ಯೋಗ ಪಟುಗಳಿಂದ ಕಂಗೊಳಿಸುತ್ತಿತ್ತು.

ಪೂರ್ವ ನಿಗದಿಯಂತೆ ಬೆ.7ರಿಂದಲೇ ನೆರೆದ ಸಾವಿರಾರು ಸಾರ್ವಜನಿಕರು ಸೂರ್ಯ ನಮಸ್ಕಾರ, ಪ್ರಾಣಾಯಾಮ ಹಾಗೂ ವಿವಿಧ ಆಸನಗಳನ್ನು ಪ್ರದರ್ಶಿಸಿದರು. ಅಧಿಕಾರಿಗಳು, ಸಿಬ್ಬಂದಿ, ಶಾಲಾ- ಕಾಲೇಜು ಮಕ್ಕಳು, ಹಿರಿಯ ನಾಗರಿಕರು, ಸಾರ್ವಜನಿಕರು ಎಲ್ಲರೂ ಒಂದೇ ಲಯದಲ್ಲಿ ಯೋಗ ಮಾಡಿ ಗಮನ ಸೆಳೆದರು. ಪತಂಜಲಿ ಯೋಗ ಸಮಿತಿಯ ಜಿಲ್ಲಾ ಸಂಚಾಲಕ ಹಾಗೂ ಯೋಗ ತರಬೇತುದಾರ ಇಸ್ವಿ ಪಂಪಾಪತಿ ಅವರು ದೈನಂದಿನ ಜೀವನಕ್ಕೆ ಅಗತ್ಯವಿರುವ ಪ್ರಮುಖ ಆಸನಗಳ ಮಹತ್ವವನ್ನು ತಿಳಿಸಿಕೊಡುವ ಮೂಲಕ 45 ನಿಮಿಷಗಳ ಕಾಲ ಯೋಗಾಭ್ಯಾಸ ಮಾಡಿಸಿದರು.



ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷ, ಜಿಪಂ ಸಿಇಒ ಮಹಮ್ಮದ್ ಹಾರಿಸ್ ಸುಮೇರ್, ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್, ಬಳ್ಳಾರಿ ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ, ಎಡಿಸಿ ಮಹಮ್ಮದ್ ಝುಬೇರ್ ಎನ್., ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಫಣೇಂಧರ್ ಇತರರಿದ್ದರು.

ಯೋಗ ನಿತ್ಯ ನಿರಂತರವಾಗಿರಲಿ

ಹಗರಿಬೊಮ್ಮನಹಳ್ಳಿ: ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಆವರಣದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಾತನಾಡಿದ ಡಾ.ಸಿದ್ದೇಶ್ವರ ಶಿವಸಾಲಿ, 'ಯೋಗವು ಕೇವಲ ಒಂದು ದಿನಕ್ಕೆ ಸೀಮಿತವಾಗದೆ. ಪ್ರತಿದಿನದ ಜೀವನದ ಅವಿಭಾಜ್ಯ ಅಂಗವಾಗಿರಬೇಕು. ಶಾರೀರಿಕ ಆರೋಗ್ಯದ ಜೊತೆಗೆ ಮಾನಸಿಕ ನೆಮ್ಮದಿ, ಏಕಾಗ್ರತೆ ಮತ್ತು ಆತ್ಮವಿಶ್ವಾಸ ವೃದ್ಧಿಗೆ ಯೋಗ ಅತ್ಯಂತ ಅವಶ್ಯಕವಾಗಿದೆ ಎಂದು ಹೇಳಿದರು. ಮಕ್ಕಳು ಚಿಕ್ಕ ವಯಸ್ಸಿನಿಂದಲೇ ಯೋಗಾಭ್ಯಾಸವನ್ನು ತಮ್ಮ ಜೀವನಶೈಲಿಯ ಭಾಗವಾಗಿಸಿಕೊಳ್ಳಬೇಕು. ನಿಯಮಿತ ಯೋಗಾಭ್ಯಾಸದಿಂದ ದೈಹಿಕ ಸಾಮರ್ಥ್ಯ, ಶಿಸ್ತು, ಏಕಾಗ್ರತೆ ಹಾಗೂ ಉತ್ತಮ ವ್ಯಕ್ತಿತ್ವ ಬೆಳೆಯುತ್ತದೆ ಎಂದು ಅವರು ತಿಳಿಸಿದರು.

ಅಧ್ಯಕ್ಷೀಯ ನುಡಿಗಳಲ್ಲಿ ಕಾರ್ಯದರ್ಶಿ ಜಿ.ಬಸವನಗೌಡ ಮಾತನಾಡಿ, 'ಯೋಗವು ನಮ್ಮೆಲ್ಲರ ಆರೋಗ್ಯದ ಜೀವಾಳವಾಗಿದೆ. ಯೋಗವನ್ನು ಸಮಚಿತ್ತದಿಂದ ಹಾಗೂ ನಿಯಮಿತವಾಗಿ ಅಭ್ಯಾಸ ಮಾಡಿದರೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು' ಎಂದು ಹೇಳಿದರು. ಯೋಗದ ವಿವಿಧ ಆಸನಗಳ ಪ್ರದರ್ಶನ, ಸಮೂಹ ಯೋಗಾಭ್ಯಾಸ ಹಾಗೂ ಯೋಗದ ಮಹತ್ವದ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ನಡೆದವು. ವಿದ್ಯಾಕೇಂದ್ರದ ವಿವಿಧ ಪ್ರಕಲ್ಪಗಳ 1,118 ವಿದ್ಯಾರ್ಥಿಗಳು ಸಮೂಹ ಯೋಗಾಸನದಲ್ಲಿ ಭಾಗವಹಿಸಿ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾದರು.



ಸಹಕಾರ್ಯದರ್ಶಿ ದುರ್ಗಣ್ಣ, ಪ್ರಧಾನಾಚಾರ್ಯ ಎಚ್.ಎ. ರಂಗನಾಥ, ಮಂಜುನಾಥ ನಂದಿ, ನಾರಾಯಣ ಕೆರೂರ, ಹಿರಿಯ ಶಿಕ್ಷಕರಾದ ಸೋಮನಗೌಡ, ದೈಹಿಕ ಶಿಕ್ಷಣ ಶಿಕ್ಷಕರಾದ ಪ್ರಭುದೇವ್, ಮಧುಕರ್, ವಿನಯ್, ಕೆ.ನಾಗರಾಜ, ಆನಂದ್ ಕಡ್ಲಿ ಸೇರಿದಂತೆ ಪಾಲಕರು, ಶಿಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಸ್ವಾಗತವನ್ನು ವೀರೇಶ್ ವಾಲಿ ನೆರವೇರಿಸಿದರು. ಉಪನ್ಯಾಸಕ ಕುಮಾರ್ ಆಚಾರ್ ವಂದಿಸಿದರು. ವಿನಯ್ ನಿರೂಪಿಸಿದರು.

2.15 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿಗೆ ಚಾಲನೆ

• **ಹಗರಿಬೊಮ್ಮನಹಳ್ಳಿ:** ಕ್ಷೇತ್ರದ ಎಲ್ಲ ವರ್ಗದ ಜನರು ಮತ ನೀಡಿ ಗೆಲ್ಲಿಸಿದ್ದಾರೆ.ಪಕ್ಷಾತೀತವಾಗಿ ಜನರ ಒಳಿತಿಗಾಗಿ ರಸ್ತೆ ಚರಂಡಿ ಕುಡಿಯುವ ನೀರು ಶಿಕ್ಷಣ ಆರೋಗ್ಯ ಇನ್ನಿತರ ಮೂಲಭೂತ ಸೌಲಭ್ಯ ಕಲ್ಪಿಸುವ ಕೆಲಸ ಮಾಡುವ ಮೂಲಕ ಜನರ ವಿಶ್ವಾಸವನ್ನು ಉಳಿಸಿಕೊಳ್ಳುವ ಕೆಲಸ ಮಾಡುವುದಾಗಿ ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ಶನಿವಾರ ನಗರದ 1.65 ಕೋಟಿ ವೆಚ್ಚದಲ್ಲಿ ಕೆಚ್ಚಿನಬಂಡಿ ರಸ್ತೆ ಹಾಗೂ ತಾಲೂಕಿನ ಉಲುವತ್ತಿ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ತಾಲೂಕಿನಲ್ಲಿ 90 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಮಾಡಲಾಗುತ್ತಿದೆ ಈ ನಿಟ್ಟಿನಲ್ಲಿ ಇಂದು 2.15 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.ಕ್ಷೇತ್ರದ 15 ಲಕ್ಷ ರೈತರಿಗೆ ಉಚಿತವಾಗಿ ತೊಗರಿ ಬೀಜ ವಿತರಣೆ ಮಾಡಲಾಗುವುದು. ರಾಗಿ ಖರೀದಿ ಕೇಂದ್ರದಿಂದ ರೈತರಿಗೆ ಬರಬೇಕಾದ ಬಾಕಿ ಹಣ ರೈತರ ಬ್ಯಾಂಕ್ ಖಾತೆಗೆ ಜಮಾ ಆಗಲಿದೆ ಎಂದರು.

ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಬಾದಾಮಿ ಮೃತ್ಯುಂಜಯ ಉಪಾಧ್ಯಕ್ಷ ಕೃಷ್ಣಮೂರ್ತಿ ಶೆಟ್ರು ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಪುರಸಭೆ ಸದಸ್ಯ ಜೋಗಿ ಹನುಮಂತಪ್ಪ ಮುಖಂಡರಾದ ಚಿತವಾಡಿಗೆ ಪ್ರಕಾಶ್, ಹೋಟೆಲ್ ಸಿದ್ದರಾಜು, ಕನ್ನೆಹಳ್ಳಿ ಚಂದ್ರಶೇಖರ, ಸೋಮಲಿಂಗಪ್ಪ, ಆರ್.ಶಿವಕುಮಾರ್ ಗೌಡ, ಆಡೂರು ಬಸವರಾಜ, ರಾಹುಲ್ ಕೊಟ್ರಾಚಾರಿ, ಬಡಿಗೇರ್ ಕೊಟ್ರೇಶ್, ಬಿ.ಕೊಟ್ರೇಶ್, ಓಮೇಶ್, ಆಪ್ತ ಸಹಾಯಕ ಬ್ಯಾಟಿ ನಾಗರಾಜ, ಗುತ್ತಿಗೆದಾರ ವಿ.ದೊಡ್ಡಬಸಪ್ಪ, ಲೋಕೋಪಯೋಗಿ ಇಲಾಖೆಯ ಸತೀಶ್ ನಾಯ್ಕ ಇತರರಿದ್ದರು.



ಚುನಾವಣೆ ಸಮಯದಲ್ಲಿ ತಮ್ಮ ಪಕ್ಷ ಬಿಟ್ಟು ಬೇರೆ ಪಕ್ಷದವರಿಗೆ ಮತ ನೀಡಿ ಅಡ್ಡ ಮತದಾನ ಮಾಡಿದರೆ ತಾಯಿಗೆ ದ್ರೋಹ ಮಾಡಿದಂತೆ ಕ್ಷೇತ್ರದ ಜನರು ವಿಶ್ವಾಸಕ್ಕೆ ಭಾವನೆಗಳಿಗೆ ಮೋಸ ಮಾಡಿದಂತೆ. ಪರಿಷತ್ ಚುನಾವಣೆಯಲ್ಲಿ 4 ಜನ ಶಾಸಕರು ಅಡ್ಡ ಮತದಾನ ಮಾಡಿದ ಬಗ್ಗೆ ಪಕ್ಷದ ವರಿಷ್ಠರ ಗಮನಕ್ಕೆ ಬಂದಿದೆ. ಈ ಬಗ್ಗೆ ಪರಿಶೀಲಿಸಿ ಕೇಂದ್ರ ಸಚಿವ ಕುಮಾರಣ್ಣ ಕ್ರಮ ಕೈಗೊಳ್ಳಲಿದ್ದಾರೆ.

■ ಕೆ.ನೇಮಿರಾಜ್ ನಾಯ್ಕ್, ಶಾಸಕ

ಮಳೆಗೆ ರೈತರಿಂದ ಗುರ್ಜಿ ಪೂಜೆ

• **ಹೂವಿನಹಡಗಲಿ:** ತಾಲೂಕಿನ ಅಡವಿಮಲ್ಲನಕೇರಿ ಗ್ರಾಮದ ರೈತರಿಂದ ಭಾನುವಾರ ಮಳೆಗಾಗಿ ಗುರ್ಜಿ ಪೂಜೆಗೆ ಮೊರೆ ಹೋಗಿದ್ದಾರೆ. ಆರಂಭದಲ್ಲಿ ಸುರಿದ ಆಶಾದಾಯಕ ಮಳೆಯಿಂದಾಗಿ ರೈತರು ಹುಮ್ಮಸ್ಸಿನಿಂದ ಮುಂಗಾರಿನ ಬಿತ್ತನೆ ಮಾಡಿದ್ದು, ಈಗ ಮಳೆ ಮಾಯವಾಗಿ, ಬೇಸಿಗೆ ಕಾಲದಂತೆ ಬಿಸಿಲು ಬಿದ್ದಿದೆ. ಇದರಿಂದ ರೈತ ಸಮುದಾಯ ಸಂಕಷ್ಟಕ್ಕೆ ಈಡಾಗಿದೆ. ಹೀಗಾಗಿ ರೈತರು ಮತ್ತು ರೈತರ ಮಕ್ಕಳಿಂದ ಮಳೆಗಾಗಿ ಗುರ್ಜಿ ಪೂಜೆಗೆ ಮೊರೆ ಹೋಗಿದ್ದಾರೆ. ಕಟ್ಟಿಗೆ ಮೇಲೆ ಗುರ್ಜಮನನ್ನು ಕೂರಿಸಿಕೊಂಡು ಕ್ಯಾತನರ್ ಮಲ್ಲಿನಾಥ್ ತಲೆಯ ಮೇಲೆ ಹೊತ್ತು ಸೆಗಣಿಯಿಂದ ಗುರ್ಜಿ ಮಾಡಿ ಹೆಂಚಿನ ಮೇಲೆ ಇಟ್ಟು ಓಣಿ ಓಣಿ ತಿರುಗಿದರು. ವಿಶಿಷ್ಟ ರೀತಿಯಲ್ಲಿ ಹಾಡುತ್ತ ಪರಸ್ಪರ ನೀರು ಎರಚಿಕೊಳ್ಳುತ್ತ, ಪರಿಪರಿಯಾಗಿ ಮಳೆರಾಯನನ್ನು ಪ್ರಾರ್ಥಿಸಿದರು. ರೈತ ಗ್ರಾಮಸ್ಥರಾದ ಹುರಳಿಹಾಳ್ ಷಣ್ಮುಖಪ್ಪ, ಬಣಕಾರ ಕೊಟ್ರೇಶ್, ಬೆನಕಲ್ ವೀರೇಶ್, ಎಚ್.ಎಂ.ಚನ್ನವೀರಯ್ಯ, ಗೂಳಿ ಚನ್ನಬಸಪ್ಪ, ಕಂದಗಲ್ ಬಸವರಾಜ, ಶೆಟ್ನಾಳ ಕರಿಬಸಪ್ಪ, ಮೋರಗೇರಿ ಸಿದ್ದೇಶ್, ಎಂಎಂ ಹೊಳಲಯ್ಯ, ಮಾಲ್ವಿ ನಿಂಗಪ್ಪ, ಎಚ್.ಮಲ್ಲಪ್ಪ, ಎಸ್.ಎಂ.ಹಾಲಯ್ಯ, ಎಸ್.ವೀರಪ್ಪ, ಎಚ್.ಎಂ.ಕೊಟ್ರಯ್ಯ, ಎಚ್.ಈಶಪ್ಪ, ಎಂ.ಕೊಟ್ರೇಶ್, ಎಸ್.ನಂಜುಂಡಪ್ಪ, ಹಗರನೂರ ಸಿದ್ಲಿಂಗಪ್ಪ, ಪಿ.ಎಂ.ಸಿದ್ದಯ್ಯ, ಜಿ.ಶೇಕ್ರಪ್ಪ, ಪಿಎಂ ಕೊಟ್ರಯ್ಯ, ಎಚ್.ವೀರಭದ್ರಪ್ಪ, ಎಚ್.ಸಿದ್ದಪ್ಪ, ಜಿ. ನಾಗರಾಜ, ಬಿ.ಕೊಟ್ರೇಶ್. ಬಸಾಪುರದ ವೀರಣ್ಣ, ಬಿ.ಚಂದ್ರಪ್ಪ, ಎಸ್.ಎಂ.ಶಾಂತಲಿಂಗಯ್ಯ, ಹಾಗೂ ಮಹಿಳೆಯರು ಮತ್ತು ಯುವಕರಿದ್ದರು.



ನೈಸರ್ಗಿಕ, ಸಾವಯವ ಕೃಷಿ ಅಳವಡಿಸಿಕೊಳ್ಳಿ

• **ಕಾನಹೊಸಹಳ್ಳಿ:** ನೈಸರ್ಗಿಕ ಹಾಗೂ ಸಾವಯವ ಕೃಷಿಯು ರೈತರಿಗೆಕಡಿಮೆವೆಚ್ಚದಬೇಸಾಯಪದ್ಧತಿಯಾಗಿದ್ದು, ಈಮೂಲಕ ಉತ್ತಮ ಇಳುವರಿಯೊಂದಿಗೆ ಲಾಭ ಹೊಂದುವುದಲ್ಲದೆ, ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಬಹುದಾಗಿದೆ ಎಂದು ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಹುರುಳಿಹಾಳು ಹೊಂಬಾಳೆ ರೇವಣ್ಣ ತಿಳಿಸಿದರು.

ತಾಲೂಕಿನ ಕಾನಮಡುಗು ಗ್ರಾಮದ ಶ್ರೀಶರಣಬಸವೇಶ್ವರ ದಾಸೋಹ ಮಠದ ಸಮುದಾಯ ಭವನದಲ್ಲಿ ಬಿಜೆಪಿ ಜಿಲ್ಲಾ ರೈತ ಮೋರ್ಚಾದಿಂದ ಶುಕ್ರವಾರ ಆಯೋಜಿಸಿದ್ದ 'ನೈಸರ್ಗಿಕ ಹಾಗೂ ಸಾವಯವ ಕೃಷಿ ಕಾರ್ಯಾಗಾರದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನೈಸರ್ಗಿಕ ಹಾಗೂ ಸಾವಯವ ಕೃಷಿ ಪದ್ಧತಿಯನ್ನು ರೈತರು ಅಳವಡಿಸಿಕೊಳ್ಳುವ ಮೂಲಕ ರಾಸಾಯನಿಕಮುಕ್ತ ಆಹಾರ ಉತ್ಪಾದನೆ, ಪರಿಸರ ಹಾಗೂ ಮಣ್ಣಿನ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾವಯವ ಕೃಷಿಕ ಹುಲಿಕೆರೆ ಎಚ್.ವಿ.ಸಜ್ಜನ್ ಮಾತನಾಡಿ, ಪ್ರಕೃತಿ, ಮಾನವ ಹಾಗೂ ರೈತರಿಗೆ ನೈಸರ್ಗಿಕ ಹಾಗೂ ಸಾವಯವ ಕೃಷಿಯಿಂದ ಸಾಕಷ್ಟು ಉಪಯೋಗಗಳಿವೆ. ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಳಾಗುವುದಲ್ಲದೆ, ರೈತರಿಗೆ ಹೆಚ್ಚಿನ ಖರ್ಚಿನ ಹೊರೆ ಬೀಳಲಿದೆ. ಆದರೆ, ಸಾವಯವ ಹಾಗೂ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳುವುದರಿಂದ ಕಡಿಮೆ ಉತ್ಪಾದನಾ ವೆಚ್ಚ ಹಾಗೂ ಅಧಿಕ ಆದಾಯವನ್ನು ಕಾಣಬಹುದಾಗಿದೆ ಎಂದು ತಿಳಿಸಿದರು.



ಸಾನ್ನಿಧ್ಯವಹಿಸಿದ್ದ ಕಾನಮಡುಗು ದಾಸೋಹ ಮಠದ ಧರ್ಮಾಧಿಕಾರಿ ದಾ.ಮ.ಐಮಡಿ ಶರಣಾರ್ಯರು, ಪ್ರಗತಿಪರ ಕೃಷಿಕ ಕಾನಮಡುಗು ಕೆ.ಎಂ.ಶಶಿಧರ, ಹುಲಿಕೆರೆ ದುರುಗೇಶ್, ಕೊಟ್ಟೂರು ಭರಮನಗೌಡ ಪಾಟೀಲ್, ಹರಪನಹಳ್ಳಿ ಷಣ್ಮುಖಪ್ಪ, ಮಾತನಾಡಿದರು.

ಬಿಜೆಪಿ ರೈತ ಮೋರ್ಚಾ ತಾಲೂಕು ಅಧ್ಯಕ್ಷ ಎಂ.ಬಿ.ಅಯ್ಯನಹಳ್ಳಿ ಯಜಮಾನಪ್ಪ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಹುರುಳಿಹಾಳ್ ರೇಖಾ ಮಲ್ಲಿಕಾರ್ಜುನ, ಮಹಿಳಾ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಹುಲಿಕೆರೆ ಗೀತಾ, ಆಲೂರು ಪದ್ಮನಾಭರೆಡ್ಡಿ, ಕೋಣನವರ ಮಲ್ಲಿಕಾರ್ಜುನ, ಮಂಡಲ ಪ್ರಧಾನ ಕಾರ್ಯದರ್ಶಿ ಮಂಗಾಪುರ ಸಿದ್ದೇಶ್, ಇಮಡಾಪುರ ಸಂಗಣ್ಣ, ನಿಂಬಳಗೆರೆ ಕಲ್ಲೇಶಪ್ಪ, ತೂಲಹಳ್ಳಿ ಹೇಮಣ್ಣ, ಜಯಣ್ಣ, ಕಟ್ಟೆ ಈಶ್ವರಪ್ಪ, ಕಾನಮಡುಗು ಸುರೇಶ್, ದಿನೇಶ್, ನಾಗಭೂಷಣ, ಶಾಂತನಹಳ್ಳಿ ವೀರಭದ್ರಪ್ಪ, ಕಾನಹೊಸಹಳ್ಳಿ ಸಿದ್ದೇಶ್ (ಗಜ), ಅವಿನಾಶ್, ಹೊಸೂರು ಅಭಿಷೇಕ್, ಸಿರಾಜುದ್ದೀನ್ ಇದ್ದರು.